ವಿಶ್ವ ಕೊಂಕಣಿ ಸಾಹಿತ್ಯ -೧೩

ಆಧುನಿಕ
ಕೊಂಕಣಿ ಕತೆಗಳು

ಸಂಪಾದಕರು

ಡಾ. ಗೀತಾ ಶೆಣೈ



ಪ್ರಕಾಶಕರು
ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ
ವಿಶ್ವ ಕೊಂಕಣಿ ಕೇಂದ್ರ
ಕೊಂಕಣಿ ಗಾಂವ್, ಶಕ್ತಿನಗರ
ಮಂಗಳೂರು - ೫೭೫ ೦೧೬

ವಿಶ್ವ ಕೊಂಕಣಿ ಸಾಹಿತ್ಯ -೧೩

ಆಧುನಿಕ ಕೊಂಕಣಿ ಕತೆಗಳು

ಸಂಪಾದಕರು

ಡಾ. ಗೀತಾ ಶೆಣೈ

ಪ್ರಕಾಶಕರು

ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ

ವಿಶ್ವ ಕೊಂಕಣಿ ಕೇಂದ್ರ

ಕೊಂಕಣಿ ಗಾಂವ್ ಶಕ್ತಿನಗರ

ಮಂಗಳೂರು - ೫೭೫ ೦೧೬

"ADHUNIKA KONKANI KATHEGALU" Translation of Konkani Short Stories edited by: Dr. Geetha Shenoy, 1903, 7th Main Road, E –Block, 2nd Stage, Rajajinagar, Bangalore-560010, Mobile:- 9945883537

First Edition : February 2013

Copyright © : Publisher Konkani Language & Cultural Foundation(R)

Publisher : Konkani Language & Cultural Foundation
World Konkani Centre
Shaktinagar, Mangalore-575 016
Ph:-0824-2231877, 2231887

Pages : xiv+ 170

Price : **₹ 200**

Printer : Sri Prema Sai Printers & Publishers
C-26, Industrial Estate
Yeyyadi, Mangalore - 575 008

This Book is published with the financial grant from the Kannada and Culture Dept. Govt. of Karnataka

ISBN : 978-93-82852-01-4

ಪ್ರಕಾಶಕರ ಮಾತು

ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ನಡೆಯುತ್ತಿರುವ ಕೊಂಕಣಿ ಸಾಹಿತ್ಯಕ ಕಾರ್ಯಗಳು ಹೆಚ್ಚು ವಿಸ್ತಾರವನ್ನು ಪಡೆಯುತ್ತಿವೆ. ಉನ್ನತ ಮಟ್ಟದ ಮತ್ತು ಮೌಲಿಕ ಸಾಹಿತ್ಯವನ್ನು ರಚಿಸಿರುವ ವಿದ್ವಾಂಸರನ್ನು ಒಳಗೊಂಡಿರುವ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಕರ್ನಾಟಕ, ಗೋವಾ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತಗಳ ಸುಪ್ರಸಿದ್ಧ ಕೊಂಕಣಿ ಲೇಖಕರು, ಸಾಹಿತಿಗಳು ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಲಹಾಗಾರರಾಗಿ ಸಹಕರಿಸುತ್ತಿದ್ದಾರೆ. ಕೊಂಕಣಿ ಸಾಹಿತ್ಯವು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಕ್ರಿಯಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ೩-೪ ವರ್ಷಗಳಲ್ಲಿ ೧೫ ಮೌಲಿಕ ಸಾಹಿತ್ಯ ಕೃತಿಗಳನ್ನು, ನಿಘಂಟುಗಳನ್ನು, ಮತ್ತು ಕೊಂಕಣಿ, ಇಂಗ್ಲಿಷ್, ಹಿಂದಿ, ಕನ್ನಡ, ಮಲೆಯಾಳಂ ಭಾಷೆಗಳಲ್ಲಿ ಭಾಷಾಂತರ ಕೃತಿಗಳನ್ನು ಪ್ರಕಟಿಸಲಾಗಿದೆ. ಜೊತೆಗೆ ಬಾಲಸಾಹಿತ್ಯ ಮಾಲಿಕೆಯಲ್ಲಿ ಕೊಂಕಣಿ ಭಾಷೆಯ ೮ ಕೃತಿಗಳನ್ನು ಮತ್ತು ೩೦ ವರ್ಣರಂಜಿತ ದ್ವಿಭಾಷಿಕ(ಇಂಗ್ಲಿಷ್-ಕೊಂಕಣಿ) ಕೃತಿಗಳನ್ನು ಪ್ರಕಟಿಸಲಾಗಿದೆ.

ಇಂದು ಭಾರತ ಮತ್ತು ವಿದೇಶಗಳ ಸಾಹಿತ್ಯಕಾರರಿಗೆ, ಭಾಷಾತಜ್ಞರಿಗೆ, ವಿದ್ವಾಂಸರಿಗೆ ಮತ್ತು ಹೆಚ್ಚಾಗಿ ವಾಚಕವೃಂದಕ್ಕೆ ಕೊಂಕಣಿ ಭಾಷಾ ಸಾಹಿತ್ಯವನ್ನು ಪರಿಚಯಿಸಬೇಕಾದ ಅಗತ್ಯ ಇದೆ. ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯು ಅನ್ಯ ಭಾಷೆಗಳ ಸಾಹಿತ್ಯವನ್ನು ಕೊಂಕಣಿ ಲೇಖಕರಿಗೆ, ಓದುಗರಿಗೆ ಪರಿಚಯಿಸುವ ಕಾರ್ಯವನ್ನು ಮಾಡುತ್ತಿದೆ. ಈ ಮಹತ್ವದ ಉದ್ದೇಶಗಳನ್ನು ಕಾರ್ಯರೂಪಕ್ಕಿಳಿಸಲು ಅನುವಾದವು ಒಂದು ಉತ್ತಮ ಮಾಧ್ಯಮವೆಂದು, ಈ ದಿಕ್ಕಿನಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಕೊಂಕಣಿ ಲೇಖಕರಿಗಾಗಿ, ಅದರಲ್ಲಿಯೂ ಯುವ ಸಾಹಿತಿಗಳಿಗಾಗಿ ಭಾಷಾಂತರ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ.

ಕನ್ನಡದ ಪ್ರಮುಖ ಭಾಷಾಂತರಕಾರರೂ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ ಗುರುದತ್ತ ಅವರು ಮಂಗಳೂರಿಗೆ ಬಂದ ಸಂದರ್ಭದಲ್ಲಿ ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಿ ವಿಶ್ವಕೊಂಕಣಿ ಸಾಹಿತ್ಯ ಅಕಾಡೆಮಿ ನಡೆಸಿರುವ ಕೆಲಸಕಾರ್ಯಗಳನ್ನು ಮೆಚ್ಚಿ, ಭಾಷಾಂತರ ಕಾರ್ಯದಲ್ಲಿ ನಮ್ಮೊಂದಿಗೆ ಕೈಜೋಡಿಸಲು ಒಪ್ಪಿಗೆ ನೀಡಿ ಸಹಾಯ ಹಸ್ತವನ್ನು ಚಾಚಿದರು. ಅವರ ಮಾರ್ಗದರ್ಶನದಲ್ಲಿ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಸಹಯೋಗದೊಂದಿಗೆ ೩ ದಿನಗಳ ಕೊಂಕಣಿ-ಕನ್ನಡ ಅನುವಾದ ಕಾರ್ಯಾಗಾರವು ಅಕ್ಟೋಬರ್ ತಿಂಗಳಲ್ಲಿ ವಿಶ್ವ ಕೊಂಕಣಿ ಕೇಂದ್ರದಲ್ಲಿ ನಡೆಯಿತು. ಕರ್ನಾಟಕ ಮತ್ತು ಹೊರ ರಾಜ್ಯಗಳ ಕೊಂಕಣಿ ಲೇಖಕರಿಗೆ, ಅದರಲ್ಲಿಯೂ ಮುಖ್ಯವಾಗಿ ಯುವ ಸಾಹಿತಿಗಳಿಗೆ ಕನ್ನಡದ ಖ್ಯಾತ ಬರಹಗಾರರಾದ ಡಾ. ನಾ. ಡಿಸೋಜಾ, ವಿವೇಕ್ ಶ್ಯಾನಭಾಗ, ಭಾಷಾ ತಜ್ಞ ಶ್ರೀ ಎಂ. ಮಾಧವ ಪೈ, ಹಿರಿಯ ಭಾಷಾಂತರ

ಕಾರರಾದ ಎಸ್. ಎಂ. ಕೃಷ್ಣರಾವ್, ಕೊಚ್ಚಿಯ ಶ್ರೀ ಪಯ್ಯನೂರು ರಮೇಶ ಪೈ ಅವರ ಮಾರ್ಗದರ್ಶನ ದೊರೆತು ಪ್ರಥಮ ಅನುವಾದ ಕಾರ್ಯಾಗಾರವು ಯಶಸ್ವಿಯಾಗಿ ನಡೆಯಿತು.

ಮೂರು ದಿನಗಳ ಈ ಕಾರ್ಯಾಗಾರವನ್ನು ಏರ್ಪಡಿಸಲು ವಿಶ್ವ ಕೊಂಕಣಿ ಕೇಂದ್ರದೊಡನೆ ಕೈಜೋಡಿಸಿದ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪ್ರಧಾನ ಗುರುದತ್ತ ಅವರ ನೆರವನ್ನು ಎಷ್ಟು ಸ್ಮರಿಸಿದರೂ ಸಾಲದು. ವಿಶ್ವ ಕೊಂಕಣಿ ಕೇಂದ್ರದ ಆಡಳಿತ ಮಂಡಳಿ ಮತ್ತು ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪರವಾಗಿ ಅವರಿಗೆ ಕೃತಜ್ಞತೆಗಳು.

ಈ ಕಾರ್ಯಾಗಾರವನ್ನು ನಿಯಮಬದ್ಧವಾಗಿ ರೂಪಿಸಲು ಮುಂದೆ ಬಂದವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುವಾದಕಿಯಾಗಿ ಖ್ಯಾತನಾಮರಾಗಿರುವ ಬೆಂಗಳೂರಿನ ಡಾ. ಗೀತಾ ಶೆಣೈ ಅವರು. ಇವರು ತಮ್ಮ ಕಾರ್ಯ ಬಾಹುಳ್ಯದ ನಡುವೆಯೂ ಸಮಯಾವಕಾಶವನ್ನು ಹೊಂದಿಸಿ ಕಾರ್ಯಾಗಾರದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಈ ಕಾರ್ಯದಲ್ಲಿ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ನಿರ್ದೇಶಕರಾದ ಖ್ಯಾತ ಕೊಂಕಣಿ ಸಾಹಿತಿ ಶ್ರೀ ಗೋಕುಲದಾಸ್ ಪ್ರಭು ಮತ್ತು ಶ್ರೇಷ್ಠ ಕೊಂಕಣಿ ಕವಿ ಶ್ರೀ ಮೆಲ್ವಿನ್ ರಾಡ್ರಿಗಸ್ ಅವರ ಮಾರ್ಗದರ್ಶನ, ಮತ್ತು ನೆರವು ದೊರೆತು, ಕಾರ್ಯಾಗಾರದ ಕಾರ್ಯಕ್ರಮವು ಅರ್ಥಪೂರ್ಣವಾಗಿಯೂ, ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ಸ್ಫೂರ್ತಿದಾಯಕವಾಗಿಯೂ ಜರಗಿತು ಎಂದು ತಿಳಿಸಲು ಸಂತೋಷ ಪಡುತ್ತೇನೆ.

ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಕೊಂಕಣಿ ಕತೆಗಳನ್ನು ಕನ್ನಡಕ್ಕೆ ಅನುವಾದಿಸಲು ಮತ್ತು ಇವುಗಳನ್ನು ಪುಸ್ತಕದಲ್ಲಿ ಅಳವಡಿಸಿ ಪ್ರಕಟಿಸಲು ಒಪ್ಪಿಗೆ ನೀಡಿದ ಎಲ್ಲಾ ಕೊಂಕಣಿ ಸಾಹಿತಿಗಳಿಗೆ ನಾವು ಆಭಾರಿಯಾಗಿದ್ದೇವೆ. ಮೂರು ದಿನಗಳ ಕೊಂಕಣಿ-ಕನ್ನಡ ಅನುವಾದ ಕಾರ್ಯಾಗಾರದ ಫಲಶ್ರುತಿಯಾಗಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ೨೫ ಬರಹಗಾರರು ಪ್ರಸಿದ್ಧ ಸಾಹಿತಿಗಳ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿ ನೀಡಿದ್ದಾರೆ. ಡಾ. ಗೀತಾ ಶೆಣೈ ಅವರು ಈ ಕತೆಗಳನ್ನು ಪರಿಷ್ಕರಿಸಿ ಪ್ರಕಟಿಸಲು ನೆರವಾಗಿದ್ದಾರೆ. ಡಾ. ಗೀತಾ ಶೆಣೈ, ಶ್ರೀ ಗೋಕುಲದಾಸ್ ಪ್ರಭು ಮತ್ತು ಶ್ರೀ ಮೆಲ್ವಿನ್ ರೊಡ್ರಿಗಸ್ ಅವರು ನೀಡಿರುವ ನೆರವು, ಸಹಕಾರಗಳಿಗೆ ನಮ್ಮ ವಂದನೆಗಳು. ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿರುವ ಪ್ರೇಮಸಾಯಿ ಪ್ರಕಾಶನದ ಶ್ರೀ ಸುಶೀಲ್ ಪೈ, ಅವರಿಗೆ ವಿಶ್ವಕೊಂಕಣಿ ಕೇಂದ್ರದ ವತಿಯಿಂದ ಕೃತಜ್ಞತೆಗಳು.

೧-೧-೨೦೧೩

ಬಸ್ತಿ ವಾಮನ ಶೆಣೈ
ಮಂಗಳೂರು
ಅಧ್ಯಕ್ಷರು
ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನ

ಸಂಪಾದಕರ ಮಾತು

ಕಳೆದ ಅಕ್ಟೋಬರ ತಿಂಗಳಲ್ಲಿ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನವು, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಸಹಯೋಗದೊಂದಿಗೆ ಯುವ ಭಾಷಾಂತರಕಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೊಂಕಣಿ ಸಣ್ಣಕತೆಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಮಂಗಳೂರಿನ ವಿಶ್ವಕೊಂಕಣಿ ಕೇಂದ್ರದಲ್ಲಿ ಮೂರು ದಿನಗಳ ಕಾಲ ನಡೆದ ಈ ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿದೆಡೆಗಳಿಂದ ಬಂದಂತಹ ಸುಮಾರು ಇಪ್ಪತ್ತೈದು ಹವ್ಯಾಸಿ ಬರಹಗಾರರಿಂದ ಕೊಂಕಣಿ ಭಾಷೆಯ ನಲ್ವತ್ತಕ್ಕೂ ಹೆಚ್ಚು ಸಣ್ಣಕತೆಗಳು ಕನ್ನಡಕ್ಕೆ ಅನುವಾದಗೊಂಡಿವೆ. ಇದರಲ್ಲಿ ಆಯ್ದ ೨೪ ಕತೆಗಳ ಸಂಕಲನವು ಇದೀಗ ಆಧುನಿಕ ಕೊಂಕಣಿ ಕತೆಗಳು ಶೀರ್ಷಿಕೆಯೊಂದಿಗೆ ಪ್ರಕಟಗೊಳ್ಳುತ್ತಿದೆ.

ಇಂದು ಕೊಂಕಣಿ ಕಥಾಸಾಹಿತ್ಯವು ಸಮೃದ್ಧವಾಗಿ ಬೆಳೆದು ನಿಂತಿದೆ. ಕರ್ನಾಟಕ, ಗೋವಾ ಮತ್ತು ಕೇರಳ ರಾಜ್ಯದಲ್ಲಿ ಮಾತ್ರವಲ್ಲ ಮುಂಬೈ, ಮಧ್ಯಪ್ರಾಚ್ಯ ದೇಶಗಳಂತಹ ದೂರದ ಪ್ರದೇಶಗಳಲ್ಲಿ ನೆಲೆನಿಂತಿರುವ ಬರಹಗಾರರು ಕೂಡಾ ಕೊಂಕಣಿ ಕಥಾಸಾಹಿತ್ಯದ ಅಸ್ಮಿತೆಯನ್ನು ಕಾಪಾಡುವ ದೃಷ್ಟಿಯಿಂದ ನಿರಂತರವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವುದು ಈ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ. ಈ ಸಂಕಲನದ ಮೊದಲ ಕತೆ "ನನ್ನ ಅಮ್ಮ ಎಲ್ಲಿಗೆ ಹೋದಳು"ವಿನ ಲೇಖಕರು ಶೆಣ್ಯೆ ಗೋಂಯಬಾಬ(ವಾಮನ ರಘುನಾಥ ವರ್ದೆ ವಾಲವಲೀಕರ). ಆಧುನಿಕ ಕೊಂಕಣಿ ಸಾಹಿತ್ಯದ ಕಣ್ವರೆಂದು, ನವೋದಯದ ಪರಿಕಾರರೆಂದು ಗುರುತಿಸಿಕೊಂಡಿರುವ ಶೆಣ್ಯೆ ಗೋಂಯಬಾಬ ಅವರಿಗಿಂತ ಮೊದಲು ಬೇರೆ ಬೇರೆ ಲೇಖಕರ ಸಣ್ಣಕತೆಗಳು ನಿಯತಕಾಲಿಕೆಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದರೂ, ೧೯೨೮ರಲ್ಲಿ ಬೆಳಕಿಗೆ ಬಂದ ಶೆಣ್ಯೆ ಗೋಂಯಬಾಬ ಅವರ "ಗೋಮಾಂತೋಪನಿಷತ್" ಸಂಕಲನದ ಮೊದಲ ಸಂಪುಟದಲ್ಲಿ ಪ್ರಕಟವಾದ "ಮ್ಹಜಿ ಬಾ ಖೈಂ ಗೆಲಿ" ಕತೆಯು ಆಧುನಿಕ ಕೊಂಕಣಿ ಸಾಹಿತ್ಯದ ಮೊದಲ ಸಣ್ಣಕತೆಯಾಗಿ ಪರಿಗಣಿಸಲ್ಪಡುತ್ತದೆ. ಅತ್ಯಂತ ಹೃದಯಸ್ಪರ್ಶಿ ವಸ್ತುವನ್ನುಳ್ಳ ಈ ಕತೆಯ ಕೇಂದ್ರಭಾಗದಲ್ಲಿ ಐದು ವರ್ಷ ಪ್ರಾಯದ ಪುಟ್ಟ ಬಾಲಕನೊಬ್ಬನು, ಇದ್ದಕ್ಕಿದ್ದಂತೆ ಸತ್ತು ಹೋದ ತನ್ನ ತಾಯಿಯನ್ನು ಪದೇಪದೇ ನೆನಪಿಸಿಕೊಳ್ಳುವ ವಿವರಗಳು ಇವೆ. ತನ್ನ ತಾಯಿ 'ದೇವರ ಪಾದ ಸೇರಿದ' ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಅಸಮರ್ಥನಾದ ಅಮಾಯಕ ಮಗುವಿಗೆ ಅವಳು ಹಿಂತಿರುಗಿ ಬಂದು ತನ್ನ ಜೊತೆಯಲ್ಲಿ ಇರುವುದೇ ಮುಖ್ಯವಾಗುತ್ತದೆ. ಅದಕ್ಕಾಗಿ ಅವನು ತನ್ನ ಅಜ್ಜಿಯೊಂದಿಗೆ, ಮನೆದೇವರೊಂದಿಗೆ ಕಾಡಿ ಬೇಡಿ, ಜಗಳವಾಡಿ ತರ್ಕ ಹೂಡುತ್ತಾನೆ. ಕೊನೆಗೆ ಉಣ್ಣುವುದನ್ನು ಬಿಟ್ಟು ಸ್ವತಃ ತಾನೇ ಅವಳಿರುವಲ್ಲಿಗೆ ಹೋಗಿ ಬಿಡುತ್ತಾನೆ. ಇದು ಕೊಂಕಣಿ ಭಾಷೆಯ ಅಮರ ಕತೆಯೂ ಹೌದು.

ಅತ್ಯಂತ ಚುರುಕು ಬುದ್ಧಿಯ ಜಾಣ ಹೆಣ್ಣುಮಗಳೊಬ್ಬಳು ಎಳೆವಯಸ್ಸಿನಲ್ಲಿ ವಿಧವೆಯಾಗಿ, ಸಮಾಜದ ನಿರ್ಲಕ್ಷ್ಯಕ್ಕೆ ಗುರಿಯಾಗಿ, ಒಂಟಿಯಾಗಿ ಬಾಳಬೇಕಾದ ಪರಿಸ್ಥಿತಿಯಲ್ಲಿ, ಇನ್ನೂ ಅವಳಲ್ಲಿ ಜೀವಂತವಾಗಿ ಉಳಿದಿರುವ ಭಾವನೆಗಳನ್ನು, ಸಂವೇದನೆಗಳನ್ನು ಅತ್ಯಂತ ಸಂಯಮದಿಂದ ಚಿತ್ರಿಸಿರುವ ಕತೆ 'ರುದ್ರ'. ಇಲ್ಲಿ ಬಾಯೊಭಟಣಿಯದು ಅನುಕಂಪ ಬೇಡುವ ಪಾತ್ರವಲ್ಲ. ಸಂಪ್ರದಾಯದ ಮುಷ್ಠಿಯಲ್ಲಿ ಸಿಕ್ಕಿಕೊಂಡಿರುವ ಮಹಿಳೆಯೊಬ್ಬಳ ಬದುಕಿನ ವಾಸ್ತವವಾಗಿದೆ. ಗೋವಾದ ಗ್ರಾಮೀಣ ಪರಿಸರ ಮತ್ತು ಅದಕ್ಕೆ ಸಂವಾದಿಯಾಗಿ ಮನುಷ್ಯರ ಸಮಸ್ಯೆಗಳನ್ನು ಚಿತ್ರಿಸಿದ ಗಜಾನನ ರಘುನಾಥ ಜೋಗ ಅವರ 'ರುದ್ರ'(೧೯೮೬) ಕಥಾಸಂಕಲನದಿಂದ ಈ ಕತೆಯನ್ನು ಆಯ್ದುಕೊಳ್ಳಲಾಗಿದೆ.

ಮೂವತ್ತಕ್ಕೂ ಹೆಚ್ಚು ಕಾದಂಬರಿಗಳು ಮತ್ತು ನೂರಕ್ಕೂ ಅಧಿಕ ಸಂಖ್ಯೆಯಲ್ಲಿ ಸಣ್ಣಕತೆಗಳನ್ನು ಪ್ರಕಟಿಸಿರುವ ಪ್ರಮುಖ ಲೇಖಕರಾದ ಎಡ್ವಿನ್ ಜೆ.ಎಫ್. ಡಿಸೋಜಾ(ಎಡ್ವಿನ್ ಜೊಸೆಫ್ ಫ್ರಾನ್ಸಿಸ್ ಡಿಸೋಜಾ) ಕರ್ನಾಟಕದ ಕರಾವಳಿ ಜಿಲ್ಲೆಯವರು. ಮಂಗಳೂರಿನ ಸಂತ ಲುವಿಸ್ ಮಹಾವಿದ್ಯಾಲಯದ ಕೊಂಕಣಿ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಡ್ವಿನ್ ಅವರ ಕತೆಗಳಲ್ಲಿ ಸ್ಥಿತ್ಯಂತರ ಹೊಂದುತ್ತಿರುವ ನಗರಜೀವನ ಶೈಲಿಯಲ್ಲಿ ಬಡವರು, ಮಧ್ಯಮ ವರ್ಗದವರು ತಮ್ಮ ಪ್ರಾಮಾಣಿಕತೆಯನ್ನು, ಸರಳತೆಯನ್ನು, ಜೀವನಪ್ರೀತಿಯನ್ನು ಬಲಿ ಕೊಡಬೇಕಾದ ಅನಿವಾರ್ಯ ಪ್ರಸಂಗಗಳ ಚಿತ್ರಣವಿದೆ. ಇದೇ ವಸ್ತುವನ್ನು ಹೊಂದಿರುವ ಅವರ 'ಬಣ್ಣಕಡ್ಡಿ'(ಬಣ್ಣದ ಕಡ್ಡಿಗಳು) ಮತ್ತು ಡಿಯರ್ ಸಾಂತಾಕ್ಲೊಸ್ (ಪ್ರಿಯ ಸಾಂತಾಕ್ಲೊಸ್) ಕತೆಗಳು ಮಾನವೀಯ ನೆಲೆಯಿಂದ ಗಮನವನ್ನು ಸೆಳೆಯುವ ರೀತಿಯದ್ದಾಗಿವೆ. ಓದುಗರು ಇಲ್ಲಿನ ಪಾತ್ರಗಳೊಂದಿಗೆ ಆಪ್ತ ಭಾವವನ್ನು ಅನುಭವಿಸುವಂತೆ ಮಾಡುತ್ತವೆ. ಇವರ 'ಕೆಂಬೆರಳ್ಳಿ' ವಿಶಿಷ್ಟ ವಸ್ತುವುಳ್ಳ ಕತೆ. ವಾಸ್ತವ ಮತ್ತು ಕಲ್ಪನೆಯನ್ನು ಬೆಸೆಯುವ ಹೊಸ ಪ್ರಯೋಗವಾಗಿದೆ.

ಗೋವೆಯ ಪ್ರಾದೇಶಿಕ ಬದುಕಿಗೆ ಪ್ರಾಮುಖ್ಯತೆಯನ್ನು ನೀಡಿ, ಸ್ಥಳೀಯ ಜನರ ನೋವು, ನಲಿವುಗಳಿಗೆ ತಮ್ಮ ಕತೆಗಳಲ್ಲಿ ಆದ್ಯತೆಯನ್ನು ಕಲ್ಪಿಸಿದ ಲೇಖಕರಾಗಿ ಪ್ರಸಿದ್ಧರಾದವರು ದಾಮೋದರ ಮಾವಜೊ. ಅವರು ತಮ್ಮ 'ಕಾರ್ಮೆಲೀನ್' ಕಾದಂಬರಿಗೆ ೧೯೮೩ರ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿಯನ್ನು, 'ಸುನಾಮಿ ಸೈಮನ್' ಕಾದಂಬರಿಗೆ ೨೦೧೧ರ ಪ್ರತಿಷ್ಠಿತ ವಿಮಲಾ ವಿ. ಪೈ ವಿಶ್ವಕೊಂಕಣಿ ಸಾಹಿತ್ಯ ಪುರಸ್ಕಾರವನ್ನು ಪಡೆದಿದ್ದಾರೆ. "ಬರೆವಣಿಗೆಯು ನನಗೆ ಅತ್ಯಂತ ಹೆಚ್ಚು ಸಂತೋಷವನ್ನು ಉಂಟು ಮಾಡುವುದಲ್ಲದೆ, ನನ್ನ ಬದುಕಿಗೆ ಅರ್ಥವನ್ನು ಮತ್ತು ಉದ್ದೇಶವನ್ನು ಕೂಡಾ ನೀಡಿದೆ" ಎಂದು ಹೇಳುವ ಈ ಲೇಖಕ ತಮ್ಮ 'ಆಂಗವಣ್' (ಹರಕೆ) ಕತೆಯಲ್ಲಿ ನಂಬಿಕೆ ಮತ್ತು ಹರಕೆಗೆ ಹೊಸ ಅರ್ಥವನ್ನು ನೀಡುವ ಪ್ರಯತ್ನ ನಡೆಸಿರುವುದು ಕಂಡುಬರುತ್ತದೆ.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾಗಿ ವಿದೇಶದಲ್ಲಿಯೂ ಉದ್ಯೋಗವನ್ನು ನಿರ್ವಹಿಸುತ್ತಿರುವ ಕಿಶೂ, ಬಾರ್ಕೂರ್ ಅವರ ಕತೆಗಳು ಹೊರನೋಟಕ್ಕೆ ಸರಳವೆಂದು ಗೋಚರಿಸಿದರೂ, ವಸ್ತುವಿನ ನಿರ್ವಹಣೆಯಲ್ಲಿ ಸಂಕೀರ್ಣತೆಯನ್ನು ಕಾಪಾಡಿಕೊಂಡು ಬರುವುದು ಇವುಗಳ ಲಕ್ಷಣವಾಗಿದೆ. ಬೆಳೆಯುವ ವಯಸ್ಸಿನ ಹುಡುಗರ ಮನಸ್ಸಿನ ಭಾವನೆಗಳನ್ನು ಸೂಕ್ಷ್ಮವಾಗಿ ತೆರೆದಿಡುವ ಪ್ರಯತ್ನ ಇವರ 'ಪಿರೆರಿಂಗೆಲಿ ಚೆಡವಾಂ' (ಪಿರೇರಿಯ ಪುತ್ರಿಯರು) ಮತ್ತು 'ಪಪ್ಪಾಚೆ ಸೈಕಲ್' (ಅಪ್ಪನ ಸೈಕಲ್) ಕತೆಗಳಲ್ಲಿ ಗೋಚರಿಸುತ್ತದೆ. ಕಿಶೂ ಬಾರ್ಕೂರ್ ಅವರ ರುಪಣಿಂ ಕಥಾ ಸಂಕಲನಕ್ಕೆ ೨೦೦೨ರ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ಕೊಂಕಣಿ ಕಥಾ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದ ಲೇಖಕರಾಗಿ ಮಹಾಬಳೇಶ್ವರ ಸೈಲ್ ಅವರಿಗೆ ಕೊಂಕಣಿ ಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ. ಭಾರತೀಯ ಸೈನ್ಯದಲ್ಲಿ ಉದ್ಯೋಗವನ್ನು ನಿರ್ವಹಿಸಿ, ಸಾಹಿತ್ಯರಂಗವನ್ನು ತುಸು ತಡವಾಗಿ ಪ್ರವೇಶಿಸಿರುವ ಈ ಲೇಖಕರು ಉತ್ತರ ಕನ್ನಡ ಜಿಲ್ಲೆಯ ಗಡಿ ಪ್ರದೇಶ ಹಾಗೂ ಗೋವೆಯ ಗ್ರಾಮೀಣ ಪ್ರದೇಶದ ಬಡಜನರ ನೋವು, ತಲ್ಲಣಗಳನ್ನು, ಕತ್ತಲೆ ತುಂಬಿದ ಅವರ ಭವಿಷ್ಯದ ಆತಂಕಗಳನ್ನು ಓದುಗರ ಬೆಚ್ಚಿಬೀಳುವಷ್ಟು ಪರಿಣಾಮಕಾರಿಯಾಗಿ ಚಿತ್ರಿಸಬಲ್ಲರು. ಅವರ ಕಥೆಗಳಲ್ಲಿ ಪರಿಸರ ಕಾಳಜಿ ಮತ್ತು ನಶಿಸಿ ಹೋಗುತ್ತಿರುವ ವೃತ್ತಿಪರ ಸಮುದಾಯಗಳ ಉಳಿವಿನ ಪ್ರಶ್ನೆ ಪ್ರಧಾನನೆಲೆಯಲ್ಲಿ ಗೋಚರಿಸುತ್ತದೆ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ 'ಕಾಳಿಗಂಗಾ' ಮತ್ತು 'ಹೌತಣ್' ಕಾದಂಬರಿಗಳು. ಶತಮಾನಗಳಿಂದ ಕಾರವಾರದಲ್ಲಿ

ನೆಲೆನಿಂತಿರುವ ಕುಂಬಾರ ಸಮಾಜ ತಯಾರಿಸುವ ಗಡಿಗೆ ಮಡಿಕೆಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದೆ, ಈ ವೃತ್ತಿ ಸಮುದಾಯವಷ್ಟೇ ಅಲ್ಲ, ಕುಂಬಾರ ವೃತ್ತಿಯ ಪರಂಪರೆಯೇ ಸರ್ವನಾಶವಾಗಿ ಬಿಡುವ ಕಟು ವಾಸ್ತವವನ್ನು 'ಹೌತಣ್' ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಇದು ೨೦೧೦ನೇ ಸಾಲಿನ ಪ್ರತಿಷ್ಠಿತ ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರವನ್ನು ಪಡೆದ ಕೃತಿಯಾಗಿದೆ. ಸಧ್ಯದಲ್ಲಿಯೇ ಇದರ ಕನ್ನಡ ಅನುವಾದ ಬೆಳಕಿಗೆ ಬರಲಿದೆ. ಪ್ರಸ್ತುತ ಸಂಕಲನದಲ್ಲಿ ಸೈಲ್ ಅವರ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಕಥಾ ಸಂಕಲನ 'ತರಂಗಾಂ'ನಿಂದ ಆಯ್ದು ಅದೇ ಹೆಸರಿನ ಕತೆಯ ಅನುವಾದವನ್ನು ನೀಡಲಾಗಿದೆ. ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಂಪರಾಗತವಾಗಿ ಮುಂದುವರಿದು ಬಂದಿರುವ ಜಾನಪದ ಆಚರಣೆಯಾಗಿರುವ 'ಸ್ತಂಭ ಉತ್ಸವ'ದ ವಿವರಗಳು ದೊರೆಯುತ್ತವೆ.

ತಮ್ಮ 'ಸಪನ್ ಫುಲಾಂ' ಕಥಾಸಂಕಲನಕ್ಕೆ ೧೯೯೧ರ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿಯನ್ನು ಪಡೆದಿರುವ ಮೀನಾ ಕಾಕೋಡ್ಕರ್ ಅವರ ಕತೆಗಳ ಮುಖ್ಯ ಲಕ್ಷಣಗಳೆಂದರೆ ಸರಳತೆ, ಜೀವಂತಿಕೆ ಮತ್ತು ಲವಲವಿಕೆ. ಸರಳವಸ್ತು ಮತ್ತು ಚುರುಕು ನಿರೂಪಣೆಯಿಂದ ಸುಂದರವಾಗಿ ಕತೆಗಳನ್ನು ಹೆಣೆಯುವ ಕಲೆ ಅವರಿಗೆ ಕರಗತವಾಗಿದೆ. ಅವರ "ದೊಂಗರ ಚಂವಲ್ಲಾ.." (ಬೆಟ್ಟ ಅರಳಿತು) ಕತೆ ನೀಡುವ ಸಂದೇಶ ಸರಳವಾಗಿದ್ದೂ, ಮನಮುಟ್ಟುವ ರೀತಿಯದ್ದಾಗಿದೆ. ನಗರದಲ್ಲಿ ಹುಟ್ಟಿ ಬೆಳೆದು ಅಲ್ಲಿಯ ಜೀವನ ಕ್ರಮಕ್ಕೆ ಹೊಂದಿಕೊಂಡಿದ್ದ ಯುವತಿಯೊಬ್ಬಳು ಪತಿಯ ಉದ್ಯೋಗದ ಕಾರಣವಾಗಿ ಕೆಲವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ನೆಲೆಯೂರಬೇಕಾದ ಪರಿಸ್ಥಿತಿ ಬರುತ್ತದೆ. ಆಗ ಅವಳಲ್ಲಿ ಹಳ್ಳಿ ಬದುಕಿನ ಕುರಿತಾಗಿ ಇದ್ದಂತಹ ಪೂರ್ವಗ್ರಹಗಳೆಲ್ಲಾ ತೊಳೆದು ಹೋಗಿ, ಪ್ರಕೃತಿ ಕುರಿತಾದ ಪ್ರೇಮ ಹುಟ್ಟಿಕೊಳ್ಳುತ್ತದೆ. ಇದಕ್ಕೆ ಅಪರೋಕ್ಷವಾಗಿ ಕಾರಣನಾಗುವವನು ಒಬ್ಬ ಹಳ್ಳಿಯ ಮುಗ್ಧ ಬಾಲಕ. ಓದಿ ಬರೆಯಲು ಕೂಡಾ ತಿಳಿಯದ ಆ ಹುಡುಗ ಅವಳಿಗೆ ಪ್ರಕೃತಿಯನ್ನು ತಿಳಿದು ಬಾಳುವುದನ್ನು ಕಲಿಸುತ್ತಾನೆ. ಇದು ಅವಳಲ್ಲಿ ಕೃತಜ್ಞತಾಭಾವವನ್ನು ಮೂಡಿಸುತ್ತದೆ.

ಕೊಂಕಣಿ ಭಾಷೆಯಲ್ಲಿ ಚಂದ್ರಕಾಂತ ಕೇಣಿಯವರು ಪ್ರಕಟಿಸಿರುವ ಪ್ರಮಾಣದಲ್ಲಿ ಸಣ್ಣಕತೆಗಳನ್ನು ಬರೆದಿರುವ ಇನ್ನೊಬ್ಬ ಲೇಖಕರಿಲ್ಲವೆಂಬ ಮಾತು ಇದೆ. 'ರಾಷ್ಟ್ರಮತ'(ಮರಾಠಿ) ಮತ್ತು 'ಸುನಾಪರಾಂತ'(ಕೊಂಕಣಿ) ಪತ್ರಿಕೆಗಳ ಸಂಪಾದಕರಾಗಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹೆಸರು ಪಡೆದಿರುವ ಚಂದ್ರಕಾಂತ ಕೇಣಿಯವರು ಕಥಾಕ್ಷೇತ್ರದಲ್ಲಿ ಕೂಡಾ ಜನಪ್ರಿಯ ಲೇಖಕರಾಗಿ ಗುರುತಿಸಿಕೊಂಡಿದ್ದಾರೆ. ಅವರು 'ವ್ಹೊಕಲ್ ಪಾವಣಿ'(ಮದುಮಗಳ ವಿದಾಯ) ಕಥಾಸಂಕಲನದ ಮುನ್ನುಡಿಯಲ್ಲಿ ತಮ್ಮ ಬರೆವಣಿಗೆಯ ಶೈಲಿಯ ಕುರಿತು ತಿಳಿಸುತ್ತಾ, "ನನ್ನ ಬಹಳಷ್ಟು ಕತೆಗಳು ಪ್ರಥಮ ಪುರುಷ ನಿರೂಪಣೆಯ ಏಕವಚನದಲ್ಲಿ ರಚನೆಯಾಗಿವೆ. ನನ್ನ ಪತ್ರಿಕಾ ಬರೆವಣಿಗೆಯು ನನ್ನ ಕಥಾ ಬರೆವಣಿಗೆಯ ಮೇಲೆ ಪ್ರಭಾವ ಬೀರಬಾರದು ಎನ್ನುವ ಉದ್ದೇಶದಿಂದ ನಾನು ಈ ಕ್ರಮವನ್ನು ಅನುಸರಿಸಿದ್ದೇನೆ. ನಾನು ನನ್ನ ಕತೆಯ ಮುಖ್ಯಪಾತ್ರದೊಂದಿಗೆ ಕಲ್ಪಿಸಿಕೊಳ್ಳುತ್ತೇನೆ. ಕತೆಯ ವಸ್ತುವಿನೊಂದಿಗೆ ನನ್ನನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ನಡೆಸುತ್ತೇನೆ" ಎಂದು ಹೇಳುತ್ತಾರೆ. ಈ ಸಂಕಲನದಲ್ಲಿ ಇವರ 'ಹಿಪ್ಪಿ ಚಲಿ'(ಹಿಪ್ಪಿ ಹುಡುಗಿ) ಮತ್ತು 'ನಾ ಮ್ಹೂಣೂಂಕ ಆಯಲೆಂ ನಾ' (ಇಲ್ಲವೆಂದು ಹೇಳಲಾಗಲೇ ಇಲ್ಲ) ಕತೆಗಳು ಇವೆ. ದಿಟ್ಟ ವಸ್ತು, ಚುರುಕು ಗತಿಯ ನಿರೂಪಣೆ, ಮತ್ತು ಆಕರ್ಷಕ ಸಂಭಾಷಣೆಯೊಂದಿಗೆ ಗಮನ ಸೆಳೆಯುವ ಕತೆ 'ಹಿಪ್ಪಿ ಹುಡುಗಿ'. ಇದರಲ್ಲಿ ಸಂಸಾರಸ್ಥ ಪುರುಷನೊಬ್ಬನು ಸ್ವತಂತ್ರ ಮನೋಭಾವ ಮತ್ತು ಮುಕ್ತ ಜೀವನಶೈಲಿಯನ್ನು ಅಳವಡಿಸಿಕೊಂಡಿರುವ ಹಿಪ್ಪಿ

ಹುಡುಗಿಯೊಬ್ಬಳೊಡನೆ ಸಂಬಂಧವನ್ನು ಬೆಳೆಸಿಕೊಳ್ಳುವ ವಿವರಗಳಿವೆ. ಪ್ರಸಿದ್ಧ ಕೊಂಕಣಿ ಕತೆಗಳ ಸಾಲಿನಲ್ಲಿ ಪರಿಗಣಿಸಲ್ಪಡುವ ಕತೆ ಇದಾಗಿದೆ.

ಸಮಕಾಲೀನ ಕಥಾ ಲೇಖಕರಲ್ಲಿ ಆಧುನಿಕ ಚಿಂತನೆಯನ್ನು ಅಳವಡಿಸಿಕೊಂಡವರಲ್ಲಿ ಸ್ಟೇನ್ ಅಗೇರಾ ಒಬ್ಬರು. ಮೂಲತಃ ದಕ್ಷಿಣ ಕನ್ನಡದ ಮೂಲ್ಕಿಯವರಾಗಿ ಈಗ ಮಧ್ಯಪ್ರಾಚ್ಯ ದೇಶದಲ್ಲಿ ವಾಸವಾಗಿರುವ ಸ್ಟೇನ್ ಅಗೇರಾ ತಮ್ಮ ಮೊದಲ ಕಾದಂಬರಿ 'ನೀತಿದಾರ್'(೧೯೮೧)ನಿಂದಲೇ ಪ್ರಸಿದ್ಧಿಗೆ ಬಂದವರು. ಇವರ 'ಘರಯಣ್' ವ್ಯಾವಹಾರಿಕ ವಸ್ತುವನ್ನುಳ್ಳ ಪ್ರಥಮ ಕೊಂಕಣಿ ಕಾದಂಬರಿ. ತಮ್ಮ ಸಣ್ಣಕತೆಗಳಲ್ಲಿ ಯುವಜನಾಂಗದ ಬಯಕೆಗಳನ್ನು, ಆಸೆ ಆಕಾಂಕ್ಷೆಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಅವರ ಸಣ್ಣಕತೆಗಳ ಮುಖ್ಯ ಲಕ್ಷಣವೆಂದರೆ ಕುತೂಹಲಕಾರಿ ಅಂತ್ಯ. ಈ ಸಂಕಲನದಲ್ಲಿರುವ 'ತಾಂಬ್ಡಿ ಮಿರಸಾಂಗ್' (ಕೆಂಪು ಮೆಣಸಿನಕಾಯಿ) ಮತ್ತು 'ಪ್ರೆಶರ್ ಕುಕ್ಕರ್.' ಕತೆಗಳು ಇದೇ ಮಾದರಿಯದ್ದಾಗಿವೆ. ಮನೆಯ ನಾಲ್ಕು ಗೋಡೆಗಳ ನಡುವೆ ದೈನಂದಿನ ಕೆಲಸ ಕಾರ್ಯಗಳಿಂದಾಗಿ ಬಂಧಿಯಾಗಿರುವ ಗೃಹಿಣಿಯೊಬ್ಬಳ ಮನಃಸ್ಥಿತಿಯನ್ನು ಒತ್ತಡ ತುಂಬಿದ ಪ್ರೆಶರ್ ಕುಕ್ಕರಿನೊಂದಿಗೆ ಹೋಲಿಸಿ ಅದು ಎಂದಾದರೂ ಸ್ಫೋಟಗೊಳ್ಳುವ ಸಾಧ್ಯತೆಯನ್ನು ರೂಪಕವಾಗಿ ಚಿತ್ರಿಸಲಾಗಿದೆ. ಗಮನ ಸೆಳೆಯುವ ಕತೆ ಇದು.

ನಾಟಕಕಾರರಾಗಿ, ಕತೆಗಾರರಾಗಿ, ಕವಿಗಳಾಗಿ, ಕೊಂಕಣಿ ಭಾಷಾ ಸಂಘಗಳ ಅಧ್ಯಕ್ಷರಾಗಿ, ಗೌರವ ಸದಸ್ಯರಾಗಿ, ಉತ್ತಮ ವಾಗ್ಮಿಯಾಗಿ ಪ್ರಸಿದ್ಧರಾಗಿರುವ ಲೇಖಕ ಪುಂಡಲೀಕ ಎನ್. ನಾಯಕ್. ಇವರ ಕತೆಗಳಲ್ಲಿ ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಜನರ ಜೀವನದ ಉತ್ಕಟ ಚಿತ್ರಣವಿದೆ. ಅವರ ಮೇಲೆ ನಡೆಯುವ ದಬ್ಬಾಳಿಕೆಯ ವಿರುದ್ಧ ಆಕ್ರೋಶವಿದೆ. ಗೋವೆಯ ಗ್ರಾಮೀಣ ಬದುಕನ್ನು ಯಥಾವತ್ತಾಗಿ ಚಿತ್ರಿಸಿರುವ ಈ ಲೇಖಕರ 'ಖಳ್' (ಖಣ/ಭತ್ತದ ಕಣ) ಕತೆಯಲ್ಲಿ ಫಸಲು ಚೆನ್ನಾಗಿ ಬಂದ ದಿನಗಳಲ್ಲಿ ಕೂಡಾ ಉಪವಾಸವಿರಬೇಕಾದ ಕೂಲಿಕಾರನ ಕುಟುಂಬದ ನೋವಿನ ಚಿತ್ರಣವಿದೆ. 'ಮುತಯ' ಇವರ ಕಥಾಸಂಗ್ರಹ. 'ಅಚ್ಚೇವ್' ಕಾದಂಬರಿ. ಬೇರೆ ಬೇರೆ ಪ್ರಕಾರಗಳಲ್ಲಿ ಒಟ್ಟು ೫೭ ಗ್ರಂಥಗಳನ್ನು ಪ್ರಕಟಿಸಿದ್ದಾರೆ. 'ಚೌರಂಗ್' (ಏಕಾಂಕ ನಾಟಕಗಳು) ಕೃತಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದ ಇವರು 'ರಂಗಕಾವ್ಯ' ಕೃತಿಗೆ ೨೦೧೨ನೇ ಸಾಲಿನ ಪ್ರತಿಷ್ಠಿತ ವಿಮಲಾ ವಿ. ಪೈ. ವಿಶ್ವಕೊಂಕಣಿ ಸಾಹಿತ್ಯ ಪುರಸ್ಕಾರವನ್ನು ಪಡೆದಿದ್ದಾರೆ. ಸಧ್ಯ ಗೋವಾ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇರಳ ರಾಜ್ಯದವರಾದ ಪ್ರೊ. ಕೆ.ಆರ್. ವಸಂತಮೊನಿ ವೃತ್ತಿಯಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ನಿವೃತ್ತರಾದವರು. ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಹತ್ತು ವರ್ಷ ಕಾರ್ಯನಿರ್ವಹಿಸಿರುವ ವಸಂತ ಮೊನಿಯವರ ಭಾಂಗ್ರಾದಾಂತ್ ಮತ್ತು ನಿಮಜ್ಜನ್ ಕಥಾ ಸಂಕಲನಗಳು ಪ್ರಕಟವಾಗಿವೆ. ಇವರ 'ರೋಂಟಸ್' ಕತೆಯಲ್ಲಿ ಮಧ್ಯಮವರ್ಗದ ದೈನಂದಿನ ಬದುಕಿನ ಒಂದು ಮುಖವನ್ನು ಚಿತ್ರಿಸಲಾಗಿದೆ.

ಹಲವು ವರ್ಷಗಳ ಕಾಲ ವಿದೇಶದಲ್ಲಿದ್ದು ಈಗ ಮಂಗಳೂರಿನಲ್ಲಿ ನೆಲೆಸಿರುವ ಕವಿ ಮೆಲ್ವಿನ್ ರೊಡ್ರಿಗಸ್. ೧೯೮೩ರಲ್ಲಿ ಕಿರುಕಾದಂಬರಿಯೊಂದನ್ನು ಬೆಳಕಿಗೆ ತರುವುದರ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶ ಪಡೆದ ಈ ಲೇಖಕರ ೫ ಸ್ವತಂತ್ರ ಕೃತಿಗಳು ಪ್ರಕಟವಾಗಿವೆ. ಅನೇಕ ಗ್ರಂಥಗಳ ಸಂಪಾದಕರಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಪ್ರೇಮಗೀತೆಗಳ ಸಂಗ್ರಹ ಮೊಗಾ ಪೆಲ್ಲೊ(೧೯೮೯) ಮೂಲಕ ಭರವಸೆಯ ಕವಿಯಾಗಿ ಗುರುತಿಸಿಕೊಂಡ ಈ ಲೇಖಕರು ೨೦೦೮ರಲ್ಲಿ ಪ್ರಕಟಿಸಿದ ತಮ್ಮ 'ಪ್ರಕೃತಿಚೊ ಪಾಸ್' ಕವನ ಸಂಕಲನಕ್ಕಾಗಿ ೨೦೧೧ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದಿದ್ದಾರೆ.

ಚಿತ್ತಾಲದ ಸಣ್ಣಕತೆಗಳನ್ನು ಕೇಂದ್ರ ಸಾಹಿತ್ಯ ಅಕಾದೆಮಿಗಾಗಿ ಕೊಂಕಣಿ ಭಾಷೆಗೆ ಅನುವಾದಿಸಿದ್ದಾರೆ. ಮಣಿಪಾಲದ ಟಿಎಂಎ ಪೈ ಪ್ರತಿಷ್ಠಾನ ಮತ್ತು ಕೊಂಕಣಿ ಭಾಷಾ ಮಂಡಳದ ಪ್ರಶಸ್ತಿಯನ್ನು ಪಡೆದಿರುವ ಈ ಲೇಖಕರು ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ 'ಜುಜೆಚ್ಯಾ ಪೆರಾಂಚಿ ಕಥಾ'(ಜುಜೆಯ ಪೇರಳೆ ಕತೆ) ಕತೆಯ್ಯಲ್ಲಿ ರೂಪಕದ ಬಳಕೆಯ ಮೂಲಕ ಅನಿರೀಕ್ಷಿತ ತಿರುವನ್ನು ನೀಡಲಾಗಿದೆ. ಇಲ್ಲಿ ಹುಡುಗರ ಪೇರಳೆ ಹಣ್ಣಿನ ಬಯಕೆಯು ವಾಸ್ತವ ಸಂಗತಿ ಮಾತ್ರವಲ್ಲ ಸಾಂಕೇತಿಕ ಕೂಡಾ ಆಗಿದೆ.

ಭಕ್ತಿಸಾಹಿತ್ಯ ರಚನೆಗಳ ಮೂಲಕ ಕೊಂಕಣಿ ಮಹಿಳಾ ಸಾಹಿತ್ಯಕ್ಕೆ ಚಾಲನೆ ನೀಡಿರುವ ಕೇರಳ ರಾಜ್ಯದ ಲೇಖಕಿಯರು ಇಂದು ಕತೆ, ಕವಿತೆ, ಕಾದಂಬರಿ, ಪ್ರವಾಸ ಕಥನ, ಅನುವಾದ ಇತ್ಯಾದಿ ಪ್ರಕಾರಗಳಲ್ಲಿ ಕೃಷಿ ನಡೆಸುತ್ತಿದ್ದಾರೆ. ಕೊಚ್ಚಿಯಲ್ಲಿ ನೆಲೆಸಿರುವ ಸುಶೀಲಾ ಟಿ. ಭಟ್ ಅವರು ಅನೇಕ ಕತೆ, ಕವಿತೆ, ನಾಟಕ ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರ 'ಕರ್ಮಬಂಧನ್' ಕತೆಯಲ್ಲಿ ಹಣದಾಸೆಗೆ ಪ್ರೀತಿಸಿದ ಹೆಣ್ಣನ್ನು ವಂಚಿಸಿ ಬೇರೆಯವಳನ್ನು ಮದುವೆಯಾದ ವ್ಯಕ್ತಿ ಸ್ವತಃ ಮೋಸಕ್ಕೆ ಬಲಿಯಾಗಿ, ಮುಂದೆ ಪಶ್ಚಾತ್ತಾಪಪಟ್ಟರೂ ಕ್ಷಮೆಗೆ ಅನರ್ಹನಾಗುವ ಪ್ರಸಂಗವಿದೆ. ಇಲ್ಲಿ ಪಾತ್ರಪೋಷಣೆಗಿಂತಲೂ ಕತೆಯ ನಿರೂಪಣೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದು ಕಂಡುಬರುತ್ತದೆ.

ಮುಂಬೈಯಲ್ಲಿ ನೆಲೆಸಿರುವ ಶೀಲಾ ನಾಯಕ್ ಕತೆಗಾರ್ತಿಯಾಗಿ ಪ್ರಸಿದ್ಧರಾಗಿರುವ ಲೇಖಕಿ. ಇವರ ಯುದ್ಧ ಕತೆಯಲ್ಲಿ ಗೋವೆಯ ಸ್ವಾತಂತ್ರ್ಯ ಹೋರಾಟದ ಪ್ರಭಾವ ಜನಸಾಮಾನ್ಯರ ಮೇಲೆ ಯಾವ ರೀತಿಯ ಪ್ರಭಾವವನ್ನು, ಯಾವ ವಿಧದ ಪರಿವರ್ತನೆಯನ್ನು ಮೂಡಿಸಿದೆ ಎಂಬುದರ ವಿವರಗಳನ್ನು ನೀಡುತ್ತದೆ. ಶಶಾಂಕ ಸೀತಾರಾಮ್ ಅವರ 'ತೆರಿಖಿನಸಮ್ಮ' ಕತೆಯಲ್ಲಿ ಇಬ್ಬರು ಗಂಡು ಮಕ್ಕಳಿದ್ದೂ, ಮನೆಯಿಲ್ಲದವಳಾಗಿ ಅಲ್ಲಿ ಇಲ್ಲಿ ಅಲೆದಾಡಿಕೊಂಡಿರುವ ವಯಸ್ಸಾದ ಮಹಿಳೆಯೊಬ್ಬಳ ಚಿತ್ರಣವಿದೆ. ಕಷ್ಟಪಟ್ಟು ದುಡಿದು ತನ್ನ ಅನ್ನವನ್ನು ತಾನೇ ಸಂಪಾದಿಸಬೇಕೆಂದುಕೊಳ್ಳುವ ಅವಳ ಸ್ವಾಭಿಮಾನ ಮೆಚ್ಚುಗೆಯನ್ನು ಗಳಿಸುತ್ತದೆ. ಅತ್ಯಂತ ಚಿಕ್ಕದಾದ ಚೌಕಟ್ಟಿನೊಳಗೆ ಸಂಗ್ರಾಹ್ಯ ರೀತಿಯಿಂದ ಕತೆ ಹೇಳುವ ಕಲೆ ಎಚ್ಚೆಮ್ ಅವರಿಗೆ ಸಾಧಿಸಿದೆ. ಅವರ 'ಸುಣಿಂ' (ನಾಯಿಗಳು) ಮತ್ತು 'ಪಾಡೊ' (ಗೂಳಿ) ಎರಡೂ ಕತೆಗಳು ಕುತೂಹಲಕಾರಿಯಾಗಿವೆ.

ಕೊಂಕಣಿ ಸಾಹಿತ್ಯದಲ್ಲಿ ಹಾಸ್ಯ ಕತೆಗಳನ್ನು ರಚಿಸಿದ ಕೆಲವೇ ಲೇಖಕರಲ್ಲಿ ಅನಾ ಮ್ಹಾಂಬರೊ ಒಬ್ಬರು. ವಿಡಂಬನೆಯನ್ನಾಗಲೀ, ಟೀಕೆಗಳನ್ನಾಗಲೀ ಬಳಸದ ಶುದ್ಧ ಹಾಸ್ಯ ಇವರದು. 'ಪೊಣಜಿ ಆತಾಂ ಮ್ಹಾತಾರಿ ಜಾಲ್ಯಾ' (ಪಣಜಿ ಈಗ ಮುದುಕಿಯಾಗಿದ್ದಾಳೆ) ಸಂಕಲನದ ಮೂಲಕ ಪ್ರಸಿದ್ಧಿಗೆ ಬಂದಿರುವ ಈ ಲೇಖಕರ 'ಗವೆತ್ ಉಕತೆ ಜಾಯನಾ' (ಡ್ರಾವರ್ ತೆರೆಯಲಾಗುತ್ತಿಲ್ಲ) ಕತೆಯಲ್ಲಿ ಚುರುಕಾದ ಸಂಭಾಷಣೆ ಮತ್ತು ನವಿರಾದ ಹಾಸ್ಯವಿದೆ. ಅನಗತ್ಯ ವಿವರಗಳಿಗೆ ಇಲ್ಲಿ ಅವಕಾಶವಿಲ್ಲ. ಮುಂಬೈಯಲ್ಲಿ ನೆಲೆಸಿರುವ ಈ ಲೇಖಕರು ಗೋವೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ಚೆನ್ನಾಗಿ ತಿಳಿದುಕೊಂಡವರಾಗಿದ್ದಾರೆ. ಅಜಯ ಬುವಾ ಅವರ 'ಚಾಟಿಂಗ್' ಕತೆಯಲ್ಲಿ ಆಧುನಿಕ ಸಂಪರ್ಕ ಮಾಧ್ಯಮದ ಬಳಕೆಯ ಪ್ರಸ್ತಾಪದೊಂದಿಗೆ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರದಂತಹ ಗಂಭೀರ ವಸ್ತುವಿನ ಚರ್ಚೆ ಕೂಡಾ ಇದೆ.

ಅನ್ಯ ಭಾಷೆಗಳ ಸಾಹಿತ್ಯಕ್ಕೆ ಹೋಲಿಸಿದರೆ ಕೊಂಕಣಿ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯ ನಡೆದಿರುವುದು ಬಹಳ ಕಡಿಮೆ. ಹೀಗಾಗಿ ಕೊಂಕಣಿಯ ಪ್ರಮುಖ ಕಥಾಲೇಖಕರನ್ನು ಪರಿಚಯಿಸುವ ದೃಷ್ಟಿಯಿಂದ ಇಲ್ಲಿ ಅವರ ಸಂಕ್ಷಿಪ್ತ ವಿವರಗಳನ್ನು

ನೀಡಲಾಗಿದೆ. ಇನ್ನು ಕಾವ್ಯ, ನಾಟಕ, ರೂಪಾಂತರ, ಅಂಕಣ ಬರಹ ಮೊದಲಾದ ಪ್ರಕಾರಗಳಲ್ಲಿ ಕೃತಿ ರಚಿಸಿದ ಹಲವು ಲೇಖಕರು ಮತ್ತು ಲೇಖಕಿಯರು ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಇದ್ದಾರೆ. ಇವರ ಅಮೂಲ್ಯ ಕೃತಿಗಳು ಕೂಡಾ ಕನ್ನಡಕ್ಕೆ ಅನುವಾದಗೊಳ್ಳಬೇಕೆನ್ನುವುದು ನಮ್ಮ ಆಶಯವಾಗಿದೆ.

ಕೊಂಕಣಿ ಸಣ್ಣಕತೆಗಳ ಕನ್ನಡ ಅನುವಾದ ಕಾರ್ಯಾಗಾರದಲ್ಲಿ ಭಾಗವಹಿಸಿದ ಯುವಬರಹಗಾರರೆಲ್ಲರೂ ತಮ್ಮ ಪ್ರಥಮ ಪ್ರಯತ್ನದಲ್ಲಿ ಭರವಸೆಯನ್ನು ಮೂಡಿಸಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಕಾರ್ಯವನ್ನು ನಡೆಸುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇವರು ಅನುವಾದಿಸಿರುವ ಕತೆಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಲು ಮುಂದೆ ಬಂದಿರುವ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನಕ್ಕೆ, ಇದರ ಆಡಳಿತ ಮಂಡಳಿಗೆ ಮತ್ತು ಅಧಿಕಾರಿ ವರ್ಗಕ್ಕೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಭಾಷಾಂತರ ಕಾರ್ಯಾಗಾರದ ಸ್ವರೂಪ ಮತ್ತು ರೂಪುರೇಷೆಯನ್ನು ನಿರ್ಧರಿಸಲು ಮತ್ತು ಅದನ್ನು ಕಾರ್ಯಾಗತಗೊಳಿಸಲು ಮುಖ್ಯ ಪ್ರೇರಣೆಯಾಗಿ, ಅದರ ಮೂಲಶಕ್ತಿಯಾಗಿ ಆರ್ಥಿಕ ನೆರವು ಮತ್ತು ಸಹಕಾರವನ್ನು ನೀಡಿ ಅದನ್ನು ಯಶಸ್ವಿಯಾಗಿ ನಡೆಸಿದವರು ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ಅಧ್ಯಕ್ಷರಾದ ಮಾನ್ಯ ಶ್ರೀ ಬಸ್ತಿ ವಾಮನ ಶೆಣೈ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಡಾ. ಪ್ರಧಾನ ಗುರುದತ್ತ್ ಅವರಿಗೆ ನಾವು ಆಭಾರಿಯಾಗಿದ್ದೇವೆ. ಈ ಮಹನೀಯರ ಪ್ರೋತ್ಸಾಹ ಮತ್ತು ಒತ್ತಾಸೆಯಿಲ್ಲದಿದ್ದರೆ ಈ ಕಾರ್ಯಾಗಾರ ನಡೆಯುವುದು ಸಾಧ್ಯವಾಗುತ್ತಿರಲಿಲ್ಲ. ಕಾರ್ಯಾಗಾರದ ಮುಖ್ಯ ಸಂಚಾಲಕರಾಗಿ ಕತೆಗಳ ಆಯ್ಕೆಯನ್ನು ನಡೆಸಿರುವ ಮತ್ತು ಸ್ವತಃ ಉತ್ತಮ ಕತೆಗಾರರೂ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತರೂ ಆಗಿರುವ ಶ್ರೀ ಗೋಕುಲದಾಸ್ ಪ್ರಭು ಮತ್ತು ಶ್ರೀ ಮೆಲ್ವಿನ್ ರಾಡ್ರಿಗಸ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ಕನ್ನಡದ ಹಿರಿಯ ಲೇಖಕರೂ, ವಿದ್ವಾಂಸರೂ ಆಗಿರುವ ಡಾ. ನಾ. ಡಿಸೋಜಾ, ಶ್ರೀ ಶಾ.ಮಂ. ಕೃಷ್ಣರಾಯ ಮತ್ತು ವಿವೇಕ್ ಶ್ಯಾನಭಾಗ್ ಅವರು ತಮ್ಮ ಮೌಲಿಕ ಉಪನ್ಯಾಸಗಳ ಮೂಲಕ ಶಿಬಿರಾರ್ಥಿಗಳಿಗೆ ಉತ್ತಮ ಮಾರ್ಗದರ್ಶನವನ್ನು ನೀಡಿದ್ದಾರೆ. ಅವರ ಕರಡುಪ್ರತಿಯನ್ನು ತಿದ್ದಿ, ಅದರಲ್ಲಿರುವ ಲೋಪದೋಷಗಳ ಕಡೆಗೆ ಗಮನವನ್ನು ಸೆಳೆದಿದ್ದಾರೆ. ಅಪಾರ ತಾಳ್ಮೆ ಮತ್ತು ಶ್ರಮವನ್ನು ಬಯಸುವ ಈ ಕಾರ್ಯಕ್ಕಾಗಿ ನಾವು ಅವರಿಗೆ ಆಭಾರಿಯಾಗಿದ್ದೇವೆ. ಸುಮಾರು ಆರು ತಿಂಗಳ ಕಾಲ ಮುಂದುವರಿದ ಈ ಕಾರ್ಯಾಗಾರದ ಪತ್ರವ್ಯವಹಾರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಕತೆಗಳು ಸರಿಯಾದ ಸಮಯಕ್ಕೆ ಅನುವಾದಕರ ಕೈಗೆ ತಲುಪುವಂತೆ ಮುನ್ನೆಚ್ಚರಿಕೆ ವಹಿಸಿ ಕೆಲಸ ಮಾಡಿದ ವಿಶ್ವಕೊಂಕಣಿ ಕೇಂದ್ರದ ಕಚೇರಿ ನಿರ್ವಾಹಕಿ ಶ್ರೀಮತಿ ಲಕ್ಷ್ಮಿಗೆ ಮತ್ತು ಹಣಕಾಸಿನ ವ್ಯವಹಾರಗಳನ್ನು ನಿಭಾಯಿಸಿರುವ ಶ್ರೀಮತಿ ಶಾಂತಲಾ ಅವರಿಗೆ ಪ್ರೀತಿಯ ಧನ್ಯವಾದಗಳು.

ವಿಶ್ವಕೊಂಕಣಿ ಕೇಂದ್ರದ ಎಲ್ಲಾ ಸಾಹಿತ್ಯಕ ಮತ್ತು ಸಂಶೋಧನಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಾ ನಮ್ಮೊಡನೆ ಆತ್ಮೀಯವಾಗಿ ಸಹಕರಿಸುತ್ತಿರುವ ಸಂಸ್ಥೆಯ ಉಪನಿರ್ದೇಶಕರಾದ ಶ್ರೀ ಗುರುದತ್ತ್ ಅವರಿಗೆ ನಮ್ಮ ಧನ್ಯವಾದಗಳು ಸಲ್ಲಲೇಬೇಕಾಗಿದೆ.

ಡಾ. ಗೀತಾ ಶೆಣೈ

೧/೧/೨೦೧೩
ಬೆಂಗಳೂರು

ಪರಿವಿಡಿ

			ಪುಟ ಸಂಖ್ಯೆ
೧.	ನನ್ನ ಅಮ್ಮ ಎಲ್ಲಿಗೆ ಹೋದಳು	– ಶೆಣ್ಯೈ ಗೋಂಯಬಾಬ ಅನು: ಅನಿರುದ್ಧ ಭಟ್	1
೨.	ರುದ್ರ	– ಗಜಾನನ ರಘುನಾಥ ಜೋಗ ಅನು: ಜಗದೀಶ ನಾ.	7
೩.	ಬಣ್ಣದ ಕಡ್ಡಿಗಳು	– ಎಡ್ವಿನ್ ಜೆ.ಎಫ್. ಡಿಸೋಜಾ ಅನು: ವಿಕ್ಟರ್ ಡಿಸಿಲ್ವ	16
೪.	ಪರಕೆ	– ದಾಮೋದರ ಮಾವಜೊ ಅನು: ಸ್ಮಿತಾ ಶೆಣ್ಯೈ	26
೫.	ಪಿರೇರಿಯ ಪುತ್ರಿಯರು	–ಕಿಶೂ, ಬಾರ್ಕೂರ್ ಅನು: ವಿಲ್ಮಾ, ಬಂಟ್ವಾಳ	35
೬.	ಸ್ತಂಭ ಉತ್ಸವ	– ಮಹಾಬಳೇಶ್ವರ ಸೈಲ್ ಅನು: ಡಾ. ಜಿ. ಸಂಧ್ಯಾ ನಾಯಕ್	41
೭.	ಬೆಟ್ಟ ಅರಳಿತು	– ಮೀನಾ ಸು. ಕಾಕೋಡ್ಕರ ಅನು: ವೆಂಕಟೇಶ ಪೈ	46
೮.	ಓಪ್ಪಿ ಹುಡುಗಿ	– ಚಂದ್ರಕಾಂತ ಕೇಣಿ ಅನು: ಮದನ ಪ್ರಕಾಶ ನಾಯಕ	56
೯.	ಕೆಂಪು ಮೆಣಸಿನ ಕಾಯಿ	– ಸ್ಟೇನ್ ಅಗೇರಾ ಅನು: ಶಕುಂತಲಾ ಆರ್. ಕಿಣಿ	69
೧೦.	ಭತ್ತದ ಕಣ	– ಪುಂಡಲೀಕ ಎನ್. ನಾಯಕ್ ಅನು: ವಿಶ್ವನಾಥ ಭಟ್ಟ	75
೧೧.	ರೊಂಟಸ್	– ಪ್ರೊ. ಕೆ.ಆರ್. ವಸಂತಮೊನಿ ಅನು: ಚಂದ್ರಿಕಾ ಮಲ್ಯ	83
೧೨.	ಜೆಜುವಿನ ಪೇರಳೆ ಕಥೆ	– ಮೆಲ್ವಿನ್ ರೊಡ್ರಿಗಸ್ ಅನು: ಮಧುಕರ ಮಲ್ಯ	88

೧೩.	ಕರ್ಮ ಬಂಧನ	– ಸುಶೀಲಾ ಟಿ. ಭಟ್ ಅನು: ಕೂಡ್ಲ ಆನಂದು ಶಾನಭಾಗ	94
೧೪.	ಕೆಂಬೆರಳ್ಳಿ	– ಎಡ್ವಿನ್ ಜೆ.ಎಫ್. ಡಿಸೋಜ ಅನು: ವಸುಧಾ ಪ್ರಭು	101
೧೫.	ಅಪ್ಪನ ಸೈಕಲ್	– ಕಿಶೂ, ಬಾರ್ಕೂರ ಅನು: ಬಸ್ತಿ ಶೋಭಾ ಶೆಣ್ಯೈ	112
೧೬.	ಪ್ರೆಶರ್ ಕುಕ್ಕರ್	– ಸ್ಟೇನ್ ಅಗೇರಾ ಅನು: ಎಸ್. ಜಯಶ್ರೀ ಶೆಣ್ಯೈ	118
೧೭.	ಯುದ್ಧ	– ಶೀಲಾ ನಾಯಕ ಅನು: ವಿಲ್ಸನ್ ಕಟೀಲ	125
೧೮.	ಗೂಳಿ	– ಎಚ್ಚೆಮ್ ಅನು: ವಿಶ್ವನಾಥ ಭಟ್ಟ	130
೧೯.	ತೆರಿಝಿನಮ್ಮ	– ಶಶಾಂಕ ಸೀತಾರಾಮ ಅನು: ಅಚಲಾ ಅಜೀತ ಬೀಳಗಿ	132
೨೦.	ಡ್ರಾವರ್ ತೆರೆಯಲಾಗುತ್ತಿಲ್ಲ	– ಅನಾ ಮ್ಹಾಂಬ್ರೊ ಅನು: ವಿಲ್ಮಾ, ಬಂಟ್ವಾಳ	140
೨೧.	ಇಲ್ಲವೆಂದು ಹೇಳಲಾಗಲೇ ಇಲ್ಲ	– ಚಂದ್ರಕಾಂತ ಕೇಣಿ ಅನು: ವಸುಧಾ ಪ್ರಭು.	150
೨೨.	ಚಾಟಿಂಗ್	– ಅಜಯ ಬುವಾ ಅನು: ಎಸ್. ಜಯಶ್ರೀ ಶೆಣ್ಯೈ	154
೨೩.	ನಾಯಿಗಳು	– ಎಚ್ಚೆಮ್ ಅನು: ಬಿ. ಮಧುಕರಮಲ್ಯ	160
೨೪.	ಪ್ರಿಯ ಸಾಂತಾಕ್ಲೊಸ್	– ಎಡ್ವಿನ್ ಜೆ. ಎಫ್. ಡಿಸೊಜಾ ಅನು: ಅಚಲಾ ಅಜೀತ ಬೀಳಗಿ	162

ನನ್ನ ಅಮ್ಮ ಎಲ್ಲಿಗೆ ಹೋದಳು?

✍ ಶಣೈ ಗೊಂಯಬಾಬ

ಮಾಘಮಾಸದ ಶುಕ್ಲಪಂಚಮಿಯಂದು ಬಾಬುಲ್ಯನಿಗೆ ಐದು ತುಂಬಿ ಆರು ವರ್ಷ ಪ್ರಾರಂಭವಾಗಿತ್ತು. ಅವನು ಸಣ್ಣ ಮಗುವೇನೋ ಹೌದು. ಆದರೆ ಬಹಳ ಮುಗ್ಧ. ಮಾತಿನಲ್ಲಿ ಅಷ್ಟೇ ಚೂಟಿ. ತನ್ನ ಚುರುಕುತನದಿಂದ ಎಲ್ಲರನ್ನೂ ಆಕರ್ಷಿಸಿ ಇಡೀ ಮನೆಯನ್ನೇ ತನ್ನ ವಶಕ್ಕೆ ತೆಗೆದುಕೊಂಡು ಬಿಡುತ್ತಿದ್ದ.

ಶಾಬ ಶೆಣೈಯವರ ಮನೆಯಲ್ಲಿ ಮಗುವಿಲ್ಲದ ಚಿಂತೆ, ದುಃಖ, ಜಪ–ತಪ, ಪೂಜೆ–ಪುರಸ್ಕಾರಗಳ ಫಲವಾಗಿ ಮರುಭೂಮಿಯಲ್ಲಿ ಮಳೆ ಬಂತು ಎಂಬಂತೆ ಬಹಳ ವರ್ಷಗಳ ನಂತರ ಹುಟ್ಟಿದ ಗಂಡುಮಗು ಈ ಬಾಬುಲ್ಯಾ.

ಮೊಮ್ಮಗ ಹುಟ್ಟಿದ ಸಂತಸದ ಸುದ್ದಿಯನ್ನು ಸೂಲಗಿತ್ತಿ ಮೊತ್ತಮೊದಲ ಬಾರಿ ಶೆಣೈರ ಕಿವಿಗೆ ಹಾಕಿ ಇನಾಮು ಕೇಳಿದಾಗ ಅವರು ಆನಂದದಿಂದ ಕುಣಿಯಲಾರಂಭಿಸಿದ್ದರಂತೆ. ಸಂತಸದ ಭರದಲ್ಲಿ ತನ್ನ ಮೈಮೇಲಿರುವ ಎಂಟು ಮೊಳದ ಹೊಸ ಧೋತರವನ್ನೇ ಎತ್ತಿ ತೆಗೆದುಕೋ ಇನಾಮು ಎಂದು ನೀಡಿದರಂತೆ. ಅಷ್ಟೇ ಅಲ್ಲ ಕೊಬ್ಬರಿಯ ತುಂಡಿನಂತೆ ಹೊಳೆಯುತ್ತಿದ್ದ ಬೆಳ್ಳಿನಾಣ್ಯವನ್ನು ಅವಳ ಕೈಯಲ್ಲಿಟ್ಟರಂತೆ. ಮೊಮ್ಮಗ ಬಂದ ಖುಷಿಯಲ್ಲಿ ಎಲ್ಲರಿಗೂ ವಿಷಯ ತಿಳಿಸಿ, ಅಂಗಡಿ ಬೀದಿಯುದ್ದಕ್ಕೂ ಸಕ್ಕರೆ ಹಂಚಿದ್ದರಂತೆ. ತೊಟ್ಟಿಲಿಗೆ ಹಾಕುವ ಕಾರ್ಯಕ್ರಮವೂ ದೊಡ್ಡ ಪ್ರಮಾಣದಲ್ಲಿ ನಡೆಯಿತು. ರಾತ್ರಿಯಿಡೀ ನಡೆದ ಗುಮ್ಮಟೆ, ಮದ್ದಳೆ, ವಾದ್ಯವೃಂದದ ಸದ್ದು–ಗದ್ದಲಗಳನ್ನು ವರ್ಣಿಸುವುದಂತೂ ಸಾಧ್ಯವೇ ಇಲ್ಲ. ಅಜ್ಜ ಶಾಬ ಶೆಣೈ ಮತ್ತು ಅಜ್ಜಿ ಉಮಾಬಾಯಿಯ ಕುಟುಂಬದಲ್ಲಿ ಮಗು ಇರಲಿಲ್ಲ. ಒಂದು ಗಂಡುಮಗು ಬೇಕೆಂಬ ಹಂಬಲ ಅವರದು. ಬಾಬುಲ್ಯ ಹುಟ್ಟುವುದಕ್ಕೆ ಮೊದಲು ಅವರಿಗೆ ಊಟ ತಿಂಡಿ ರುಚಿಸುತ್ತಿರಲಿಲ್ಲ. ಆದರೆ ಈಗ? ಎದ್ದರೆ ಕುಳಿತರೆ ಬಾಬುಲ್ಯ! ಅವನ ಬೇಕುಬೇಡಗಳನ್ನು ಪೂರೈಸುವುದನ್ನು ಬಿಟ್ಟರೆ ಬೇರೆ ಯಾವ ಕೆಲಸವೂ ಅವರಿಗೆ ಹೊಳೆಯುತ್ತಿರಲಿಲ್ಲ. ಸೊಸೆ ಎಂದಾದರೂ ಬಾಬುಲ್ಯನ ಜೊತೆ ತವರಿಗೆ ಹೋದರೆ ಕರೆಯ ಮೇಲೆ ಕರೆಕೊಟ್ಟು ಯಾರನ್ನಾದರೂ ಅಲ್ಲಿಗೆ ಕಳುಹಿಸಿ ಸೊಸೆ, ಮೊಮ್ಮಗನನ್ನು ಹಿಂದಕ್ಕೆ ಕರೆಸಿಕೊಳ್ಳದಿದ್ದರೆ ಅವರಿಗೆ ಸಮಾಧಾನವೇ ಇರುತ್ತಿರಲಿಲ್ಲ.

ಬಾಬುಲ್ಯನಿಗೆ ಆರು ತುಂಬುತ್ತಿದ್ದಂತೆ ಸೊಸೆಗೆ ಅನರ್ಥದ ಕೆಡುಕೊಂದು ಸಂಭವಿಸಿತು. ವೈದ್ಯರು ಹೇಳುವಂತೆ ಆಕೆಗೆ ಟೈಫಾಯಿಡ್ ಆಗಿತ್ತಂತೆ. ಅದರಲ್ಲಿಯೇ ಅವಳು ಪರಲೋಕಕ್ಕೆ ತೆರಳಿದಳು. ಬುದ್ಧಿ ಬಂದ ಮಕ್ಕಳ ತಾಯಿ ಹಠಾತ್ತನೆ ಸಾಯುವುದೆಂದರೆ ಅದೇ ಒಂದು ದೊಡ್ಡ ದುರಂತ. ಅಮ್ಮನ ಮತ್ತು ಅಜ್ಜ, ಅಜ್ಜಿಯರ

ಮಮತೆಯಲ್ಲಿ ವಿಶೇಷ ಪ್ರೀತಿಯಿಂದ ಬೆಳೆದ ಬಾಬುಲ್ಯನ ಮೇಲೆ ದುರಾದೃಷ್ಟ ಕುಸಿದು ಬಿತ್ತು. ಇದರಿಂದ ಆತ ಸಾಕಷ್ಟು ಕುಗ್ಗಿ ಹೋದ. ಅವನ ಹುಡುಗಾಟ ನಿಂತುಹೋಯಿತು. ತುಂಟತನ ಬಿಟ್ಟೇ ಹೋಯಿತು. ಮಾತು ಕಡಿಮೆಯಾಯಿತು. ಚೂಟಿತನ ಕಣ್ಮರೆಯಾಯಿತು. ಅವನ ಅಚ್ಚುಮೆಚ್ಚಿನ ಕಣ್ಣುಮುಚ್ಚಾಲೆ ಆಟವೂ ಅವನಿಗೆ ಬೇಡವಾಯಿತು.

ತಾಯಿಗೆ ಅಸೌಖ್ಯವುಂಟಾಗಿ ಅವಳು ನರಳುತ್ತಾ, ಮನಸ್ಸಿಗೆ ಬಂದದ್ದನ್ನು ಬಡಬಡಿಸಲು ಪ್ರಾರಂಭಿಸಿದಾಗ ಬಾಬುಲ್ಯ ಹೆದರಿಕೊಳ್ಳಬಹುದೆಂಬ ಭೀತಿಯಿಂದ ಅವನ ಅಜ್ಜ-ಅಜ್ಜಿ ಅವನನ್ನು ತಾಯಿ ಮಲಗಿದ ಕೋಣೆಯ ಕಡೆಗೆ ಹೋಗಲು ಬಿಡುತ್ತಿರಲಿಲ್ಲ. ಆದರೂ ಯಾವಾಗಲಾದರೂ ಅವರ ಕಣ್ಣುತಪ್ಪಿಸಿ ಅಲ್ಲಿಗೆ ಹೋಗಿ 'ಅಮ್ಮಾ' 'ಅಮ್ಮಾ' ಎಂದು ಮೆಲ್ಲಗೆ ಮಾತನಾಡಿಸಿ ಬರುತ್ತಿದ್ದ.

ಕೊನೆಗೂ ಒಂದು ಮಧ್ಯರಾತ್ರಿ 'ಅಮ್ಮ' ಇಹಲೋಕದ ಯಾತ್ರೆ ಮುಗಿಸಿಬಿಟ್ಟಳು. ಆಗ ಅಜ್ಜಿಯ ಪಕ್ಕದಲ್ಲಿ ಯಾವ ಚಿಂತೆಯೂ ಇಲ್ಲದೆ ಗಾಢವಾಗಿ ನಿದ್ರಿಸುತ್ತಿದ್ದ ಬಾಬುಲ್ಯನಿಗೆ ಆಪ್ತರ ಅಳು, ಆಕ್ರಂದನಗಳಿಂದ ಎಚ್ಚರವಾಗಬಹುದೆಂದು ಅಜ್ಜಿ ಕೂಡಲೇ ಅವನನ್ನು ಎತ್ತಿಕೊಂಡು ಬೇರೆ ಕೋಣೆಗೆ ತಂದು ಮಲಗಿಸಿದಳು. ಮರುದಿನ ಬೆಳಿಗ್ಗೆ ಮೃತದೇಹವನ್ನು ಒಯ್ಯುವವರೆಗೆ ಬಾಬುಲ್ಯನಿಗೆ ಅಮ್ಮನ ಸಾವಿನ ಕಲ್ಪನೆ ಬರದ ಹಾಗೆ ನೋಡಿಕೊಂಡಳು. ಹೊನ್ನಿಬಾಯಿಯಂತಹ ಹೊನ್ನಿನ ಗುಣದ ಸೊಸೆಯನ್ನು ಕಳೆದುಕೊಂಡದ್ದಕ್ಕಾಗಿ ಅತ್ತೆ-ಮಾವಂದಿರು ಕಣ್ಣೀರ ನದಿಯನ್ನೇ ಹರಿಸಿದರು. ಅವರಿಗದು ಕೊನೆಯಿಲ್ಲದ ದುಃಖವಾಗಿತ್ತು. ಆದರೂ ಬಾಬುಲ್ಯನಿಗೆ ತಾಯಿಯ ಮರಣದ ವಿಚಾರ ತಿಳಿಯಬಾರದೆಂದು ತಮ್ಮ ದುಃಖವನ್ನು ಒಳಗೇ ಅದುಮಿಟ್ಟುಕೊಂಡಿದ್ದರು. 'ಅಮ್ಮ ಮಲಗಿದ ಕೋಣೆ' ಯ ಕಡೆಗೆ ಹೋಗಬಾರದೆಂದು ಅಜ್ಜಿ ಎಷ್ಟೇ ತಾಕೀತು ಮಾಡಿದರೂ ಬಾಬುಲ್ಯನಿಗೆ ಅದು ಸಾಧ್ಯವಿರಲಿಲ್ಲ. ಅವನು ಅಜ್ಜ-ಅಜ್ಜಿಯರ ಕಣ್ಣುತಪ್ಪಿಸಿ ಮೆಲ್ಲನೆ ಕೋಣೆಯ ಬಳಿ ಹೋಗಿ ಒಳಗೆ ಇಣುಕಿದರೆ ಒಳಗೆ ಅಮ್ಮ ಇಲ್ಲ! ಅಲ್ಲಿ ಅವಳ ಹಾಸಿಗೆ ಇಲ್ಲ. ಹೊದಿಕೆ ಇಲ್ಲ. ಏನೇನೂ ಇಲ್ಲ! ಅಮ್ಮನ ಕೋಣೆ ತನ್ನನ್ನು ತಿನ್ನಲು ಬಂದಂತೆ ಭಾಸವಾಯಿತು. ಅವನು ಗಾಬರಿಗೊಂಡು ಅಜ್ಜ ಅಜ್ಜಿಯರೆಡೆಗೆ ಹೋಗಿ ಕೂಗಿ ಕೇಳಿದ,

"ನನ್ನ ಅಮ್ಮ ಎಲ್ಲಿಗೆ ಹೋದಳು?"

ಉಕ್ಕಿ ಬಂದ ಅಳುವನ್ನು ತಡೆಹಿಡಿಯಲಾರದೇ ಅಜ್ಜಿ ಉಮಾಬಾಯಿ ಅವನನ್ನು ಗಟ್ಟಿಯಾಗಿ ತಬ್ಬಿಕೊಂಡು, "ಕಂದಾ, ನಿನ್ನ ಅಮ್ಮ ರಾತ್ರಿ ದೇವರಮನೆಗೆ ಹೋದಳಪ್ಪಾ.." ಎಂದು ತಡವರಿಸುತ್ತಾ ಹೇಳಿದಳು. ಆಗ ಅವನು ಹೇಳಿದ, "ಮಾಮನ ಮನೆಗೆ ಹೋಗುವಾಗ ನಮ್ಮನ್ನು ಕರೆದೊಯ್ಯಲು ಮಾಮ ಡೋಲಿ ತರುವಂತೆ ಅಮ್ಮನನ್ನು ಒಯ್ಯಲು ಬಂದ ದೇವರ ಡೋಲಿಯನ್ನು ನಾನು ನೋಡಲಿಲ್ಲವಲ್ಲ? ಅವಳು ಯಾವುದರಲ್ಲಿ ಕುಳಿತು ಹೋದಳು? ಮತ್ತು ಒಬ್ಬಳೇ ಹೇಗೆ ಹೋದಳು? ನನ್ನನ್ನೇಕೆ ಕರೆದೊಯ್ಯಲಿಲ್ಲ?"

ಮುಗ್ಧ ಕಂದನ ಮಾತುಗಳನ್ನು ಕೇಳುತ್ತಿದ್ದಂತೆ ಅಜ್ಜ ಅಜ್ಜಿಯಷ್ಟೇ ಅಲ್ಲ, ಮನೆಯಲ್ಲಿದ್ದ ಎಲ್ಲರ ಕರುಳೂ ಚುರ್ರೆಂದವು. ಅದುವರೆಗೆ ಅದುಮಿಟ್ಟ ಅವರ ಅಳು ಒಮ್ಮೆಲೇ ಸ್ಫೋಟಗೊಂಡು ಮನೆ ತುಂಬಾ ಹುಯಿಲೆದ್ದಿತು. ಇದರಿಂದ ಬಾಬುಲ್ಯ ಇನ್ನಷ್ಟು ಗಾಬರಿಗೊಂಡ. ಎಲ್ಲರೂ ಅಳಲಾರಂಭಿಸಿದ್ದರಿಂದ ಅವನೂ ಹೆದರಿ ಅಳತೊಡಗಿದ. ಸ್ವಲ್ಪ ಹೊತ್ತಿನ ಬಳಿಕ ಸಮಾಧಾನಗೊಂಡ ಅಜ್ಜಿ ಅವನನ್ನು ತನ್ನ ಎದೆಗೊತ್ತಿಕೊಂಡು, "ಥೂ ಥೂ ತಪ್ಪಾಯ್ತು" ಎಂದು ಬಾಬುಲ್ಯನಿಗೆ ಸಂತೈಸತೊಡಗಿದಳು. "ಹಾಗೆಲ್ಲ ಹೇಳಬಾರದು ಮಗೂ, ನಮ್ಮ ವಂಶವನ್ನು ಬೆಳಗಬೇಕಾದ ನಂದಾದೀಪ ನೀನು! ಅಶ್ವತ್ಥ ವೃಕ್ಷದಂತೆ ವಿಶಾಲವಾಗಿ ದೀರ್ಘಾಯುವಾಗಿ ಬಾಳಿ ಬದುಕಬೇಕು ನೀನು!" ಎಂದು ಹಾರೈಸಿದಳು. ಬಾಬುಲ್ಯ ಬಹಳ ಗೊಂದಲಕ್ಕೀಡಾದ. ಅವನು ಮತ್ತೆ ಮತ್ತೆ ಅಮ್ಮನ ಕೋಣೆಯತ್ತ ಸುಳಿಯುತ್ತ 'ಅವಳು ಎಲ್ಲಿ ಹೋದಳು? ಅವಳಿಗೆ ಏನಾಗಿರಬಹುದು?' ಎಂದು ಊಹಿಸಲಾರಂಭಿಸಿದ. ಹನ್ನೆರಡನೆಯ ದಿನ ಮೃತಳ ಸದ್ಗತಿಯಾಗಿ ಸುಹಾಸಿನಿಯರಿಗೆ ಸೀರೆ, ಖಣ ಇತ್ಯಾದಿಗಳನ್ನು ದಾನವಾಗಿ ನೀಡುತ್ತಿರುವಾಗ ಬಾಬುಲ್ಯ ಗಟ್ಟಿಯಾಗಿ ಅಳುತ್ತ ಅಜ್ಜಿಯ ಬಳಿಬಂದು ಕೇಳತೊಡಗಿದ, "ಅಜ್ಜೀ, ನನ್ನ ಅಮ್ಮ ದೇವರಮನೆಯಿಂದ ಹಿಂತಿರುಗಿದ ಬಳಿಕ ಅವಳಿಗೆ ಉಡಲು ಸೀರೆ ಬೇಡವೇ? ನೀರು ಕುಡಿಯಲು ತಂಬಿಗೆ ಬೇಡವೇ?" ಈ ಮಾತು ಕೇಳಿದೊಡನೆ ಅಜ್ಜಿ, ಸುಹಾಸಿನಿಯರು ಮತ್ತು ಅಲ್ಲಿ ನೆರೆದ ಆಪ್ತೇಷ್ಟರ ಕಣ್ಣುಗಳಿಂದ ದುಃಖದ ಕಣ್ಣೀರು ಹರಿಯಲಾರಂಭಿಸಿತು. ಅದು ಬಾಬುಲ್ಯನಿಗೆ ಆಶ್ಚರ್ಯವನ್ನು ಉಂಟುಮಾಡಿತು. ಅಮ್ಮನ ಹೆಸರನ್ನೆತ್ತಿದ ಕೂಡಲೇ ಮನೆಯವರಷ್ಟೇ ಅಲ್ಲ, ಹೊರಗಿನವರು ಕೂಡಾ ಅಳಲಾರಂಭಿಸುತ್ತಾರೆ. ಅದು ಯಾಕೆ ಎಂಬುದೇ ತಿಳಿಯಲಿಲ್ಲ. ಅವನ ಅಮ್ಮ ಅವನನ್ನು ಅಜ್ಜನ ಮನೆಗೆ ಕರೆದೊಯ್ಯುವಾಗ ಯಾರೂ ಅಳುತ್ತಿರಲಿಲ್ಲ. ಆದರೆ ಈಗ ಮಾತ್ರ ಅಮ್ಮ ದೇವರ ಮನೆಗೆ ಹೋಗಿದ್ದಾಳೆಂದು ಎಲ್ಲರೂ ತುಂಬಾ ಅಳುತ್ತಾರೆ. ಯಾಕೆ ಎಂಬುದೇ ಅವನಿಗೆ ಎದುರಾದ ನಿಗೂಢ ಪ್ರಶ್ನೆಯಾಗಿತ್ತು.

ಅಮ್ಮನ ಅಂತ್ಯಕ್ರಿಯೆಗಳೆಲ್ಲ ಮುಗಿದವು. ಆದರೆ ಏನೂ ಅರಿಯದ ಮುಗ್ಧ ಬಾಬುಲ್ಯ ಮಾತ್ರ ದೇವರಮನೆಯಿಂದ ತನ್ನ ಅಮ್ಮನ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದ. ಸಾಕಷ್ಟು ಸಮಯವೂ ಕಳೆಯಿತು. ಆದರೆ ನಿರೀಕ್ಷೆ ಮುಂದುವರಿಯಿತು. ಬೀದಿಯಲ್ಲಿ ಯಾವುದಾದರೂ ಡೋಲಿ ಕಣ್ಣಿಗೆ ಬಿದ್ದರೆ ಸಾಕು ತನ್ನ ಅಮ್ಮನೇ ಬಂದಿರುವಳೆಂದು ಭಾವಿಸಿ, ಓಡುತ್ತಾ ಹೋಗಿ ವಿಚಾರಿಸಿ, ನಿರಾಶನಾಗಿ ಹಿಂತಿರುಗುತ್ತಿದ್ದ. ಸುಮಾರು ಮೂರು ತಿಂಗಳು ಕಳೆಯುತ್ತಿದ್ದಂತೆ ಅವನು ಅಜ್ಜಿಯಲ್ಲಿ ಕೇಳಿದ, "ಅಜ್ಜೀ ಅಮ್ಮನನ್ನು ಕರೆತರಲು ನೀನು ಡೋಲಿಯನ್ನು ಏಕೆ ಕಳುಹಿಸುವುದಿಲ್ಲ? ಅವಳು ಹೋಗಿ ತುಂಬ ದಿನಗಳಾದವು". ಅಜ್ಜಿ ಸೆರಗಿನಂಚಿನಿಂದ ಕಣ್ಣೊರೆಸಿಕೊಳ್ಳುತ್ತ ಹೇಳಿದಳು, "ಆ ವಿಷಯವನ್ನು ಈಗ ಬಿಟ್ಟುಬಿಡು. ನೆರೆಮನೆಯ ಮಕ್ಕಳೊಂದಿಗೆ ಕಣ್ಣುಮುಚ್ಚಾಲೆ ಆಡಲು ಹೋಗು ನೋಡೋಣ" ಗದರಿದಂತೆ ಹೇಳಿ ವಿಷಯ ಮರೆಸುವ ಪ್ರಯತ್ನ ನಡೆಸಿದಳು.

ತಾಯಿ ಕಣ್ಮರೆಯಾದಂದಿನಿಂದ ಬಾಬುಲ್ಯ ಆಟವನ್ನೇ ಮರೆತುಬಿಟ್ಟಿದ್ದ. ಅವನಿಗೆ ಅಮ್ಮನ ಚಿಂತೆಯೊಂದೇ ಆವರಿಸಿಕೊಂಡು ಬಿಟ್ಟಿತ್ತು. ಅವನು ಹೇಳಿದ, "ಅಜ್ಜೀ, ನನಗೆ ಆಡಬೇಕೆನಿಸುವುದಿಲ್ಲ. ಅಮ್ಮನನ್ನು ನೋಡಬೇಕೆನಿಸುತ್ತದೆ". ಇದರಿಂದ ದಿಕ್ಕು ತೋಚದ ಅಜ್ಜಿ ಉಮಾಬಾಯಿ, "ಹಾಗಾದರೆ ಮಗೂ, ಒಂದು ದಿನ ನಾನೇ ಡೋಲಿಯಲ್ಲಿ ಕುಳಿತು ನಿನ್ನ ಅಮ್ಮನನ್ನು ಕರೆಯಲು ಹೋಗುತ್ತೇನೆ. ನನಗೂ ದಿನದಿಂದ ದಿನಕ್ಕೆ ಈ ಸಂಸಾರ ಬೇಡವೆನಿಸುತ್ತಿದೆ" ಎಂದಳು. ಆಗ ಬಾಬುಲ್ಯ, "ನೀನು ಹೋದರೆ ನನ್ನ ಜೊತೆಗೆ ಯಾರು? ನೀನು ಹೋಗುವುದು ಬೇಡ. ರಾಘಲ್ಯ ಮತ್ತು ಸಾಫಲ್ಯರಿಗೆ ಡೋಲಿ ಕೊಟ್ಟು ಕಳುಹಿಸಿದರೆ ಸಾಕು. ಅವರು ಅಮ್ಮನನ್ನು ಕರೆತರಬಹುದು" ಎಂದು ಅಮಾಯಕತೆಯಿಂದ ನುಡಿದ. ಇದಕ್ಕೆ ಹೇಳುವುದೇನೆಂದು ತೋಚದ ಅಜ್ಜಿ ಬಾಬುಲ್ಯನ ಮನಸ್ಸನ್ನು ಬೇರೆಡೆಗೆ ಸೆಳೆಯಲು ಯತ್ನಿಸಿದಳು.

ಆದರೆ ಉಪಯೋಗವೇನೂ ಆಗಲಿಲ್ಲ. ಬದಲಿಗೆ ಅವನು ಡೋಲಿ ಕಳುಹಿಸುವ ಬಗ್ಗೆ ಕಾಡತೊಡಗಿದ. ಆದ್ದರಿಂದ ಆಕೆ ದೊಡ್ಡ ಧೈರ್ಯ ಮಾಡಿ ಗಂಭೀರ ಧ್ವನಿಯಲ್ಲಿ ಹೇಳಿದಳು– "ಬಾಬುಲ್ಯ ದೇವರ ಮನೆಗೆ ಹೋದವರು ಮರಳಿ ಬರುವುದಿಲ್ಲವೋ ನನ್ನ ಕಂದಾ ಬಾಬುಲ್ಯನೆಂದ, ಹಾಗಾದರೆ ನನ್ನ ಅಮ್ಮನಿಗೆ ಅಲ್ಲಿ ಹೋಗಲು ನೀನೇಕೆ ಬಿಟ್ಟೆ? ದೇವರ ಡೋಲಿ ಯಾಕೆ ಮರಳಿ ಬರುವುದಿಲ್ಲ? ಇದನ್ನು ನೀನು ಮೊದಲೇ ತಿಳಿಸಿದ್ದರೆ ನಾನು ಆಕೆಯ ಕೋಣೆಯ ಬಾಗಿಲನ್ನು ಅಡ್ಡಕಟ್ಟಿ ಅವಳನ್ನು ಹೊರಬರಲೇ ಬಿಡುತ್ತಿರಲಿಲ್ಲ. ಆಕೆಯ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಿದ್ದೆ". ಈ ಮಾತುಗಳನ್ನು ಕೇಳಿ ಉಮಾಬಾಯಿ ಚಿಕ್ಕಮಕ್ಕಳ ಹಾಗೆ ಗಳಗಳನೆ ಅಳಲಾರಂಭಿಸಿದಳು. ಆಗ ಬಾಬುಲ್ಯ ಅವಳಿಗೆಂದ, "ಅಜ್ಜೀ ಈಗೀಗ ನಾನು ಮಾತನಾಡಿದಾಗಲೆಲ್ಲ ನೀನು ಅಳಲಾರಂಭಿಸುತ್ತಿ. ಯಾಕೆ? ನನಗೆ ಖರೇ ಹೇಳು, ನನಗೀಗ ಅಮ್ಮನೇ ಇಲ್ಲವೇ? ಅಂತಹ ಯಾವ ಕೆಲಸಕ್ಕಾಗಿ ಆಕೆ ದೇವರ ಮನೆಗೆ ಹೋಗಿದ್ದಾಳೆ?" ಉಮಾಬಾಯಿಗೆ ಅವನನ್ನು ಸಮಾಜಾಯಿಸಲು ತಿಳಿಯಲಿಲ್ಲ. ಆಕೆ ಕಣ್ಣೀರೊರೆಸಿಕೊಳ್ಳುತ್ತಾ ಹೇಳಿದಳು, "ನನ್ನ ಬುದ್ಧಿವಂತ ಮಗುವೇ, ಈಗ ಆ ವಿಷಯ ಬಿಟ್ಟುಬಿಡು" ಎಂದಳಾದರೂ ಬಾಬುಲ್ಯ ತನ್ನ ಹಟವನ್ನು ಮುಂದುವರಿಸುತ್ತಾ, "ಇಲ್ಲ ಇಲ್ಲ. ನನ್ನ ಅಮ್ಮ ನನಗೆ ಬೇಕೇ ಬೇಕು. ನಾನು ಈಗಲೇ ದೇವರನ್ನು ಕೇಳುತ್ತೇನೆ. ನನ್ನ ಅಮ್ಮನನ್ನು ಯಾಕೆ ಕರೆದುಕೊಂಡು ಹೋಗಿರುವಿ? ಅವಳು ಎಲ್ಲಿದ್ದಾಳೆ? ದೇವರ ಕೋಣೆಯಲ್ಲಿರುವ ದೇವರೇ ಅಲ್ಲವೇ ಅಮ್ಮನನ್ನು ಕರೆದುಕೊಂಡು ಹೋಗಿದ್ದು" ಎನ್ನುತ್ತಾ ದೇವರ ಕೋಣೆಯೆಡೆಗೆ ಓಡತೊಡಗಿದ. ಹಾಗೂ ಹಿರಿಯರು ಮಾಡಿದ್ದನ್ನು ನೋಡಿದ್ದ ಅವನು ಅವರ ಹಾಗೇ ತನ್ನ ಗಲ್ಲವನ್ನು ತಟ್ಟಿಕೊಂಡು ಕವುಚಿ ಮಲಗಿ ನಮಸ್ಕರಿಸಿದ. ಅಷ್ಟರಲ್ಲಿ ಅಜ್ಜಿ ಲಗುಬಗನೇ ಹಿಂಬಾಲಿಸಿ ಬಂದು ಆತ ಏನು ಮಾಡುತ್ತಾನೆಂಬ ಕುತೂಹಲದಿಂದ ದೇವರಕೋಣೆಯ ಹೊರಗೆ ನಿಂತು ಗಮನಿಸತೊಡಗಿದಳು. ಬಾಬುಲ್ಯ ಎದ್ದು ಮೂಗಿನ ಮೇಲೆ ಬೆರಳು ಹಿಡಿದು ಹಲ್ಲಿನಿಂದ

ತುಟಿಕಚ್ಚಿ ಹೇಳತೊಡಗಿದ. "ದೇವರೇ, ನೀನು ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಬಹಳ ದಿನಗಳಾದವು. ಹೇಗೆ ಕರೆದುಕೊಂಡು ಹೋದೆ? ಆಕೆ ನನಗೆ ಬೇಕೆಂದು ನಿನಗೆ ತಿಳಿಯಲಿಲ್ಲವೇ? ನಿನಗೆ ಬೇರೆ ಯಾರೂ ಸಿಗಲಿಲ್ಲವೇ? ನೀನು ಇಂದು ಸಂಜೆ ಅವಳನ್ನು ಅವಳು ಮಲಗಿದ್ದ ಕೋಣೆಗೆ ತಂದು ತಲುಪಿಸಬೇಕು. ಇಲ್ಲದಿದ್ದರೆ ನಾಳೆ ಬೆಳಿಗ್ಗೆ ಏನು ಮಾಡುವೆನೆಂದು ನೋಡು. ಆಮೇಲೆ ನಿನಗೆ ಸ್ನಾನವಿಲ್ಲ, ಹೂವಿನ ಮಾಲೆಗಳು ಇಲ್ಲ, ದೀಪವಿಲ್ಲ, ಆರತಿಯಿಲ್ಲ, ಕೊಬ್ಬರಿಯಿಲ್ಲ, ಬೆಲ್ಲದ ತುಂಡಿಲ್ಲ, ಸಕ್ಕರೆಯ ನೈವೇದ್ಯವಿಲ್ಲ. ಏನೂ ಇಲ್ಲ. ನೀನು ಉಪವಾಸದಿಂದ ನರಳುವಂತೆ ಮಾಡುತ್ತೇನೆ" ಎಂದು ಗದರಿದ.

ದೇವರೊಂದಿಗೆ ಜಗಳವಾಡುತ್ತಿರುವ ಮೊಮ್ಮಗನ ಧೈರ್ಯವನ್ನು ಕಂಡು ಆಕೆಗೆ ಕ್ಷಣಕಾಲ ಕೌತುಕವಾದರೂ, ಮರುಕ್ಷಣವೇ ಆತನ ಮುಗ್ಧತೆಯನ್ನು ನೆನೆದು ಅಳುವೇ ಬಂತು. ಆಕೆ ತನ್ನ ಇರುವಿಕೆಯನ್ನು ಬಾಬುಲ್ಯ ಗಮನಿಸಬಾರದೆಂದು ಮೆಲ್ಲಗೆ ಅಲ್ಲಿಂದ ದೂರ ಸರಿದಳು. ಇತ್ತ ತಾನು ಗದರಿಸಿದ್ದರಿಂದ ಭೀತನಾದ ದೇವರು ತನ್ನ ಅಮ್ಮನನ್ನು ಅವಳ ಕೋಣೆಗೆ ತಲುಪಿಸದೇ ಇರಲಾರ ಎಂಬ ಭರವಸೆಯಿಂದ ಆತ ಇಡೀ ದಿನ ಸಂತೋಷವಾಗಿಯೇ ಕಳೆದ. ಹಾಗೂ ರಾತ್ರಿಯೂ ಚೆನ್ನಾಗಿಯೇ ನಿದ್ರಿಸಿದ. ಮರುದಿನ ಬೆಳಿಗ್ಗೆ ಎಚ್ಚರವಾಗಿ ಕಣ್ಣು ಬಿಟ್ಟೊಡನೆ ತಟ್ಟನೆದ್ದು ಅಮ್ಮನ ಕೋಣೆಯ ಕಡೆಗೆ ಹೋಗಿ ನೋಡಿದರೆ ಒಂದು ನೊಣವೂ ಇಲ್ಲ. ಆತ ತುಂಬಾ ನಿರಾಶನಾದ. ಸಿಟ್ಟು ನೆತ್ತಿಗೇರಿತು. ನೇರವಾಗಿ ಅಜ್ಜಿಯ ಬಳಿ ಹೋಗಿ ಹೇಳತೊಡಗಿದ–

"ಅಜ್ಜೀ, ಆ ದೇವರು ಎಂತಹವನು? ನಿನ್ನೆ ನಾನವನಿಗೆ ಸಾಕಷ್ಟು ಹೆದರಿಸಿದರೂ ಅವನಿಗೆ ಪರಿವೆಯೇ ಇಲ್ಲ. ಅವನಿಗೆ ಸ್ವಲ್ಪವಾದರೂ ಲಜ್ಜೆಯಿದ್ದರೆ ಅವನು ನನ್ನ ಅಮ್ಮನನ್ನು ಇಲ್ಲಿಗೆ ತಲುಪಿಸಬೇಕಾಗಿತ್ತಲ್ಲವೇ? ಆ ದೇವರೂ ನನ್ನ ಮಾತನ್ನು ಕೇಳುವುದಿಲ್ಲ. ನನ್ನ ತಾಯಿ ನನಗೆ ಬೇಕೇ ಬೇಕು. ಅಮ್ಮ..ಅಮ್ಮಾ." ಎನ್ನುತ್ತಾ ಗಟ್ಟಿಯಾಗಿ ರೋಧಿಸ ತೊಡಗಿದ. ಆಗ ಅಜ್ಜಿ ಅವನನ್ನು ಬಳಿಗೆ ಸೆಳೆದುಕೊಂಡು ಹೇಳತೊಡಗಿದಳು, "ಹೀಗೆಲ್ಲ ಹುಚ್ಚುತನ ಮಾಡಬಾರದು ಮಗೂ, ದೇವರ ಮನೆಗೆ ಹೋದವರು ಮರಳಿ ಬರುವುದಿಲ್ಲ ಕಂದಾ"

"ಆದರೆ ದೇವರು ನನಗೆ ಹಾಗೆಂದು ಹೇಳಬೇಕಲ್ಲವೇ? ನಿನ್ನೆ ನಾನವನಿಗೆ ಸಾಕಷ್ಟು ಗದರಿದೆ. ಆಗ ಆತ 'ನಿನ್ನ ಅಮ್ಮ ನಿನಗೆ ಸಿಗುವುದಿಲ್ಲ' ಎಂದು ಹೇಳಿಬಿಡಲು ಅವನಿಗೆ ಏನಾಗಿತ್ತು? ಅವನು ಯಾಕೆ ಸುಮ್ಮನಿದ್ದ?" ಕೇಳಿದ. ಆಗ ಅಜ್ಜಿಯೆಂದಳು, "ಮನುಷ್ಯರ ಬಳಿ ದೇವರು ಮಾತನಾಡುವುದಿಲ್ಲ ಮಗೂ". ಬಾಬುಲ್ಯ ಮಾತು ಮುಂದುವರಿಸಿದ– "ಮನುಷ್ಯರ ಬಳಿ ಮಾತನಾಡುವುದಿಲ್ಲವಾದರೆ ಅವನು ನಮ್ಮನ್ನು ತನ್ನ ಬಳಿ ಕರೆದೊಯ್ಯುವುದು ಯಾತಕ್ಕಾಗಿ? ನನ್ನ ಅಮ್ಮನ ಬಳಿಯೂ ಆತ

ಮಾತನಾಡುವುದಿಲ್ಲವೇ?" ಅವನನ್ನು ಸಮಾಧಾನಪಡಿಸುವುದು ಅಜ್ಜಿಗೆ ಸಾಧ್ಯವಾಗಲಿಲ್ಲ. ಬಾಬುಲ್ಯ ಇನ್ನೂ ಮುಂದುವರೆದು ಹೇಳಿದ, ದೇವರು ಮಾತನಾಡದಿದ್ದರೆ ಬೇಡ. ಮಾತನಾಡಲು ನನ್ನ ಅಮ್ಮ ನನಗೆ ಬೇಕು. ಅವಳು ಅಲ್ಲಿರುವುದು ಬೇಡ. ಒಂದುವೇಳೆ ಅವಳು ಇಲ್ಲಿ ಬರುವುದಿಲ್ಲವಾದರೆ ನಾನೇ ಅವಳ ಬಳಿ ಹೋಗುತ್ತೇನೆ" ಎಂದು ಹೇಳುತ್ತಾ ಒಂದೇ ಸಮನೆ ಅಳತೊಡಗಿದ.

ಮುಗ್ಧತೆಯೊಂದಿಗೆ ಚಿಂತಾಕ್ರಾಂತನೂ ಆದ ಅವನಿಗೆ ಸಂತೈಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಅವನು ಊಟ ತಿಂಡಿ ಬಿಟ್ಟ. ದಿನವಿಡೀ ಅಮ್ಮನದೇ ಧ್ಯಾನ. ಕೆಲವೇ ದಿನಗಳಲ್ಲಿ ನಿಸ್ತೇಜನಾಗಿಬಿಟ್ಟ. ಸೊರಗಿ ಕೃಶನಾಗಿ ಹಾಸಿಗೆ ಹಿಡಿದ. 'ಅಮ್ಮ-ಅಮ್ಮ' ಎನ್ನುತ್ತಿರುತ್ತಿದ್ದ. ಕೊನೆಗೆ ಮಂಪರಿನಲ್ಲಿಯೂ 'ಅಮ್ಮ-ಅಮ್ಮ' ಎನ್ನುತ್ತಲೇ ಅಮ್ಮನ ಬಳಿ ಹೋಗಿಯೇ ಬಿಟ್ಟ.

ಬಾಬುಲ್ಯನ ಈ ಸಂಗತಿ ಕೇಳಿ ಯಾರ ಕರುಳು ದುಃಖದಿಂದ ಬೇಯುವುದಿಲ್ಲ? ಹಾಗೂ ಯಾರ ಕಣ್ಣಿಂದ ದುಃಖಾಶ್ರು ಹರಿಯುವುದಿಲ್ಲ? 'ಅವಳು ನನ್ನ ಬಳಿ ಬರುವುದಿಲ್ಲ ವಾದರೆ ನಾನೇ ಅವಳ ಬಳಿ ಹೋಗುತ್ತೇನೆ' ಎಂತಹ ವಿಶ್ವಾಸದ ಮಾತುಗಳಿವು! ಬಾಬುಲ್ಯ ಕೊನೆಗೂ ಅದನ್ನು ನಿಜವಾಗಿಸಿಬಿಟ್ಟ ಎಂದೇ ಹೇಳಬೇಕು.

ಯಂ ಯಂ ವಾಪಿ ಸ್ಮರಂಭಾವಂ ತ್ಯಜತ್ಯಂತೇ ಕಲೆವರಮ್/
ತಂ ತಮೇವೈತಿ ಕೌಂತೇಯ ಸದಾ ತದ್‌ಭಾವ ಭವಿತಃ//

ಈ ಶ್ಲೋಕದಲ್ಲಿ ಭಗವಂತನು- "ಯಾರು ಪ್ರತಿಕ್ಷಣವೂ ನನ್ನನ್ನೇ ಕುರಿತು ಚಿಂತಿಸುತ್ತಾರೋ, ನನ್ನನ್ನು ನೆನೆಯುತ್ತ ಪ್ರಾಣ ತ್ಯಜಿಸುತ್ತಾರೋ ಅವರು ನನ್ನನ್ನೇ ಸೇರುತ್ತಾರೆಂದು ಅರ್ಜುನನಿಗೆ ಹೇಳಿದ್ದಾನೆ. ಅದೇ ಆಧಾರದಿಂದ ಹೇಳುವುದಾದರೆ ನಮ್ಮ ಪುಟ್ಟ ಬಾಬುಲ್ಯ ತನ್ನ ಪ್ರೀತಿಯ ಅಮ್ಮನನ್ನೇ ಪ್ರತಿಕ್ಷಣ ನೆನೆಸುತ್ತಿದ್ದರಿಂದ ಅವಳಿದ್ದಲ್ಲಿಯೇ ಹೋಗಿ ಅವಳ ಮಡಿಲನ್ನು ಸೇರಿದನೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಅನುವಾದಕರು: **ಅನಿರುದ್ಧ ಭಟ್**

❖ ❖ ❖❖ ❖

ರುದ್ರ

✍ ಗಜಾನನ ರಘುನಾಥ ಜೋಗ

ಕಾಗೆ ಒಂದೇ ಸವನೆ ಹೀಗೆ ವಿಕಾರವಾಗಿ ಕೂಗುತ್ತಿದ್ದಂತೆಯೇ ಅವಳ ಸ್ಥಿತಿ ವಿಚಿತ್ರವಾಗುತ್ತಿತ್ತು. ಯಾರೋ ಬರುತ್ತಾರೆ. ಯಾರಾದರೂ ಬರಬಹುದು. ಬರುವ ಹಾದಿಯಲ್ಲಿ ಇದ್ದವರು, ನೆಂಟರಿಷ್ಟರು ಬರುತ್ತಾರೆ ಎಂದೆನಿಸುತ್ತಿತ್ತು. ವಿಶಾಲವಾದ ಜಗಲಿಯ ಮೇಲೆ ತುಸು ಹೊತ್ತು ಕುಳಿತು, ಒಂದೆರಡು ತುತ್ತು ತಿಂದು, ಲೋಕಾಭಿರಾಮವಾಗಿ ಕೆಲವು ವಿಷಯ ಮಾತನಾಡಿ ಹೋಗಬಹುದು. ಸನ್ಯಾಸಿಗಳು, ಪಾತ್ರೆಗಳಿಗೆ ಕಲಾಯಿ ಹಾಕುವವರು, ನಂದಿ ಎತ್ತುಗಳಾದರು ಬರಬಹುದು. ಅವಳು ಮನೆಬಾಗಿಲಿನ ಎದುರು ಇರುವ ಹಲಸಿನ ಮರದ ಕಡೆಗೆ ದೃಷ್ಟಿ ಹಾಯಿಸುತ್ತಾ ಬಹಳ ಹೊತ್ತು ನಿಂತಿದ್ದಳು. ಆನಂತರ ಶ್ರಾವಣ ಸೋಮವಾರದ ನೆನಪಾಗಿ ಎದ್ದು ಸ್ನಾನಕ್ಕಾಗಿ ಮನೆಯ ಹಿಂದೆ ನಡೆದಳು.

ಭಟ್ಟರ ಕೇರಿಯ ಏಳು ಮೂಲಮನೆಗಳು ಮತ್ತು ಅದಕ್ಕೆ ಅಡ್ಡವಾಗಿ ದಾಟಿ ಹೋದ ಹೊರತು ಭಟ್ಟರ ಹೆಂಡತಿ ಭಟಣಿಯ ಮನೆ ಸಿಗುವ ಸಂಭವವಿಲ್ಲ. ಬಾಯೋಭಟಣಿಯ ಮನೆಗೆ ಹೋಗುವ ಸಂದರ್ಭ ಅಪ್ಪಿತಪ್ಪಿ ಯಾರಿಗಾದರೂ ಬರುತ್ತಿತ್ತು. ಅದೆಷ್ಟೋ ವರ್ಷಗಳಿಂದ ಆ ಮನೆಯಲ್ಲಿ ಬಾಯೊಭಟಣಿ ಒಬ್ಬಳೇ ಇದ್ದಾಳೆ. ಅವಳನ್ನು ಪುರೋಹಿತಕೇರಿಯ ಹೆಂಗಸರು ಕೆಟ್ಟ ಕಾಲ್ಗುಣದವರು ಎಂದು ಹೀಯಾಳಿಸುತ್ತಿದ್ದರು. ಅವಳ ಗಂಡ ವಾಮನ ಭಟ್ಟ ಮದುವೆಯಾದ ಕೆಲವೇ ದಿನಗಳಲ್ಲಿ ತೆಂಗಿನಮರದಿಂದ ಕೆಳಗೆ ಬಿದ್ದು ಸತ್ತುಹೋಗಿದ್ದರು. ಇದ್ದ ಒಬ್ಬ ಮೈದುನ ಮಾಧು ಭಟ್ಟರ ಜೊತೆ ಸಾಂಗ್ಲಿಗೆಂದು ಹೋದವನು ದೂರವೇ ಹೊರಟುಹೋಗಿದ್ದ. ಆತ ಹಿಂತಿರುಗಿ ಬರಲೇ ಇಲ್ಲ. ವಾಮನ ಭಟ್ಟರೊಂದಿಗೆ ಆ ಮನೆಯ ವೈಭವವೂ ಹೊರಟು ಹೋಯಿತು. ಕೆಟ್ಟ ಕಾಲ್ಗುಣದವಳು ಎಂಬ ಕಳಂಕ ಮಾತ್ರ ಭಟಣಿಯ ತಲೆಗೆ ಶಾಶ್ವತವಾಗಿ ಅಂಟಿಕೊಂಡಿತು. ಉಪ್ಪರಿಗೆಯ ಉದ್ದಗಲಕ್ಕೂ ಇರುವ ಆ ಮನೆ ಈಗ ಹೆಚ್ಚು ಕಡಿಮೆ ಮುಚ್ಚಿಕೊಂಡೇ ಇರುತ್ತದೆ. ನಾಲ್ಕೂಕಡೆಗಳಲ್ಲಿ ಜೇಡರಬಲೆಗಳು ಬೆಳೆದಿವೆ. ಶಿಥಿಲವಾಗಿ ಹರಕು ಮುರುಕಲಾದ ಆ ಮನೆ ಭಟ್ಟರ ಹೆಂಡತಿಗೆ ಆಸರೆಯಾಗಿ ಉಳಿದಿತ್ತು.

ನೀರು ತುಂಬಿದ ಕೊಡವನ್ನು ಸೊಂಟದ ಮೇಲೆ ಸರಿಪಡಿಸಿಕೊಳ್ಳುತ್ತಾ ಬಾಯೋಭಟಣಿ ಲಗುಬಗೆಯಿಂದ ಮನೆಯ ಹಿಂಬದಿಯ ಸೂರಿನೊಳಗೆ ಹೊಕ್ಕಳು. ಇದ್ದಕ್ಕಿದ್ದಂತೆ ಮಳೆಯ ದೊಡ್ಡ ಹನಿಗಳು ಬೀಳತೊಡಗಿದವು. ತುಂಬಾ ಹೊತ್ತು ರಭಸದಿಂದ ಸುರಿದ ಮಳೆ ಕ್ರಮೇಣ ನಿಧಾನವಾಗಿ ಕಡಿಮೆಯಾಗುತ್ತಾ ಮನಸ್ಸಿಗೆ ಕಿರಿಕಿರಿಯಾಗುವ ಹಾಗೆ ಜಿರಿಜಿರಿಯಾಗಿ ಬೀಳತೊಡಗಿತು. ಕಾಗೆ ಮತ್ತೆ ಹೊಸರೀತಿಯಲ್ಲಿ ಜೋರಾಗಿ ಕೂಗತೊಡಗಿತು.

"ಹಚ್..ಸತ್ತ ಕಪ್ಪುಮುಖದ್ದೆ! ನಮ್ಮ ಮನೆಗೆ ಯಾರು ಬರುತ್ತಾರೆ ಸಾಯಲಿಕ್ಕೆ? ಸುಮ್ಮನೆ ಅರಚುತ್ತೆ ಮುಂಡೇದು..!"

ಬಾಯೋಭಟಣಿ ಕಲ್ಲನ್ನು ಎತ್ತಿ ಹೊಡೆಯುವಂತೆ ಕೈ ಮಾಡಿದಳು. ಕಾಗೆ ಅಲ್ಲಿಂದ ಹಾರಿ ಹಲಸಿನ ಮರದ ಟೊಂಗೆಯ ಮೇಲೆ ಕುಳಿತು ಅಲ್ಲಿಂದಿಲ್ಲಿ ಹಾರುತ್ತಾ ಮತ್ತೆ ಕೂಗಲು ಪ್ರಾರಂಭಿಸಿತು. ಭಟ್ಟರ ಹೆಂಡತಿ ಕಂಬಕ್ಕೆ ಒರಗಿಕೊಂಡು ಕಾಗೆಯ ಕಡೆಗೆ ನೋಡುತ್ತಾ ನಿಂತಳು.

ಪ್ರಾಯದಲ್ಲಿ ಮೈತುಂಬಿಕೊಂಡಿದ್ದ ಭಟ್ಟರ ಹೆಂಡತಿಗೆ ಹಿಂದಿನ ನೆನಪು ಬಂತು. ಇವತ್ತಿಗೂ ಅವಳ ಮೈಬಣ್ಣ ಬೆಳ್ಳಗಿದೆ. ಆದರೆ ಆಗ ಇದ್ದ ಬೆಂಕಿಯ ಝಳದಂತಹ ತೇಜೋಪೂರ್ಣ ಕೆಂಪುಮಿಶ್ರಿತ ಬಿಳಿಬಣ್ಣ ಈಗ ಇಲ್ಲ. ಸುಂದರವಾದ ದೊಡ್ಡದೊಡ್ಡ ಕಣ್ಣುಗಳು ಮಾತ್ರ ಹಾಗೆಯೆ ಇವೆ. ಆದರೆ ಈಗ ಅವು ಕಳಾಹೀನವಾಗಿವೆ. ಕಳೆದ ಹದಿನಾರು ವರ್ಷಗಳಿಂದ ತಲೆಯ ಮೇಲಿನ ಕೆಂಪುಸೆರಗು ಜೊತೆ ನೀಡುತ್ತಾ ಬಂದಿದೆ. ಇದು ಎಂತಹ ವಿಚಿತ್ರ ಬದುಕು! ಇನ್ನು ಸಾಯುವವರೆಗೆ ಹೀಗೆ ಒಂದೇ ಸೂರಿನಡಿ ಒಬ್ಬಂಟಿಯಾಗಿ ಬಾಳಬೇಕಾದ ಅನಿವಾರ್ಯತೆ. ಒಬ್ಬೊಬ್ಬರ ಅದೃಷ್ಟದಲ್ಲಿ ಹೀಗೇ ಅಂತ ಇರುತ್ತದೆ.

"ಏ ಕಾಕೀ ಸೂಕ್ಷ್ಮವಾಗಿ ಏನು ನೋಡುತ್ತಿದ್ದಿ?" ಕುಂಟುತ್ತಾ ಬರುತ್ತಿದ್ದಂತೆ ರಾಮ ಕೇಳಿದ. ತಲೆ ಮೇಲಿನ ಕಂಬಳಿಯನ್ನು ಜಾಡಿಸುತ್ತಾ ಗೋಡೆಗೆ ಆನಿಸಿಕೊಂಡು ಕುಳಿತುಕೊಂಡ. "ನೀನು ಚೆನ್ನಾಗಿದ್ದಿಯಾ ಕಾಕಿ ಭಟಣಿ?" ನಿನ್ನನ್ನೂ ಮಳೆ ನೆನಸಿಬಿಟ್ಟಿತ್ತಲ್ಲ. ಮಳೆ ತುಂಬಾ ಜೋರಾಗಿ ಬಂದಿದೆಯಲ್ಲ. ಹೀಗಾದರೆ ಗದ್ದೆ ಭತ್ತ ಎಲ್ಲಾ ಹಾಳಾಗಿ ನೆಲಕಚ್ಚುತ್ತದೆ. ಕತ್ತಿ ತೆಗೆದುಕೊಂಡು ಗದ್ದೆಗೆ ಇಳಿಯುವುದು ಸಾಧ್ಯವಿಲ್ಲ," ಕುಂಟ ರಾಮ ಬಡಬಡಿಸಿದ. "ನಾನು ಬಾಬಿ ಭಟ್ಟರ ಮನೆಯಿಂದ ಬರುತ್ತಿದ್ದೇನೆ. ಕಾಕೀ, ಅವರ ಮನೇಲಿ ಅದು... ಇದು... ಇದೆ."

"ಅವರ ಮನೆಯಲ್ಲಿ ಏನಿದೆ?" ಅವಳಲ್ಲಿ ತುಸು ಉತ್ಸುಕತೆ ಕಾಣಿಸಿತು. ಎಲ್ಲಿ ಏನೇ ಇದ್ದರೂ ಸಹ ಹೆಚ್ಚಾಗಿ ಯಾರೂ ಅವಳನ್ನು ಕರೆಯುತ್ತಿರಲಿಲ್ಲ. ಆದರೆ ನಾಲ್ಕು ಜನ ಸೇರುವ ಗದ್ದಲದ ಸುದ್ದಿ ಬಗ್ಗೆ ಯಾರಾದರೂ ಹೇಳಿದರೆ ಆಕೆಗೆ ಖುಷಿಯಾಗುತ್ತಿತ್ತು.

"ಅವರು ಹಯ್ಯೆ ಇದ್ದಾರಲ್ಲ. ಅವರ ಹೆಸರು... ಏನದು?"

"ನೀನೊಬ್ಬ ಸರಿಯಾದ ಎಡವಟ್ಟ ಮನುಷ್ಯ ರಾಮ"

"ಹಾಂ ಹಾಂ! ದೆವ್ವ ಇದ್ದ ಹಾಗೆ ದೆವ್ವ"

"ಥತ್ ನಿನ್ನ ಬುದ್ದಿಗೆ. ಯಾರ ಮೇಲೆ ದೆವ್ವ ಬಂದಿದೆ? ನಿನ್ನ ಮೇಲೆ!"

"ಅದೇ ಅದೇನೇ.. ತುಂಬಾ ಜನ ಬ್ರಾಹ್ಮಣರು ಒಂದೆಡೆ ಸೇರುತ್ತಾರೆ.. ಮತ್ತು ದೊಡ್ಡದಾಗಿ ಕೂಗಿ ಹೇಳುತ್ತಾರೆ"

"ಹಾಂ ಹಾಂ ಅದು ಮಹಾರುದ್ರ ಇರಬೇಕು"

"ಹೌದೇ ಮಹರಾಯ್ತಿ. ಮಹಾರುದ್ರವೇ ಅದು. ಅಲ್ದೆ ನಾವು ಸಾಮಾನ್ಯ ಅಡನಾಡಿ ಮನುಷ್ಯರು. ಕೂಲಿ ಕೆಲಸ ಮಾಡುವ ನಮಗೆ ತಿಳಿವಳಿಕೆ ಎಲ್ಲಿದೆ?"

"ಅದಿರಲಿ, ಯಾರ್‍ಯಾರು ಭಟ್ಟರು ಬಂದಿದ್ದಾರೆ ಮಹಾರುದ್ರಕ್ಕೆ?"

"ಬಹಳ ಜನ ಬಂದಿದ್ದಾರೆ. ವಾಮನ ಭಟ್ಟ, ಶೇರವ್ರೂ, ಕೆಳಗಿನ ವಾಡೆಯ ರಾಮಭಟ್ಟ.. ಹಾಂ ದತ್ತು ಭಟ್ಟ.."

"ಯಾರು ದತ್ತುಭಟ್ಟನೇ?"

"ಅವನೇ ತಾಡಮಾಡ ರಾಕ್ಷಸ.. ಕಾಜನ್ಯಾದವನು"

"ಅವನು ಬಂದಿದ್ದಾನೆಯೇ! ಮತ್ತೆ ನೀನು ಅವನಿಗೆ ರಾಕ್ಷಸ ಎಂದು ಕರೆಯುತ್ತಿ? ಅವನು ಮಂತ್ರ ಕಲಿತ ಬ್ರಾಹ್ಮಣನಲ್ಲವೇ?"

"ಇರಬಹುದು ಮಹಾರಾಯ್ತಿ ಇರಬಹುದು. ಆದರೆ ಆತ ರಾಕ್ಷಸನ ಹಾಗೆ ಮಾತನಾಡುತ್ತಾನೆ. ನೋಡಲು ಕೂಡಾ ಹಾಗೆ ಇದ್ದಾನೆ. ಇನ್ನು ಅವನ ನಗುವೋ ವಿಚಿತ್ರ!"

ಬಾಯೊಭಟಣಿ ಏನೂ ಮಾತನಾಡಲಿಲ್ಲ. ಅವಳ ತುಟಿ ಅಗಲವಾಯಿತು. ಅವಳ ದೃಷ್ಟಿ ತಾನಾಗಿ ಬಾಗಿಲ ಮುಂದಿರುವ ತೆಂಗಿನಮರದ ಕಡೆಗೆ ಹೋಯಿತು. ಅಂಗಳದ ಬದಿ ಮುಗಿಲಿಗೆ ತಾಗುವಷ್ಟು ಎತ್ತರಕ್ಕೆ ಬೆಳೆದ ತಂಗಿನ ಮರವನ್ನು ಕಂಡು ಅವಳಿಗೆ ದತ್ತೂನ ನೆನಪಾಯಿತು.

"ಏ ಕಾಕೀ, ಬಾಬಿ ಭಟ್ಟರು ಏನೋ ತರಲು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ಆದರೆ ನಾನು ಅದನ್ನೆಲ್ಲಾ ಮರೆತುಬಿಟ್ಟೆ. ಅವರು ನನ್ನನ್ನು ಬೈಯ್ಯುತ್ತಾ ದೇವಸ್ಥಾನದಲ್ಲಿ ಕುಳಿತಿರಬೇಕು"

"ದೇವಸ್ಥಾನದಲ್ಲಿ ಯಾಕೆ?"

"ಮಹಾರುದ್ರ ಇರುವುದೇ ಬ್ರಹ್ಮನ ದೇವಸ್ಥಾನದಲ್ಲಿ"

ಈ ಉತ್ತರದಿಂದ ಹಳೆಯ ನೆನಪೊಂದು ಅವಳ ಮೈತುಂಬಾ ಹರಿದಾಡಿತು. ಭಯಾನಕ ಘಟನೆಯೊಂದರ ನೆನಪು ಮರುಕಳಿಸಿತು. ಕುಂಟ ರಾಮ ಏನೋ ಬಡಬಡಿಸುತ್ತಾ ಹೋಗುತ್ತಿದ್ದಂತೆ ಏನೋ ನೆನಪಾದವಳಂತೆ ಅವಳು ಕೇಳಿದಳು,

"ಏ ರಾಮಾ, ನನ್ನದೊಂದು ಕೆಲಸ ಮಾಡಿಕೊಡುವೆಯಾ?"

"ಏನದು ಹೇಳು ಬಾಯಿ.."

"ಹಲಸಿನ ಮರದಿಂದ ಎರಡು ನೀರಹಲಸು ತೆಗೆದುಕೊಡ್ತಿಯಾ? ಕೊಂಬೆಗೆ ನಾಲ್ಕಾರಾದರೂ ಇರಬೇಕು"

"ಅಯ್ಯೋ ದೇವರೇ...ಈ ಕುಂಟ ಮರ ಹತ್ತಿದ್ದನ್ನು ನೀನು ಯಾವಾಗಲಾದರೂ ನೋಡಿದ್ದೀಯಾ?" ಹಣೆಯ ಮೇಲೆ ಹೊಡೆದುಕೊಳ್ಳುತ್ತಾ ರಾಮ ಕುಂಟುತ್ತಾ ಕುಂಟುತ್ತಾ ಕಣ್ಣಿಗೆ ಕಾಣದಂತಾದ.

ಬಾಯೋವಿನ ಮನೆಗೆಲಸ ಚಿಟಿಕೆ ಹೊಡೆಯುವುದರೊಳಗೆ ಮುಗಿದುಹೋಗುತ್ತಿತ್ತು. ಕೆಲಸವೇನೂ ಬಹಳ ಇರುತ್ತಿರಲಿಲ್ಲ. ಒಬ್ಬಳಿಗಾಗಿ ಏನು ಅಡಿಗೆ? ಏನು ಒಪ್ಪಓರಣ!

ಇವತ್ತಂತೂ ಅವಳಿಗೆ ಉಪವಾಸದ ದಿನ. ಮನೆಯಲ್ಲಿದ್ದರೂ ದಿನ ಹೇಗೆ ಸರಿದು ಹೋಗುತ್ತದೆ ಎನ್ನುವುದು ಅವಳಿಗೆ ತಿಳಿಯುತ್ತಿರಲಿಲ್ಲ. ಅವಳ ಬಹಳಷ್ಟು ಸಮಯ ಅಡಿಕೆ ತೋಟದಲ್ಲಿ ಕಳೆದುಹೋಗುತ್ತಿತ್ತು. ಅಲ್ಲಿ ಕೆಲಸ ಇಲ್ಲದ ದಿನವೇ ಇರುತ್ತಿರಲಿಲ್ಲ. ಒಂದಲ್ಲ ಒಂದು ಹುಡುಕಿಕೊಂಡು ಮಾಡಲಿಕ್ಕೆ ಇರುತ್ತಿತ್ತು. ನೆಟ್ಟಿಕೆಲಸಕ್ಕೆ ಕೈಹಾಕಿದರೆ ಆರೇಳು ಸಾಲು ಮಾಡಿ ಮುಗಿಸುವಷ್ಟರಲ್ಲಿ ದಿನವೇ ಕಳೆದು ಹೋಗುತ್ತಿತ್ತು. ವೈಶಾಖದಲ್ಲಿ ನೀರು ಹಾಯಿಸುವ ಕೆಲಸವಿದ್ದಾಗಲೂ ದಿನ ಬೇಗ ಮುಗಿಯುತ್ತಿತ್ತು. ಬಾಂದಾರದಿಂದ ಕಲ್ಲಿಯಲ್ಲಿ ನೀರು ತುಂಬಿ ಮೊಗೆದು ಮೊಗೆದು ಓಳಿಗೆ ಬಿಡುವುದು ಅವಳಿಗೆ ಇಷ್ಟವಾಗುವ ಕೆಲಸ. ಅವಳು ತೆಂಗು, ಬಾಳೆ, ಕಾಳುಮೆಣಸಿನ ಬಳ್ಳಿ, ಎಲೆಬಳ್ಳಿಗಳನ್ನು ನಳನಳಿಸುವಂತೆ ಬೆಳೆಸಿದ್ದಾಳೆ. ತೆಂಗಿನ ಸಸಿ ನೆಡುವ ಕೆಲಸವನ್ನು ಆಳುಗಳಿಗೆ ಬಿಟ್ಟುಕೊಡುತ್ತಿರಲಿಲ್ಲ, ತಾನೇ ಕೈಯಾರೆ ಅದನ್ನು ಮಾಡುತ್ತಾಳೆ. ಭಟ್ಟರ ಕೇರಿಯ ಹೆಂಗಸರು ಅವಳಿಗೆ ಕೇಳಿಸದಂತೆ 'ಗಂಡಸು' ಎಂದು ಅವಳನ್ನು ಕರೆಯುತ್ತಾರೆ. ಆದರೆ ಅವಳ ಎದುರು ನಿಂತು ಮಾತನಾಡುವ ಧೈರ್ಯ ಅವರಲ್ಲಿ ಯಾರಿಗೂ ಇಲ್ಲ.

ಅವಳು ಮಹಡಿ ಹತ್ತಿಹೋದಳು. ಅಲ್ಲಿದ್ದ ಸಾಮಾನುಗಳನ್ನು ಅತ್ತಇತ್ತ ಸರಿಸುತ್ತಾ ಕಸ ಗುಡಿಸಲಾರಂಭಿಸಿದಳು. ಹಿಂದೆ ಎರಡು ಮೂರು ಗಂಟೆಗೊಮ್ಮೆ ಕಸ ಗುಡಿಸುತ್ತಿದ್ದಳು. ಇಂದು ಎಷ್ಟೋ ವರ್ಷಗಳ ಬಳಿಕ ಮಹಡಿಯ ಮೇಲಿನ ದೊಡ್ಡದೊಡ್ಡ ಪೆಟ್ಟಿಗೆಗಳನ್ನು ಬದಿಗೆ ಸರಿಸಿ ಕಸ ಗುಡಿಸುವ ಕೆಲಸವನ್ನು ಶುರು ಮಾಡಿದ್ದಾಳೆ. ಆ ಪೆಟ್ಟಿಗೆಯೊಳಗೆ ಏನು ತುಂಬಿದೆ ಎಂದು ತಿಳಿಯುವ, ನೋಡುವ ಕುತೂಹಲ ಅವಳಿಗೆ ಯಾವಾಗಲೂ ಇರಲಿಲ್ಲ. ಒಂದು ರೀತಿಯ ನಿರಾಸಕ್ತಿ ಮತ್ತು ದೃಢ ಮನಸ್ಸಿನಿಂದ ಅವಳು ತನ್ನ ಜೀವನವನ್ನು ಮುಂದೆ ದೂಡುತ್ತಿದ್ದಳು.

ಆದರೆ ಇಂದು ಕೂಡಾ ಅವಳ ಚಿತ್ತ ಪೆಟ್ಟಿಗೆಗಳತ್ತ ಇರಲಿಲ್ಲ. ಅವಳ ಮನಸ್ಸು ಡೋಲಾಯಮಾನವಾಗಿದೆ. ಕಿಟಕಿಯಿಂದ ಹೊರಗೆ ನೋಡುತ್ತಾ ಬಹಳ ಹೊತ್ತು ನಿಂತೇ ಇದ್ದಳು. ಕೆಳಗೆ ಯಾರೂ ಮಾತನಾಡುತ್ತಿರುವಂತೆ ಭಾಸವಾಗಲಾರಂಭಿಸಿತು. ಆದರೆ ನಿಂತಲ್ಲಿಂದ ಕದಲುವುದಕ್ಕೆ ಮನಸ್ಸಾಗಲಿಲ್ಲ. ಅವಳು ತದೇಕಚಿತ್ತದಿಂದ ಮಹಡಿಯಲ್ಲಿ ಇರುವುದನ್ನು ನೋಡಲಾರಂಭಿಸಿದಳು. ಮೂಲೆಯೊಂದರಲ್ಲಿ ಒಂದರ ಮೇಲೊಂದರಂತೆ ಪೇರಿಸಿ ಇಟ್ಟಂತಹ ಮೂರು ಹಂಡೆಗಳು. ಹಳೆಯ ತಪ್ಪಲೆಗಳು. ದೊಡ್ಡದೊಡ್ಡ ಪೆಟ್ಟಿಗೆಗಳು. ಸೀಸಂ ಕಟ್ಟಿಗೆಯಲ್ಲಿ ಕುಸುರಿ ಕೆಲಸ ಮಾಡಿದ ಮಂಚ. ನೋಡುನೋಡುತ್ತಾ ಅವಳ ದೃಷ್ಟಿ ಒಂದೆಡೆ ಸ್ಥಿರವಾಯಿತು. ಮಂಚದ ಮೇಲೆ ಅಡ್ಡಲಾಗಿ ಕಟ್ಟಿದ ತೊಟ್ಟಿಲು. ಯಾರಿಗಾಗಿ, ಯಾರು ತಂದದ್ದು ಈ ತೊಟ್ಟಿಲು? ಇನ್ನು ಮುಂದೆ ಇದರಲ್ಲಿ ಮಲಗುವವರು ಯಾರಿರಬಹುದು? ಅವಳ ಕಾಲುಗಳು ತಮ್ಮಷ್ಟಕ್ಕೆ ನಡುಗಿದವು.

ಅವಳು ಕೈಯೆತ್ತಿ ತೊಟ್ಟಿಲನ್ನು ಮೆಲ್ಲಗೆ ಸ್ಪರ್ಶಿಸಿದಳು. ಆ ತೊಟ್ಟಿಲಿಗೆ ಆಸರೆ ಸಿಕ್ಕಂತಾಗಿ ಅದು ಕಟ್ಟಿದ ಬಲೆಗಳಿಂದ ಬಿಡಿಸಿಕೊಂಡು ಮುಂದೆ ಹಿಂದೆ ತೂಗಲಾರಂಭಿಸಿತು. ಅವಳ ಕೈಗಳು ನಡುಗಿದವು. ಅವಳ ನೋಟ ಮಂಚದ ಕುಸುರಿ ಕೆಲಸದತ್ತ ಹರಿಯಿತು.

ಕುರುಡ ತನ್ನ ಕೈಯಿಂದ ಸವರಿಕೊಳ್ಳುತ್ತಾ ಹುಡುಕಾಡುವಂತೆ ನೆಟ್ಟದೃಷ್ಟಿಯಿಂದ ಅವಳ ನಡುಗುವ ಕೈಬೆರಳುಗಳು ಮಂಚದ ಮೇಲೆ ಸರಿದಾಡಿದವು. ಬಹಳ ಹೊತ್ತು ಅವಳು ಅದೇ ರೀತಿ ಇದ್ದಳು.

ಕಾಗೆಗೆ ಒದರಿ ಒದರಿ ಬೇಸರವಾಗಿ ಅದು ಹೊಳೆಯ ಆಚೆ ಇರುವ ಗದ್ದೆಗಳನ್ನು ದಾಟಿ ಗುಡ್ಡದ ಕಡೆಗೆ ದೂರ ಹಾರಿಹೋಯಿತು.

ಅವಳ ಎದೆಯ ತುಂಬಾ ಅರ್ಧ ಕನಸು, ಅರ್ಧ ನೆನಪಿನ ಜೊಂಪರು. ಮೈಲಿಗೆಯಾಗದೆ ಉಳಿದ ಬಂಗಾರದಂತಹ ಗಟ್ಟಿಮುಟ್ಟಾದ ಶರೀರ. ತನ್ನ ಪವಿತ್ರ ಶರೀರದ ಕುರಿತು ಅವಳಿಗೆ ತುಂಬಾ ಅಭಿಮಾನವಿತ್ತು. ಅದು ಅವಳ ತೇಜಸ್ಸಾಗಿತ್ತು. ಅಂದು ಬ್ರಹ್ಮದೇವಾಲಯದಲ್ಲಿ ಅವಳು ಮಿಣುಮಿಣುಕಿಸುವ ಮಿಂಚುಹುಳದಂತೆ ಮಿಂಚಿರಲಿಲ್ಲ.

ಆದರೆ ಇಂದು.. ದತ್ತು, ದತ್ತೂ, ದತ್ತಾತ್ರೆಯ ನಾಗೇಶ ಜೋಶಿ ಎಂಬ ಹೆಸರು ಅವಳ ಕಣ್ಣೆದುರು ನಿಂತಿತು. ಬಾಲ್ಯದ ನೆನಪಿನೊಂದಿಗೆ ದತ್ತುವಿನ ನೆನಪು ಸುಳಿದಾಡಿತು. ದತ್ತು ಅವಳ ನೆರೆಮನೆಯವನು. ಅವಳು ನೆಲ್ಲಿಕಾಯಿ, ಮುಳ್ಳಹಣ್ಣು, ಬೋರೆಹಣ್ಣುಗಳಿಗಾಗಿ ಅವನೊಂದಿಗೆ ಸುತ್ತಾಡುತ್ತಿದ್ದಳು. ಅವನನ್ನು ಜೊತೆಯಾಗಿಸಿಕೊಂಡು ಹೊಳೆದಂಡೆಯುದ್ದಕ್ಕೂ ನಡೆದುಹೋಗುತ್ತಿದ್ದಳು. ನಂತರದಲ್ಲಿ ತಾಯಿ ಅವನ ಜೊತೆ ತಿರುಗಾಡುವುದನ್ನು ಆಕ್ಷೇಪಿಸಲಾರಂಭಿದಳು. ದತ್ತು ಸಂಗಡ ಹೋಗುವುದು ನಿಂತುಹೋಯಿತು. ವೇದಪಠಣ ಮಾಡುವ ಸಹಪಾಠಿಗಳು

'ದತ್ತುವಿನ ಹೆಂಡತಿ ಯಮು.. ದತ್ತೂನ ಹೆಂಡತಿ ಯಮು..' ಎಂದು ಹೇಳುತ್ತಾ ದತ್ತುವನ್ನು ಛೇಡಿಸುತ್ತಿದ್ದರು. ನೋಡಲು ಬೆಳ್ಳಗಿದ್ದ ದತ್ತು ಸಿಟ್ಟಿನಿಂದ ಕೆಂಪಾಗುತ್ತಿದ್ದ. ಸಿಟ್ಟು ಅವನ ಮೂಗಿನ ತುದಿಯಲ್ಲಿಯೇ ಇತ್ತು. ಒಮ್ಮೆ ಅವನು ಆಪ್ಪೋ ಭಟ್ಟರ ಮನೆಯಲ್ಲಿ ಕುಳಿತು ನಿತ್ಯದಂತೆ ಮಂತ್ರೋಚ್ಚಾರ ಮಾಡುತ್ತಿದ್ದ. ರುದ್ರದ ಮೊದಲನೆಯ ಚರಣ ಹೇಳುತ್ತಿದ್ದ ಇಡಾ ದೇವ ಹೂ ಮನೂರ್ಯಜ್ಞಾನಿ ಬ್ರಹಸ್ಪತಿ ಮಂತ್ರದ ಉಚ್ಚಾರಣೆ ಸರಿಯಾಗಿ ಬರುತ್ತಿರಲಿಲ್ಲ. ಬಾಯಿಪಾಠ ಹೇಳುತ್ತಾ ದೇವಹೂರ್ಬನು ಎನ್ನುವ ಬದಲು ದತ್ತು ಹುಯಿ ಹುಯಿ ಎಂದು ಹೇಳಲಾರಂಭಿಸಿದ. ಯಮು ಒಳಗಿನಿಂದ ಕೇಳುತ್ತಿದ್ದಳು. ರುದ್ರ ಬಹಳ ಸಲ ಕಿವಿಯ ಮೇಲೆ ಹಾದುಹೋಯಿತು. ಅವನು 'ಹುಯಿ ಹುಯಿ'ಎಂದದ್ದು ಕೇಳಿ ಆಕೆ ನಗು ಬಂತು. ಅವಳು ಹೊರಗೆ ಬಂದು ಅವನನ್ನು ಛೇಡಿಸುತ್ತ ಹೇಳಿದಳು,

"ಏ ಬ್ರಹಸ್ಪತಿ! ಹುಯಿ ಹುಯಿ ಎಂದು ಏಕೆ ಹೇಳುತ್ತಿ? ಸರಿಯಾಗಿ ಹೇಳು. ಇಲ್ಲದಿದ್ದರೆ ನಿನ್ನ ಹುಯಿ ಹುಯಿ ಕೇಳಿ ನರಿಗಳು ಓಡಿಬಂದಾವು"

ದತ್ತು ಸಿಟ್ಟಿನಿಂದ ಕೆಂಪಾದ. "ನಿನಗೇನು ತಿಳಿಯುತ್ತದೆ, ಹುಡುಗಿಯಲ್ಲವೇ ನೀನು? ಹುಡುಗರ ಹಾಗೆ ಮಂತ್ರ ಹೇಳಲು ಮರ್ಯಾದೆ ಬೇಡವೇ?" ಆತ ಇನ್ನೇನನ್ನೋ ಹೇಳಲಿದ್ದ. ಆದರೆ ಅಷ್ಟರಲ್ಲಿ ಅಂಗಳ ತಲುಪಿದ ಆಪ್ಪೋ ಭಟ್ಟರು, "ಅರೆ ದತ್ತಾ ಹೀಗ್ಯಾಕೆ ಕೆಂಪಗಾಗುತ್ತಿ? ನೋಡು ನಮ್ಮ ಯಮು ತಪ್ಪು ಮಾಡುವವಳಲ್ಲ" ಎಂದು ಸಮಾಜಾಯಿಷಿ ಹೇಳಿದ್ದರು.

ಆಮೇಲೆ ಆತ ದೊಡ್ಡದಾಗಿ ನಕ್ಕುಬಿಟ್ಟ. ತುಂಬಾ ನಕ್ಕ. ಕಣ್ಣಲ್ಲಿ ನೀರು ಬರುವಷ್ಟು ನಕ್ಕ.

"ದತ್ತೂ ನನಗೆ ಗಂಡುಮಕ್ಕಳಿಲ್ಲ. ಯಮುನೆಯೇ ನನಗೆ ಹೆಣ್ಣು ಮತ್ತು ಗಂಡು ಮಗು. ಆಕೆ ಯಾರಿಗೂ ನೋವು ಮಾಡುವುದಿಲ್ಲ. ನಿನಗೆ ಇಂತಹವಳು ಹೆಂಡತಿ ಆಗಬಹುದಲ್ಲ? ಏನು? ತಲೆ ಕೆಳಗೆ ಮಾಡುವುದು ಬೇಡ. ಹುಡುಗಿಯ ಹಾಗೆ ನಾಚಿಕೊಳ್ಳಬೇಡ"

ಆಮೇಲೆ ಎಲ್ಲವೂ ತಿರುವುಮುರುವಾಯಿತು. ಎರಡು ದಿನಗಳ ಅನಾರೋಗ್ಯದಿಂದ ಆಪ್ಪೋ ಭಟ್ಟರು ತೀರಿಕೊಂಡರು. ಸೋದರಮಾವ ಕಷ್ಟದಲ್ಲಿ ಕಷ್ಟವೆಂದು ವರ್ಷ ಕಳೆಯುವುದರೊಳಗೆ ಅವಳ ಮದುವೆ ಮಾಡಿದರು. ಅವಳು ಭಟ್ಟರ ಮನೆಯ ಸೊಸೆಯಾಗಿ ಇಲ್ಲಿಗೆ ಬಂದಳು. ಅವಳ ಹೆಸರು ಬದಲಾಯಿತು. ಮನೆತನ ಬದಲಾಯಿತು. ತೌರುಮನೆ ನೆನಪು ಅಳಿಸಲಾರದೆ ಉಳಿಯಿತು. ಆಗ ತಾನೇ ನೆಟ್ಟ ತೆಂಗಿನ ಸಸಿಯ ಬೇರುಗಳು ನೆಲದಾಳಕ್ಕೆ ಇಳಿಯುವ ಮುನ್ನವೇ ಯಾರೋ ಅದನ್ನು ಕಿತ್ತು ಹಾಕಿದರು. ಆದರೆ ಸುಳಿ ಮೇಲೆ ಎದ್ದು ಬಂದಿದ್ದರಿಂದ ತೆಂಗಿನ ಸಸಿ ಸಾಯಲಿಲ್ಲ. ಆದರೆ ನಳನಳಿಸುತ್ತಿದ್ದ ಅದರ ಹಸಿರು ಎಲೆಗಳು ಬಾಡಿ ಹೋದವು. ಪ್ರತಿದಿನವೂ ಒಂದೊಂದು ಕನಸು ಬೀಳುತ್ತಿತ್ತು. ನಿದ್ರೆ ಬರುವ ಮೊದಲೇ ಯಾರೋ ಒದ್ದು ಎಬ್ಬಿಸಿದ ಹಾಗಾಗುತ್ತಿತ್ತು.

ಹಳೆಯ ಅಭಾಗಿತನದ ನೆನಪು ಇವತ್ತಿಗೂ ಮತ್ತೆ ಮತ್ತೆ ಕಣ್ಣೆದುರು ಕುಣಿಯುತ್ತಿದೆ. ದತ್ತೂನ ಹೆಂಡತಿ ಯಮು.. ದತ್ತೂನ ಹೆಂಡತಿ ಯಮು.. ನಿಜವಾಗಿಯೂ ಹಾಗೇ ಘಟಿಸಿದ್ದರೆ? ಆಕೆ ಥಟ್ಟನೆ ಕೆನ್ನೆಯ ಮೇಲೆ ಹೊಡೆದುಕೊಂಡಳು. ಕೈ ಜೋಡಿಸಿ ನಮಸ್ಕಾರ ಮಾಡುತ್ತಾ ಏನೇನೋ ಗೊಣಗಿಕೊಂಡಳು. ಎಲ್ಲಾ ಯೋಚನೆಗಳನ್ನು ಬದಿಗೊತ್ತಿ ಮಹಡಿ ಮೇಲಿಂದ ಕೆಳಗೆ ಇಳಿಯಲಾರಂಭಿಸಿದಳು. ಆದರೆ ಬಹಳ ಹೊತ್ತು ನಿಂತೇ ಇದ್ದುದರಿಂದ ಜೋಮು ಹಿಡಿದ ಕಾಲುಗಳು ಭಾರವಾಗಿದ್ದವು. ಅಲುಗಾಡಿಸಲು ಸಾಧ್ಯವಾಗುತ್ತಿರಲಿಲ್ಲ.

ಮಡಿಕೆಯ ಒಳಗಿನಿಂದ ಎರಡು ಮುಷ್ಠಿ ಹುಳಿಸೊಪ್ಪು ತೆಗೆದು ಅದಕ್ಕೆ ಖಾರ, ಉಪ್ಪು ಹಚ್ಚಿಟ್ಟಳು. ಕೈಯಲ್ಲಿ 'ಶನಿ ಮಹಾತ್ಮೆ' ಹಿಡಿದುಕೊಂಡು ದೇವರ ಮಂಟಪದ ಎದುರು ಗೋಡೆಗೆ ಒರಗಿ ಕುಳಿತಳು. ಯಾರೋ ಹೇಳಿದ್ದು, ಶನಿಯ ಪೀಡೆ ಇರಬಹುದು 'ಶನಿ ಮಹಾತ್ಮ' ಓದು ಅಂತ. ಅದು ಎಷ್ಟು ನಿಜವೋ ಎಷ್ಟು ಸುಳ್ಳೋ ಆ ದೇವರಿಗೇ ಗೊತ್ತು. ಅದೃಷ್ಟದಲ್ಲಿ ಇದ್ದದ್ದು ಅನುಭವಿಸಲೇ ಬೇಕು ಎನ್ನುವುದು ಸುಳ್ಳಲ್ಲ.

ಮುಸ್ಸಂಜೆ ಆಗುತ್ತಿದ್ದಂತೆಯೆ ದಟ್ಟವಾಗಿ ಕವಿದ ಕಪ್ಪುಮೋಡಗಳಿಂದ ಮಳೆ ಸುರಿಯಲಾರಂಭಿಸಿತು. ಸುತ್ತಲಿದ್ದ ಕಾಡಿನ ಗಿಡಗಂಟಿಗಳಿಂದ ಕೀಟಗಳು ಹೊರಬರಲಾರಂಭಿಸಿದವು. ಮನೆಯ ಸುತ್ತಲೂ ಕಪ್ಪು ಕತ್ತಲು ಹರಡಲಾರಂಭಿಸಿತು. ದೀಪ ಹಚ್ಚುವ ಲಾಟೀನಿನ ಗಾಜು ಎರಡು ಕಡೆ ಸೀಳುಬಿಟ್ಟಿತ್ತು. ಅವಳು ಕಾಳಜಿಯಿಂದ ಅದನ್ನು ಒರಸಿ ದೀಪ ಹಚ್ಚಿ ಬಾಗಿಲಿನ ಎದುರು ತೂಗು ಹಾಕಿದಳು. ಆಮೇಲೆ ಗೋಡೆಗೆ ಒರಗಿ ನಿಂತು ಕಪ್ಪು ಕತ್ತಲನ್ನು ನೋಡತೊಡಗಿದಳು. ಮಳೆ ಸ್ವಲ್ಪ ಕಡಿಮೆ ಆದಂತಾಯಿತು.

ಕತ್ತಲಲ್ಲಿ ಮಿಣುಕುಹುಳಗಳು ಗೋಚರಿಸತೊಡಗಿದವು. ಕೆಳಗಿನ ಗದ್ದೆಯಲ್ಲಿ ಕಪ್ಪೆಗಳ ಅರಚಾಟ. ತೋಟದಲ್ಲಿ ರಾತ್ರಿ ಹುಳುಗಳ ಕಿರಿಚಾಟ. ಕಾಲುಗಳು ಸೋತು ಬಂದದ್ದರಿಂದ ಕಂಬಕ್ಕೆ ಒರಗಿನಿಂತ ಅವಳು ಅಲ್ಲಿಯೇ ಕೆಳಗೆ ಕುಳಿತುಬಿಟ್ಟಳು. ಬಹಳ ಹೊತ್ತು ಕಳೆದ ನಂತರ ಕೆಳಗಿನ ತೋಟದ ಮನೆಯ ಕಡೆಯಿಂದ ಯಾರದೋ ಸೂಡಿಯ ಬೆಳಕು ಚಲಿಸಿದಂತಾಯಿತು. ಬೆಳಕು ಹತ್ತಿರ ಹತ್ತಿರ ಬರುತ್ತಿದ್ದಂತೆಯೇ ಆಕೆ ಎದ್ದು ಕಾಳಜಿಪೂರ್ವಕವಾಗಿ ನೋಡತೊಡಗಿದಳು. ಹೌದು... ಅವನೇ.. ನೊಡುತ್ತಿದ್ದಂತೆಯೇ ಆ ಸೂಡಿಬೆಳಕಿನ ಆತ ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕುತ್ತಾ ಅಂಗಳವನ್ನು ತಲುಪಿದ. ಥಟ್ಟನೆ ಅವನ ಹೆಸರು ಅವಳ ಕಣ್ಣೆದುರು ಬಂದು ನಿಂತಿತು. ದತ್ತಾತ್ರೇಯ ನಾಗೇಶ ಜೋಶಿ!

"ಏ ಯಮೂ, ನಿದ್ದೆ ಬಂತೇನೆ? ಅಥವಾ ದಾರಿ ಕಾಯುತ್ತಾ ಇದ್ದೆಯಾ?"

"ನಾನು ಯಾರ ದಾರಿ ನೋಡುವುದು? ನಾನು ನೋಡುವುದಾದರೆ ಅದು ಯಮನ ದಾರಿಯನ್ನು ಮಾತ್ರ"

"ನಿನಗೇನು ಬಂದಿದೆ ಧಾಡಿ. ಯಮನ ದಾರಿಯನ್ನು ನೋಡುವ ಸಮಯ ನನಗೆ ಬರಲಿಕ್ಕಿಲ್ಲ. ಬಂದಿದ್ದರೆ ನಾನು ಪಾರಾಗಿ ಬರುತ್ತಿದ್ದೆ. ಎಲ್ಲಾ ಕಷ್ಟಗಳಿಂದ ಪಾರಾಗಲು ಮಹಾರುದ್ರ ಮಾಡುತ್ತಾರೆ. ಮಧ್ಯಾಹ್ನದ ಊಟ, ಗೋವುಗಳು ಮನೆಯೊಳಗೆ ಬರುವ ಸಮಯಕ್ಕೆ ಯಾಕಾದರೂ ಈ ನೇಮ ಮಾಡಿದ್ದಾರೋ.."

ಮಾತಿನ ಮಲ್ಲನಂತೆ ಅವನು ಮಾತನಾಡುತ್ತಿದ್ದರೆ ಅವಳು ಮಾತ್ರ ಸುಮ್ಮನೆ ಕೇಳುತ್ತಾ ನಿಂತಿದ್ದಾಳೆ. ಮಾತನಾಡಿದರೆ ಗೆಲ್ಲುವವನು ಅವನೇ ಆಗಿದ್ದ. ಸುಮ್ಮನೆ ಆಲಿಸುವವಳು ಅವಳೇ ಆಗಿದ್ದಳು. ಈಗ ವಯಸ್ಸಾದಂತೆ ಹಳೆಯ ನೆನಪು ಕಾಡುತ್ತಿದೆ. ಎರಡು ವರ್ಷಗಳ ಹಿಂದೆ... ಆದರೆ ಈಗ ತಲೆ ಕೂದಲು ಬೆಳ್ಳಾಗಿದೆ. ಗಲ್ಲ ಒಳಗೆ ಸೇರಿಕೊಂಡಿದೆ. ಕಣ್ಣು ಮೊದಲಿನ ಹಾಗೆ ಕಾಣಿಸುತ್ತಿಲ್ಲ, ಲಾಟೀನಿನ ಬೆಳಕಿಗೆ ಹಾಗೆ ಮಂದವಾಗಿದೆ. ತೌರಿನ ಸುದ್ದಿ ಕಾಜಲದಲ್ಲಿಯ ಸುದ್ದಿ.. ನನ್ನ ಕಣ್ಣಮುಂದೆ ಏನೆಲ್ಲಾ ನಡೆದುಹೋಯಿತು. ಎಷ್ಟೊಂದು ಮನೆಗಳು ಕುಸಿದು ಹೋದವು. ಮನುಷ್ಯ ಮಸಣಕ್ಕೆ ಹೋದ. ಕಾಲಚಕ್ರ ಉರುಳಿದಂತೆ ಎಲ್ಲ ಘಟನೆಗಳೂ ಹಳೆಯದಾಗಿ ಮಾಸಿ ಹೋಗುತ್ತವೆ.

"ಒಳ್ಳೆಯದು ಯಮು. ನಾನು ಈಗ ಹೊರಡುತ್ತೇನೆ. ನೀನು ಊಟ ಮಾಡುತ್ತಿಯಲ್ಲ"

"ಹೋಗಬಹುದು. ಇರು"

"ಹೋಗಬಹುದು ಯಾಕೆ? ನಾನು ಹೊರಟೆ"

"ಊಟಕ್ಕೆ ಏಳು"

"ಬೇಡ ಬರುವಾಗ ಊಟ ಮಾಡಿಕೊಂಡು ಬಂದಿದ್ದೇನೆ"

"ಉಳ್ಳಿ ಭಾಜಿಯನ್ನಾದರೂ ತಿನ್ನು"

"ನನಗೇನೂ ಬೇಡ"

"ಬೇಡ ಅನ್ನಬೇಡವೋ. ನಿನಗಾಗಿಯೇ ಮಾಡಿದ್ದೇನೆ ಪಲ್ಲೆ"

"ಗೊತ್ತಾಯಿತು. ನೀರ ಹಲಸಿನದಲ್ಲವೇ? ನನಗೆ ನೆನಪಿದೆ. ಕೊಡು ಕೊಡು ಬೇಗ ಕೊಡು" ಎನ್ನುತ್ತ ಅವನು ಎದ್ದು ನಿಂತ. ಅವಳನ್ನು ಹಿಂಬಾಲಿಸಿ ಮನೆಯೊಳಗೆ ಹೋದ. ಎಲೆ ಹಾಕಲಾಗಿತ್ತು. ಒಲೆಯ ಮೇಲಿನ ಬಿಸಿಬಿಸಿ ಭಾಜಿ ತಂದು ಅವಳು ಅವನ ಎಲೆಗೆ ಬಡಿಸಿದಳು. ಆತ ತಲೆತಗ್ಗಿಸಿಕೊಂಡು ಮಕ್ಕಳು ಪ್ರೀತಿಯಿಂದ ತಿಂಡಿ ತಿನ್ನುವಂತೆ ಉಣ್ಣತೊಡಗಿದ. "ಎರಡು ವರ್ಷಗಳ ನಂತರ ಈ ಪಲ್ಲೆ ತಿನ್ನುತ್ತಿದ್ದೇನೆ" ಅವನು ಕತ್ತು ಅಲ್ಲಾಡಿಸುತ್ತಾ ಕಣ್ಣು ಮಿಟುಕಿಸುತ್ತಾ ಹೇಳಿದ. ಎದುರು ಕುಳಿತ ಅವಳು ಅವನನ್ನು ನೋಡುತ್ತಾ ನಕ್ಕಳು.

"ನಿನಗೆ ಸೇರುವುದಿಲ್ಲವೆಂದು ಜೀರಿಗೆ ಹಾಕಲಿಲ್ಲ" ಆತ ತಲೆಯೆತ್ತಿ ಅವಳ ಕಡೆಗೆ ನೋಡಿದ.

"ಯಮೂ ಇನ್ನೂ ನೀನು ಯಾವುದನ್ನೂ ಮರೆತಿಲ್ಲ. ದೇವರು ಎಷ್ಟು ವಿಚಿತ್ರ ನೋಡು. ಒಬ್ಬೊಬ್ಬರ ಹಣೆಬರಹದಲ್ಲಿ ಏನೇನೋ ಬರೆದಿದ್ದಾನೆ ನೋಡು"

"ಹಣೆಬರಹಕ್ಕೆ ಝುಕ್ ಹೊಡೀತು! ನಮ್ಮ ಆವಶ್ಯವಿದ್ದ ಕಟ್ಟಿಗೆ ಮಸಣಕ್ಕೆ ತಲುಪಿದೆ"

"ನೀನು ಹೇಳುವುದು ಸತ್ಯ. ಈಗ ಏನೂ ಉಳಿದಿಲ್ಲ. ಕೊನೆಗೂ ಏನೂ ಉಳಿಯುವುದಿಲ್ಲ. ಆದರೆ ಮನುಷ್ಯರ ಕರ್ತವ್ಯ ಮಾತ್ರ ಇರುತ್ತದೆ. ಮನುಷ್ಯನ ತ್ಯಾಗ ಇರುತ್ತದೆ"

"ಅದ್ಯಾಕೆ ಹಾಗೆ?"

"ಅದು ಯಾಕೆಂದರೆ ಯಮು ದೇವರು ತೋರಿಸಿದ್ದು ಹೇಳುತ್ತೇನೆ ನಿನಗೆ.."

"ಏನದು?"

"ಬ್ರಹ್ಮನ ದೇವಾಲಯದ್ದು. ಇಂದು ಅಲ್ಲಿ ಕುಳಿತು ರುದ್ರ ಹೇಳುವಾಗ ನನಗೆ ಅದೇ ನೆನಪು ಮತ್ತೆ ಮತ್ತೆ ಬರುತ್ತಿತ್ತು"

ಅವಳ ಅವಸ್ಥೆ ವಿಚಿತ್ರವಾಗಿತ್ತು. ಆ ಸಂದರ್ಭ ಕಣ್ಣೆದುರು ಬಂತು. ಮದುವೆಯಾಗಿ ನಾಲ್ಕು ವರ್ಷ ಕಳೆದಿತ್ತು. ಮಾವನ ಮನೆಯಿಂದ ತೌರುಮನೆಗೆ ಬಂದಾಗಿನ ಸುದ್ದಿ. ಮುಸ್ಸಂಜೆಯ ವೇಳೆ. ಅವಳು ದೇವಾಲಯದಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದಳು. ಅಷ್ಟರಲ್ಲಿ ದತ್ತು ಅಲ್ಲಿಗೆ ಬಂದ. ಅವನಾಗಲೇ ಪುರೋಹಿತ ಕೆಲಸ ಶುರು ಮಾಡಿದ್ದ. ಅವನೂ ಪ್ರದಕ್ಷಿಣೆಯಲ್ಲಿ ತೊಡಗಿಕೊಂಡ. ಪ್ರದಕ್ಷಿಣೆ ಹಾಕುತ್ತಿದ್ದಂತೆಯೇ ಅವಳ ಕೈಹಿಡಿದ. ಅವಳಿಗೆ ಮೈ ಜುಮ್ಮೆಂದಿತು."ಮುಂದೆ ಬಂದರೆ ನೋಡು ದತ್ತು" ಅವಳು ಕೈಕೊಡರಿ ಕೊಂಡು ಸಿಟ್ಟಿನಿಂದ ಅವನ ಕೆನ್ನೆಗೆ ಜೋರಾಗಿ ಬಾರಿಸಿದಳು. ತಕ್ಷಣ ಅಲ್ಲಿಂದ ಹೊರಟು ಹೋದಳು. ದತ್ತು ಪಶ್ಚಾತ್ತಾಪದಿಂದ ಎಷ್ಟೋ ವರ್ಷಗಳವರೆಗೆ ಅವಳ ಮುಖವನ್ನು ಕೂಡಾ ನೋಡಲಿಲ್ಲ.

"ಬಾಯೊ," ಪವಿತ್ರವಾದ ಮಂತ್ರವನ್ನು ಉಚ್ಛರಿಸುವ ಧಾಟಿಯಿಂದ ದತ್ತು ಭಟ್ಟ ಮಾತನಾಡಲು ಉಪಕ್ರಮಿಸಿದ. "ನನ್ನ ಕೆನ್ನೆಗೆ ನೀನು ತಪರಾಕಿ ಹೊಡೆದದ್ದರಿಂದಲೇ ನಾನು ಇಂದು ದೇವಸ್ಥಾನದಲ್ಲಿ ಶುದ್ಧಚಿತ್ತದಿಂದ ರುದ್ರ ಹೇಳುತ್ತಿದ್ದೇನೆ. ನಿನ್ನ ಒಂದು ಹೊಡೆತದಿಂದ ನಿನ್ನ ಜೀವನ ಬಂಗಾರವಾಯಿತು. ನಿನ್ನ ಜೊತೆಗೆ ನನ್ನಂತಹ ಘಟಿಂಗನ ಉದ್ಧಾರವಾಯಿತು. ನಿನ್ನ ಋಣವನ್ನು ತೀರಿಸಲು ನನ್ನಿಂದ ಸಾಧ್ಯವಿಲ್ಲ. ನೀನು ನನ್ನನ್ನು ರೌರವ ನರಕದಿಂದ ಪಾರು ಮಾಡಿದೆ"

"ಸಾಕುಮಾಡು ದತ್ತು..! ನನ್ನನ್ಯಾಕೆ ಅಷ್ಟು ಹೊಗಳುತ್ತಿರುವೆ?"

ಕನಸಿನಲ್ಲಿ ನಡೆದ ಹಾಗೆ ಎಲೆಯ ಮುಂದೆ ಕುಳಿತವನು ಎದ್ದು ಹೋದ. ಹಿಂದುಗಡೆ ಹೋಗಿ ಕೈ ತೊಳೆದುಕೊಂಡು ಬಂದ. ತಾನು ಬರುವಾಗಲೇ ತಂದಿದ್ದ ತೆಂಗಿನಗರಿ ಸೂಡಿಯನ್ನೆತ್ತಿ ಹೊರಡಲನುವಾದ.

"ಒಳ್ಳೆಯದು ಬರುತ್ತೇನೆ. ರಾತ್ರಿಯಾಯಿತು. ನೀನು ಊಟ ಮಾಡು"

"ಇನ್ನ್ಯಾವಾಗ ಬರುವಿ?"

"ದೇವರ ಆ ದಿನ ತರಲಿ" ಎಂದು ಹೇಳುತ್ತಾ ಸೂಡಿಗೆ ಬೆಂಕಿ ಹಚ್ಚಿಕೊಂಡು ಹೊರಟುಹೋದ. ಸೂಡಿ ದೂರವಾಯಿತು. ದೂರದೂರ ಸಾಗುತ್ತಾ ಕಣ್ಮರೆಯಾಯಿತು. ಒಮ್ಮೆಲೇ ಆಕೆಗೆ ಉಸಿರುಗಟ್ಟಿದಂತಾಯಿತು. ಬದುಕು ಹಿಡಿದುಕೊಂಡು ಹಾಗೋ ಹೀಗೋ ದಿನ ಕಳೆಯುತ್ತಿದ್ದವಳಿಗೆ ಈ ವಿಚಾರ ಕಸಿವಿಸಿಯನ್ನು ಉಂಟು ಮಾಡಿತು. ಯಾರೋ ಭಾರವಾದ ವಸ್ತುವನ್ನು ತಂದು ಎದೆಯ ಮೇಲೆ ಇಟ್ಟ ಹಾಗೆ ಅನಿಸತೊಡಗಿತು.

ಅವಳಿಗೆ ಎಚ್ಚರವಾಯಿತು. ಆಶ್ಚರ್ಯದಿಂದ ಅತ್ತಿತ್ತ ನೋಡಿಕೊಂಡಳು. ಈ ಘಟನೆ ಕನಸಿನಲ್ಲಿ ನಡೆದದ್ದು ಇರಬೇಕು. ಇಲ್ಲ, ಇಲ್ಲ.. ಇದು ಕನಸಲ್ಲ. ಅವಳು ಬೇಗಬೇಗನೆ ಎದ್ದು ಅಡುಗೆಮನೆ ಪ್ರವೇಶಿಸಿದಳು. ಒಲೆಯ ಮೇಲೆ ಪಲ್ಲೆ ಮುಚ್ಚಿಟ್ಟದ್ದು ಹಾಗೆಯೇ ಇದೆ. ಎಲೆ ಇಲ್ಲ. ಮಣೆಯೂ ಇಲ್ಲ. ಆತ ಯಾವಾಗಲೂ ಬರುವುದೇ ಇಲ್ಲವೆಂದು ಅವಳಿಗನ್ನಿಸಿತು. ಕಾಲುಗಳಲ್ಲಿನ ಶಕ್ತಿ ಉಡುಗಿ ಹೋದಂತಾಯಿತು. ಅದು ಹೇಗೋ ಸಾವರಿಸಿಕೊಂಡು ದೇವರ ಕೋಣೆ ಪ್ರವೇಶಿಸಿದಳು. ಅಲ್ಲಿ ಗಿಳಿಗೂಟದಲ್ಲಿದ್ದ ಮಾಲೆಯನ್ನೆತ್ತಿಕೊಂಡು ದೇವರ ಮುಂದೆ ಕುಳಿತಳು. ತಲೆಯನ್ನು ಹಿಂದೆ ಆನಿಸಿಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಒಂದೊಂದೇ ಮಣಿಯನ್ನು ಹಿಂದೆ ಸರಿಸುತ್ತಿದ್ದಂತೆ ರಾತ್ರಿ ಕಳೆಯತೊಡಗಿತು. ಕನಸಿನ ವ್ಯಥೆ ಕಣ್ಣಂಚಿನ ನೀರಿನಲ್ಲಿ ಜಾರಿ ಒಣಗಿಹೋಯಿತು.. ಚಂಡಮಾರುತ ಬಂದ ಹಾಗೆ ಮಳೆ ಜೋರಾಗಿ ಬೀಳುತ್ತಲೇ ಇತ್ತು.

ಅನುವಾದಕರು: **ಜಗದೀಶ ನಾ.**

❖ ❖ ❖❖ ❖

ಬಣ್ಣದ ಕಡ್ಡಿಗಳು

✍ **ಎಡ್ವಿನ್ ಜೆ.ಎಫ್. ಡಿಸೋಜಾ**

ತನ್ನ ಮೇಲಂಗಿಯ ಕೈಯಿಂದಲೇ ಮುಖದ ಬೆವರನ್ನು ಒರೆಸುತ್ತಾ ಒಳಗೆ ಬಂದ ಗಂಡನನ್ನು ಕಡೆಗಣ್ಣಿನಿಂದ ದಿಟ್ಟಿಸಿ ನೋಡಿದಳು ಮೇರಿ. ಅವನು ಗುಂಡು ಹಾಕಿ ಬಂದಿದ್ದಾನೆಂಬುದನ್ನು ಏಳು ಮಾರು ದೂರದಿಂದಲೇ ಹೇಳುವುದು ಸಾಧ್ಯವಿತ್ತು. ಸರಕಾರ ಪ್ರಾಹಿಬಿಶನನ್ನು ಇವತ್ತೋ ನಾಳೆಯೋ ತೆಗೆದು ಹಾಕಲಿದೆ ಎಂದು ಬೆಜ್ಮಿ ಅವಳಲ್ಲಿ ಹಲವಾರು ಬಾರಿ ಹೇಳಿದ್ದ. "ಆದರೆ ಅದರಿಂದ ನಿನಗೇನು ವ್ಯತ್ಯಾಸ ಆಗಲಿದೆ? ನಿನಗೆ ಬೇಕಾಗಿರುವುದು ಬ್ಯಾಟರಿಸೆಲ್‌ನದು ಅಲ್ಲವೇ?" ಎಂದು ಮೇರಿ ನಮ್ರತೆಯಿಂದ ಕೇಳುವುದಿತ್ತು. ಅದಕ್ಕೆ ಅವನು ನಗುತ್ತಾ ಹೇಳುತ್ತಿದ್ದ,

"ನಿನಗೆ ಯಾವುದರಲ್ಲಿ ಕೊರತೆ ಮಾಡಿದ್ದೇನೆ? ದಿನವಿಡೀ ದುಡಿಯುತ್ತೇನೆ. ಆ ನೀರಿನ ಕೊಳವೆಗಳನ್ನು ಲಾರಿಯಿಂದ ಇಳಿಸುವುದು ಸುಲಭದ ಕೆಲಸವೇನು? ಜೀವ ಬಾಯಿಗೆ ಬರುತ್ತದೆ. ರಾತ್ರಿ ಮನೆಗೆ ಬರುವಾಗ ಏನೋ ಎರಡು ಹೊಡೆದರೆ ಮುನ್ಸಿಪಾಲ್ಟಿಯದು ಏನು ಸವೆದು ಹೋಗುತ್ತದಂತೆ? ಅವರ ಕೊಳವೆಗಳನ್ನು ನಾವು ಇಳಿಸುವುದಿಲ್ಲವೇ? ಒಂದೊಂದು ಲಾರಿಗೆ ಅವರು ಕೊಡುವುದು ಕೇವಲ ನಾಲ್ಕು ಜನರನ್ನು ಮಾತ್ರ. ನಾನು ನಿನಗೇನಾದರೂ ತೊಂದರೆ ಕೊಡುತ್ತೇನಾ? ಆ ಪಾತ್ರೆಯಲ್ಲಿ ಏನಿದೆಯೋ ಅದನ್ನು ಮುಕ್ಕಿ ಆಮೇಲೆ ಆ ಕಡೆ ಸ್ವಸ್ಥ ಬಿದ್ದುಕೊಳ್ಳುತ್ತೇನೆ".

ಬೆಜ್ಮಿ ಹೇಳಿದ್ದು ಅಪ್ಪಟ ಸತ್ಯ. ಅದಕ್ಕೆ ಮೇರಿ ಯಾವುದೇ ವಾದವನ್ನು ಬೆಳೆಸುತ್ತಿರಲಿಲ್ಲ. ಮೂರು ಮಂದಿಯ ಅವರ ಸಂಸಾರದಲ್ಲಿ ಯಾವ ಕೊರತೆಯೂ ಇರಲಿಲ್ಲ. ಕೊರತೆ ಇದೆ ಎಂಬುದನ್ನು ಹುಡುಕುವ ಪ್ರಯತ್ನವನ್ನೂ ಅವರು ಮಾಡಿಲ್ಲ. ಐದನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ಮಗ ಮುಂದೆ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಬೇಕೆನ್ನುವ ಇಚ್ಛೆಯನ್ನು ಕೂಡಾ ಬೆಜ್ಮಿ ನೆರವೇರಿಸಿದ್ದಾನೆ. ಪಾದ್ರಿ-ಮಾದ್ರಿಯರ ಕೈಕಾಲು ಹಿಡಿದು ತಮ್ಮ ಏಕೈಕ ಪುತ್ರ ಜುವಾಂವ್ ಬಾಪ್ತಿಸ್ತನನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿದ್ದಾನೆ. ಶಾಲೆಗೆ ಹೋಗುವ ಮೊದಲ ದಿನ ದರ್ಜಿಯಿಂದ ತಂದಿದ್ದ ಹೊಸ ಯುನಿಫಾರ್ಮನ್ನು ಮಗನಿಗೆ ತೊಡಿಸುತ್ತಾ ಮೇರಿ ಹೇಳಿದ್ದಳು, "ಬೇಗನೆ ನೀನು ನಿನ್ನ ಹೆಸರನ್ನು ಜೋನ್ ಬ್ಯಾಪ್ಟಿಸ್ಟ್ ಎಂದು ಇಂಗ್ಲಿಷಿನಲ್ಲಿ ಬರೆದು ತೋರಿಸುವಂತಾಗು". ಜುವಾಂವ್ ಬಾಪ್ತಿಸ್ತ್ ಅವರ ಕನಸನ್ನು ನನಸು ಮಾಡುವ ಲಕ್ಷಣಗಳನ್ನು ತೋರಿಸುತ್ತಿದ್ದನು.

ಇದು ಈ ಮೂವರ ಸಂಸಾರ.

"ಇವತ್ತು ಪೈಪುಗಳನ್ನು ಎಲ್ಲಿ ಇಳಿಸಿದಿರಿ ನೀವು?" ಮೇರಿ ವಿಚಾರಿಸಿದಳು, "ಮೊದಲು ಸ್ನಾನ ಮಾಡಿ ಬರುತ್ತೀರಾ ಅಥವಾ ಊಟ ಬಡಿಸಲಾ?". ಇವೆಲ್ಲವೂ ದಿನನಿತ್ಯದ್ದೇ. ಇದುವರೆಗೆ ಬೆಜ್ಮಿ ಮಾಡದ ಕೆಲಸವಿಲ್ಲ. ಯಾರದೋ ಮನೆಯ ವೈಟ್‌ವಾಶ್.

ಇನ್ಯಾರದೋ ಮನೆಯ ಡಿಸ್ಟೆಂಪರ್. ಬೇರೆಯವರ ತೆಂಗಿನ ಮರದ ಸೀಬು–ಕೊನೆಮಟ್ಟೆಯ ಕಳೆ ಬಿಚ್ಚುವುದು. ಮರಹತ್ತಿ ಎಳೆಕಾಯಿಗಳನ್ನು ಕೊರೆಯುವ ಇಲಿಗಳನ್ನು ತಡೆಯಲು ಮರಕ್ಕೆ ತಗಡು ಹಚ್ಚುವುದು. ಯಾರದೋ ಗೋಡೆ ಕಟ್ಟಲು ಕಂಟ್ರಾಕ್ಟ್ ವಹಿಸಿಕೊಳ್ಳುವುದು. ಪಾದ್ರಿಗಾರರ ಮನೆಯಲ್ಲಿ ಇಲಿಯನ್ನು ಹಿಡಿಯಲು ಬೋನು ಹೂಡುವುದು ಇತ್ಯಾದಿ. ಒಮ್ಮೆ ಮಾದ್ರಿಗಳ ಮಠದಲ್ಲಿನ ಎತ್ತರದ ದೇವರಗೂಡಿನಲ್ಲಿ ಕಣಜಹುಳು ಕಟ್ಟಿದ ತಟ್ಟಿಗೆ ಕೊಳ್ಳಿ ಇಡಲು ಹೋಗಿ ಆ ಹುಳುವಿನಿಂದ ಕಚ್ಚಿಸಿಕೊಂಡು ಅವನು ಮೂರು ದಿನ ಮುಲ್ಲರ್ ಆಸ್ಪತ್ರೆಯಲ್ಲಿ ಮಲಗಿದ್ದ.

ಆದರೆ ಆ ದಯಾಳು ಪಾದ್ರಿ–ಮಾದ್ರಿಗಳು ಅವನ ಕೈಬಿಡಲಿಲ್ಲ. ಅವರು ಜುವಾಂವ್ ಬಾಪ್ಟಿಸ್ತನಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಸೀಟು ಕೊಟ್ಟರು.

"ನಾವು ಹೀಗೆ ಮಾಡೋದು ಬಹಳ ಅಪರೂಪ, ಹಾಂ!" ಮುಖ್ಯ ಶಿಕ್ಷಕಿ ಮೇರಿಯಲ್ಲಿ ಹೇಳಿದ್ದಳು. "ಇಲ್ಲಿ ಉಳ್ಳವರ ಪುಟಾಣಿಗಳು ಬರುತ್ತವೆ. ನಿಮಗೆ ಇಲ್ಲಿ ಫೀಸಲ್ಲಿ ಮಾಫಿ ಇದೆ, ನೀವು ಕೂಲಿಕಾರರು ಅಂತ ಯಾರಿಗೂ ತಿಳಿಯಬಾರದು, ಹಾಂ! ನಾವು ನಮ್ಮ ಸ್ಟ್ಯಾಂಡರ್ಡ್ ಕಾಪಾಡಬೇಕು ಅಲ್ವಾ? ಅದಕ್ಕಾಗಿ ನಿನ್ನ ಮಗನಿಗೆ ಟಿಪ್‌ಟಾಪ್ ಡ್ರೆಸ್ ತೊಡಿಸು. ಸ್ವಚ್ಛತೆ ಕಾಪಾಡು. ನಾವು ನಿಮಗಾಗಿ ದೊಡ್ಡ ಉಪಕಾರ ಮಾಡಿದ್ದೇವೆ ಎಂಬುದನ್ನು ಬೆಜ್ಮಿ ನೆನಪಿನಲ್ಲಿಡಲಿ. ಇಂತಹ ಕಾರ್ಯಗಳು ಕಿರಿಸ್ತಾನತ್ವದ ಹೊರ ಗುರುತು ಅಂತ ನಾವು ಮನ್ನಿಸಿದ್ದೇವೆ. ಇನ್ನು ಹಾಂ ನಾಳೆ ಬೆಜ್ಮಿಯನ್ನು ಸ್ವಲ್ಪ ಕಳುಹಿಸುತ್ತೀಯಾ? ಭಾನುವಾರವಾದರೂ ಪರವಾಗಿಲ್ಲ. ನಮ್ಮ ಭಾವಿಯಲ್ಲಿ ಬೆಕ್ಕು ಬಿದ್ದಿದೆ.."

❖

"ಗೋರಿಗುಡ್ಡೆಯ ಮೈದಾನದಲ್ಲಿ ಒಂದು ಲೋಡ್ ಇಳಿಸಿದ್ದೇವೆ, ಮೇರಿ" ಬೆಜ್ಮಿ ಹೇಳಿದ. "ಅಡುಗೆಗೆ ಏನು ಮಾಡಿದ್ದೀಯಾ?" ಅವನು ಬಟ್ಟೆ ಬಿಚ್ಚತೊಡಗಿದ. ಎರಡು ಚೊಂಬು ತಣ್ಣೀರು ತಲೆಯ ಮೇಲೆ ಸುರಿದು ಬರುತ್ತೇನೆ. ತುಸು ನಕ್ಕು ಮುಂದುವರಿಸಿದ, "ಇನ್ನು ಚಿಕ್ಕ ಬಾಟಲಿ ಮನೆಗೇ ತಗೊಂಡು ಬರ್ತೀನಿ. ಹೊರಗೆ ಹಾಕಿ ಬಂದರೆ ತಲೆಗೆ ಸುರಿದ ನೀರಿನೊಂದಿಗೆ ತಲೆಗೆ ಏರಿದ್ದು ಕೂಡಾ ಇಳಿದುಬಿಡುತ್ತದೆ."

"ನಿಮಗೆ ಸಾರಾಯಿ ಬಿಟ್ಟರೆ ಇನ್ನೇನಾದರೂ ಯೋಚನೆ ಬರುವುದುಂಟಾ?" ದೀರ್ಘ ಉಸಿರೆಳೆದುಕೊಂಡು ಮೇರಿ ಹೇಳಿದಳು. ಅವಳ ಮಾತಿನಲ್ಲಿ ದೂರು ಇರಲಿಲ್ಲ. "ದೀವ ಕೊರ್‌ವ ಮೀನಿನ ಮಾಲೆ ತಂದಿದ್ದ. ಈರುಳ್ಳಿ ಹುರಿದು ಸಾರು ಮಾಡಿದ್ದೇನೆ. ನೀವು ಸ್ನಾನ ಮುಗಿಸಿ ಬರುತ್ತೀರಾ, ಅಥವಾ..."

"ಅಥವಾ ಎಂದರೆ ಏನು?"

"ನಿಮಗೆ ಮಗನ ನೆನಪಾದರೂ ಇದೆಯಾ?"

"ಊಟ ಮಾಡಿ ಮಲಗಲಿಲ್ವಾ ಅವನು?" ಬೆಜ್ಮಿ ಸುತ್ತಲೂ ದೃಷ್ಟಿಹರಿಸಿ ನೋಡಿದ. ಅದು ಪಡಸಾಲೆ, ಚಿಕ್ಕಕೋಣೆ ಮತ್ತು ಅಡುಗೆ ಮನೆ ಇರುವ ಪುಟ್ಟ ಬಿಡಾರ. ಸೆಕೆಯ ದಿನಗಳಲ್ಲಿ ಬೆಜ್ಮಿ ಪಡಸಾಲೆಯಲ್ಲಿಯೇ ಮಲಗುತ್ತಿದ್ದ. "ಗಂಟೆ ಎಂಟೂವರೆ ದಾಟಿತು!"

"ಅವನ ಕೆಲಸ ಅವನು ಮಾಡಿಯಾಗಿದೆ. ಆದರೆ ನಿಮಗೆ ಏನೋ ತೋರಿಸಲಿಕ್ಕೆ ಇದೆ ಅಂತ ಹೇಳ್ತಿದ್ದ. ಅವನಿಗೆ ನಿದ್ದೆ ಬಂದಿಲ್ಲ ಅಂತ ಕಾಣುತ್ತೆ, ಕರೀರಿ ನೋಡೋಣ?"

"ಏನೋ ಅದು ಮಗಾ? ನಿನ್ನ ನೆನಪಾಗಲಿಲ್ಲ ಮಗಾ ನನಗೆ.. ಸ್ವಲ್ಪ ಟೈಟ್ ಆಗಿದ್ದೇನೆ. ಹೊರಗೆ ಬಾರೋ ಕಂದಾ.." ಬೆಜ್ಮಿ ಧ್ವನಿಯೆತ್ತಿ ಕರೆದ. ಮೇರಿ ಪಡಸಾಲೆಯ ಬುಡ್ಡಿದೀಪದ ಬತ್ತಿಯನ್ನು ಸ್ವಲ್ಪ ಹೆಚ್ಚಿಸಿದಳು. ಕಣ್ಣುಜ್ಜಿಕೊಳ್ಳುತ್ತಾ ಜುವಾಂವ್ ಬಾಪ್ತಿಸ್ತ ಕೋಣೆಯಿಂದ ಹೊರಗೆ ಬಂದ. ಅವನ ಕೈಯಲ್ಲಿ ಒಂದು ಚಿಕ್ಕ ಡಬ್ಬಿ ಇತ್ತು.

"ಅಡಗಿಸಿಕೊಳ್ಳುತ್ತಿದ್ದಿ, ಏನದು?" ಅವನು ಹಿಂಜರಿಯುತ್ತಿರುವುದನ್ನು ನೋಡಿ ಬೆಜ್ಮಿ ಪ್ರೀತಿಯಿಂದ ಕೇಳಿದ. ಜುಂವಾವ್ ಬಾಪ್ತಿಸ್ತ ತನ್ನ ಕೈಯಲ್ಲಿದ್ದ ಡಬ್ಬಿಯನ್ನು ಬೆಜ್ಮಿಯ ಮುಂದೆ ಎತ್ತರಿಸಿ ಹಿಡಿದ.

"ಅದು ಅವನಿಗೆ ಕ್ಲಾಸ್ ಟೀಚರ್ ಕೊಟ್ಟದಂತೆ" ಮೇರಿ ಹೇಳಿದಳು, "ವೆರಿಗುಡ್ ಅಂತ ಹೇಳಿದರಂತೆ"

"ಅದನ್ನು ಅವನೇ ಹೇಳಲಿ", ಬೆಜ್ಮಿ ನುಡಿದ, "ನಿನ್ನ ಇಂಗ್ಲಿಷ್ ಬೇಡ. ನನ್ನ ಮಗನ ಇಂಗ್ಲಿಷನ್ನೇ ನಾನು ಕೇಳಬೇಕು. ನೀನು ಜುಜುಬಿ ಐದನೇ ಕ್ಲಾಸು ಓದಿರೋದು ನನಗೆ ಗೊತ್ತು". ಮೇರಿ ನಕ್ಕಳು. ಬೆಜ್ಮಿ ಶಾಲೆಯ ಮೆಟ್ಟಲು ಹತ್ತಿದವನೇ ಅಲ್ಲ.

ಬೆಜ್ಮಿ ಮಗನ ಕೈಯಿಂದ ಡಬ್ಬಿಯನ್ನು ತೆಗೆದುಕೊಂಡ. ಅದನ್ನು ತೆರೆದು ನೋಡಿದ. ಅದರಲ್ಲಿರುವ ಬಣ್ಣದ ಕಡ್ಡಿಗಳನ್ನು ನೋಡಿ ಕೇಳಿದ, "ಏನೋ ಮಗಾ ಇದು? ಸಕ್ಕರೆ ಕಡ್ಡಿಯಾ?"

ಜುವಾಂವ್ ಬಾಪ್ತಿಸ್ತ ಗೊಳ್ಳನೆ ನಕ್ಕ. "ಸಕ್ಕರೆ ಕಡ್ಡಿ ಅಲ್ಲ, ಅಪ್ಪಾ!" ಅವನು ಹೇಳತೊಡಗಿದ, "ಇದಕ್ಕೆ ಕ್ರೆಯೋನ್ಸ್ ಅಂತ ಹೇಳುತ್ತಾರೆ. ಕ್ಲಾಸಿನಲ್ಲಿ ಎಲ್ಲರಿಗಿಂತ ನನ್ನ ಹ್ಯಾಂಡ್‌ರೈಟಿಂಗ್ ಚೆಂದ. ಇನ್ನು ನನಗೆ ನನ್ನ ಮತ್ತು ನನ್ನ ಸ್ಕೂಲಿನ ಹೆಸರು ಸರಿಯಾಗಿ ಇಂಗ್ಲಿಷಿನಲ್ಲಿ ಬರೆಯಲು ಬರುತ್ತೆ. ಇನ್ನು ಬುಕ್ಕಿನಲ್ಲಿರುವ ಪೊಯಟ್ರಿ ಬೈಹಾರ್ಟ್ ಹೇಳಲು ಬರುತ್ತೆ ಅಂತ ಮಿಸ್ ನನಗೆ ಈ ಕ್ರೆಯೋನ್ಸ್ ಕೊಟ್ಟರು."

ಬೆಜ್ಮಿ ಅತ್ತ ಇತ್ತ ನೋಡಿದ. ಆಪತ್ಕಾಲಕ್ಕೆ ಮೇರಿಯ ಸಹಾಯವನ್ನೇ ಪಡೆಯಬೇಕಾಗಿ ಬಂತು. "ಕ್ರೆಯೋನ್ಸ್ ಅಂದರೆ.. ಹಾಂ ಬಣ್ಣದ ಕಡ್ಡಿಗಳು." ಮೇರಿ ಪದಗಳನ್ನು ಹುಡುಕಿಕೊಳ್ಳುತ್ತಾ ವಿವರಿಸತೊಡಗಿದಳು. "ನಮ್ಮ ಜೋನ್ ಬ್ಯಾಪ್ಟಿಸ್ಟ್ ಕ್ಲಾಸಿನಲ್ಲಿ ಎಲ್ಲರಿಗಿಂತಲೂ ಜಾಣ ಇರೋದರಿಂದ ಟೀಚರ್ ಅವನಿಗೆ ಬಣ್ಣದ ಕಡ್ಡಿಗಳ ಬಾಕ್ಸ್ ನೀಡಿದ್ದಾರೆ. ಈ ಬಣ್ಣದ ಕಡ್ಡಿಗಳಿಂದ ಬಣ್ಣದ ಚಿತ್ರಗಳನ್ನು ಬಿಡಿಸಲು ಆಗುತ್ತದೆ. ಆದರೆ ನಾನು ಅವನಿಗೆ ಹೇಳಿದ್ದೇನೆ, ಮನೆಗೋಡೆ ಮೇಲೆ ಏನನ್ನೂ ಬಿಡಿಸಬಾರದು, ಗೋಡೆ ಹಾಳಾಗುತ್ತದೆ ಎಂದು" ಅವಳು ಕಡೆಗಣ್ಣಿನಿಂದ ಬೆಜ್ಮಿಯನ್ನು ನೋಡಿದಳು. ಗೋಡೆಗೆ ಬಣ್ಣ ಹೊಡೆಯದೆ ಜೋನ್ ಬ್ಯಾಪ್ಟಿಸ್ಟ್‌ನ ವಯಸ್ಸಾಗಿದೆ.

ಬೆಜ್ಮಿ ಮಗನ ತಲೆ ನೇವರಿಸಿದ. "ನೀನು ಬೇಗನೇ ನನ್ನ ಮತ್ತು ನಿನ್ನ ತಾಯಿಯ ಹೆಸರನ್ನು ಇಂಗ್ಲಿಷಿನಲ್ಲಿ ಬರೆಯಲು ಕಲಿಯಬೇಕು." ದೂರದಾಸೆಯಿಂದ ಅವನು ಹೇಳಿದ.

"ನನ್ನ ನೋಟ್‌ಬುಕ್ ನೋಡುತ್ತೀರಾ ಅಪ್ಪಾ?"

"ನಾಳೆ ತೋರಿಸು ಮಗಾ," ಮೇರಿ ಹೇಳಿದಳು, "ಅಪ್ಪನಿಗೆ ಸುಸ್ತಾಗಿದೆ."

ಜೊನ್ ಬ್ಯಾಪ್ಟಿಸ್ಟ್ ವಿನಯದಿಂದ ಒಳಕೋಣೆಗೆ ತೆರಳಿದ.

❖

ಪಡಸಾಲೆಯ ನೆಲದಲ್ಲಿ ಕುಳಿತು ಉಣ್ಣುವಾಗ ಮೇರಿ ಹೇಳಿದಳು, "ಈ ನಮ್ಮ ಮುನ್ಸಿಪಾಲಿಟಿಗೆ ಆಗಿದ್ದಾದರೂ ಏನು? ನಮ್ಮ ಭಾವಿಗಳಲ್ಲಿ ಜೇನಿನಷ್ಟು ರುಚಿಯ ನೀರು ಇರುವಾಗ ಈ ಪೈಪುಗಳು ಯಾಕೆ? ಭಾವಿಗಳು ಒಣಗುತ್ತವೆ ಅಂತನಾ? ನಳ್ಳಿಯಲ್ಲಿ ಬರುವ ನೀರು ಸ್ವಚ್ಛವಾಗಿ ಇರುತ್ತದಾ? ನಮ್ಮ ಭಾವಿಗಳಲ್ಲಿ ೭-೮ ಮಾರು ನೀರಿರುವಾಗ ತುಂಬೆಯಿಂದ ತರುತ್ತಾರಂತೆ.."

"ಐದು ಕ್ಲಾಸು ಓದಿದ್ದರೂ ನಿನ್ನ ಬುರುಡೆ ಖಾಲಿಯಾಗಿಯೇ ಉಳಿದಿದೆ. ಈ ಪ್ರಪಂಚ ಈಗ ನಮ್ಮದಲ್ಲ ಮೇರಿ"

"ಅಂದರೆ, ನಳ್ಳಿಯಲ್ಲಿ ನೀರು ಬಂದಾಕ್ಷಣ ನಾವು ಸಾಯುತ್ತೇವೆ, ನಮ್ಮ ಭಾವಿಗಳು ಒಣಗುತ್ತವೆ?"

"ಏನೋ ನಾವು ಸಾಯಲಿಕ್ಕಿಲ್ಲ. ಆದರೆ ನಮ್ಮ ಭಾವಿಗಳಂತೂ ಒಣಗಲಿವೆ.." ಬೆಜ್ಮಿ ಹೇಳತೊಡಗಿದ. "ಸ್ವಲ್ಪ ಅತ್ತಿತ್ತ ನೋಡು ಹೆಣ್ಣೇ. ಜನಸಂಖ್ಯೆ ಎಷ್ಟು ಬೆಳೆದುಬಿಟ್ಟಿದೆ ನೋಡು. ನಮ್ಮ ಪುಟಾಣಿ ಹುಟ್ಟುವಾಗ ನೆರೆಕರೆಯವರೆಂದು ಎಷ್ಟು ಜನ ಇದ್ದರು? ಈಗ ಹಂಪನಕಟ್ಟೆಯಲ್ಲಿ ಹೆಜ್ಜೆಗೊಬ್ಬ ಎಡತಾಕುತ್ತಾನೆ. ಲಂಗೋಟಿಯಷ್ಟು ಜಾಗದಲ್ಲಿ ಎರಡು ಮಹಡಿಯ ಮನೆ ಕಟ್ಟುತ್ತಾರೆ. ನಮ್ಮ ವಾಲೆನ್ಸಿಯಾದಲ್ಲಿಯೇ ನೋಡು, ಎಷ್ಟು ಭಾವಿಗಳು ಉಳಿಯಬಹುದು ಹೇಳು ನೋಡೋಣ? ದೊಡ್ಡಕಾಡಿನಲ್ಲಿ ಇರುವ ಆ ಭಾವಿಯ ನೀರಂತೂ ಯಾರಿಗೂ ಬೇಡ. ಆ ಭಾವಿಗೆ ಹಾರಿ ಎಷ್ಟು ಜನ ಜೀವ ಬಿಟ್ಟಿದ್ದಾರೆ ಎಂಬುದು ನಿನಗೆ ತಿಳಿದೇ ಇದೆ. ಭಾವಿ ಉಳಿದರೂ ನೀರು ತೆಗೆಯುವವರ ಗತಿ ಇದೆಯಾ? ಈಗಿನವರಿಗೆ ಏತದಿಂದ ನೀರು ಸೇದಲು ಬೆನ್ನು ಬಗ್ಗುತ್ತಾ? ನಾನು ಕಲಿತಿಲ್ಲ ನಿಜ. ಆದರೆ ನಮ್ಮ ಪುಟಾಣಿಯನ್ನು ನೋಡು. ಅವನಿಗೆ ಈಗಲೇ ಇಂಗ್ಲಿಷ್ ಬರೆಯಲು, ಓದಲು, ಮಾತನಾಡಲು ಬರುತ್ತದೆ. ನಾಳೆ ಮುನ್ಸಿಪಾಲಿಟಿ ಇಂಜೇನ್ಯರ್ ಕೂಡಾ ಆಗಬಹುದು. ಆಮೇಲೆ ಬೊಬ್‌ಕಟ್ಟ್ ಹುಡುಗಿ ಜೊತೆ ಮದುವೆಯೂ ಆಗಬಹುದು. ಈಗಲೇ ಬಣ್ಣದ ಕಡ್ಡಿಗಳನ್ನು ತಗೊಂಡು ಬಂದಿದ್ದಾನಲ್ವಾ? ಅಂತಹವರೊಡನೆ ನೀರು ಸೇದು ಅಂತ ಹೇಳಕ್ಕಾಗುತ್ತಾ ಮೇರಿ? ಸರ್ಕಾರಕ್ಕೆ ತಲೆ ಸರಿಯಿಲ್ಲ ಅಂತ ತಿಳ್ಕೊಂಡೆಯಾ ನೀನು?"

ಇಷ್ಟು ದೀರ್ಘವಾಗಿ ಮಾತನಾಡಿದ ಗಂಡನನ್ನು ಕಣ್ಣು ಚಿಕ್ಕದು ಮಾಡಿ ನೋಡಿದಳು ಮೇರಿ. 'ನಿಮಗೆ ಸ್ವಲ್ಪ ಶಿಕ್ಷಣ ಸಿಕ್ಕಿದ್ದರೆ ನೀವು ಕೂಡಾ ಮುನ್ಸಿಪಾಲಿಟಿ ಇಂಜಿನಿಯರ್ ಆಗ್ತಿದ್ರಿ. ಆದರೆ ಆ ಪಡಪೋಶಿ ಬನಾವಟೀ ಮರಣ ಪಂಡಿತ ನಾರಾಯಣ ಇವತ್ತು

ಡಾಕ್ಟರ್ ನಾರಾಯಣ್ ಗುಂಟಲಾ ಆದ ಹಾಗಲ್ಲ ಇದು' ಮೇರಿ ಕೆಳದನಿಯಲ್ಲಿ ಪಿಸುಗುಟ್ಟಿದಳು.

"ಏನು ಗೊಣಗುತ್ತೀಯಾ?" ಬೆಜ್ಮಿ ಕೇಳಿದ, "ನತಲಾಮಿಯ ಭಾವಿಯಿಂದ ನೀರು ಸೇದಿ ನಿನಗೂ ಸುಸ್ತಾಗಿರುವ ಹಾಗಿದೆ"

"ವಿಷಯ ಅದಲ್ಲ ರೀ" ಮೇರಿ ಹೇಳಿದಳು. "ನಿಮಗೆ ಹೇಳಬಾರದು ಅಂತ ಯೋಚಿಸಿದ್ದೆ ನಾನು. ಜೊನ್ ಬ್ಯಾಪ್ಟಿಸ್ಟ್‌ಗೂ ಅದನ್ನೇ ಹೇಳಿದ್ದೆ. ನಿಮಗೆ ಹೇಳೋದು ಬೇಡ ಅಂತ. ನಿಮ್ಮ ಕೋಪ ನನಗೆ ಗೊತ್ತು..."

"ಯಾವ ವಿಷಯ?" ಮೀನಿನ ಬುರುಡೆ ಚೀಪುತ್ತಾ ಬೆಜ್ಮಿ ಕೇಳಿದ. ಅವನ ತಲೆಗೇರಿದ್ದು ಈಗ ಪೂರ್ತಿಯಾಗಿ ಇಳಿದುಬಿಟ್ಟಿತ್ತು.

"ಆ ನಾರಾಯಣ ಗುಂಟಲಾನ ಮಗ ಪನ್ನಾ ನಮ್ಮ ಮಗನಿಗೆ ಕ್ಲಾಸಿನಲ್ಲಿ ಕೂಲಿಕಾರನ ಮಗ, ಮಾದ್ರಿ-ಪಾದ್ರಿಯರ ಕಾಲು ಹಿಡಿದು 'ಫ್ರೀ' ಓದುತ್ತಿದ್ದಾನೆ ಅಂತ ಪೀಡಿಸುತ್ತಿದ್ದಾನಂತೆ".

"ನಾನು ಕೂಲಿಕಾರ ಅನ್ನೋದು ಇಡೀ ಪ್ರಪಂಚಕ್ಕೇ ಗೊತ್ತಿದೆ," ಬೆಜ್ಮಿ ನಗುತ್ತಾ ಹೇಳಿದ. "ಇದು ನಮ್ಮ ಪ್ರಪಂಚ. ಅದು ಅವರದ್ದು. ಆ ಬನಾವಟಿ ಮರಣ ಪಂಡಿತನಿಗೆ ಇವತ್ತು ಡೊಕ್ಟರ್ ಅಂತ ಜನಗಳು ಮನ್ನಿಸಿದ್ದರೆ ಅದು ಅವನ ಹುಸ್ನಾರ. ಅವರ ಪ್ರಪಂಚದಲ್ಲಿ ನಮ್ಮಂತಹವರು ನುಗ್ಗಲು ಯೋಚಿಸಿದರೆ ಆಗೋದು ಇದೇನೇ. ನನ್ನ ಮಗ ಏನಾದ್ರೂ ಸರಕಾರಿ ಶಾಲೆಗೆ ಸೇರಿದ್ದರೆ ಯಾರೂ ಏನೂ ಹೇಳ್ತಿರಲಿಲ್ಲ. ಅದಿರಲಿ, ಪಾತ್ರೆಯಲ್ಲಿ ಇನ್ನೊಂದು ಮೀನು ಇದೆಯಾ?"

"ನಿಮಗೆ ತಿಳಿಯಲಿಲ್ಲ," ಮೇರಿ ಪಾತ್ರೆಯಿಂದ ಮೀನನ್ನು ಸೌಟಿನಿಂದ ಹೊರತೆಗೆಯುತ್ತಾ ಹೇಳಿದಳು, "ಆ ಕ್ರೆಯೋನ್, ಅದೇ ಆ ಬಣ್ಣಕಡ್ಡಿಗಳನ್ನು ಉಪಯೋಗಿಸಿ ಯಾವುದೇ ಚಿತ್ರ ಬಿಡಿಸಿದರೆ ಅದನ್ನು ತಾನು ಹರಿದು ಹಾಕ್ತೇನೆ ಅಂತ ಪನ್ನಾ ಹೇಳ್ತಾನಂತೆ. ಇವತ್ತು ಕ್ಲಾಸಿನ ಹೊರಗೆ ಅವನು ಜೊನ್ ಬ್ಯಾಪ್ಟಿಸ್ಟನ ಕಿಬ್ಬೊಟ್ಟೆಗೆ ಕಿವುಚಿ ಆಮೇಲೆ..." ಮೇರಿ ಅತ್ತೇಬಿಟ್ಟಳು.

"ಇದು ಮಕ್ಕಳ ನ್ಯಾಯ ಮೇರಿ," ಬೆಜ್ಮಿ ಹೇಳಿದ. "ಪನ್ನಾನಿಗೆ ನಮ್ಮ ಮಗನ ಮೇಲೆ ಹೊಟ್ಟೆಕಿಚ್ಚು ಅಷ್ಟೇ. ಹಾಗಂತ ಹೇಳಿ ಹಿಟ್ಲರ್ ಎಂದು ಕರೆಯಲಿಕ್ಕಾಗತ್ತಾ? ಈ ಮಕ್ಕಳು ಇವತ್ತು ಹೊಡೆದಾಡುತ್ತಾರೆ, ನಾಳೆಗೆ ರಾಜಿಯಾಗುತ್ತಾರೆ. ಕಂಕನಾಡಿ ಮೈದಾನದಲ್ಲಿ ಜೊತೆಗೂಡಿ ಕಿರಕಟ್ ಆಡುವುದಿಲ್ಲವಾ ಅವರು? ನೀನು ಹೋಗು, ನಿನ್ನ ಕೆಲಸ ನೋಡು. ನಿನ್ನ ಮೀನು ಪಲ್ಲೆ ತಿಂದು ನಾಳೆ ಹೊಟ್ಟೆಯಲ್ಲಿ ತಳಮಳ ಆಗದಿದ್ದರೆ ಸಾಕು!"

"ನೀವೊಂದು..." ಅವಳು ಹೇಳಿದಳು, "ಹುಡುಗ ಬಣ್ಣದ ಕಡ್ಡಿಗಳನ್ನು ತಗೊಂಡು ಬಂದಿದ್ದಾನೆ. ನೀವು ಅವನಿಗೇನಾದರೂ ಕೊಟ್ಟರಾ? ಅವನೇನು ಐಸಕ್ಯಾಂಡಿ ಕೇಳಲ್ಲ.."

"ಮೊದಲೇ ಗೊತ್ತಿದ್ದರೆ ಬೇಕರಿಯಿಂದ ಬೆಣ್ಣೆಬಟರ್ ತರ್ತಿದ್ದೆ."

"ಅಲ್ಲರೀ, ಎಷ್ಟು ದಿವಸದಿಂದ ಹುಡುಗ ಬೇಡ್ತಿದ್ದಾನೆ. ನೀವು ಲಾರಿಯಿಂದ ಪೈಪು ಇಳಿಸುವಾಗ ನೋಡಬೇಕು, ನಿಮ್ಮ ಜೊತೆ 'ಐಸಾ ಐಸಾ' ಹೇಳ್ಬೇಕೆಂದುಕೊಂಡು?"

"ಇದು ಒಳ್ಳೇ ಕತೆಯಾಯ್ತು." ಗಟ್ಟಿಯಾಗಿ ನಕ್ಕ ಬೆಜ್ಮಿ. "ಆಗಿಯೇಬಿಟ್ಟ ಕೂಲಿಕಾರನ ಮಗ ಇಂಜೇರ್. ಮಾವಿನ ಮರದಲ್ಲಿ ಗೇರು ಆಗುವುದಿಲ್ಲ ಕಣೆ. ಆಗಲಿ ನಾಳೆ ನಾಡಿದ್ದು ಕಂಕನಾಡಿ ಮೈದಾನಿನಲ್ಲಿ ಲೋಡ್ ಇಳಿಸಲಿಕ್ಕೆ ಇದೆ. ಆಗ ತೋರಿಸುತ್ತೇನೆ ಅವನಿಗೆ. ಶಾಲೆಯಿಂದ ನೇರವಾಗಿ ಅಲ್ಲಿಗೇ ಬರಲಿ. ಅವನ ಕಿರ್‌ಕಿಟ್ ಜೊತೆಗಾರರೂ ಬರಲಿ. ಆದರೆ ನಾಳೆನೇ ಅವನೊಡನೆ ಏನೂ ಹೇಳ್ಬೇಡ.." ಒಮ್ಮೆ ತೇಗಿ ಬೆರಳು ಚೀಪುತ್ತಾ ಬೆಜ್ಮಿ ಎದ್ದುನಿಂತ. "ಏನು ನೋಡ್ಲಿಕ್ಕಿದೆ ಅಂತ ಆ ಪೈಪು ಇಳಿಸುವಾಗ? ಹುಂ. ಅದರಲ್ಲಿ ನೀರಲ್ಲ, ನಮ್ಮ ನೆತ್ತರು ಹರಿದ ಹಾಗಾಗುತ್ತದೆ ನನಗೆ.."

'ಎಂತಹ ಅಮಾಯಕ ನನ್ನ ಬೆಜ್ಮಿ!' ಮನಸ್ಸಿನಲ್ಲಿಯೇ ಅಂದುಕೊಂಡಳು ಮೇರಿ. 'ನೆತ್ತರು ನೀರು ಮಾಡುವವರನ್ನು ಆ ಒಳ್ಳೆಯ ದೇವರು ಎಂದೂ ಕೈ ಬಿಡುವುದಿಲ್ಲ'

❖

ಮರುದಿನ 'ಯಾರಿಗೂ ಹೇಳ್ಬೇಡ' ಅಂತ ಮೇರಿ ಜೊನ್ ಬ್ಯಾಪ್ಟಿಸ್ಟನೊಡನೆ ಬೆಜ್ಮಿಗೆ ಕೊಟ್ಟ ಭಾಷೆಯನ್ನು ಹೇಳಿದಳು. ಅವನ ಮೋರೆ ಅರಳಿತು. ಅವನು ಫಟ್ ಅಂತ ಒಳಗೆ ಹೋಗಿ ಬಣ್ಣದ ಕಡ್ಡಿಗಳ ಡಬ್ಬಿ ತಗೊಂಡು ಹೊರಗೆ ಬಂದ. ಅದನ್ನು ಜೋಪಾನವಾಗಿ ಚೀಲದಲ್ಲಿ ಇರಿಸುತ್ತಾ ತಾಯಿಯನ್ನು ನೋಡಿ ಹೇಳಿದ, "ಅಮ್ಮ, ನನಗೆ ಒಂದು ಐಡಿಯಾ ಹೊಳೆದಿದೆ!"

"ಆ ಡಬ್ಬಿಯನ್ನು ಯಾಕೆ ತಗೊಂಡು ಹೋಗ್ತಿಯೋ ಮಗಾ?" ಮೇರಿ ಗಾಬರಿಗೊಂಡಳು. "ಆ ಪನ್ನಾ ಏನಾದರೂ ಹೊಡ್ಕೊಂಡು ಹೋದರೆ? ನಿನ್ನ ಕಿಬ್ಬೊಟ್ಟೆಗೆ ಪುನಃ ಚಿವುಟಿದರೆ?"

ಜೊನ್ ಬ್ಯಾಪ್ಟಿಸ್ಟ ಕಣ್ಣು ಮಿಟುಕಿಸಿ ನಕ್ಕ. "ಆ ಪನ್ನಾನಿಗೆ ಬುದ್ಧಿ ಕಲಿಸಲಿಕ್ಕೆ ನಾನೊಂದು ಪ್ಲಾನ್ ಮಾಡಿದ್ದೇನೆ. ಅಪ್ಪನ ಪೈಪು ಬರುವ ತನಕ ನಾನು ಈ ಡಬ್ಬಿಯನ್ನು ಹೊರಗೆ ತೆಗೆಯುವುದೇ ಇಲ್ಲ"

❖

ನಿಜವಾಗಿಯೂ ಆ ಲಾರಿ ಬಹಳ ದೊಡ್ಡದಿತ್ತು. ಇನ್ನು ಅದರಲ್ಲಿದ್ದ ಕೊಳವೆಗಳ ಗಾತ್ರವೂ ಅಷ್ಟೇ. ಲಾರಿ ಮೈದಾನಿಗೆ ಬರುತ್ತಿದ್ದಂತೆ ಕೂಲಿಕಾರರು ಅಲ್ಲಿ ಕ್ರಿಕೆಟ್ ಆಡುತ್ತಿದ್ದ ಮಕ್ಕಳಿಗೆ ದೂರ ಚದುರಲು ಹೇಳಿದರು. ಅವರಲ್ಲಾ ಸೇರಿ ಒಂದೆಡೆ ಗುಂಪಾಗಿ ನಿಂತುಕೊಂಡರು. ಲಾರಿ ಬಂದು ನಿಂತ ಕೂಡಲೇ ಅದರಿಂದ ಕೆಳಗೆ ಹಾರಿದ ಬೆಜ್ಮಿ ಎರಡೇ ಹೆಜ್ಜೆಗಳಲ್ಲಿ ಆ ಗುಂಪನ್ನು ಸಮೀಪಿಸಿದ. "ಈಗ ಕಿರ್ನಾಯ್ ಬರುತ್ತದೆ," ಅವನು ಜೋನ್ ಬ್ಯಾಪ್ಟಿಸ್ಟನ ಕಣ್ಣುಗಳನ್ನು ನೋಡುತ್ತಾ ಹೇಳತೊಡಗಿದ, "ಕಿರಾಯ್ನ ಹೇಗೆ ನಡೆಯುತ್ತದೆ ಅಂತ ನೀವು ನೋಡಿಲ್ಲ ಅಲ್ವಾ? ಕೆಲಸ ಮುಗಿಯಲಿ, ಆಮೇಲೆ ನಾನು ನಿಮಗೆಲ್ಲಾ ಚಾ ಮತ್ತು ಗೋಳಿಬಜೆ ಕೊಡಿಸುತ್ತೇನೆ." ಇಷ್ಟು ಹೇಳಿ ಅವನು ಲಾರಿಯ ಹತ್ತಿರ ಓಡಿದ.

"ಅಯ್ತು ಪಪ್ಪಾ, ಥ್ಯಾಂಕ್ಯೂ ಪಪ್ಪಾ" ಅವನ ಹಿಂದೆ ಜೊನ್ ಬ್ಯಾಪ್ಟಿಸ್ಟ್ ಹೇಳಿದ. ಆದರೆ ಅದು ಬೆಜ್ಮಿಗೆ ಕೇಳಿಸಲಿಲ್ಲ. ಗುಂಪಿನಲ್ಲಿದ್ದ ಹುಡುಗನೊಬ್ಬ ಬಿದ್ದು ಬಿದ್ದು ನಕ್ಕ.

"ಈಗ ಯಾಕೆ ನಗ್ತೀಯಾ, ಪನ್ನಾ?" ಜೊನ್ ಬ್ಯಾಪ್ಟಿಸ್ಟ್ ಅವನ ಕೊರಳಪಟ್ಟಿ ಹಿಡಿದ. ಅವನೇ ಡಾಕ್ಟರ್ ನಾರಾಯಣ ಗುಂಟಲಾನ ಮಗ, ಪನ್ನಾ. "ನನ್ನ ಪಪ್ಪನಿಗೆ ಕೂಲಿಕಾರ ಅಂತ ಹೇಳ್ತಿದ್ದಿಯಲ್ಲವಾ? ಈಗ ನೋಡು, ಅವನು ಫೋರ್‌ಮೆನ್!"

"ಅದಕ್ಕೇ ಕ್ರೇನ್ ಅಂತ ಹೇಳುವ ಬದಲು ಕಿರಾಯ್ನ್ ಹೇಳಿದ್ದು!" ಪನ್ನಾ ಕುಟುಕಿದ. ಗುಂಪಿನಲ್ಲಿದ್ದ ಕೆಲವು ನಕ್ಕರು. "ಇದನ್ನೇ ನೋಡುವುದಕ್ಕೆ ನೀನು ನಮಗೆ ಇಲ್ಲಿಗೆ ತಂದಿದ್ದಾ? ನಾವು ಕ್ರಿಕೆಟ್ ಆದರೂ ಆಡುತ್ತಿದ್ದೆವು. ಫ್ರೆಂಡ್ಸ್, ಬನ್ನಿ ನಾವು ಹೋಗುವ. ಫೊರ್‌ಮನ್ ಅಂತೆ ಫೊರ್‌ಮನ್. ನಿನ್ನೆ ತನಕ ಅಪ್ಪ-ಅಮ್ಮ ಹೇಳುತ್ತಿದ್ದ ಈ ಕೊಳಕ ಇವತ್ತು ಪಪ್ಪಾ-ಮಮ್ಮಾ ಅನ್ನುತ್ತಾನೆ..."

"ನಿಲ್ಲಿ, ನಿಲ್ಲಿ!" ಜೊನ್ ಬ್ಯಾಪ್ಟಿಸ್ಟ್‌ನ ಧ್ವನಿ ಕಂಪಿಸಿತು. "ನೋಡಿ ಕ್ರೇನ್ ಬಂದೇ ಬಿಡ್ತು. ನನಗೆ ಪಪ್ಪಾ-ಮಮ್ಮಾನ ಹೆಸರು ಇಂಗ್ಲಿಷಿನಲ್ಲಿ ಬರೆಯಲು ಬರುತ್ತೆ. ನಾನು ಮಿಸ್ ಹತ್ತಿರ ಕಲಿತು ಹಗಲಿರುಳು ಪ್ರಾಕ್ಟೀಸ್ ಮಾಡಿದ್ದೇನೆ."

"ಇನ್ನು ಆ ಹೆಸರುಗಳನ್ನು ಎಲ್ಲಿ ಬರೆಯಲಿಕ್ಕಿದ್ದಿ?" ಪನ್ನಾ ವಿಚಾರಿಸಿದ.

"ಎಲ್ಲರಿಗೂ ಕಾಣುವಲ್ಲಿ"

"ಬಿಡು ಪನ್ನಾ," ಅವರಲ್ಲಿ ಕೆಲವರು ಹೇಳಿದರು, "ಇವನಿಗೆ ಖುಷಿ ಪಡಿಸಲಾದರೂ ನಾವು ನಿಲ್ಲೋಣ. ಕ್ರೇನ್ ನಡೆಸುವುದನ್ನು ನಾನು ನೋಡಿಲ್ಲ. ಈಗ ಕ್ರಿಕೆಟ್ ಅಂದರೆ ಗೇಮ್ ಮುಗಿಸಲು ಆಗಲಿಕ್ಕಿಲ್ಲ"

ಆನಂತರ ಅವರು ಅಲ್ಲಿ ನಿಂತರು. ಅವರು ತನಗೆ ಮಾಡಿದ ಕುಚೋದ್ಯವನ್ನು ಮರೆತು ಅಲ್ಲಿ ನಡೆಯುತ್ತಿದ್ದ ಕೆಲಸವನ್ನು ನೋಡುತ್ತಾ ನಿಂತ ಜೊನ್ ಬ್ಯಾಪ್ಟಿಸ್ಟ್. ಅವನ ತಂದೆ ನೀಡಿದ ಸೂಚನೆಗಳಿಗೆ ಅನುಗುಣವಾಗಿ ಕ್ರೇನ್ ಚಾಲಕ ಕೊಳವೆಗಳನ್ನು ಎತ್ತಿ ಅಟ್ಟಳಿಗೆಯ ರೀತಿ ಮೈದಾನಿನಲ್ಲಿ ಜೋಡಿಸಿಡುತ್ತಿದ್ದನು. ಅವನಿಗೆ ಉಳಿದ ಕೆಲಸಗಾರರು ಸಹಾಯ ಮಾಡುತ್ತಿದ್ದರು. ಪ್ರತಿಯೊಂದೂ ಬಾರಿ ಕ್ರೇನಿನ ಕೈ ಕಬ್ಬಿಣದ ಸರಿಗಳಿಂದ ಕಟ್ಟಿದ ಕೊಳವೆಯನ್ನು ಲಾರಿಯಿಂದ ಎತ್ತಿ ಅಟ್ಟಳಿಗೆ ಮೇಲೆ ಇಡುವಾಗ ಜೊನ್ ಬ್ಯಾಪ್ಟಿಸ್ಟನ ಎದೆಬಡಿತ ಹೆಚ್ಚಾಗುತ್ತಿತ್ತು. ಎಲ್ಲಿಯಾದರೂ ಸರಿಗೆ ಬಿಚ್ಚಿ ಪಪ್ಪಾ ಅದರ ಕೆಳಗೆ ಸಿಕ್ಕಿಕೊಂಡರೇನು ಗತಿ? ಮಮ್ಮಿ ಬರದೇ ಇದ್ದುದು ಒಳ್ಳೇಯದೇ ಆಯ್ತು.

ಸುಮಾರು ಎರಡು ಗಂಟೆ ಕಳೆದು ಕೆಲಸ ಮುಗಿಯುವಷ್ಟರಲ್ಲಿ ಮೈದಾನಿನಲ್ಲಿ ಮುಸ್ಸಂಜೆ ಬೆಳಕು ಹರಡಿಕೊಂಡಿತ್ತು. ಪ್ರತಿಯೊಂದೂ ಸ್ಪಷ್ಟವಾಗಿ ಕಣ್ಣಿಗೆ ಗೋಚರಿಸುತ್ತಿತ್ತು. ಬೆಜ್ಮಿ ಕ್ರೇನಿನ ಚಾಲಕನಿಂದ ನೀರು ತುಂಬಿದ ಚೆಂಬು ತೆಗೆದುಕೊಂಡು ಮಕ್ಕಳ ಬಳಿಗೆ ಬಂದ "ಏನೋ ಪುಟ್ಟಾ? ಕೆಲಸ ನೋಡುವ ನಿನ್ನ ಆಸೆ ನೆರವೇರಿತೇನು? ಇವತ್ತು ಕಿರಾಯ್ನ್ ಬೇರೆ ನೋಡಲಿಕ್ಕೆ ಸಿಕ್ಕಿತಲ್ಲ. ಹಸಿವೆ ಆಗ್ತಿದೆಯಾ? ನೀವು ಇಲ್ಲೇ ನಿಲ್ಲಿ.

ನಾನು ಮತ್ತು ಅವರು ಓ ಅಲ್ಲಿಗೆ ಹೋಗಿ ಹತ್ತು ನಿಮಿಷದಲ್ಲಿ ಬಂದುಬಿಡುತ್ತೇವೆ. ಏನು ಹೇಳ್ತೀರಿ? ಆಮೇಲೆ ಭಟ್ರ ಹೊಟೇಲಿನಲ್ಲಿ ಗೋಳಿಬಜೆ.."

"ನಾವು ಹೋಗೋಣ!" ಪನ್ನಾ ಹೇಳಿದ. "ಇನ್ನು ಇಲ್ಲಿ ನಿಂತು ಏನು ಮಾಡಲಿಕ್ಕಿದೆ? ಯಾರಿಗೆ ಬೇಕಂತೆ ಗೋಳಿಬಜೆ, ಮಮ್ಮಿ ಮಾಲ್ಪುರಿ ಮಾಡಿಟ್ಟಿರಬೇಕು. ಕತ್ತಲೆಯಾಗ್ತಾ ಬಂದಿದೆ.."

ಜೆಪ್ಮಿ ಅವರ ಉತ್ತರಕ್ಕೆ ಕಾಯದೆ ಹೋಗಿದ್ದರಿಂದ ಜೋನ್ ಬ್ಯಾಪ್ಟಿಸ್ಟನಿಗೆ ಮಾತನಾಡಲು ಅವಕಾಶ ಸಿಕ್ಕಿತು. ಅವನು ತನ್ನ ಚೀಲದಿಂದ ಬಣ್ಣದಕಡ್ಡಿಗಳ ಡಬ್ಬಿ ಹೊರಗೆ ತೆಗೆದ. ಅದನ್ನು ಪನ್ನಾನ ಮೂಗಿನ ನೇರಕ್ಕೆ ಹಿಡಿದು ಹೇಳತೊಡಗಿದ, "ನನಗೆ ಈ ಬಾಕ್ಸ್ ಸಿಕ್ಕಿದ್ದರಿಂದ ನಿನಗೆ ಹೊಟ್ಟೆಕಿಚ್ಚು ಆಗಿತ್ತಲ್ವಾ? ನನ್ನ ಕಿಬ್ಬೊಟ್ಟೆಗೆ ನೀನು ಚಿವುಟಿದೆ. ಈ ಕ್ರೆಯೊನ್ ಉಪಯೋಗಿಸಿ ಚಿತ್ರ ಬಿಡಿಸಿದರೆ ಕಿಲ್ ಮಾಡ್ತೀನಿ ಅಂದೆ.."

"ಅದಕ್ಕೆ ಈಗ ನೀನು ಏನು ಮಾಡ್ತೀಯಾ?" ಪನ್ನಾ ಅವನ ಕೈಯನ್ನು ದೂರ ತಳ್ಳಿದ. "ರಸ್ತೆಯಲ್ಲಿ ಡ್ರೊಯಿಂಗ್ ಮಾಡ್ತೀಯಾ?"

"ಮಾಡ್ತೇನೆ, ಮಾಡ್ತೇನೆ" ಇನ್ನೇನೂ ಹೇಳಲು ತೋಚದೆ ಜೊನ್ ಬ್ಯಾಪ್ಟಿಸ್ಟ್ ಕಿರುಚಿದ. "ಇಡೀ ಕಂಕನಾಡಿಯಲ್ಲಿ ಬರೆದು ಹಾಕ್ತೇನೆ. ನೀನು ನನ್ನನ್ನು ಹೇಗೆ 'ಕಿಲ್' ಮಾಡ್ತೀ ನಾನೂ ನೋಡ್ತೇನೆ. ಈಗ ನನ್ನ ಪಪ್ಪ ಬರ್ತಾರೆ. ಇನ್ನು ಆ ಕ್ರೇನ್ ಡ್ರೈವರನ ಮಸಲ್ಸ್ ನೋಡಿದೆಯಲ್ಲ, ಅವರು ನನ್ನ ಪಪ್ಪಾನ ಸ್ನೇಹಿತರು"

"ದೊಡ್ಡ ಗ್ಯಾಸ್‌ಪೊಟ್ ಇವ!" ಪನ್ನಾ ಅವನನ್ನು ಹಿಂದಕ್ಕೆ ತಳ್ಳಿದ. "ನಾವು ಚೆನ್ನಾಗಿ ಕ್ರಿಕೆಟ್ ಆಡ್ತಾ ಇದ್ವಿ. ಇವನೊಬ್ಬ ಬಂದು ಗೇಮ್ ಹಾಳು ಮಾಡಿಬಿಟ್ಟ. ಇವನ ತಂದೆ ಫೊರ್‌ಮೆನ್ ಅಂತೆ, ಕೂಲಿಕಾರ ಅವನು. ಈಗ ಕ್ರೇನಿನ ಡ್ರೈವರನನ್ನು ಕರೆತಂದಿದ್ದಾನೆ. ನನ್ನ ತಂದೆ ಆದ್ರೆ ಡಾಕ್ಟರ್, ಡಾಕ್ಟರ್ ನಾರಾಯಣ ಗುಂಟಲಾ. ಇವನೋ ಕ್ರೆಯೊನ್ ಹಿಡ್ಕೊಂಡು ಬಂದಿದ್ದಾನೆ ಬೇರೆ. ಇವನಿಗೆ ತಂದೆ-ತಾಯಿ ಹೆಸರು ಇಂಗ್ಲಿಷಿನಲ್ಲಿ ಬರೆಯಲಿಕ್ಕೆ ಬರುತ್ತಂತೆ. ಮೊನ್ನೆಯವರೆಗೆ 'ಅದು ಇದು ಮಾಸ್ತರನ ಲಂಗೋಟಿ ತೊಳಿ' ಅಂತ ಕನ್ನಡ ಮೀಡಿಯಮ್‌ನಲ್ಲಿ ಒದ್ದಾಡ್ತಿದ್ದ"

ಜೊನ್ ಬ್ಯಾಪ್ಟಿಸ್ಟ್ ತನ್ನ ತಂದೆ ಹೋದ ಕಡೆಗೆ ದೃಷ್ಟಿ ಹಾಯಿಸಿದ. ಅವರು ತಮ್ಮ ಸಂಗಡಿಗರೊಂದಿಗೆ ಗುಂಡು ಹಾಕಲು ಹೋಗಿದ್ದಾರೆ. ಇನ್ನು ಬೇಗನೇ ಬರಲಿಕ್ಕಿಲ್ಲ ಎನ್ನುವುದು ಅವನಿಗೆ ಚೆನ್ನಾಗಿ ಗೊತ್ತು.

"ಲೋ ಸ್ಟುಪಿಡ್ ಫೆಲೋ, ಬೇಕಿದ್ದರೆ ನಿನ್ನ ತಂದೆ ತಾಯಿಯ ಹೆಸರನ್ನು ಆ ಪೈಪ್ ಮೇಲೆ ಬರಿ," ಪನ್ನಾ ಅವನನ್ನು ಛೇಡಿಸತೊಡಗಿದ.

"ನಿನಗೆ ಧೈರ್ಯ ಇದ್ದರೆ ನಿನ್ನ ಆ ಕ್ರೆಯೊನ್ಸ್ ತಗೋ, ಆ ಪೈಪುಗಳ ಅಟ್ಟಳಿಗೆ ಹತ್ತು. ಮೇಲೆ ಇರುವ ಪೈಪಿನ ಮೇಲೆ ಅವರ ಹೆಸರು ಬರೆದುಬಿಡು. ಇನ್ನು ಬೇಕಿದ್ದರೆ ನಿನ್ನದೂ ಬರಿ. ನಾನು ಏನೂ ಮಾಡುವುದಿಲ್ಲ. ನಿಮ್ಮ ಹೆಸರು ಇಡೀ ಕಂಕನಾಡಿಗೆ ಕಾಣಲಿ, ಚೆಂದವಾಗಿ ಕಾಣಲಿ"

"ಇದು ನನ್ನಿಂದ ಸಾಧ್ಯವಿಲ್ಲ ಅಂತ ತಿಳ್ಕೊಂಡಿದ್ದೀಯಾ ಪನ್ನಾ," ಜೊನ್ ಬ್ಯಾಪ್ಟಿಸ್ಟ್ ಎರಡು ಹೆಜ್ಜೆ ಮುಂದಿಟ್ಟು ಪೈಪುಗಳನ್ನು ಪೇರಿಸಿಟ್ಟ ಅಟ್ಟಳಿಗೆಯತ್ತ ನೋಡಿದ. ಹತ್ತಿರದಲ್ಲಿಯೇ ಕೊಳವೆಗಳನ್ನು ಹೊತ್ತು ತಂದಿದ್ದ ಲಾರಿ ಮತ್ತು ಅವುಗಳನ್ನು ಇಳಿಸಿದ ಕ್ರೇನ್ ನಿಂತಿದ್ದವು.

"ನಾನು ಏನೂ ಅಂದುಕೊಳ್ಳುವುದಿಲ್ಲ, ಬಿಡು!" ಪನ್ನಾನ ಮಾತಿಗೆ ಅವನ ಸಂಗಡಿಗರು ನಕ್ಕರು. ನೋಡಿಯೇ ಬಿಡೋಣ ನಿನ್ನ ಇಂಗ್ಲಿಷ್ ಮತ್ತು ನಿನ್ನ ಬಣ್ಣದ ಕಡ್ಡಿಗಳ ಚೆಂದ!

ಜೊನ್ ಬ್ಯಾಪ್ಟಿಸ್ಟ್ ಮತ್ತೊಮ್ಮೆ ಕೊಳವೆಗಳ ಅಟ್ಟಳಿಗೆಯನ್ನು ನೋಡಿದ. ಅವುಗಳನ್ನು ಜೋಡಿಸಿಟ್ಟ ರೀತಿ ಏಣಿಯೊಂದನ್ನು ನಿಲ್ಲಿಸಿದ ಹಾಗೆ ಕಾಣುತ್ತಿತ್ತು. ಏಣಿಯನ್ನು ಹತ್ತುವುದರಲ್ಲಿ ಕಷ್ಟವೇನಿದೆ? ಅವನು ಕೈಯಲ್ಲಿ ಬಣ್ಣದ ಕಡ್ಡಿಗಳ ಡಬ್ಬಿಯನ್ನು ಹಿಡಿದುಕೊಂಡು ನೇರವಾಗಿ ಕೊಳವೆಗಳ ಅಟ್ಟಳಿಗೆಯ ಕಡೆಗೆ ನಡೆಯತೊಡಗಿದ. ದಾಪುಗಾಲಿನಲ್ಲಿ ಮೊದಲ ಹಂತವನ್ನು ಏರಿದ. ಪನ್ನಾನ ಸಂಗಡಿಗರು ಜೋರಾಗಿ ಕಿರಿಚಿಕೊಂಡರು, ಕಮಾನ್ ಗ್ಯಾಸ್ ಫೊಟ್! ಇನ್ನೂ ನಾಲ್ಕು ಹಂತಗಳಿವೆ. ಕಮಾನ್!

ಎರಡನೆಯ ಹಂತ.

ಮೂರನೆಯ ಹಂತವನ್ನು ಮುಗಿಸುವಷ್ಟರಲ್ಲಿ ಮೈದಾನಿನಲ್ಲಿದ್ದ ಯಾರೋ ಒಬ್ಬರು ಗಟ್ಟಿಯಾಗಿ ಕೂಗಿಕೊಂಡರು, ಪುಟ್ಟಾ, ಆ ಆಟ ನಿನಗೆ ಬೇಡ ಕಣೊ. ಇಳಿ ಆಚೆಗೆ. ಈ ಬೆಜ್ಮಿಯ ಮಗನಿಗೆ ಏನಾಗಿದೆ?

ನಾಲ್ಕನೆಯ ಹಂತ. ತುಸು ಕಾಲು ಜಾರಿತು. ಆದರೂ ಏನಂತೆ?

ಈಗ ಐದನೆಯ ಮತ್ತು ಕೊನೆಯ ಹಂತ.

ತನ್ನನ್ನು ಸಂಭಾಳಿಸಿಕೊಳ್ಳುತ್ತಾ ಹಿಂದೆ ತಿರುಗಿ ನೋಡಿದವನಿಗೆ ಸ್ವಲ್ಪ ತಲೆ ತಿರುಗಿದ ಹಾಗೆ ಭಾಸವಾಯಿತು.

"ಕಮಾನ್!" ಅವನಿಗೆ ಪನ್ನಾನ ಧ್ವನಿ ಕೇಳಿಸಿತು. "ಈಗ ಹೆಸರು ಬರಿ ನೋಡೋಣ!"

ಐದನೆಯ ಹಂತದಲ್ಲಿ ಇದ್ದದು ಕೇವಲ ಮೂರೇ ಕೊಳವೆಗಳು. ಅದರಲ್ಲಿ ಎಲ್ಲರಿಗೂ ಕಾಣಿಸುವ ಹಾಗೆ ರಸ್ತೆಯ ಕಡೆಗೆ ಮುಖ ಮಾಡಿರುವ ಕೊಳವೆಯನ್ನು ಆರಿಸಿ ಅವನು ತನ್ನ ಬಣ್ಣದ ಕಡ್ಡಿಗಳ ಡಬ್ಬಿಯನ್ನು ತೆರೆದ.

ಆಮೇಲೆ ಎಲ್ಲದಕ್ಕಿಂತ ಚೆನ್ನಾಗಿ ಕಾಣುವ ಬಣ್ಣದ ಕಡ್ಡಿಯನ್ನು ಕೈಗೆತ್ತಿಕೊಂಡ. ಪನ್ನಾನ ಮುಖದತ್ತ ದೃಷ್ಟಿ ಹಾಯಿಸಿ ನಸುನಕ್ಕ. ನಂತರ ಬರೆಯಲು ಪ್ರಾರಂಭಿಸಿದ.

ಬೆಂಜಮಿನ್ ಕಾಮಿಲ್ ಪಿಂಟೊ

ಈಗ ತಾಯಿಯ ಹೆಸರು. ಅವನು ನಾಲ್ಕನೆಯ ಹಂತದ ಕೊಳವೆಗಳ ಮೇಲೆ ಅಡ್ಡಗಾಲು ಇಟ್ಟು, ಐದರಲ್ಲಿದ್ದ ನಡುವಿನ ಕೊಳವೆಯನ್ನು ಆರಿಸಿ ಅದರಲ್ಲಿ ಬರೆದ

ಮೇರಿ ಮಗ್ದಲಿನ್ ಪಿಂಟೊ

ಅಷ್ಟರಲ್ಲಿ ಪನ್ನಾನ ಹುಚ್ಚಾಟದ ಚೀರುವಿಕೆ ಅವನಿಗೆ ಕೇಳಿಸಿತು.

"ಲೋ ಈಗ ನಿನ್ನ ಹೆಸರು ಬರಿಯೋ ಗ್ಯಾಸ್ ಪೊಟ್!"

ಅವರನ್ನು ಗಣನೆಗೆ ತೆಗೆದುಕೊಳ್ಳದೆ ಜೊನ್ ಬ್ಯಾಪ್ತಿಸ್ಟ್ ಕೊಳವೆಗಳ ಬದಿಗೆ ಸರಿದ.

ಹೌದು, ಅವನು ಜಯಿಸಿದ್ದಾನೆ.

ಹೊಸ ಕ್ರೆಯೊನ್ ಹೊರತೆಗೆದ. ಇನ್ನು ಬರೆಯಬೇಕಾಗಿರುವುದು ಅವನದೇ ಹೆಸರು.

ಜೊನ್ ಬ್ಯಾಪ್ಟಿಸ್ಟ್ ಪಿಂಟೊ

ಯಶಸ್ಸಿನ ನಗುವನ್ನು ಬೀರುತ್ತಾ ಪನ್ನಾನ ಸಂಗಡಿರನ್ನು ನೋಡಲೆಂದು ಅವನು ತಿರುಗಿಕೊಂಡಾಗ–

ಅವನ ಕಾಲಡಿಯ ಕೊಳವೆಗೆ ಚಕ್ರ ಮೂಡಿಬಂದಂತೆ ಭಾಸವಾಯಿತು.

ಆ ಕೊಳವೆ ಯಾಕೆ ತಿರುಗುತ್ತಿದೆ?

ದೂರದಿಂದ ಏಳೆಂಟು ಏರುಧ್ವನಿಗಳು ಕೇಳಿಬರಲಾರಂಭಿಸಿದವು.

"ಓ ದೇವರೇ, ಏನಾಯಿತು?"

ಜೊನ್ ಬ್ಯಾಪ್ಟಿಸ್ಟನಿಗೆ ಏನೋ ಉರುಳಿದ ಶಬ್ದ ಕೇಳಿಸಿತು. ನಂತರ ಅವನ ಕಾಲುಗಳು ಗಾಣಕ್ಕೆ ಸಿಕ್ಕಿಕೊಂಡ ಅನುಭವವಾಯಿತು.

❖

ಆಳವಾದ ಗುಂಡಿಯನ್ನು ತೋಡಿ ಅದರಲ್ಲಿ ಮಲಗಿಸುವ ತನಕ ಮೈದಾನಿನಲ್ಲಿ ಉರುಳಿ ಬಿದ್ದ ಕೊಳವೆಗಳು ಅದೇ ರೀತಿ ಬಿದ್ದುಕೊಂಡಿದ್ದವು. ಅವುಗಳಲ್ಲಿ ಒಂದು ಕೊಳವೆಯ ಮೇಲೆ ಎರಡು ಹೆಸರುಗಳು ಇದ್ದವು.

ಬೆಂಜಮಿನ್ ಕಾಮಿಲ್ ಪಿಂಟೊ

ಮೇರಿ ಮಗ್ದೆಲಿನ್ ಪಿಂಟೊ

ಇಂಗ್ಲಿಷ್ ತಿಳಿದವರು ಅದನ್ನು ಓದಿಕೊಂಡರು.

ಇನ್ನು ಅದೇ ಕೊಳವೆಯ ಮೂರನೇ ಭಾಗದಲ್ಲಿ ಏನೋ ಬರೆದಿತ್ತು. ಆದರೆ ಆ ಅಕ್ಷರಗಳನ್ನು ಕೆಂಪು ಕಲೆಯೊಂದು ಮರೆಮಾಡಿತ್ತು. ಗುಂಡಿಯಲ್ಲಿ ಇಳಿಸುವಾಗ ಆ ಕೆಂಪು ಕಲೆ ಕಪ್ಪುಬಣ್ಣಕ್ಕೆ ತಿರುಗಿತು.

ಅಲ್ಲಿಯೇ ಬಿದ್ದುಕೊಂಡಿದ್ದ ಬಣ್ಣಕಡ್ಡಿಗಳ ಡಬ್ಬಿಯನ್ನು ಯಾರೂ ಎತ್ತಿಕೊಳ್ಳಲಿಲ್ಲ.

ಅನುವಾದಕರು: **ವಿಕ್ಟರ್ ಡಿಸಿಲ್ವ**

❖ ❖ ❖❖ ❖

ಹರಕೆ

✍ ದಾಮೋದರ ಮಾವಜೊ

ಪುಣ್ಯ ಮತ್ತು ಪಾಪ ಇದರ ನಡುವಿನ ಗಡಿಯಲ್ಲಿ ನಿಂತು ನಾನು ನಡೆಸಿದ ಒಂದು ಕಾರ್ಯದ ಸಂಗತಿ ಇದು.

ನನಗೆ ಹೊಸದಾಗಿ ಊರಿನ ಚರ್ಚ್ ಫಾದರ್ ಆಗಿ ವರ್ಗಾವಾಯಿತು. ಆ ಚರ್ಚಿನ ಕಾರ್ಯಕಲಾಪಗಳನ್ನೆಲ್ಲ ತಿಳಿದುಕೊಂಡು, ಊರಿನ ಜನರ ಪರಿಚಯ ಮಾಡಿಕೊಂಡು ನಾನು ಮಾಡಬೇಕಾಗಿರುವ ಧಾರ್ಮಿಕ ಕೆಲಸವನ್ನು ಪ್ರಾರಂಭಿಸುವಷ್ಟರಲ್ಲಿ ಮೂರು ತಿಂಗಳೇ ಕಳೆದು ಹೋಗಿದ್ದವು.

ಚರ್ಚಿನ ಪಾದ್ರಿಯಾಗುವುದೆಂದರೆ ನಾನು ಯಾವಾಗಲೂ ಬಯಸಿದ ಸ್ಥಾನವೇ ಆಗಿದೆ. ಜನರಿಗಾಗಿ ಕೆಲಸ ಮಾಡುವುದು, ಮಕ್ಕಳೊಂದಿಗೆ ಬೆರೆಯುವುದು, ವಿದ್ಯಾರ್ಥಿಗಳಲ್ಲಿ ಸುಧಾರಣೆ ತರುವುದು, ಅವರಲ್ಲಿ ಪ್ರೋತ್ಸಾಹ ತುಂಬುವುದು, ಜನರು ನಿವೇದಿಸಿಕೊಳ್ಳುವ ಪಾಪಕೆಲಸಗಳ ಬಗ್ಗೆ ಕೇಳುವುದು, ಅವರಿಗಾಗಿ ಪ್ರಭುವಿನಲ್ಲಿ ಕ್ಷಮೆ ಬೇಡುವುದು, ದಾರಿ ತಪ್ಪಿದವರಿಗೆ ಋಜುಮಾರ್ಗ ತೋರಿಸುವುದು ಇವೆಲ್ಲವೂ ನನಗೆ ಮೊದಲಿನಿಂದಲೂ ಇಷ್ಟದ ಸಂಗತಿಗಳೇ. ಪಾದ್ರಿಯಾದ ಮೇಲಂತೂ ಇವು ನನ್ನ ಪಾಲಿಗೆ ಕರ್ತವ್ಯಗಳೇ ಆದವು. ನಾನು ಈ ಕರ್ತವ್ಯಗಳನ್ನು ಬಹು ಆಸಕ್ತಿಯಿಂದ ಪಾಲಿಸುವುದನ್ನು ಕಲಿತೆ.

ಒಮ್ಮೆ ಚರ್ಚಿನಲ್ಲಿ ಧಾರ್ಮಿಕ ಪ್ರವಚನ ನೀಡುತ್ತಿರುವಾಗ ಘಟನೆಯೊಂದನ್ನು ಜನರಿಗೆ ವಿವರಿಸಿದೆ. ಅದೇನೆಂದರೆ ಒಬ್ಬ ಹೆಂಗಸಿನ ಮಗ ಹಬ್ಬದ ಸಮಯದಲ್ಲಿ ಜಾತ್ರೆಯಲ್ಲಿ ಕಳೆದುಹೋಗಿದ್ದು ಮತ್ತು ಆಕೆ ದೇವಮಾತೆ ಮೇರಿಯಲ್ಲಿ ಹೇಳಿಕೊಂಡ ಹರಕೆಯ ಫಲವಾಗಿ ಹಲವಾರು ವರ್ಷಗಳ ಬಳಿಕ ಅವಳಿಗೆ ಆ ಮಗ ಮರಳಿ ಸಿಕ್ಕಿದ ಸತ್ಯ ಕತೆ. ಈ ಘಟನೆಯನ್ನು ನಾನು ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದೆ.

ಅಂದಿನ ನನ್ನ ಪ್ರವಚನ ಮುಗಿದ ನಂತರ ಸೇರಿದ ಜನರೆಲ್ಲ ದೇವರಿಗೆ ನಮಸ್ಕರಿಸಿ ಹೊರಟುಹೋದರು. ಆದರೆ, ಒಬ್ಬ ವಯಸ್ಸಾದ ಗಂಡಸು ಮಾತ್ರ ಇನ್ನೂ ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸುತ್ತಿದ್ದ. ಅವನ ಮಗ್ನತೆ ನನ್ನಲ್ಲಿ ಕುತೂಹಲವನ್ನು ಮೂಡಿಸಿತು. ಆದರೆ ದೇವರಲ್ಲಿ ಏನೋ ಬೇಕೆಂದು ಮೊರೆಯಿಡುತ್ತಿದ್ದಾನೆ ಎಂದು ಊಹಿಸಿ ಅವನ ಪರವಶತೆಗೆ ಭಂಗವಾಗದಂತೆ ಸದ್ದಿಲ್ಲದೆ ಒಳಗೆ ನಡೆದೆ. ಹಿರಿಯ ಗುರುಗಳನ್ನು ಮಾತನಾಡಿಸಿ, ಪೂಜೆ ಇತ್ಯಾದಿಗಳಿಗೆ ಸಿದ್ಧತೆ ಮಾಡಿಕೊಡುವ ಸಹಾಯಕನಲ್ಲಿ ಮುಂದಿನ ಪೂಜೆಗೆ ಆಗಬೇಕಾದ ತಯಾರಿಯ ಬಗ್ಗೆ ತಿಳಿಸಿದೆ. ಆಮೇಲೆ ಹೊರಬಂದು ನೋಡಿದಾಗ, ಮೊಣಕಾಲೂರಿ ಬೇಡುತ್ತಿದ್ದ ಗಂಡಸು ಚರ್ಚಿನ ದ್ವಾರದ ಮುಂದೆ ನಿಂತಿರುವುದು ನನ್ನ ಕಣ್ಣಿಗೆ ಬಿತ್ತು. ಮುಖ ನೋಡಿದರೆ ಐವತ್ತು–ಐವತ್ತೈದು ವರ್ಷದವನಂತೆ ಕಾಣಿಸುತ್ತಾನೆ.

ಆದರೆ ಚರ್ಮದ ಸುಕ್ಕುಗಳು ಅವನು ಎಪ್ಪತ್ತಕ್ಕಿಂತ ಕಿರಿಯನಲ್ಲವೆಂದು ಸಾರಿ ಹೇಳುತ್ತಿವೆ. ಅವನು ಭುಜದ ಮೇಲೆ ಕೈವಸ್ತ್ರವನ್ನು ಧರಿಸಿದ್ದನು. ಈಗ ಈ ರೀತಿ ಭುಜದ ಮೇಲೆ ಕೈವಸ್ತ್ರ ಹಾಕಿ ತಿರುಗಾಡುವವರು ಬಹಳ ಕಮ್ಮಿ. ಹೀಗಾಗಿ ಈ ಗಂಡಸಿನ ವೇಷ ತುಸು ಭಿನ್ನವಾಗಿರುವುದು ನನ್ನ ಗಮನಕ್ಕೆ ಬಂತು.

ನನಗೆ ಮುಖ ನೋಡಿ ಮನಸ್ಸನ್ನು ತಿಳಿಯುವ ವಿದ್ಯೆ ಗೊತ್ತಿಲ್ಲ. ಆದರೆ ಇವನ ಮುಖಚರ್ಯೆ ನೋಡಿ ಇವನೊಬ್ಬ ಸಭ್ಯ ಹಾಗೂ ಒಳ್ಳೆಯ ಮನಸ್ಸಿನ ವ್ಯಕ್ತಿಯಂತೆ ನನಗೆ ಕಂಡುಬಂದ.

ಅವನು ನನಗೆ ಕಾಯುತ್ತಿರುವಂತೆ ಭಾಸವಾಯಿತು. ಹತ್ತಿರ ಹೋಗುತ್ತಿದ್ದಂತೆ ತಲೆಬಾಗಿ ಗೌರವ ತೋರಿಸಿದ. ಹಿರಿಯ ವ್ಯಕ್ತಿಯೊಬ್ಬ ಕಿರಿಯನಾದ ನನಗೆ ಈ ರೀತಿ ಗೌರವ ತೋರಿಸುವುದು ನನಗೆ ಅಷ್ಟೊಂದು ಸರಿ ಬರಲಿಲ್ಲ. ಪಾದ್ರಿಯಾದರೇನಾಯಿತು ವಯಸ್ಸಿನಲ್ಲಿ ನಾನು ಚಿಕ್ಕವನಲ್ಲವೇ. ಹಾಗೆಂದು ಬಾಯಿಬಿಟ್ಟು ಹೇಳಿದರೆ ಅವನ ಮನಸ್ಸಿಗೆ ಬೇಸರವಾಗಬಹುದು ಎಂದು ಸುಮ್ಮನಿದ್ದೆ.

ನಾನು ನನ್ನ ಯೋಚನೆಗಳಿಂದ ಹೊರಬಂದು ಅವನ ಭುಜದ ಮೇಲೆ ಕೈಯಿಟ್ಟು, "ಏನಪ್ಪಾ ಹೇಗಿದ್ದಿ?" ಎಂದು ಕೇಳಿದೆ. ಇಷ್ಟು ಹೇಳಿದ್ದೇ ತಡ ಅವನ ತುಟಿಗಳು ಕಂಪಿಸಲು ಪ್ರಾರಂಭಿಸಿದವು. ಕಣ್ಣನ್ನು ಕಿರಿದಾಗಿಸಿ ಅವನು ನನ್ನ ಮುಖವನ್ನೇ ನೋಡತೊಡಗಿದ. ಅವನ ಕಣ್ಣಂಚಿನಲ್ಲಿ ನೀರು ಜಿನುಗಿತು. ನಡುಗುವ ಕೈಗಳಿಂದ ಅವನ ಮೇಲಿದ್ದ ನನ್ನ ಕೈಯನ್ನು ನೇವರಿಸುತ್ತಾ ಅವನು ಕೇಳಿದ,

"ನನ್ನ ಮಗನೇ, ನೀ.. ನೀನು ನನ್ನ ಮಗನೇ?"

ನಾನು ತುಸು ವಿಚಲಿತನಾಗಿ, "ನೀವು ನನಗೆ ಜನ್ಮ ಕೊಡದಿದ್ದರೂ ನಾನು ನಿಮ್ಮ ಮಗನಂತೆಯೇ ಅಲ್ಲವೇ?" ಎಂದು ಹೇಳಿದೆ. ನನ್ನ ಈ ಉತ್ತರದಿಂದ ಅವನು ಸಮಾಧಾನಗೊಂಡಂತೆ ನನಗೆ ಅನಿಸಲಿಲ್ಲ. ತನ್ನ ಕೈವಸ್ತ್ರದ ತುದಿಯಿಂದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಅವನು ಹೇಳಿದ,

"ಪಾದ್ರಿಗಳೇ, ನಾನು ತಪ್ಪುಮಾಡಿದೆ. ನೀವು ನನ್ನನ್ನು 'ಅಪ್ಪಾ' ಎಂದು ಹೇಳಿದಿರಲ್ಲ, ನನಗನ್ನಿಸಿತು ನೀವೇ ನನ್ನ ಮಗನೆಂದು. ನನ್ನ ಮಗ ನನಗೆ ಸಿಕ್ಕಿದನೆಂದು. ಈಗ ಅವನು ನಿಮ್ಮ ವಯಸ್ಸಿನವನೇ ಆಗಿರಬಹುದು" ಎಂದು ಹೇಳಿದ.

ನನಗೆ ಕೂಡಲೇ ಅವನ ದುಃಖ ಅರ್ಥವಾಯಿತು. ಅವನ ಮಗ ದೂರದ ಊರಿನಲ್ಲಿ ಎಲ್ಲೋ ಇರಬೇಕು. "ನಿಮ್ಮ ಮಗ ಎಲ್ಲಿದ್ದಾನೆ?" ನಾನು ಕೇಳಿದೆ. ಅವನು ತಲೆಯಾಡಿಸುತ್ತಾ, ತುಟಿಕಚ್ಚಿ ಉಮ್ಮಳಿಸಿ ಬರುತಿದ್ದ ದುಃಖವನ್ನು ತಡೆಯುವ ಪ್ರಯತ್ನ ನಡೆಸಿದ. ಆಮೇಲೆ ತುಸು ಸಾವರಿಸಿಕೊಂಡು ಹೇಳಿದ,

"ನನಗೆ ಗೊತ್ತಿಲ್ಲ. ಇದು ಯಾರಿಗೂ ಗೊತ್ತಿಲ್ಲ. ಅವನಿಗೊಬ್ಬನಿಗೆ ಮಾತ್ರ ಗೊತ್ತು. ಇನ್ಯಾರಿಗೂ ಗೊತ್ತಿಲ್ಲ" ಮೇಲಿದ್ದ ಶಿಲುಬೆಯತ್ತ ಬೊಟ್ಟು ತೋರಿದ.

ಅವನ ಮುಖ ನೋಡಿ ನನ್ನ ಭಾವನೆಗಳು ಕದಡಿದವು. ನನಗೆ ದುಃಖವಾಯಿತು. ಮರುಕ್ಷಣ, 'ಈ ಮುದುಕನಿಗೆ ಮತಿಭ್ರಮಣೆ ಏನಾದರೂ ಆಗಿರಬಹುದೇ?' ಎಂದು ಯೋಚಿಸತೊಡಗಿದೆ. ಆದರೆ ಅವನು ಅನುಭವಿಸುತ್ತಿರುವ ಕಳವಳ ತಿಳಿದು ನನ್ನ ಹೃದಯ ತುಂಬಿಬಂತು.

"ನಿನ್ನ ಹೆಸರೇನು?" ನಾನು ವಿಚಾರಿಸಿದೆ.

"ಕಮೀಲ!" ಎಂದ.

"ನೀನು ಇರುವುದೆಲ್ಲಿ?"

"ಹೊಳೆಗಿಂತ ಮೊದಲು ಸಿಗುವ ಚಾವಡಿ ಮನೆಯಲ್ಲಿ."

"ಕಮೀಲ, ಈಗ ನೀನು ಮನೆಗೆ ಹೋಗು. ನಾನು ಇನ್ನೊಮ್ಮೆ ನಿನ್ನನ್ನು ಭೇಟಿಯಾಗುತ್ತೇನೆ."

"ಪಾದ್ರಿಯವರೇ! ನೀವು ಪ್ರವಚನದಲ್ಲಿ ತಿಳಿಸಿದ ಆ ಹರಕೆಯನ್ನು ಹೊರಲು ನಾನು ಸಿದ್ಧನಿದ್ದೇನೆ" ಎಂದು ಹೇಳಿದ ಕಮೀಲ. ಇದಕ್ಕೆ ನಾನು ಏನು ಉತ್ತರಿಸಬಹುದೆಂಬ ನಿರೀಕ್ಷೆಯಲ್ಲಿ ಕಣ್ಣು ಅರಳಿಸಿಕೊಂಡು ನನ್ನ ಮುಖವನ್ನೇ ನೋಡತೊಡಗಿದ. ನಾನು ದೃಷ್ಟಿ ಹೊರಳಿಸಿ ನಿಂತೆ.

"ಆಮೇಲೆ ನನ್ನ ಮಗ ಮನೆಗೆ ಬರುತ್ತಾನಲ್ಲ?" ಎಂದು ಕೇಳಿದ.

"ಹೌದು ಬರುತ್ತಾನೆ. ದೇವರ ಮೇಲೆ ಭರವಸೆ ಇಡು. ಈಗ ಮನೆಗೆ ಹೋಗು ಕಮೀಲ" ಅವನ ಬೆನ್ನು ಚಪ್ಪರಿಸುತ್ತಾ ಹೇಳಿದೆ. ಕಮೀಲ ಮನೆಗೆ ಹೋಗಲು ಸಿದ್ಧನಾದ. ಚರ್ಚಿನ ದ್ವಾರಕ್ಕೆ ಬೆನ್ನು ಹಾಕಿ ನಡೆಯುತ್ತಾ ಅವನು ಹೇಳುತ್ತಿದ್ದ ಮಾತುಗಳು ನನ್ನ ಕಿವಿಗೆ ಬಿದ್ದವು.

"ತುಂಬಾ ದಾರಿ ನೋಡಿದೆ ಪಾದ್ರಿಗಳೇ..ಇನ್ನೂ ದಾರಿ ನೋಡುತ್ತಲೇ ಇದ್ದೇನೆ... ನಾನು ಇನ್ನೂ ದಾರಿ ನೋಡುತ್ತಲಿದ್ದೇನೆ."

ನನಗೆ ಅಲ್ಲಿಂದ ಕದಲಲು ಮನಸ್ಸಾಗಲಿಲ್ಲ. ನಾನು ಹಿಂದೆ ಬಂದು ಸಹಾಯಕನಲ್ಲಿ ಕೇಳಿದೆ, "ಈಗಷ್ಟೇ ಇಲ್ಲಿ ಜಪಮಾಲೆ ಹಿಡಿದು ನಿಂತಿದ್ದ ಗಂಡಸು ಯಾರದು? ನಿಮಗೆ ಪರಿಚಯವಿದೆಯೇ?"

"ಯಾರು ಕಮೀಲನೇ?" ಸಹಾಯಕ ಹೇಳಿದ.

"ಹೌದು. ಏನು ವಿಷಯ? ಅವನ ಮಗ ಎಲ್ಲಿದ್ದಾನೆ ?" ನಾನು ಕಳಕಳಿಯಿಂದ ವಿಚಾರಿಸಿದೆ.

"ಏನು ಹೇಳುವುದು ಪಾದ್ರಿಗಳೇ, ನಾನು ಕಮೀಲನನ್ನು ಚೆನ್ನಾಗಿ ಬಲ್ಲೆ. ಬಂಗಾರದಂತಹ ಮನುಷ್ಯ ಅವನು. ಯಾರಿಗಾದರೂ ನೆರವಾಗುವವನು. ಅವನಿಗೆ ಯಾರೂ ಇಲ್ಲ. ಪಾಪ, ಮನೆಯಲ್ಲಿ ಒಬ್ಬನೇ ಇದ್ದಾನೆ. ಅವನಿಗೊಬ್ಬ ಮಗನಿದ್ದ. ಮಗು ಹುಟ್ಟಿದಾಗಲೇ ಅವನ ಹೆಂಡತಿ ತೀರಿಕೊಂಡಳು. ನಂತರ ಕಮೀಲನೇ ಆ ಮಗುವನ್ನು ಸಾಕಿ ಬೆಳೆಸಿದ್ದು. ಸುಮಾರು ಹನ್ನೆರಡು ವರ್ಷದವನಾಗಿದ್ದಾಗ ಅವನ ಮಗ ಇದ್ದಕ್ಕಿದ್ದಂತೆ ಕಾಣೆಯಾದ. ಎಲ್ಲಿಗೆ ಹೋದ? ಏನಾದ? ಯಾರಿಗೂ ಗೊತ್ತಿಲ್ಲ. ತುಂಬಾ ಹುಡುಕಾಟವಾಯಿತು. ಹುಡುಗನ ಪತ್ತೆ ಇಲ್ಲ. ಈ ಘಟನೆ ನಡೆದು ಈಗ ಇಪ್ಪತ್ತು ವರ್ಷಗಳಾಗಿರಬಹುದು. ಇಂದಿಗೂ ಹುಡುಗನ ಯಾವುದೇ ಸುಳಿವಿಲ್ಲ. ಬದುಕಿರುವನೋ, ಸತ್ತು ಹೋಗಿರುವನೋ ಯಾವುದೂ ಗೊತ್ತಿಲ್ಲ."

"ಕಮೀಲಾ ಇನ್ನೂ ಅವನ ದಾರಿ ಕಾಯುತ್ತಿದ್ದಾನಾ?" ನಾನು ಆಶ್ಚರ್ಯದಿಂದ ಕೇಳಿದೆ.

"ಹೌದು, ತನ್ನ ಮಗ ಹಿಂತಿರುಗಿಬರುತ್ತಾನೆ ಎಂಬ ಆಸೆ ಇನ್ನೂ ಅವನಲ್ಲಿ ಇದೆ. ಅದೇ ನಿರೀಕ್ಷೆಯಲ್ಲಿ ಮುದುಕನಾಗಿದ್ದಾನೆ, ಕೆಲವೊಮ್ಮೆ ಹುಚ್ಚನಂತೆ ಕೂಡಾ ಆಡುತ್ತಾನೆ" ಮತ್ತೆ ಮುಂದುವರಿದು ಅವನು ಹೇಳತೊಡಗಿದ, "ಈ ಘಟನೆಗೆ ಒಂದು ದೊಡ್ಡ ಇತಿಹಾಸ ಉಂಟು. ಕಮೀಲ ಮಗನಿಗಾಗಿ ಹುಡುಕಾಡದ ತಾಣವಿಲ್ಲ. ಬೊಂಬಾಯಿಯವರೆಗೂ ಹೋಗಿ ಬಂದದ್ದಾಯ್ತು. ಹಡಗಿನಿಂದ ಬಂದಿಳಿದ ಪ್ರತಿಯೊಬ್ಬರನ್ನೂ, 'ನನ್ನ ಮಗನನ್ನು ನೋಡಿದ್ದೀರಾ?' ಎಂದು ಈಗಲೂ ವಿಚಾರಿಸುತ್ತಿರುತ್ತಾನೆ. ಕಮೀಲ ಹೃದಯವಂತ. ತನ್ನ ಮಗ ಕಳೆದುಹೋದ ಮೇಲೆ ಐದಾರು ಬಡಹುಡುಗರನ್ನು ತನ್ನ ಮನೆಯಲ್ಲಿ ಸಾಕಿದ. ಆದರೆ ಅವರೆಲ್ಲರೂ ಅವನನ್ನು ಒದ್ದು ಓಡಿಹೋದರು."

"ಅರೆ, ಇವನ್ಯಾಕೆ ಹುಡುಗರನ್ನು ಸಾಕುವ ಉಸಾಬರಿಗೆ ಹೋದ? ಅದೂ ಐದು ಹುಡುಗರನ್ನು!" ನಾನು ಕೇಳಿದೆ.

"ಅದು ಹುಡುಗರನ್ನು ಎಂದರೆ ಒಮ್ಮೆಲೇ ಅಲ್ಲ. ಒಬ್ಬರಾದ ಮೇಲೆ ಒಬ್ಬರಂತೆ. ಹುಡುಗರನ್ನು ಸಾಕುವ ವಿಚಾರ ಅವನಿಗೇಕೆ ಬಂತೋ ಅವನೇ ಬಲ್ಲ. ಯಾವುದಾದರೂ ಬಡ ಅನಾಥ ಹುಡುಗನಿಗೆ ಅನ್ನ, ನೀರು ಕೊಟ್ಟು ಸಾಕಿದರೆ ಕಳೆದುಹೋಗಿರುವ ತನ್ನ ಮಗನಿಗೂ ದೇವರು ಬದುಕುವ ಸೌಲಭ್ಯ ಕಲ್ಪಿಸುತ್ತಾನೆ ಎಂದು ನಂಬಿದ್ದನೆಂದು ತೋರುತ್ತದೆ. ಆದರೆ ಅವನು ಸಾಕಿದ ಹುಡುಗರಿಗೆ ಮಾತ್ರ ಬಹುಬೇಗ ಮದ ಬರುತ್ತಿತ್ತು. ಅವನು ಹಾಕಿದ ಕೂಳು ತಿಂದು ತೇಗಿ ಕೊನೆಗೆ ಐದು ಜನ ಅವನಿಗೇ ಕೈಕೊಟ್ಟು ಓಡಿಹೋದರು."

ಕಮೀಲನ ವೃತ್ತಾಂತ ತಿಳಿದು ನನ್ನ ಹೃದಯ ಭಾರವಾಯಿತು. ಆ ದಿನವಿಡೀ ಅವನ ಕುರಿತು ಯೋಚಿಸುವುದರಲ್ಲಿಯೇ ಕಳೆದು ಹೋಯಿತು. ಮರುದಿನ ಚರ್ಚಿನ

ಪ್ರವಚನದ ಸಮಯದಲ್ಲಿ ಅವನು ನನ್ನ ಕಣ್ಣಿಗೆ ಬೀಳಲಿಲ್ಲ. ನಾನು ಮಧ್ಯಾಹ್ನ ಎದ್ದು ಸೈಕಲ್ ಹತ್ತಿ ಕಮೀಲನ ಮನೆ ದಾರಿ ಹಿಡಿದೆ. ಚಾವಡಿಯಲ್ಲಿ ತನ್ನ ಕೈವಸ್ತ್ರವನ್ನು ಹೊದ್ದು ಮಲಗಿದ್ದ ಕಮೀಲ ನನ್ನನ್ನು ನೋಡಿದ ಕೂಡಲೇ ದಡಬಡಿಸಿ ಎದ್ದು ಕುಳಿತ.

"ಯಾರು? ನನ್ನ ಮಗ ಬಂದನೇ! ಬಾ, ಬಾ ಜುಜೆ ಬಾ!" ಎಂದು ಕರೆದ. ಮನೆಬಾಗಿಲಿಗೆ ಪಾದ್ರಿ ಬಂದಿರುವುದನ್ನು ನೋಡಿ ಅವನು ಗೌರವಸೂಚಕವಾಗಿ ಎದ್ದು ಕುಳಿತಿರಬೇಕೆಂಬ ಭಾವನೆಯಲ್ಲಿದ್ದ ನನಗೆ ತನ್ನ ಮಗ ಬಂದನೆಂದು ಊಹಿಸಿಕೊಂಡದ್ದು ತಿಳಿದು ಆಶ್ಚರ್ಯವಾಯಿತು. ನನ್ನನ್ನು ತನ್ನ ಮಗನೆಂದು ಯಾಕೆ ಕರೆಯುತ್ತಾನೋ ನನಗೆ ತಿಳಿಯಲಿಲ್ಲ. ನಾನು ಧರಿಸಿದ ಬಿಳಿ ನಿಲುವಂಗಿ ನೋಡಿಯಾದರೂ ನಾನು ಫಾದರ್ ಎನ್ನುವುದು ಇವನಿಗೆ ಯಾಕೆ ಅನಿಸುವುದಿಲ್ಲ? ನನಗೆ ಪಿಚ್ಚೆನಿಸಿತು.

"ಕಮೀಲಪ್ಪಾ, ನಾನು ಜುಜೆ ಅಲ್ಲ. ನಾನು ಪಾದ್ರಿ. ಚರ್ಚಿನ ಗುರು. ತಿಳಿಯಿತೇ?"

ಕಮೀಲಾ ನಿರ್ವಿಣ್ಣನಾದ. ಕೈಕಾಲುಗಳಲ್ಲಿ ಶಕ್ತಿಗುಂದಿದವನಂತೆ ಉತ್ಸಾಹ ಕಳೆದುಕೊಂಡು ಮಾತಿಲ್ಲದೆ ಕುಳಿತುಕೊಂಡ. ಅಷ್ಟರಲ್ಲಿ ಪಕ್ಕದ ಮನೆಯ ಹೆಂಗಸು ಬಂದು ವಿವರಿಸಿ ಹೇಳಿದಳು, "ಇತ್ತೀಚಿಗೆ ಅವನ ಮನಸ್ಸು ಸರಿ ಇಲ್ಲ. ಯಾರಾದರೂ ಬಂದರೆ ತನ್ನ ಮಗನೇ ಬಂದಿದ್ದಾನೆ ಎಂದು ಪುಟಿದೇಳುತ್ತಾನೆ. ಅವನಲ್ಲ ಎಂದು ತಿಳಿದ ಕೂಡಲೇ ಮುಖ ಬಾಡಿಸಿಕೊಂಡು ಕೂರುತ್ತಾನೆ."

ಅವಳ ಮಾತುಗಳು ನನ್ನ ಹೃದಯಕ್ಕೆ ನಾಟಿದವು. ನಾನು ಕಮೀಲನ ಸನಿಹ ಕುಳಿತು ಕೇಳಿದೆ,

"ಕಮೀಲಪ್ಪಾ, ನೀನು ಇವತ್ತು ಚರ್ಚಿಗೆ ಯಾಕೆ ಬಂದಿಲ್ಲ?"

"ದಿನಾ ಹೋಗುತ್ತೇನಲ್ಲ. ಇವತ್ತು ಒಂದು ದಿನ ಮಲಗಿಯೇ ಇದ್ದೇನೆ"

"ಏನೂ ಪರವಾಗಿಲ್ಲ, ದುರ್ಬಲರ, ದುಃಖಿತರ ಮನೆಗೆ ದೇವರು ಬರುತ್ತಾನೆ, ಚಿಂತಿಸಬೇಡ" ನಾನಂದೆ. ಕಮೀಲ ಹೌದೌದು ಎನ್ನುವಂತೆ ಗೋಣು ಅಲ್ಲಾಡಿಸಿದ. ಒಂದು ಕ್ಷಣ ಸುಮ್ಮನಿದ್ದು, ಮತ್ತೆ ಹೇಳಿದ, ನಾನು ದೇವಮಾತೆಗೆ 'ಹರಕೆ' ಹೊತ್ತಿದ್ದೇನೆ.

"ಒಳ್ಳೇದು ಮಾಡಿದೆ" ಎಂದು ಹೇಳಿದೆ. ನಾನು ಮತ್ತೂ ಮುಂದುವರಿದು, 'ಹರಕೆ ಹೊತ್ತಿರುವೆಯಲ್ಲ ಇನ್ನು ನಿನ್ನ ಮಗ ಜುಜೆ ಬರುತ್ತಾನೆ. ಖಂಡಿತಾ ಬರುತ್ತಾನೆ ಕಾಯುತ್ತಿರು'. ಎಂಬ ಭರವಸೆಯ ನುಡಿಗಳನ್ನು ಹೇಳಬಹುದೆಂಬ ನಿರೀಕ್ಷೆಯಲ್ಲಿ ಅವನು ನನ್ನ ಮುಖವನ್ನೇ ನೋಡುತ್ತಿದ್ದ. ಆದರೆ ಅಂತಹ ಮಾತುಗಳು ನನ್ನ ಬಾಯಿಯಿಂದ ಹೊರಡಲಿಲ್ಲ.

"ಇನ್ನು ನೆನ್ನ ಜುಜೆ ಬರಬಹುದು. ಇನ್ನು ಬರಬಹುದು." ಕಮೀಲ ತನ್ನಷ್ಟಕ್ಕೆ ಗೊಣಗಾಡಿದ.

ಆ ದಿನದ ನಂತರ ನಾನು ಕಮೀಲನ ಮನೆಗೆ ಹೋಗಲಿಲ್ಲ. ಕಾರಣ ನನಗೆ ಭಯ. 'ಹರಕೆ ಹೊತ್ತಿದ್ದೇನಲ್ಲ ಇನ್ನೂ ಯಾಕೆ ನನ್ನ ಜುಜೆ ಬರಲಿಲ್ಲ' ಎಂದೇನಾದರೂ ಅವನು ಪ್ರಶ್ನೆ ಹಾಕಿದರೆ ಎಂದು ನನಗೆ ಹೆದರಿಕೆ. ಅಂದು ನಾನು ಅವನಿಗೆ 'ದೇವರ ಮೇಲೆ ಭರವಸೆ ಇಡು ಮತ್ತು ದಾರಿ ಕಾಯುತ್ತಿರು' ಎಂದು ಹೇಳಿದ್ದೆ. ನನ್ನ ಮಾತಿಗೆ ಬೆಲೆ ಕೊಟ್ಟು ಅವನು ಮಗನಿಗಾಗಿ ಕಾಯುತ್ತಿದ್ದಾನೆ. ಆದರೆ ತನ್ನ ಹರಕೆ ಇನ್ನೂ ಯಾಕೆ ಫಲಿಸಲಿಲ್ಲ ಎಂದು ಅವನು ನನ್ನನ್ನು ಕೇಳುವುದು ಸಹಜ. ಪಾದ್ರಿಯಾಗಿ ಉತ್ತರಿಸಲು ನನಗೆ ಕಷ್ಟವೆನಿಸುವ ಪ್ರಶ್ನೆ ಇದು. ಅಂಥಾ ಮುಜುಗರದ ಪ್ರಸಂಗ ಬೇಡವೇ ಬೇಡವೆಂದು ನಾನು ಅವನನ್ನು ಭೇಟಿಯಾಗಲು ಹೋಗಲೇ ಇಲ್ಲ. ಆದರೂ ಇತರರಲ್ಲಿ ಅವನ ಕುರಿತು ವಿಚಾರಿಸುತ್ತಾ ಇದ್ದೆ. ಅವನ ಆರೋಗ್ಯ ಕ್ಷೀಣಿಸುತ್ತಿದೆ. ಬುದ್ಧಿಸ್ತಿಮಿತ ಕಳೆದುಕೊಂಡಿದೆ. ಇನ್ನೇನು ಮಗ ಬರುತ್ತಾನೆ ಎಂಬ ನಂಬಿಕೆ ಅವನಲ್ಲಿ ದಿನದಿಂದ ದಿನಕ್ಕೆ ಬಲವಾಗುತ್ತಿದೆ ಎಂದು ನಾನು ತಿಳಿದುಕೊಂಡೆ.

ಮಳೆಗಾಲ ಹತ್ತಿರ ಬಂತು. ಶಾಲೆಯ ರಜೆ ಕಳೆದು ಮಕ್ಕಳು ಹೊಸ ತರಗತಿಗೆ ಹೋದರು. ಒಂದು ದಿನ ಚಂದಾವರದ ಹೆಂಗಸೊಬ್ಬಳು ತನ್ನ ಮಗನನ್ನು ಕರೆದುಕೊಂಡು ಚರ್ಚಿಗೆ ಬಂದಳು. ಆಗ ಹಿರಿಯ ಗುರುಗಳು ಹೊರಗೆ ಹೋಗಿದ್ದರು. ನಾನು ಅವಳನ್ನು ಮಾತನಾಡಿಸಿದೆ. ಬಡತನದಿಂದಾಗಿ ಮಗನನ್ನು ಸಾಕಲಾರದೆ ಅವನನ್ನು ಚರ್ಚಿನಲ್ಲಿ ಇಡಲು ಅವಳು ಬಂದಿದ್ದಳು. "ಈ ಹುಡುಗನನ್ನು ನೀವು ಇಟ್ಟುಕೊಂಡರೆ ನನಗೆ ಉಪಕಾರವಾದೀತು. ನೀವು ಹೇಳಿದ ಎಲ್ಲಾ ಕೆಲಸಗಳನ್ನು ಇವನು ಮಾಡುತ್ತಾನೆ" ಎಂದಳು. ಇಂತಹ ಇನ್ನೂ ಕೆಲವು ಹುಡುಗರು ಚರ್ಚಿನಲ್ಲಿದ್ದರು. ನಾನು ಅವಳ ಮಗನನ್ನು ಚರ್ಚಿನಲ್ಲಿ ಇರಿಸಿಕೊಳ್ಳಲು ಒಪ್ಪಿ ಅವಳನ್ನು ಕಳುಹಿಸಿಕೊಟ್ಟೆ.

ಹದಿನಾಲ್ಕು ವರ್ಷದ ಆ ಹುಡುಗ ಚುರುಕಾಗಿದ್ದ. ಅವನನ್ನು ಒಳಗೆ ಕರೆದು, "ನಿನ್ನ ಹೆಸರೇನು?" ಎಂದು ಕೇಳಿದೆ. ಅವನು "ಜುಜೆ" ಎಂದು ಹೇಳಿದ. ಹೆಸರು ಕೇಳಿದಾಕ್ಷಣ ಥಟ್ಟನೆ ನನಗೆ ಕಮೀಲನ ನೆನಪಾಯಿತು. ಅವನ ಮಗನ ಹೆಸರು ಕೂಡಾ ಜುಜೆ ಅಲ್ಲವೇ? ಆಗ ನನಗೊಂದು ಉಪಾಯ ಹೊಳೆಯಿತು. ಕಮೀಲ ಹೇಗೂ ಅರಳು–ಮರಳಾಗಿದ್ದಾನೆ. ಮನೆಗೆ ಯಾರು ಬಂದರೂ ಮಗ ಬಂದಿದ್ದಾನೆ ಎಂದೇ ತಿಳಿಯುತ್ತಾನೆ. ಈ ಹುಡುಗನನ್ನು ಮಗನೆಂದು ಹೇಳಿ ಕಮೀಲನ ಮನೆಗೆ ಕರೆದುಕೊಂಡು ಹೋದರೆ ಕಮೀಲನ ಸ್ಥಿತಿ ಸುಧಾರಿಸಬಹುದು. ಹುಡುಗನಿಗೆ ಕೂಡಾ ಒಂದು ನೆಲೆಯಾಗಬಹುದು, ಕಮೀಲನಿಗೂ ಆಧಾರವಾಗಬಹುದು ಎಂಬುದು ನನ್ನ ಲೆಕ್ಕಾಚಾರ. ಈ ವಿಚಾರ ಮನಸ್ಸಿಗೆ ಹೊಳೆದದ್ದೇ ತಡ ನನ್ನ ಆತುರ ಎಲ್ಲೆ ಮೀರಿತು. ಸಣ್ಣ ಪ್ರಯೋಗವೊಂದನ್ನು ಮಾಡುವ ಉತ್ಸಾಹದಲ್ಲಿ ಕೂತಲ್ಲಿ ಕೂರಲಾರದೆ ತಳಮಳಿಸಿದೆ. ಹುಡುಗನನ್ನು ವಿಶ್ವಾಸಕ್ಕೆ ತೆಗೆದುಕೊಂಡೆ. ಕಮೀಲನನ್ನು 'ಅಪ್ಪಾ' ಎಂದು ಸಂಬೋಧಿಸಲು ತಿಳಿಸಿದೆ. ಮಗನಾಗಿ

ಅವನ ನಡವಳಿಕೆ ಹೇಗಿರಬೇಕೆಂದು ಕಲಿಸಿದೆ. ನಂತರ ಈ ಜುಜೆಯನ್ನು ಕರೆದುಕೊಂಡು ಕಮೀಲನ ಮನೆಗೆ ಹೋದೆ.

ಸಂಜೆಯ ಹೊತ್ತು. ಕಮೀಲ ಒಲೆಗೆ ಗಾಳಿ ಊದುತ್ತಿದ್ದ. "ಕಮೀಲಪ್ಪಾ, ಇಲ್ಲಿ ನೋಡು ಯಾರು ಬಂದಿದ್ದಾರೆ" ನಾನು ಹೊರಗಿನಿಂದಲೇ ಕೂಗು ಹಾಕಿದೆ. ಕುಕ್ಕರು ಕಾಲಿನಲ್ಲಿ ಕುಳಿತಿದ್ದ ಕಮೀಲ ಲಗುಬಗನೆ ಬಟ್ಟೆಗೆ ಕೈ ಒರೆಸಿಕೊಳ್ಳುತ್ತಾ ಎದ್ದು ಬಂದ, "ಯಾರು ಬಂದಿದ್ದಾರೆ?"

"ಇಲ್ಲಿ ನೋಡು, ಜುಜೆ ಬಂದಿದ್ದಾನೆ" ನಾನು ಜುಜೆಯನ್ನು ಮುಂದೆ ತಳ್ಳಿದೆ. ನಾನು ಹೇಳಿಕೊಟ್ಟಂತೆ ಅವನು "ಅಪ್ಪಾ" ಎಂದು ಕರೆದ.

"ನನ್ನ ಮಗ ಬಂದನೇ!" ಕಮೀಲಾ ಹುರುಪಿನಿಂದ ವಾಲುತ್ತಾ ಮುಂದೆ ಬಂದ. ಚಾವಡಿ ತುಂಬಾ ಸೂರ್ಯಕಿರಣಗಳು ಹರಡಿಕೊಂಡಿದ್ದವು. ಕಮೀಲಾ ಜುಜೆಯ ಮೈದಡವಿದ. ಆಮೇಲೆ ಅವಿಶ್ವಾಸದ ಕಣ್ಣುಗಳಿಂದ ನನ್ನತ್ತ ನೋಡಿ ಹೇಳಿದ, "ಯಾರು ಪಾದ್ರಿಗಳೇ, ಇವನು ಜುಜೆಯೆಂದು ಹೇಳಿದವರು ಯಾರು? ನನಗೆ ಮೋಸ ಮಾಡಬೇಡಿ. ನನ್ನ ಜುಜೆ ಈಗ ದೊಡ್ಡವನಾಗಿರಬಹುದು. ನಿಮ್ಮಷ್ಟು ದೊಡ್ಡವನು."

ನಾನು ಅಂದುಕೊಂಡಂತೆ ಕಮೀಲನಿಗೆ ಪೂರ್ತಿ ಅರಳು-ಮರಳಾಗಿಲ್ಲವೆಂಬುದು ನನಗೆ ಖಾತ್ರಿಯಾಯಿತು. ಅವನು ನನ್ನಷ್ಟೇ ಆರೋಗ್ಯವಂತನಾಗಿದ್ದಾನೆ ಎಂಬುದು ತಿಳಿಯಿತು.

"ಪಾದ್ರಿಗಳೇ, ನನ್ನ ಮಗ ಈಗ ದೊಡ್ಡವನಾಗಿರುತ್ತಾನೆ. ನಾನು ಅವನನ್ನು ಗುರುತಿಸಲಾಗದಿದ್ದರೂ ಅವನು ನನ್ನನ್ನು ಗುರುತಿಸುತ್ತಾನೆ. ನೋಡಿ ಈ ಕೈವಸ್ತ್ರವನ್ನು ನಾನು ಯಾಕೆ ಹೀಗೆ ಭುಜದ ಮೇಲೆ ಹಾಕುತ್ತೇನೆ ನಿಮಗೆ ತಿಳಿದಿದೆಯೇ? ಯಾರು ಏನೇ ಹೇಳಲಿ ನಾನು ಮಾತ್ರ ಈ ಕೈವಸ್ತ್ರವನ್ನು ಬಿಡುವುದಿಲ್ಲ. ಏಕೆಂದರೆ ಅವನು ಮನೆ ಬಿಡುವಾಗ ನಾನು ಹೀಗೆ ಕೈವಸ್ತ್ರವನ್ನು ಭುಜದ ಮೇಲೆ ಹಾಕಿಕೊಂಡಿದ್ದೆ. ಅವನು ಎಲ್ಲಾದರೂ ನನ್ನನ್ನು ಕಂಡರೆ ಕೂಡಲೇ ಗುರುತು ಹಿಡಿಯುತ್ತಾನೆ" ಒಂದೇ ಸವನೆ ಮಾತನಾಡಿದ ಕಮೀಲ ಸುಸ್ತಾದ. ನನಗೆ ಏನು ಹೇಳಬೇಕೆಂದೇ ತೋಚಲಿಲ್ಲ.

"ಪಾದ್ರಿಗಳೇ, ನನ್ನ ಜುಜೆ ಬರುತ್ತಾನೆ. ನಾನು ಮರಿಯಮ್ಮನಲ್ಲಿ ವಿಶ್ವಾಸವಿಟ್ಟಿದ್ದೇನೆ. ಅವನು ಬರದೇ ಇರಲಾರ. ನಾನು ದಾರಿ ಕಾಯುತ್ತೇನೆ.. ಬಂದೇ ಬರುತ್ತಾನೆ. ಮತ್ತು.. ಮತ್ತು.. ಅವನನ್ನು ನೋಡದೆಯೇ ನಾನು ಸಾಯುವುದಿಲ್ಲ, ನೋಡುತ್ತಿರಿ" ಅಷ್ಟು ಹೇಳಿದವನೇ ಕಮೀಲ ಕಣ್ಣೀರಿಡಲು ಪ್ರಾರಂಭಿಸಿದ. ನನಗೆ ನಾಚಿಕೆಯಾಯಿತು. ಅದು ನನ್ನ ಪ್ರಯೋಗ ಫಲಕಾರಿಯಾಗಲಿಲ್ಲವೆಂದಲ್ಲ. ಕಮೀಲನು ದೇವರ ಮೇಲೆ ಇಟ್ಟ ಭರವಸೆಯನ್ನು ಕಂಡು ನನಗೆ ನಾಚಿಕೆಯಾಯಿತು. ಅವನ ಅಚಲ ವಿಶ್ವಾಸ ಕಂಡು ನಾನೂ ಒಂದು ಕ್ಷಣ ಯೋಚಿಸಿದೆ, "ಜುಜೆ ಬರಬಹುದು."

ನನ್ನ ನಟನೆಯ ಜುಜೆಯನ್ನು ಕರೆದುಕೊಂಡು ಚರ್ಚಿಗೆ ಬಂದೆ. ಇದು ನಡೆದು ಸುಮಾರು ೧೦-೧೫ ದಿನಗಳು ಕಳೆದಿರಬಹುದು. ಅಕಸ್ಮಾತ್ತಾಗಿ ಒಂದು ದಿನ ಸಂಜೆ ಕಮೀಲನ ಪಕ್ಕದ ಮನೆಯ ಹೆಂಗಸು ಓಡುತ್ತಾ ಬಂದು,

"ಪಾದ್ರಿಗಳೇ, ಕಮೀಲ ಸಾಯುತ್ತಿದ್ದಾನೆ. ಬೇಗ ಬನ್ನಿ. ಸಾಯುವಾಗ ಮಾಡುವ ವಿಧಿಗಳನ್ನು ಪೂರೈಸಿ. ಈಗಲೇ ಬನ್ನಿ" ಎಂದಳು

"ಸಾಯುತ್ತಾನೆ! ಯಾವ ಡಾಕ್ಟ್ರು ಹೇಳಿದ್ದು?" ನಾನು ಅವಳನ್ನು ಕೇಳಿದೆ.

"ಅಲ್ಲ ಡಾಕ್ಟ್ರು ಹೇಳಿಲ್ಲ. ಆದರೆ ಅವನು ರಾತ್ರಿ ಕಳೆಯುತ್ತಾನೆಂದು ನನಗೆ ಕಾಣುವುದಿಲ್ಲ" ಎಂದಳು. ಇದನ್ನು ಕೇಳಿ ನನಗೆ ಸಿಟ್ಟು ಬಂತು. ಇವರಿಗೆಲ್ಲಾ ಎಲ್ಲದಕ್ಕೂ ಮೊದಲು ಪಾದ್ರಿಯೇ ಬರಬೇಕು. ಸಾಯುವವನನ್ನು ನೋಡಲು ಡಾಕ್ಟರ್ ಬರಬೇಕಲ್ಲವೇ, ಪಾದ್ರಿ ಯಾಕೆ ಬೇಕು?

"ನೀನು ಮೊದಲು ಹೋಗಿ ಡಾಕ್ಟರರನ್ನು ಕರೆದುಕೊಂಡು ಹೋಗು. ನಾನು ಬರಹೇಳಿದ್ದೇನೆ ಅಂತ ಹೇಳು" ಎನ್ನುತ್ತಾ, ಆಮೇಲೆ "ನಾನು ಹಿಂದೆಯೇ ಬರುತ್ತೇನೆ" ಎಂದು ಸೇರಿಸಿದೆ.

ಅವಳು ಹೋದಳು. ನನ್ನ ತಲೆ ಕೆಟ್ಟು ಹೋಯಿತು. ಕಮೀಲಾ ಸಾಯುತ್ತಾನೆ ಎಂಬ ಸಂಗತಿ ಕೇಳಿದ ಕೂಡಲೇ, 'ಜುಜೆ ಬರೆದೇ ನಾನು ಸಾಯುವವನಲ್ಲ' ಎಂಬ ಅವನ ಮಾತುಗಳು ನನ್ನ ಕಿವಿಯಲ್ಲಿ ಪ್ರತಿಧ್ವನಿಸಿದವು. ಮರಣ ಬಂದು ಅವನ ಹೊಸ್ತಿಲಲ್ಲಿ ಕಾಯುತ್ತಿದೆ, ಆದರೂ ಆಸೆ ಎಂಬುದು ಅವನನ್ನು ಬಿಡುತ್ತಿಲ್ಲ ಎನಿಸಿತು.

ಅಗತ್ಯದ ಕೆಲವು ಕೆಲಸಗಳನ್ನು ಮುಗಿಸಿ ನಾನು ಬೇಗಬೇಗನೇ ಕಮೀಲನ ಮನೆಯ ಕಡೆಗೆ ಹೆಜ್ಜೆ ಹಾಕಿದೆ. ಅಷ್ಟರಲ್ಲಿ ಕತ್ತಲಾವರಿಸಿತು. ತಪಾಸಣೆ ಮುಗಿಸಿದ ಡಾಕ್ಟರ್ ನನ್ನನ್ನು ಬಾಗಿಲಿನಲ್ಲಿಯೇ ಎದುರುಗೊಂಡರು. ನನ್ನನ್ನು ನೋಡಿ, "ಓಲ್ಡ್ ಏಜ್, ವಯಸ್ಸಾಯಿತಲ್ಲ. ಅಸೌಖ್ಯ ಜೋರಾಗಿದೆ. ನಾನು ಇಂಜೆಕ್ಷನ್ ಕೊಟ್ಟಿದ್ದೇನೆ. ಆದರೂ ನೀವು ವಿಧಿಗಳನ್ನು ನೆರವೇರಿಸುವುದು ಒಳ್ಳೇಯದು" ಎಂದು ಹೇಳಿ ಹೋದರು. ನಾನು ಚಾವಡಿಯಲ್ಲಿ ನಿಂತಿದ್ದೆ. ಪಕ್ಕದ ಮನೆಯ ಹೆಂಗಸು ಬಾಗಿಲಲ್ಲಿ ನಿಂತು ನೋಡುತ್ತಿದ್ದಳು. ನಾನು ಅವಳಲ್ಲಿ ಕೇಳಿದೆ, "ಮಲಗಿದ್ದಾನಾ?". ಅದಕ್ಕೆ ಅವಳು, "ಇಲ್ಲ ಎಚ್ಚರದಿಂದಿದ್ದಾನೆ. ಈಗಲೂ ಹುಡುಗನದೇ ನೆನಪು" ಎಂದಳು. "ನೀನು ಹೋಗಿ ಊಟ ಮಾಡಿ ಬಾ. ಇಲ್ಲಿ ನಿಂತು ಮಾಡುವುದೇನೂ ಇಲ್ಲ" ಎಂದು ಹೇಳಿದೆ.

ಅವಳು ಅತ್ತ ಹೋದೊಡನೆ ನಾನು ಮನೆಯೊಳಗೆ ಹೋದೆ. ದೀಪದ ಬೆಳಕು ಮಂದವಾಗಿದ್ದು ಕೋಣೆಯ ಒಳಗೆ ಕತ್ತಲೆ ಇತ್ತು. ಹಳೆಯ ಪೆಟ್ಟಿಗೆಯ ಮೇಲೆ ಕಮೀಲ ಮಲಗಿಕೊಂಡಿದ್ದ. ನಾನು ಆಚೀಚೆ ದೃಷ್ಟಿ ಹಾಯಿಸಿದೆ. ಅನಂತವಾಗಿ ಹರಡಿಕೊಂಡಿದ್ದ ಕತ್ತಲೆ ಹತ್ತಿರ ಯಾರು ಬಂದು ನಿಂತರೂ ತಿಳಿಯದಷ್ಟು ಗಾಢವಾಗಿತ್ತು. ನಾನು

ತರಾತುರಿಯಿಂದ ಧರಿಸಿದ್ದ ನಿಲುವಂಗಿಯನ್ನು ಕಳಚಿ ಅಲ್ಲಿದ್ದ ಚಾಪೆಯ ಮೇಲೆ ಎಸೆದೆ. ಬುಶ್ ಕೋಟ್, ಅಂಗಿಯಲ್ಲಿದ್ದ ನಾನು ಕೋಣೆಯೊಳಗೆ ಪ್ರವೇಶ ಮಾಡಿದೆ.

"ಅಪ್ಪಾ" ಮೃದುವಾಗಿ ಕರೆದೆ. ನನ್ನ ಕರೆ ಕಿವಿಗೆ ಬಿದ್ದೊಡನೆ ಅವನು ಕಣ್ಣರಳಿಸಿ, 'ಏನಾಗುತ್ತಿದೆ' ಎಂಬುದನ್ನು ಗ್ರಹಿಸಲು ಪ್ರಯತ್ನಿಸಿದ. "ಅಪ್ಪಾ ನಾನು ಜುಜೆ ಬಂದಿದ್ದೇನೆ" ಅವನು ಮಲಗಿದ್ದಲ್ಲಿ ಹೆಜ್ಜೆ ಹಾಕುತ್ತಾ ಮತ್ತೊಮ್ಮೆ ಹೇಳಿದೆ. ಕಮೀಲ ಏಳಲು ಶ್ರಮ ಪಡುತ್ತಿದ್ದ.

"ನನ್ನ ಮಗನೇ,.. ಜುಜೆ ನನ್ನ ಮಗೂ..." ಅಷ್ಟು ಹೇಳಿದವನೇ ಮೈಯಲ್ಲಿ ಯಾವುದೋ ಶಕ್ತಿ ಪ್ರವಹಿಸಿದಂತೆ ಏಕಾಏಕಿ ಎದ್ದು ಕುಳಿತ. "ಅಪ್ಪಾ" ನಾನು ಅವನ ಭುಜದ ಮೇಲೆ ತಲೆ ಇಟ್ಟೆ. ಕಮೀಲನ ಸ್ಥಿತಿ ನೋಡಿ ನನ್ನ ಕಣ್ಣುಗಳು ಮಂಜಾದವು. ನನಗೆ ಅಳು ತಡೆಯಲಾಗಲಿಲ್ಲ. ದೀಪ ಚೆಲ್ಲುತ್ತಿದ್ದ ಮಂದ ಬೆಳಕಿನಲ್ಲಿ ಕಮೀಲ ನನ್ನನ್ನು ಸರಿಯಾಗಿ ನೋಡಬೇಕೆಂದು ಕಣ್ಣರಳಿಸಿದ. ನಾನು ಯಾರು ಎಂಬುದು ಅವನಿಗೆ ಅಷ್ಟು ಸುಲಭವಾಗಿ ತಿಳಿಯಬಹುದೆಂಬ ಹೆದರಿಕೆ ನನಗಿರಲಿಲ್ಲ. ನಾನು ಕಮೀಲನನ್ನು ಗಟ್ಟಿಯಾಗಿ ತಬ್ಬಿಕೊಂಡೆ. ಕಮೀಲನ ಕೈಗಳು ನನ್ನ ಬೆನ್ನು ನೇವರಿಸುತ್ತಿದ್ದವು. ಅವನ ಮೈ ಜ್ವರದಿಂದ ಕುದಿಯುತ್ತಿತ್ತು. ಆದರೆ ಮೊಗದಲ್ಲಿ ನಗೆ ಅರಳಿತ್ತು. "ಮಗೂ, ನನ್ನ ಮಗೂ..." ಕಮೀಲನಿಗೆ ಮಗನೊಡನೆ ಮಾತನಾಡುವುದು ಬಹಳವಿತ್ತು. ಆದರೆ ಮಾತು ಹೊರಡುತ್ತಿರಲಿಲ್ಲ. "ಅಪ್ಪಾ, ಇನ್ನು ಮಲಗಿ" ಎಂದು ಹೇಳಿದೆ. ಆದರೆ ಕಮೀಲ ಅದೇ ಸ್ಥಿತಿಯಲ್ಲಿ ಸುಖವಾಗಿದ್ದಂತೆ ತಟಸ್ಥನಾಗಿದ್ದ. "ಮಗೂ.. ನೀನು ಬಂದೆಯಲ್ಲ. ನನಗೆ ಗೊತ್ತಿತ್ತು. ಸಂತೋಷವಾಯಿತು." ಗೊಗ್ಗರು ಧ್ವನಿ ಹೊರಡಿಸುತ್ತಾ ಅವನು ಹೇಳತೊಡಗಿದ, "ನಾನು ಮಾತೆ ಮೇರಿಗೆ ಹರಕೆ ಹೊತ್ತಿದ್ದೇನೆ. ಪಾದ್ರಿಗಳಿಗೆ ತಿಳಿದಿದೆ. ನಾನು ಅವಳಲ್ಲಿ ಇಟ್ಟ ಭರವಸೆಯ ಫಲವಾಗಿ ನೀನು ಮರಳಿ ಬಂದೆ. ಈಗ ನನ್ನಲ್ಲಿ ಶಕ್ತಿ ಇಲ್ಲ. ನನ್ನ ಹರಕೆಯನ್ನು ನೀನೇ ತೀರಿಸಿಬಿಡು." ಕಮೀಲನ ಬಾಯಿಯಿಂದ ಶಬ್ದಗಳು ಬಿಟ್ಟು ಬಿಟ್ಟು ಹೊರಡುತ್ತಿದ್ದವು.

ಅವನ ತಲೆ ನನ್ನ ಭುಜದ ಮೇಲೆ ಮಲಗಿತು. ಕೈಕಾಲು ಸಡಿಲಗೊಂಡವು. ನಾನು ನಿಧಾನವಾಗಿ ಅವನ ತಲೆಯನ್ನು ನನ್ನ ಭುಜದಿಂದ ಎತ್ತಿ ದಿಂಬಿನ ಮೇಲೆ ಇರಿಸಿದೆ. ತೆರೆದೇ ಇದ್ದ ಅವನ ಕಣ್ಣುಗಳನ್ನು ನನ್ನ ಕೈಯಿಂದ ಮುಚ್ಚಿದೆ. ಹೊದಿಕೆ ಹೊದಿಸಿದೆ. ಆಮೇಲೆ ಹೊರಗೆ ಬಂದು ನನ್ನ ನಿಲುವಂಗಿ ಧರಿಸಿದೆ.

ಅನುವಾದಕರು : **ಸ್ಮಿತಾ ಶೆಣೈ**

❖ ❖ ❖❖ ❖

ಪಿರೇರಿಯ ಪುತ್ರಿಯರು

✍ **ಕಿಶೂ ಬಾರ್ಕೂರು**

ಇದಕ್ಕೂ ಮುಂಚೆ ಪೆದ್ರು ಅವನ ಜೀವನದಲ್ಲೇ ಅಷ್ಟೊಂದು ಚುರುಕಾಗಿದ್ದು ಇಲ್ಲವೇ ಇಲ್ಲ. ಅಂದು ಭಾನುವಾರದ ಪ್ರಾರ್ಥನೆಗೆ ಇಗರ್ಜಿಗೆ ಹೋಗಿ ಬಂದ ಪೆದ್ರು ಅಷ್ಟೊಂದು ಹುಮ್ಮಸ್ಸಿನಲ್ಲಿರುವುದಕ್ಕೂ ಕಾರಣವಿಲ್ಲದಿಲ್ಲ. ಬಲಿಪೂಜೆಯ ಪವಿತ್ರ ಪ್ರಸಾದವನ್ನು ಸ್ವೀಕರಿಸುವ ಸಂದರ್ಭದಲ್ಲಿ ಪಿರೇರಿಯ ಪುತ್ರಿಯರು ಅವನ ಎದುರಿನಿಂದ ಹಾದು ಹೋದಾಗ ಸೂಸಿದ 'ಸೆಂಟಿ'ನ ಘಮದಲ್ಲಿ ಅಮಲೇರಿದಂತಾಗಿ ಅಲ್ಲಿಯೇ ವಿಸ್ಮೃತಿಗೆ ಜಾರಿದ್ದ ಪೆದ್ರು, ಮತ್ತೆ ಕಣ್ಣು ಬಿಟ್ಟಿದ್ದು ಪೂಜೆಯ ಕೊನೆಯಲ್ಲಿ, ಚರ್ಚಿನ ಆಗುಹೋಗುಗಳ ಬಗ್ಗೆ ಮತ್ತು ಹೊಸ ಯೋಜನೆಗಳ ಬಗ್ಗೆ, ಪಾದ್ರಿಯವರು ಪ್ರಕಟಣೆ ಓದಲು ಪ್ರಾರಂಭಿಸಿದಾಗಲೇ.

ಜಿಲ್ಲೆಯ ಮಟ್ಟದಲ್ಲಿ ಕೆಲವು ದಿನಗಳಿಂದ 'ನವ ಸಮಾಜ ೨೦೦೦' ಎಂಬ ಧ್ಯೇಯದ ಹಿನ್ನೆಲೆಯಲ್ಲಿ ಹಲವು ಸಭೆಗಳು ನಡೆದಿದ್ದವು. ಇವುಗಳಲ್ಲಿ ಭಾಗವಹಿಸಿ ಉತ್ತೇಜಿತರಾಗಿದ್ದ ದೈವಭಕ್ತಿಕ ಧರ್ಮಗುರುಗಳು ತಮ್ಮ ಊರಿನಲ್ಲಿಯೂ ಅಂತಹದೇ 'ಮೂಲ ಕ್ರೈಸ್ತ ಸಮಾಜ'ವನ್ನು ಕಟ್ಟುವ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದರು. ಪ್ರತಿ ಗ್ರಾಮದಲ್ಲಿ ೭–೮ ಕುಟುಂಬಗಳನ್ನು ಒಟ್ಟುಸೇರಿಸಿ ಸಣ್ಣ ಸಣ್ಣ ಸಮುದಾಯಗಳನ್ನು ಕಟ್ಟುವ ಪರಿಕಲ್ಪನೆ ಅವರದು. ಕ್ರೈಸ್ತಮತ ಆರಂಭವಾದ ಸಂದರ್ಭದಲ್ಲಿ ಕ್ರೈಸ್ತ ಸಮಾಜವು ಹೇಗೆ ಒಗ್ಗಟ್ಟಿನಿಂದ ಬದುಕುತ್ತಿತ್ತು, ಹೇಗೆ ತಮ್ಮ ಆಸ್ತಿಪಾಸ್ತಿಯನ್ನು ಯೇಸುವಿನ ಶಿಷ್ಯರಿಗೆ ಒಪ್ಪಿಸಿ, ನಂತರ ಎಲ್ಲರಿಗೂ ಸಮನಾಗಿ ಹಂಚಿಕೊಂಡು ಬಾಳುತ್ತಿತ್ತು ಎಂಬುದನ್ನು ತಮ್ಮ ಪ್ರವಚನದ ಸಂದರ್ಭದಲ್ಲಿ ಅವರು ಜನರಿಗೆ ವಿವರಿಸಿದ್ದರು. ಹಾಗೂ ಅಂತಹದೆ ಸಮಾಜವನ್ನು ಕಟ್ಟುವ ಅಭಿಲಾಶೆಯನ್ನು ಸಹಾ ವ್ಯಕ್ತಪಡಿಸಿದ್ದರು. ಪಾದ್ರಿಯವರ ಈ 'ಕಿರು ಕ್ರೈಸ್ತ ಸಮುದಾಯಗಳು' ಪೆದ್ರುವಿನಲ್ಲಿ ಅಚ್ಚರಿಯನ್ನು ಮೂಡಿಸಿದ್ದವು.

ಅಂದ ಮಾತ್ರಕ್ಕೆ ಎಲ್ಲರೂ ತಮ್ಮ ಆಸ್ತಿಪಾಸ್ತಿಯನ್ನು ಮಾರಿ, ಬಂದ ಹಣವನ್ನು ಪಾದ್ರಿಯವರ ಪಾದಕ್ಕೆ ಒಪ್ಪಿಸಬೇಕೆಂಬ ಆಲೋಚನೆ ಖಂಡಿತ ಅವನದ್ದಲ್ಲ. ಅಂತಹ ಆಲೋಚನೆ ಇಂದಿಗೆ ಎಷ್ಟು ಪ್ರಸ್ತುತ ಎಂಬುದು ಅವನಿಗೂ ಗೊತ್ತು. ಆದರೆ ಈ 'ಕಿರು ಸಮುದಾಯಗಳು' ಆತನ ಹಲವು ಚಿಂತೆಗಳಿಗೆ ಪರಿಹಾರ ಕೊಡಬಲ್ಲವು ಎಂಬ ಭರವಸೆ ಆತನಲ್ಲಿ ಉದಯಿಸಿತ್ತು. ಆತನಿಗಿದ್ದ ಅತಿ ದೊಡ್ಡ ಚಿಂತೆಯೆಂದರೆ ಆತನ ಗ್ರಾಮದಲ್ಲಿನ ಪಿರೇರಿಯ ಪುತ್ರಿಯರು..!

ಅದು ಸುಮಾರು ೧೭–೧೮ ವರ್ಷಗಳ ಹಿಂದಿನ ಮಾತು. ಆಗ ಪೆದ್ರು ಏಳೆಂಟು ವರ್ಷದ ಹುಡುಗ. ಆಗ ಅವನ ಊರಿನಲ್ಲಿ ವಾಹನಗಳು ಬಹಳ ಕಡಿಮೆ. ಅದರಲ್ಲೂ

ತಮ್ಮ ಸ್ವಂತ ವಾಹನದಲ್ಲಿ ಚರ್ಚಿಗೆ ಬರುವವರು ಇಲ್ಲವೇ ಎನ್ನಬಹುದು, ಪಿರೇರಿಯವರ ಲಾರಿಯೊಂದನ್ನು ಬಿಟ್ಟು! ಆ ಕಾಲದಲ್ಲಿ ಅವರ ಊರಿನಲ್ಲಿ ದೊಡ್ಡ ಶ್ರೀಮಂತರೆಂದರೆ ಪಿರೇರಾ ಕುಟುಂಬದವರು. ಮಧ್ಯಮ ವರ್ಗದವರು ಕಡಿಮೆ ಇದ್ದು, ಬಡವರ ಪಾಲೇ ಹೆಚ್ಚಿದ್ದ ಊರಿನಲ್ಲಿ ಶ್ರೀಮಂತರನ್ನು ಎಣಿಸಲು ಹೋದರೆ ಒಂದು ಕೈಯ ಬೆರಳುಗಳೇ ಮಿಕ್ಕಿ ಉಳಿಯುತ್ತಿದ್ದವು. ಅಂತಹ ಕಾಲದಲ್ಲಿಯೇ ಪಿರೇರಾ ಕುಟುಂಬದವರು ತಮ್ಮ ಸ್ವಂತ ಲಾರಿಯಲ್ಲಿ ಚರ್ಚಿಗೆ ಬರುತ್ತಿದ್ದರು. ಪಿರೇರಾ ಕುಟುಂಬವೆಂದರೆ ಪಿರೇರಾ, ಆತನ ಹೆಂಡತಿ ಮತ್ತು ಆತನ ಇಬ್ಬರು ಹೆಣ್ಣುಮಕ್ಕಳು.

ಇನ್ನು ಅವರು ಚರ್ಚಿಗೆ ಬಂದಾಗಲೆಲ್ಲಾ, ಮೊಣಕಾಲೂರಲು ನೀಲರ್ ಅಳವಡಿಸಿ ತಮ್ಮ ಹೆಸರು ಬರೆದಿರುವ ಬೆಂಚಿನಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಅವರ ಲಾರಿ ಹಿಂತಿರುಗುವಾಗ ಪುಟ್ಟಮಕ್ಕಳೆಲ್ಲ ಬೊಬ್ಬೆ ಹಾಕಿ ಅದರ ಹಿಂದೆಯೇ ಓಡುತ್ತಿದ್ದರು. ಕೆಲವು ಧೈರ್ಯವಂತರು ಅದಕ್ಕೆ ನೇತಾಡುತ್ತಿದ್ದರು ಸಹಾ. ಒಮ್ಮೆ ಆ ಲಾರಿ ಕಣ್ಣಿನಿಂದ ಮರೆಯಾಯಿತೆಂದರೆ ಪೆದ್ರುವಿಗೆ ಮತ್ತೆ ಪಿರೇರಾ ಕುಟುಂಬದ ದರ್ಶನವಾಗುವುದು ವಾರ ಕಳೆದ ನಂತರವೇ.

ಆ ಊರಿನಲ್ಲಿದ್ದ ಒಂದೇ ಒಂದು ಬಂಗಲೆಯೆಂದರೆ – ಪಿರೇರಾ ಅವರದ್ದು. ಕ್ರಿಶ್ಚಿಯನ್ನರ ಒಂದೇ ಒಂದು ಲಾರಿಯೆಂದರೆ ಅದು – ಪಿರೇರಾದ್ದು. ದೂರದ ಊರಿನ ಕಾನ್ವೆಂಟ ಶಾಲೆಯಲ್ಲಿ ಇಂಗ್ಲಿಷ್‌ನಲ್ಲಿ ಕಲಿಯುತ್ತಿದ್ದ ಮಕ್ಕಳೆಂದರೆ – ಪಿರೇರಾನ ಮಕ್ಕಳು. ಮೊಣಕಾಲಿನವರೆಗೆ ಇರುವ ಬೂಟುಗಳ ಒಳಗೆ ಪ್ಯಾಂಟನ್ನು ತುರುಕಿ ಕೈಯಲ್ಲೊಂದು ಕೋಲು ಹಿಡಿದು ಗತ್ತಿನಲ್ಲಿ ಬರುವವನು – ಪಿರೇರಾ. ಅವನಿಗೆ ಕೊಡೆ ಹಿಡಿಯಲು ಒಬ್ಬ ಆಳು. ಪಿರೇರಾನ ಕಾರುಬಾರಿನ ಬಗ್ಗೆ ಪೆದ್ರುವೇ ಅಲ್ಲ, ಸುತ್ತಲಿನ ಹತ್ತೂರಿನ ಜನರೂ ಮಾತನಾಡುವವರೇ. ಹಾಗೆಂದು ಪಿರೇರಾ ಕುಟುಂಬ ಯಾರೊಂದಿಗೂ ಬೆರತದ್ದು; ಮದುವೆಯೋ, ಮಸಣವೋ ಅಥವ ಬೇರೆ ಕಾರ್ಯಗಳಿಗೋ, ಇತರರ ಮನೆಗೆ ಹೋಗಿದ್ದು, ಭಾಗವಹಿಸಿದ್ದು ಪೆದ್ರುವಂತೂ ನೋಡಿಲ್ಲ. ಕೇಳಿಯೂ ಇಲ್ಲ.

ಇತರ ಮಕ್ಕಳು ಭಾನುವಾರದ ಧಾರ್ಮಿಕ ಶಿಕ್ಷಣ ತರಗತಿಗಳಿಗೆ ಹಾಜರಾಗದಿದ್ದರೆ, ಅಂದಿನ ಧರ್ಮಗುರುಗಳು ಅವರ 'ಕಿವಿ ಹಿಂಡಿ ಗೋವೆಯನ್ನು ತೋರಿಸು'ತ್ತಿದ್ದರಾದರೂ, ಇದಕ್ಕೆ ಅಪವಾದ ಎಂಬಂತೆ ಪಿರೇರಾನ ಮಕ್ಕಳು ಈ ತರಗತಿಗಳಿಗೆ ಹಾಜರಾದ ದಾಖಲೆಯೇ ಇರಲಿಲ್ಲ. ಒಟ್ಟಾರೆ ಪಿರೇರಾ ಕುಟುಂಬ ಊರಿನ ಯಾವುದೇ ವಿಷಯಕ್ಕೂ ತಲೆ ಹಾಕುತ್ತಿರಲಿಲ್ಲ. ಇದನ್ನೆಲಾ ಪೆದ್ರು ಚೆನ್ನಾಗಿ ಬಲ್ಲ; ಏಕೆಂದರೆ ಬೇರೆಯವರಿಗಿಂತ ಪಿರೇರಾನ ಪುತ್ರಿಯರನ್ನು ಚೆನ್ನಾಗಿ ಗಮನಿಸುವವನು ಅವನೊಬ್ಬನೇ. ಅವರನ್ನು ನೋಡಿದ ಮೊದಲ ಭಾನುವಾರದಿಂದ ಹಿಡಿದು ಇವತ್ತಿನವರೆಗೆ ಅವನು ಚರ್ಚಿನ ಕಂಬಕ್ಕೊರಗಿ ನಿಂತು ಅವರನ್ನು ಗಮನಿಸಿದ್ದಾನೆ. ಬಾಲ್ಯದಲ್ಲಿ ಇತರ ಹುಡುಗರು ಪಿರೇರಿಯ ಲಾರಿಯ

ಹಿಂದೆ ಓಡುತ್ತಿದ್ದರೂ, ಪೆದ್ರು ಮಾತ್ರ ಹಾಗೆ ಮಾಡಿದ್ದಿಲ್ಲ. ಬದಲಾಗಿ ಕಂಬಕ್ಕೊರಗಿ, ಕಣ್ಮುಚ್ಚಿ ಪಿರೇರಾನ ಮಕ್ಕಳ ರೂಪವನ್ನು ಮನದಲ್ಲೇ ಧ್ಯಾನಿಸಿ, ಮುಂದಿನ ಒಂದು ವಾರದವರೆಗೂ ಅದನ್ನು ಕಾಪಿಡಲು ಪ್ರಯತ್ನಿಸುತ್ತಿದ್ದ. ಅವನಿಗೆ ಆಗ ಎಂಟೋ ಒಂಭತ್ತೋ ವಯಸ್ಸಾದರೆ, ಆ ಹುಡುಗಿಯರಿಗೆ ಹದಿನಾಲ್ಕೋ ಹದಿನಾರೋ ಇದ್ದಿರಬಹುದು. ಆ ವಯಸ್ಸಿನಲ್ಲಿ ಪ್ರಾರಂಭವಾದ ಪೆದ್ರುವಿನ ಈ ಗೀಳು ಯಾವಾಗ ಪ್ರೀತಿಗೆ ಬದಲಾಯಿತೋ ಅವನಿಗೇ ತಿಳಿದಿಲ್ಲ. ಅವನು ಪ್ರೇಮಿಸುತ್ತಿರುವುದು ಹಿರಿಯ ಮಗಳನ್ನೋ, ಕಿರಿಯವಳನ್ನೋ ಎನ್ನುವುದಕ್ಕೆ ಅವನಲ್ಲೇ ದ್ವಂದ್ವಗಳಿದ್ದವು. ಹೀಗೆ ಬಾಲ್ಯದಿಂದಲೂ, ಪೆದ್ರುವಿಗೆ ಪಿರೇರಾಗಳೆಂದರೆ ಎಲ್ಲಿಲ್ಲದ ಗೌರವ ಹಾಗೂ ಅವರ ಮನೆಯ ಹುಡುಗಿಯರೆಂದರೆ ಜೀವದ ಗಂಟು. ಪ್ರತಿ ಭಾನುವಾರ ಇಗರ್ಜಿಯಲ್ಲಿನ ಪೂಜೆ ಮತ್ತು ಅಲ್ಲಿ ಕಾಣಸಿಗುವ ಪಿರೇರಾನ ಪುತ್ರಿಯರು ಅವನ ಬದುಕಿನ ಅವಿಭಾಜ್ಯ ಅಂಗಗಳಾಗಿ ಹೋಗಿದ್ದವೆಂದರೆ ತಪ್ಪಾಗಲಾರದು. ಆದರೆ ಅವನದೇ ಗ್ರಾಮದವರಾದ ಅವರಿಗೆ, ಇವನ ಅಸ್ತಿತ್ವದ ಬಗ್ಗೆ ಅರಿವಿದೆಯೋ, ಇಲ್ಲವೋ ಎನ್ನುವುದು ಪೆದ್ರುವಿಗೆ ಗೊತ್ತಿಲ್ಲ. ಈವರೆಗೆ ಅವರಲ್ಲಿ ಮಾತನಾಡುವುದಿರಲಿ, ಮುಗುಳ್ನಗೆ ಬೀರಿದ್ದೂ ಅವನ ನೆನಪಿಗೆ ಬರುತ್ತಿಲ್ಲ. ಪೆದ್ರುವಿನ ಪಾಲಿಗೆ ಅವರು ಆಗಸದಲ್ಲಿ ಮಿಂಚುವ ಸುಂದರ ತಾರೆಯರು ಮತ್ತು ಅವನು ಅವರ ಆರಾಧಕ.

ಪೆದ್ರು ದೊಡ್ಡವನಾಗುತ್ತಿದ್ದಂತೆ ಆತನ ಊರೂ ಬದಲಾಗಿತ್ತು. ಪಿರೇರಾ ಅವರ ಬಂಗಲೆಯಷ್ಟು ದೊಡ್ಡದಲ್ಲದಿದ್ದರೂ, ಅದಕ್ಕಿಂತ ಸ್ವಲ್ಪ ಸಣ್ಣದಾದ ಏಳೆಂಟು ಬಂಗಲೆಗಳು ತಲೆ ಎತ್ತಿದ್ದವು. ಕೊಲ್ಲಿ ರಾಷ್ಟ್ರಗಳಿಗೆ ಕೆಲಸದ ನಿಮಿತ್ತ ಹೋದವರ ಪ್ರಭಾವ, ಊರಿನಲ್ಲಿ ಹೆಚ್ಚಿದ ಅಭಿವೃದ್ಧಿಯೂ ಸೇರಿ ಪೆದ್ರುವಿನ ಊರಿನ ಕಳೆಯೇ ಬದಲಾಗಿತ್ತು. ಹೊಸ ರೂಪ ಬಂದಿತ್ತು. ಹಳೆಯ ಚರ್ಚು ಕೂಡಾ ಹೊಸ ಉಡುಪನ್ನು ತೊಟ್ಟು ಬೀಗುತ್ತಿತ್ತು. ಮಾಡಿಗೆ ಹೊಸ ಹೆಂಚುಗಳನ್ನು ಹೊದಿಸಲಾಗಿತ್ತು. ಗೋಡೆಗಳಿಗೆ ಸುಂದರ ಬಣ್ಣ ಬಳಿಯಲಾಗಿತ್ತು. ಚರ್ಚಿನ ಮುಖ್ಯ ವೇದಿಕೆಯನ್ನು ಮಾರ್ಬಲ್ ಆವರಿಸಿತ್ತು. ದಾನಿಗಳ ಹೆಸರು ಬರೆಯಲಾಗಿದ್ದ ಹಳೆಯ ಬೆಂಚುಗಳ ಸ್ಥಾನದಲ್ಲಿ ಪ್ಲಾಸ್ಟಿಕ್ ಕುರ್ಚಿಗಳು ಬಂದಿದ್ದವು. ಈಗ ಇಗರ್ಜಿಯ ಮೈದಾನಿನಲ್ಲಿ ವಾಹನಗಳನ್ನು ನಿಲ್ಲಿಸಲು ಜಾಗ ಸಾಲುತ್ತಿರಲಿಲ್ಲ. ಅಂತೆಯೇ ಪಿರೇರಾ ಕುಟುಂಬದ ಶ್ರೀಮಂತಿಕೆಯೂ ಹೆಚ್ಚಿತ್ತು. ಲಾರಿಯ ಬದಲಿಗೆ ಡೆವ್ಹೂ ಬಂದಿತ್ತು. ಅದು ಬೇರೆಯವರ ಮಾರುತಿ–೮೦೦, ಝೆನ್, ಪದ್ಮಿನಿ, ಸುಮೋಗಳ ನಡುವೆ ಸೇರಿ ನಿಲ್ಲುತ್ತಿತ್ತು. ಪೆದ್ರು ತನ್ನ ಸಿ.ಡಿ.೧೦೦ ಬೈಕ್ ತಂದು ಅವರ ಕಾರಿನ ಪಕ್ಕದಲ್ಲೆ ನಿಲ್ಲಿಸುತ್ತಿದ್ದ. ಪಿರೇರಾನ ಹೆಸರು ಬರೆದ ಬೆಂಚು ಈಗ ಇಲ್ಲದಿದ್ದರೂ, ಪಿರೇರಾನ ಮಕ್ಕಳು ಪ್ರತಿ ಭಾನುವಾರ ಅದೇ ಜಾಗದಲ್ಲೇ ಕುಳಿತುಕೊಳ್ಳುತ್ತಾರೆ ಮತ್ತು ಪೆದ್ರು ಅವರ ಸೆಂಟಿನ ಸುಗಂಧದಲ್ಲಿ ಅಮಲೇರಿಸಿಕೊಳ್ಳುತ್ತಾನೆ, ಇಂದಿಗೂ. ಹಿಂದೆ ಜನರು ಪಿರೇರಾ ಅವರ ಶ್ರೀಮಂತಿಕೆಯ ಬಗ್ಗೆ ಮಾತನಾಡುತ್ತಿದ್ದರೆ, ಈಗ ಪಿರೇರಾ ಕುವರಿಯರು, ವಯಸ್ಸಾಗಿದ್ದರೂ ಇನ್ನೂ ಯಾಕೆ ಮದುವೆ ಆಗಿಲ್ಲವೆಂದು ಮಾತನಾಡಿಕೊಳ್ಳುತ್ತಿದ್ದರು.

ಪಿರೇರಾನ ಹಿರಿಯ ಮಗಳಿಗೆ ಮೂವತ್ತೈದು, ಕಿರಿಯ ಮಗಳಿಗೆ ಮೂವತ್ತಮೂರು ವಯಸ್ಸು ಆಗಿದ್ದರೂ ಇಬ್ಬರೂ ಮದುವೆ ಆಗಿರಲಿಲ್ಲ. ಒಮ್ಮೆ ಅವರಿಗೆ ಒಬ್ಬ ಡಾಕ್ಟರನ ಸಂಬಂಧ ಕೂಡಿ ಬಂದಿತ್ತು. ಓರ್ವ ಇಂಜಿನಿಯರ್‌ನನ್ನೂ ಕೇಳಿದ್ದರು ಎಂಬ ಗಾಳಿಸುದ್ದಿ ಹರಿದಾಡಿದ್ದರೂ, ಅವರ ಮದುವೆ ಯಾವಾಗ; ಅವರು ಮದುವೆಯಾಗುತ್ತಾರೋ, ಇಲ್ಲವೋ ಎನ್ನುವುದರ ಕುರಿತು ಊರಿನಲ್ಲಿ ನಿಖರವಾಗಿ ಯಾರಿಗೂ ತಿಳಿದಿರಲಿಲ್ಲ. ಅವರಲ್ಲಿಯೇ ಕೇಳಿ ತಿಳಿದುಕೊಳ್ಳುವೆಂದರೆ ಅಂಥಾ ಸಲಿಗೆ ಯಾರಿಗೂ ಇಲ್ಲ. ಮುದುಕನಾಗಿದ್ದ ಪಿರೇರಾ ತನ್ನ ಹೆಂಡತಿ ತೀರಿಕೊಂಡ ಬಳಿಕ ತನ್ನದೇ ಕಾರುಬಾರುಗಳ ಲೋಕದಲ್ಲಿ ಮುಳುಗಿ ಹೋಗಿದ್ದ. ಪೆದ್ರು ಮಾತ್ರ ಆ ಹುಡುಗಿಯರ ಬಗ್ಗೆ ಹಗಲುರಾತ್ರಿ ಚಿಂತಿಸಿ ಕರಗುತ್ತಿದ್ದ, ಮರುಗುತ್ತಿದ್ದ. ಅವರು ಮದುವೆಯಾಗದೇ ತನಗಾಗಿಯೇ ಕಾಯುತ್ತಿದ್ದಾರೆ ಎಂದು ಭಾವಿಸುತ್ತಿದ್ದ. ಹಿಂದೆ, ತಾನು ದೊಡ್ಡವನಾಗಲು ಅವರು ಕಾಯುತ್ತಿದ್ದರೆ, ಈಗ ತನ್ನ ಕೈಯಲ್ಲಿ ಸ್ವಲ್ಪ ಹಣ ಬಂದು ತಾನು ಸ್ಥಿತಿವಂತನಾಗಲು ಕಾಯುತ್ತಿದ್ದಾರೆ ಅಂದುಕೊಳ್ಳುತ್ತಿದ್ದ. ಅದಕ್ಕಾಗಿ ಹಣ ಗಳಿಸಲು ಒಂದು ಸಣ್ಣ ಉದ್ಯಮವನ್ನು ಆರಂಭಿಸಿದ್ದ. ಹಗಲು ರಾತ್ರಿಯೆನ್ನದೆ ಅದರ ಏಳಿಗೆಗಾಗಿ ಶ್ರಮಿಸುತ್ತಿದ್ದ. ಈ ನಡುವೆ ಇಗರ್ಜಿಯ ಯುವಕ ಸಂಘದ 'ಲಕ್ಕಿಡಿಪ್' ಮಾರುವ ನೆಪದಲ್ಲಿ ಪಿರೇರಾನ ಹಿರಿಯ ಮಗಳನ್ನೊಮ್ಮೆ ಮಾತನಾಡಿಸಿದ್ದ. ಮತ್ತೊಂದು ಶನಿವಾರದಂದು ಅಕಸ್ಮಾತ್ ಕಿರಿಯವಳ ಜತೆ ಬಸ್ಸಿನಲ್ಲಿ ಒಂದೇ ಸೀಟಿನಲ್ಲಿ ಕುಳಿತು ಪ್ರಯಾಣಿಸಿದ್ದ. ಆ ಎರಡು ದಿನಗಳು ಅವನ ಸ್ಮೃತಿಪಟಲದಲ್ಲಿ ಬಂಗಾರದ ಅಕ್ಷರಗಳಲ್ಲಿ ಬರೆಯಲ್ಪಟ್ಟಿದ್ದವು.

ಪೆದ್ರು ಒಳ್ಳೆಯ ಯುವಕ. ಆತನಿಗೆ ಇಗರ್ಜಿಯಲ್ಲಿ ಒಳ್ಳೆಯ ಹೆಸರಿದೆ. ಅವನು ಯುವನಾಯಕ. ಗಾನಮಂಡಳಿಯ ಉತ್ತಮ ಗಾಯಕನೂ ಹೌದು. ಪ್ರತಿಯೊಬ್ಬರಿಗೂ ಆದರ್ಶಪ್ರಾಯನಾದ ತರುಣ ಉದ್ಯಮಿ. ಎಲ್ಲರಿಗೂ ಬೇಕಾದವನು; ಗ್ರಾಮದ ಕಾರ್ಯಕ್ರಮಗಳನ್ನು ಮುಂದೆ ನಿಂತು ನಡೆಸಿ ಕೊಡುವವನು. ದುರಭ್ಯಾಸಗಳೇನೂ ಇಲ್ಲ; ಅಪರೂಪಕ್ಕೆ ಕೆಲವೊಮ್ಮೆ ಬಿಯರ್ ಹೀರುತ್ತಾನಷ್ಟೇ. ಅವನ ಆಫೀಸಿಗೆ ಒಂದಿಬ್ಬರು ಹುಡುಗಿಯರ ಕರೆಗಳು ಬರುತ್ತವೆಯಾದರೂ, ಅವನು ಮಾತ್ರ ಯಾರಿಗೂ ಸೊಪ್ಪು ಹಾಕುವುದಿಲ್ಲ. ಅವನು ಚಿಂತಿಸುವುದು ಕೇವಲ ಪಿರೇರಾನ ಪುತ್ರಿಯರನ್ನು ಕುರಿತು ಮಾತ್ರ.

ಇನ್ನು ಮುಖ್ಯರಸ್ತೆಯಿಂದ ಪೆದ್ರುವಿನ ಮನೆಗೆ ಹೋಗಲು ಒಂದು ಓಣಿ ಇದೆ. ಅಕ್ಕಪಕ್ಕದ ಬೃಹತ್ ಕಂಪೌಂಡ್ ಗೋಡೆಗಳ ನಡುವೆ ಇರುವ ಈ ಓಣಿಯಲ್ಲಿ ಪುಟ್ಟಮಕ್ಕಳು ಕೂಡಾ ಕೊಡೆ ಬಿಡಿಸಿಕೊಂಡು ಹೋಗುವುದೂ ಸಾಧ್ಯವಿಲ್ಲ; ಅಷ್ಟೂ ಕಿರಿದಾದ ಓಣಿ. ಪೆದ್ರು ಸಣ್ಣವನಿರುವಾಗ ಮಳೆಗಾಲದಲ್ಲಿ ಆ ಓಣಿಯಲ್ಲಿ ಸೈಕಲ್ ತೆಗೆದುಕೊಂಡು ಹೋಗಿ ಕೈಕಾಲಿಗೆ ತರಚು ಗಾಯ ಸಹಾ ಮಾಡಿಕೊಂಡಿದ್ದ. ಈಗ ಅವನ ಹೀರೋ ಹೊಂಡಾವನ್ನೂ ಮನೆಯವರೆಗೆ ಕೊಂಡೊಯ್ಯುವುದು ಆಗುತ್ತಿಲ್ಲ. ಆ ಎರಡೂ ಗೋಡೆಗಳ ಯಜಮಾನರೊಂದಿಗೆ ಮಾತನಾಡಿ, ಗೋಡೆಗಳನ್ನು ಸ್ವಲ್ಪ ಹಿಂದೆ ಜರುಗಿಸುವಂತೆ ಅವನು ಮಾಡಿದ ಪ್ರಯತ್ನಗಳು ಕೈಗೂಡಿರಲಿಲ್ಲ. ನೆರೆಮನೆಯಲ್ಲಿಯೇ ಇರುವ ಚಿಕ್ಕಪ್ಪನೊಂದಿಗೆ

ಪೆದ್ರು ಮನೆಯವರಿಗೆ ಜಾಗದ ಗಡಿಯ ತಕರಾರು ಇತ್ತು. ಸಂಧಾನದ ಮೂಲಕ ಜಾಗದ ದಾಖಲೆಗಳನ್ನು ಸರಿಪಡಿಸುವ ಅವನ ಪ್ರಯತ್ನಕ್ಕೆ ಫಲ ಸಿಕ್ಕಿರಲಿಲ್ಲ. ದಾಖಲೆಗಳು ಸರಿಹೋಗಿದ್ದರೆ, ಜಾಗವನ್ನು ಮಾರಿ, ಅವನು ಉದ್ಯಮಕ್ಕಾಗಿ ತೆಗೆದ ಸಾಲದ ಸ್ವಲ್ಪ ಭಾಗವಾದರೂ ಸಂದಾಯವಾಗಿ, ಅವನ ತಲೆಯ ಮೇಲಿನ ಭಾರ ಕಡಿಮೆಯಾಗಬಹುದಿತ್ತು. ಆಗಿರಲಿಲ್ಲ.

ಅಲ್ಲದೆ ಪೆದ್ರುವಿನ ಮನೆಯ ಪಕ್ಕದ ಎರಡು ಮನೆಗಳ ನಡುವೆ ಬೇರೆಯದೇ ಒಂದು ಸಮಸ್ಯೆ. ಆ ಎರಡೂ ಮನೆಗಳಿಗೆ ನೀರಿಗಾಗಿ ಒಂದೇ ಬಾವಿ. ಆ ಬಾವಿಯನ್ನು ಬಡವರಿಗೆಂದೇ ಇರುವ 'ಸಂತ ವಿನ್ಸೆಂಟ್ ಪಾವ್ಲ್ ಸಂಘಟನೆ'ಯು ಕಟ್ಟಿಸಿಕೊಟ್ಟಿತ್ತು. ಆದರೂ ಬಾವಿ ಕಟ್ಟಿಸಿದ ನಂತರ, ಬಾವಿ ಇರುವ ಜಾಗದ ಲಿಲ್ಲಿಬಾಯಿ ತನ್ನ ನೆರೆಮನೆಯ ವಿನ್ನಿ ಬಾಯಿಯವರಿಗಾಗಲೀ, ಅಥವಾ ಇತರ ಯಾರಿಗೇ ಆಗಲೀ ಒಂದು ತೊಟ್ಟು ನೀರನ್ನೂ ಕೊಡುತ್ತಿರಲಿಲ್ಲ. ಇದರಿಂದ ಪೆದ್ರುವಿಗೆ ಏನೂ ತೊಂದರೆ ಇಲ್ಲದಿದ್ದರೂ, ತನ್ನ ನೆರೆಮನೆಯವರು ಕೇವಲ ನೀರಿಗಾಗಿ ಕಚ್ಚಾಡುವುದು ಆತನಿಗೆ ಸರಿಹೋಗುತ್ತಿರಲಿಲ್ಲ. ಅದೂ 'ಸಂತ ವಿನ್ಸೆಂಟ್ ಪಾವ್ಲ್ ಸಂಘಟನೆ'ಯ ಬಾವಿಗಾಗಿ.

ಹೀಗಿರುವಾಗ ಪಾದ್ರಿಯವರು ಮಂಡಿಸಿದ ಕಿರು ಕ್ರೈಸ್ತ ಸಮುದಾಯ ದ ಕಲ್ಪನೆ ಪೆದ್ರುವಿಗೆ ದೇವರ ವರದಂತೆ ಗೋಚರಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಪಾದ್ರಿಯವರು ವಿವರಿಸಿದಂತೆ ಪೆದ್ರುವಿನ ಅಕ್ಕಪಕ್ಕದ ಮನೆಯವರೊಂದಿಗೆ ಇಂತಹ ಒಂದು ಸಮುದಾಯ ಕಟ್ಟಿದರೆ, ಅದರ ಮೊದಲ ಸಭೆ ಪೆದ್ರುವಿನ ಮನೆಯಲ್ಲಿ ನಡೆದರೆ... ..ಅದರಿಂದ ಕೆಲ ವಿಷಯಗಳಲ್ಲಾದರೂ ಒಳಿತಾದರೆ.. ... ಹೀಗೆ ಲೆಕ್ಕವಿಲ್ಲದಷ್ಟು ಸಾಧ್ಯತೆಗಳ ಬಗ್ಗೆ ಆತ ಕಲ್ಪಿಸಲಾರಂಭಿಸಿದ. ಈ ಸಮುದಾಯದ ಸಭೆಗಳಿಗೆ ಸಾಮಾನ್ಯವಾಗಿ ಎಲ್ಲಾ ಮನೆಯವರು ಬರಬೇಕಾಗುತ್ತದೆ. ಪಿರೇರಾ ಮನೆಯಿಂದ ಪಿರೇರಾ ಬರಲಾರನೆಂದು ಅವನಿಗೆ ಖಚಿತವಾಗಿ ಗೊತ್ತಿತ್ತು. ಆದರೆ ಅವನ ಪುತ್ರಿಯರು .. ಅವರಾದರೂ ಬರಬಹುದು ಎಂದು ಪೆದ್ರು ಯೋಚಿಸತೊಡಗಿದ.

ಓಣಿಯ ಗೋಡೆಗಳನ್ನು ಹಿಂದೆ ಸರಿಸಿ ಅಲ್ಲಿ ಸಣ್ಣ ರಸ್ತೆಯನ್ನು ನಿರ್ಮಿಸುವುದು.. .. ಚಿಕ್ಕಪ್ಪನೊಂದಿಗೆ ಆಸ್ತಿಯ ತಕರಾರನ್ನು ಸರಿಪಡಿಸುವುದು.. .. ಲಿಲ್ಲಿಬಾಯಿ ಹಾಗೂ ವಿನ್ನಿಬಾಯಿಯ ಮನೆಯವರು ನೀರನ್ನು ಸರಿಯಾಗಿ ಹಂಚಿಕೊಳ್ಳುವಂತೆ ಮಾಡುವುದು.. .. ಎಲ್ಲಕ್ಕಿಂತ ಹೆಚ್ಚಾಗಿ ಪಿರೇರಾನ ಮಕ್ಕಳನ್ನು ಮಾತನಾಡಿಸುವುದು, ಅವರ ಪರಿಚಯ ಮಾಡಿಕೊಳ್ಳುವುದು. ಈ ಸಾಧ್ಯತೆಗಳ ಬಗ್ಗೆ ಚಿಂತಿಸುತ್ತಿದ್ದಂತೆ ಪೆದ್ರು ಉತ್ಸುಕನಾದ.

'ಕಿರು ಕ್ರೈಸ್ತ ಸಮುದಾಯ'ದ ಮೊದಲ ಸಭೆಗೆ ಪೆದ್ರು ಬಲು ಜೋರಾಗಿಯೇ ತಯಾರಿ ನಡೆಸಿದ. ಮನೆಯ ಮೂಲೆಮೂಲೆಯ ಕಸಗುಡಿಸಿ, ಜೇಡರ ಬಲೆ ತೆಗೆದು, ಸ್ವಚ್ಛಗೊಳಿಸಿ ಸಿಂಗರಿಸಿದ. ಸಮುದಾಯದ ಎಲ್ಲರ ಮನೆಗಳಿಗೆ, ಪಿರೇರಾ ಮನೆಗೂ

ತಾನೇ ಹೋಗಿ ಆಹ್ವಾನಿಸಿ ಬಂದ. ಬಂದವರೆಲ್ಲರಿಗೂ ಕಾಫಿ ತಿಂಡಿಯ ವ್ಯವಸ್ಥೆಯನ್ನು ಮಾಡಿದ. ಪಾದ್ರಿಯವರು, ಚರ್ಚಿನ ಆಡಳಿತ ಮಂಡಲಿಯ ಉಪಾಧ್ಯಕ್ಷರು, ಕಾನ್ವೆಂಟಿನ ಸುಪೀರಿಯರ್, ಪತ್ರಕರ್ತರು, ಫೊಟೋ ತೆಗೆಯಲು ಆಕಾರ್ ಸ್ಟುಡಿಯೋದವನು ಹೀಗೆ ಎಲ್ಲರನ್ನೂ ಆಮಂತ್ರಿಸಿದ.

ಆ ದಿನ ಆ ಊರಿನ ಮೊದಲ 'ಕಿರು ಕ್ರೈಸ್ತ ಸಮುದಾಯ'ದ ಮೊದಲ ಸಭೆಯು ಪೆದ್ರುವಿನ ಮನೆಯಲ್ಲಿ ಯಶಸ್ವಿಯಾಗಿ ನಡೆಯಿತು. ಪಾದ್ರಿಯವರು ಸಣ್ಣ ಸಂದೇಶವನ್ನು ನೀಡಿದರು. ಸಣ್ಣಸಮುದಾಯಗಳ ಕುರಿತು ಕಾನ್ವೆಂಟಿನ ಸುಪೀರಿಯರ್ ಮಾತನಾಡಿದರು. ಉಪಾಧ್ಯಕ್ಷರು ಪೆದ್ರುವಿನ ನಾಯಕತ್ವವನ್ನು ಹಾಡಿ ಹೊಗಳಿದರು ಮತ್ತು ಉಳಿದ ಯುವಕರು ಆತನಂತೆಯೇ ಆಗಲು ಕರೆ ನೀಡಿದರು.

ಪೆದ್ರು ಹೊರಗಿನಿಂದ ನಗುತ್ತಿದ್ದನಾದರೂ ಅವನಿಗೆ ಒಳಗಿಂದೊಳಗೆ ಪಿಚ್ಚೆನಿಸಿತ್ತು. ಈ ಸಭೆಗೆ ಪಿರೇರಾನ ಮನೆಯವರು ಯಾರೂ ಬಂದಿರಲಿಲ್ಲ.

ನಂತರದ ದಿನಗಳಲ್ಲಿ ಬಹಳಷ್ಟು 'ಕಿರು ಕ್ರೈಸ್ತ ಸಮುದಾಯ'ಗಳು ಉದಯಿಸಿದವು ಮತ್ತು ಊರ ತುಂಬ ಹರಡಿದವು. ಹಾಗೆಯೇ ಪೆದ್ರುವಿನ ಸಮುದಾಯದ ಬಹಳಷ್ಟು ಸಭೆಗಳು ನಡೆದವು. ಅವನ ಸಮುದಾಯದವರು ಸೇರಿ ಪ್ರಾರ್ಥನೆ ಮಾಡಿದರು. ರೋಗಿಗಳನ್ನು ಭೇಟಿ ಮಾಡಿದರು. ಈಸ್ಟರ್ ಸಮಯದಲ್ಲಿ 'ಶಿಲುಬೆಯ ಹಾದಿ'ಯ ಬಗ್ಗೆ ಧ್ಯಾನವನ್ನೂ ನಡೆಸಿದರು. ಚರ್ಚಿನ ಹಬ್ಬದ ಮೆರವಣಿಗೆಯ ಸಮಯದಲ್ಲಿ ಅವನ ಸಮುದಾಯದ ಪರವಾಗಿ ಸ್ವಾಗತದ ಬ್ಯಾನರ್ ಹಾಕಲಾಯಿತು. ಹೀಗೆ ಪೆದ್ರುವಿನ ಸಮುದಾಯವು ಆ ಊರಿನಲ್ಲಿಯೇ ಆದರ್ಶ ಸಮುದಾಯವೆಂದು ಸ್ವತಹ ಪಾದ್ರಿಯವರೇ ಸಾರಿದರು.

ಆದರೆ, ಈಗಲೂ, ಪೆದ್ರುವಿನ ಮನೆಗೆ ಬರುವ ಓಣಿ ಹಾಗೆಯೇ ಇದೆ. ಅವನ ಅಣ್ಣನ ಪುಟ್ಟಮಗಳು ಕೊಡೆ ಬಿಡಿಸಿ ಹೋಗಲು ಈಗಲೂ ಕಷ್ಟಪಡುತ್ತಿದ್ದಾಳೆ. ವಿನ್ನಿ ಬಾಯಿಯ ಮನೆಯವರು ಈಗಲೂ ನಾಲ್ಕು ಮನೆಗಳನ್ನು ದಾಟಿ ದೂರದಿಂದ ನೀರು ತರಬೇಕಾಗಿದೆ. ಚಿಕ್ಕಪ್ಪನ ಮನೆಯವರು ಪೆದ್ರುವಿನೊಂದಿಗೆ ಅಗತ್ಯವಿದ್ದರೆ ಮಾತ್ರ ಮಾತನಾಡುತ್ತಾರೆಯೇ ಹೊರತು ಇತರ ಸಮಯದಲ್ಲಿ ಮಾತನಾಡುವುದಿಲ್ಲ. ಪಿರೇರಾನ ಕುವರಿಯರು ಇಂದಿಗೂ ಸಮುದಾಯದ ಸಭೆಗಳಿಗೆ ಬರುವುದೇ ಇಲ್ಲ. ಅವರಿಗೆ ತನ್ನ ಬಗ್ಗೆ ತಿಳಿದಿದೆಯೋ ಇಲ್ಲವೋ ಎಂಬುದು ಪೆದ್ರುವಿಗೆ ಇಂದಿಗೂ ತಿಳಿದಿಲ್ಲ.

ಅನುವಾದಕರು: **ವಿಲ್ಮಾ, ಬಂಟ್ವಾಳ**

❖ ❖ ❖❖ ❖

ಸ್ತಂಭ ಉತ್ಸವ

✍ ಮಹಾಬಲೇಶ್ವರ ಸೈಲ್

ಭಕ್ತಾದಿಗಳು ಮೂರ್ತಿ ಧ್ವಜಕಂಬ ಮತ್ತು ಕಳಸ ಧ್ವಜಕಂಬವನ್ನು ಅಲಂಕರಿಸಿದರು. ನಿರಂಕರಾ ಧ್ವಜಕಂಬವನ್ನು ಎತ್ತಿ ನಿಲ್ಲಿಸಿದರು. ಮೂರ್ತಿಕಂಬಕ್ಕೆ ಕೆಂಪುವಸ್ತ್ರವನ್ನು ಹೊದಿಸಿ ಅದರ ಮೇಲೆ ಮಲ್ಲಿಕಾರ್ಜುನ ಮೂರ್ತಿಯನ್ನು ಸ್ಥಾಪಿಸಿದರು. ಹಾಗೆಯೇ ಕಳಸ ಕಂಬಕ್ಕೂ ವಸ್ತ್ರವನ್ನು ಹೊದಿಸಿ ಅದರ ಮೇಲೆ ಅವತಾರ ಪುರುಷನನ್ನು ಸ್ಥಾಪಿಸಿದರು. ಉಳಿದ ದೇವರುಗಳಾದ ಬರ್ಮ, ನಾಗ, ಜಲಮಿ, ನಾಸ, ವಾದ್ರೊ, ಭಾಗಿಲಪಾಯಕ, ಭೂಮಿಪುರುಷ, ಕಾಶಿಪುರುಷ ಇವರನ್ನೆಲ್ಲಾ ಪೀಠದಲ್ಲಿ ಸ್ಥಾಪಿಸಲಾಯಿತು. ಸ್ತಂಭ ಉತ್ಸವದ ಏಳು ಪೂಜಾರಿಗಳು ಮತ್ತು ಓರ್ವ ಭಕ್ತ ಕಾಣಕೋಣದ ಶ್ರೀಸ್ಥಳದಲ್ಲಿ ನೆಲೆಗೊಂಡಿರುವ ಮಲ್ಲಿಕಾರ್ಜುನನ ಮುಂದೆ ಭಕ್ತಿಯಿಂದ ನಿಂತು ಪ್ರಾರ್ಥನೆ ಮಾಡಿದರು. "ನಿನ್ನನ್ನು ಕುಲದೇವರೆಂದು ನಂಬಿರುವ ನಾವು ಮತ್ತು ಪೂಜಾರಿಗಳು ಸ್ತಂಭವನ್ನು ಎತ್ತಿಕೊಂಡು ನಿನ್ನನ್ನು ವಂಶಾವಳಿಗಳಿಂದ ನಂಬಿರುವವರ ವಠಾರಗಳಿಗೆ ಹೋಗಲಿದ್ದೇವೆ. ನಿನ್ನ ನಾಮದ ಧ್ವಜವನ್ನು ಎತ್ತಿಕೊಂಡು ಕುಣಿಯುತ್ತಾ, ನಿನ್ನ ಜೈಕಾರದ ಘೋಷಣೆಯನ್ನು ಮಾಡುತ್ತಾ ನಾವು ಹತ್ತು ವಠಾರಗಳಲ್ಲಿ ಮೆರವಣಿಗೆ ಬರುತ್ತೇವೆ. ನಮಗೆ ನಿನ್ನ ಆಶೀರ್ವಾದಬೇಕು."

ಪೂಜಾರಿಗಳು ಉಡುಪನ್ನು ಕೈಯಲ್ಲಿ ಹಿಡಿದುಕೊಂಡರು. ಮೂರು ಮಂದಿ ಪೂಜಾರಿಗಳು ಮೂರ್ತಿ ಧ್ವಜಕಂಬ, ಕಳಸ ಧ್ವಜಕಂಬ ಮತ್ತು ನಿರಂಕರಾವನ್ನು ಎತ್ತಿಕೊಂಡರು. ಭಕ್ತಜನರು ಪೀಠದ ಮೇಲಿದ್ದ ಎಲ್ಲಾ ದೇವರ ಮೂರ್ತಿಗಳನ್ನು ಒಟ್ಟು ಮಾಡಿ, ಒಂದು ಬಟ್ಟೆಯಲ್ಲಿ ಗಂಟು ಕಟ್ಟಿ ಭುಜದ ಮೇಲೆ ಹೊತ್ತುಕೊಂಡರು. ವಾದ್ಯಗಳು ಮೊಳಗಿದವು. ಹಿಂದೆ ನಡೆದುಬಂದ ಹಾಗೆ ಹುಣ್ಣಿಮೆಯ ಮರುದಿನ ಸ್ತಂಭ ಉತ್ಸವವು ಶ್ರೀಸ್ಥಳವನ್ನು ಬಿಟ್ಟು ವಂಶಾವಳಿಗಳನ್ನು ಹುಡುಕಲು ಹೊರಟಿತು. ಇಡೀ ವಠಾರವನ್ನೆಲ್ಲ ಸುತ್ತಿ ಹಿಂತಿರುಗಿ ಬರುವಷ್ಟರಲ್ಲಿ ಪಾಲ್ಗುಣ ಮಾಸ ಕೊನೆಗೊಳ್ಳುತ್ತದೆ. ಈ ವರ್ಷ ವಸಂತ ಶಿಶಿರವನ್ನು ಸ್ವಾಗತಿಸುವುದರಿಂದ ಜನರು ಈ ಉತ್ಸವದಲ್ಲಿ ಬಹಳ ಉತ್ಸಾಹದಿಂದ ಪಾಲುಗೊಳ್ಳುತ್ತಾರೆ.

ಉತ್ಸವದ ಮೊದಲ ಕಟ್ಟೆ ಕಾಣಕೋಣದ ಮಾಲ್ಲೆಕ. ಮರುದಿನ ಹಿಡಿ ಶಿವೇಶ್ವರದ ವಠಾರದಲ್ಲಿರುವ ಎಲ್ಲಾ ಕಟ್ಟೆಗಳಿಗೆ ಸುತ್ತಿ ಬರಬೇಕಾಗುತ್ತದೆ. ನಡುವೆ ಎಷ್ಟೆಷ್ಟು ಊರುಗಳು, ಕಟ್ಟೆಗಳು, ರಾತ್ರಿ ಹೊತ್ತು ಎಲ್ಲೆಲ್ಲಿ ವಸತಿ, ಇವುಗಳನ್ನೆಲ್ಲಾ ಮೊದಲೇ ನಿರ್ಧರಿಸಿ ಆಗಿರುತ್ತದೆ. ಈ ಪದ್ಧತಿಯನ್ನು ಬದಲಾಯಿಸುವುದು ಸಾಧ್ಯವಿಲ್ಲ.

ಉತ್ಸವವು ರಾತ್ರಿ ಮಾಲ್ಲೆಕದಲ್ಲಿ ವಿಶ್ರಮಿಸಿ ಮುಂಜಾನೆ ಶಿವೇಶ್ವರಕ್ಕೆ ಹೊರಟಿತು. ಉತ್ಸವ ಹೋಗುವ ದಾರಿಯಲ್ಲೆಲ್ಲಾ ಕಾಡು, ಏರು, ತಗ್ಗುಗಳು.

ಗುಣೊ ಅಣ್ಣ ಎಪ್ಪತ್ತು ವರ್ಷ ವಯಸ್ಸಿನ ವೃದ್ಧರು. ಇವತ್ತೂ ಅವರು ಉತ್ಸವದ ಮೇಳದೊಂದಿಗೆ ಬಂದಿದ್ದಾರೆ. ಹತ್ತಿ, ಇಳಿಯುವಾಗ ಮೇಲುಸಿರು ಬಂದು ಬಹಳ

ದಣಿದಿದ್ದಾರೆ. ಅವರ ಮೊಣಕೈ ಮೂಳೆಗಳು ಶಬ್ದ ಮಾಡುತ್ತಿವೆ. ಆದರೆ ಅವರ ಕಾಲುಗಳು ದೃಢವಾಗಿವೆ. ತೀರ್ಥಕ್ಷೇತ್ರಕ್ಕೆ ಹೊರಟ ಭಕ್ತಾದಿಗಳ ಹಾಗೆ ಅವರು ಹೊರಟಿದ್ದಾರೆ. ಬಿದ್ದರೆ ಕ್ಷೇತ್ರಕ್ಕೆ ಹೋಗಿ ಬೀಳುವುದು ಎನ್ನುವುದು ಅವರ ನಿರ್ಧಾರ.

ಉತ್ಸವ ಈಗ ಬೆಟ್ಟದ ತುದಿಯನ್ನು ತಲುಪಿದೆ. ಅಲ್ಲಿಂದ ಶಿವೇಶ್ವರದ ಇಡೀ ವಠಾರವು ಪಂಜು ಬೆಳಗಿಸಿದಂತೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಎತ್ತರದಲ್ಲಿರುವ ಈ ಭಯಾನಕ ಶಿವೇಶ್ವರ ಬೆಟ್ಟ ಮತ್ತು ಅದರ ಛಾಯೆ ಆವರಿಸಿಕೊಂಡಿರುವ ಶಿವೇಶ್ವರ ವಠಾರವು ಮುಂಜಾನೆಯ ಎಳೆಬಿಸಿಲಿನಲ್ಲಿ ಬೆಳ್ಳಿಯ ಹಾಗೆ ಲಕಲಕ ಹೊಳೆಯುತ್ತಿದೆ. ಮಡಗೇರಿ, ಪಂಟಲಬಾಗ್, ಆರವದಿಂದ ಹಿಡಿದು ಸದಾಶಿವಗಡದ ಮರೆನವರೆಗಿನ ವಠಾರವು ಉತ್ಸವದ ಸಮಾರಂಭದಲ್ಲಿ ಸೇರಿತ್ತು.

ಗುಣೊ ಅಣ್ಣನ ಮುಂದೆ ನರೇಶ ನಡೆದುಹೋಗುತ್ತಿದ್ದನು. ನರೇಶ, ಅದೇ ತಾನೇ ಬಿ.ಎ. ಮುಗಿಸಿ ಕಾಲೇಜಿನಿಂದ ಹೊರಬಂದವನು. ಬಹಳ ಉತ್ಸಾಹದಿಂದ ಸ್ತಂಭ ಉತ್ಸವದಲ್ಲಿ ಸೇರಿದ್ದಾನೆ. ಅದು ಗುಣೋ ಅಣ್ಣನಲ್ಲಿ ಬಹಳ ವಿಸ್ಮಯವನ್ನು ಹುಟ್ಟಿಸಿದೆ. ಆಗಲಿ, ಕಲಿತ ಹುಡುಗರೂ ಈ ಸಂಪ್ರದಾಯವನ್ನು ಮುಂದುವರಿಸಲಿದ್ದಾರೆ.

"ನರೇಶ, ನಿನಗೆ ಗೊತ್ತಾ? ಹಿಂದೆ ಈ ದಾರಿ ಪೊದೆಗಳಿಂದ ತುಂಬಿತ್ತು. ಕಂಚಿನ ಜಾಗಟೆ, ತಾಳ ಹಿಡಿದುಕೊಂಡು ಸದ್ದು ಮಾಡುತ್ತಾ ಹೋಗಬೇಕಿತ್ತು. ನಡುವೆ ದಟ್ಟವಾದ ಅರಣ್ಯಪ್ರದೇಶ. ಹುಲಿಯ ಘರ್ಜನೆ ಕೂಡಾ ಕೇಳಿಸುತ್ತಿತ್ತು. ಈಗ ಆ ಕಾಡು ಉಳಿದಿಲ್ಲ, ಬಿಡು."

"ಗುಣೋ ಅಣ್ಣ, ನೀವು ಉತ್ಸವಕ್ಕೆ ಎಷ್ಟು ವರ್ಷಗಳಿಂದ ಬರುತ್ತಿದ್ದೀರಿ?"

"ಎಷ್ಟು ವರ್ಷವೆಂದು ಹೇಗೆ ಹೇಳಲಿ? ಮೊದಲು ಬಂದಾಗ ನನಗೆ ಹದಿನೈದು ವರ್ಷ ಪ್ರಾಯ. ಆಗಿನಿಂದ ಒಂದು ಬಾರಿಯಾದರೂ ನಾನು ತಪ್ಪಿಸಿಕೊಂಡಿಲ್ಲ. ಸ್ತಂಭ ಉತ್ಸವ ಹೊರಡುತ್ತದೆ ಎಂದು ತಿಳಿದ ಕೂಡಲೇ ಬಂದು ಕಲಶ ಧ್ವಜವನ್ನು ತಬ್ಬಿಕೊಳ್ಳುತ್ತಿದ್ದೆ."

ನಡುವೆ ನರೇಶ ಕೇಳಿದ, "ಗುಣೋ ಅಣ್ಣ, ಉತ್ಸವದ ಈ ಮೆರವಣಿಗೆ ಎಂದಿನಿಂದ ಶುರುವಾಯಿತು ಮತ್ತು ಯಾಕೆ ಹಾಗೂ ಯಾವ ಕಾರಣಕ್ಕಾಗಿ ಪ್ರಾರಂಭವಾಯಿತು?"

"ಯಾರ ಕಾಲದಿಂದ ಶುರುವಾಯಿತು ಎಂದು ಯಾರಿಗೂ ಗೊತ್ತಿಲ್ಲ. ಆದರೆ ಇದು ನಮ್ಮ ಪೂರ್ವಜರ ಕಾಲದಿಂದ ನಡೆದು ಬಂದಿದೆ ಎಂದು ನನ್ನ ಅತ್ತಿಗೆ ಹೇಳುತ್ತಿದ್ದರು. ಗೋವಾ ಮತ್ತು ಶಿವೇಶ್ವರದಲ್ಲಿ ಹರಡಿರುವ ಮಲ್ಲಿಕಾರ್ಜುನನ ವಂಶಜರಿಂದ ಮತ್ತು ಅದರ ಬೀಳಲಿನಿಂದ ಬಂದ ಘನವಾದ ಸಂಪ್ರದಾಯವಿದು. ಒಂದು ಕಾಲದಲ್ಲಿ ಭುಜಕ್ಕೆ ಭುಜ ಕೊಟ್ಟು ನಮ್ಮ ವೈರಿಗಳ ಜೊತೆ ಹೋರಾಡಿದ್ದೇವೆ." ಗುಣೋ ಅಣ್ಣ ನಿಧಾನವಾಗಿ ಚಿಂತೆಯಲ್ಲಿ ಮುಳುಗತೊಡಗಿದರು. ಬೇರೆ ಯಾವುದೋ ಲೋಕದಲ್ಲಿ ಇರುವಂತೆ ಗಂಟಲನ್ನು ಸರಿಪಡಿಸುತ್ತಾ, ನಿಟ್ಟುಸಿರು ಬಿಡುತ್ತಾ ಹೇಳತೊಡಗಿದರು–

"ಹಿಂದೆ ಈ ವಠಾರವನ್ನು ಶಿವೇಶ್ವರ ಎಂದು ಕರೆಯುತ್ತಿದ್ದರು. ಮುಂದೆ ಕಾಣುತ್ತಿರುವ ಶಿವೇಶ್ವರ ಬೆಟ್ಟದಿಂದ ಈ ವಠಾರಕ್ಕೆ ಈ ಹೆಸರು ಬಂದಿದೆ. ಅದನ್ನು ಕಾರವಾರ ಎಂದು ಯಾವಾಗ ಮತ್ತು ಯಾಕೆ ಕರೆದರು ಎನ್ನುವುದು ಗೊತ್ತಿಲ್ಲ. ಕಡವಾಡ ಇದ್ದುದನ್ನು ಇಂಗ್ಲಿಷಿನಲ್ಲಿ ಕಾರವಾರ ಮಾಡಿದರೆಂದು ಊರಿನವರು ಹೇಳುತ್ತಾರೆ. ಆದರೆ ನಮ್ಮ ಪ್ರಕಾರ ಈ ಮಲ್ಲಿಕಾರ್ಜುನ ಶಿವೇಶ್ವರ ಆವಾಸಸ್ಥಾನವನ್ನು ಮಲ್ಲಿಕಾರ್ಜುನ ಸಂಸ್ಥಾನವೆಂದು ವಿಸ್ತರಿಸಲಾಯಿತು. ಕಾಣಕೋಣದಿಂದ ಕಾರವಾರದ ತನಿಕಾತಾಣೆಯವರೆಗೆ ಮಲ್ಲಿಕಾರ್ಜುನ ಸಂಸ್ಥಾನವನ್ನು ವಿಸ್ತರಿಸಲಾಗಿದೆ. ಮೊದಲಿನಿಂದಲೂ ಶ್ರೀಸ್ಥಳವೇ ನಮ್ಮ ತನಿಕಾತಾಣೆ ಮತ್ತು ಇದು ನಮ್ಮ ಅಂತಿಮ ಕಟ್ಟೆ. ಕಾರವಾರದ ಎಲ್ಲೆಯಲ್ಲಿ ಇವತ್ತಿಗೂ ಈ ತನಿಕಾತಾಣೆ ಇದೆ. ಮೊದಲು ನಾವು ತನಿಕಾತಾಣೆಯಲ್ಲಿ ಕಳಶ ಧ್ವಜವನ್ನು ನೇರವಾಗಿ ನಿಲ್ಲಿಸಿ ಜಾಗಟೆ, ವಾದ್ಯಗಳಿಂದ ಕೂಡಿ ಜಯಕಾರ ಮಾಡುತ್ತಿದ್ದೆವು. ಮೊದಲು ಈ ಜಾಗದಲ್ಲಿ ಹವಿಗರು ಎನ್ನುವ ಜಾತಿಜನರು ಓಡಾಡಿಕೊಂಡಿದ್ದರು. ಅವರು ಇಲ್ಲಿ ಹವಸ್ಥಾನ ಎಂಬ ರಾಜ್ಯವನ್ನು ಸ್ಥಾಪಿಸಿದರು. ಅವರು ಜನರನ್ನು ತುಂಬಾ ಪೀಡಿಸುತ್ತಿದ್ದರು. ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದರು. ಆಗ ಮಲ್ಲಿಕಾರ್ಜುನನ ಅಂಗಣದಿಂದ ಕತ್ತಿ ಝಳಪಿಸಿತು. ಅದು ಹವಿಗರಿಗೆ ತಾಗಿತು. ದೊಡ್ಡ ರಣಕಾಂಡವೇ ನಡೆಯಿತು. ದೊಡ್ಡ ಪ್ರಮಾಣದ ಜಯ ದೊರೆಯಿತು. ಸೋತ ಹವಿಗರನ್ನು ಗಡಿಪಾರು ಮಾಡಲಾಯಿತು. ಇವತ್ತಿಗೂ ಈ ಹವಿಗರು ಶಿವೇಶ್ವರದ ವಠಾರದ ಹೊರಗಿರುವ ಕಾಡುಮೇಡಿನಲ್ಲಿ ವಾಸವಾಗಿದ್ದಾರೆ. ಜಯ ಗಳಿಸಿದ ಜನರು ಕೈಯಲ್ಲಿ ಖಡ್ಗ ಹಿಡಿದು ಜಯದ ಘೋಷಣೆ ಕೂಗುತ್ತಾ ಅಂಗಣಕ್ಕೆ ಮರಳಿದರು. ವಸಂತ ಋತುವಿನ ದಿನ ಯುದ್ಧವನ್ನು ಗೆದ್ದ ಖುಷಿಯಿಂದ ಆರ್ಭಟಿಸಿ ಕಾಣಕೋಣವಿಡೀ ಕುಣಿದಾಡಿದರು. ಆಗಿನಿಂದ ಶುರುವಾಯಿತು ಈ 'ವೀರ ಉತ್ಸವ.'

'ವೀರಫಳ್' ಎಂದರೆ ಏನೆಂದು ನಿನಗೆ ಗೊತ್ತೇ? ವೈರಿಗಳ ದಳಪತಿಯ ಶಿರಚ್ಛೇಧನ ಮಾಡುವುದು. ದಳಪತಿಯನ್ನು ಹೊಡೆಯುವುದೆಂದರೆ ಮೊದಲು ಅವನನ್ನು ಬಂಧಿಸುವುದು. ನಂತರ ದಳಪತಿಯ ಶಿರದ ಹಾಗೆ, ಬೇರೆ ಹಿತ್ತಾಳೆ ಅಥವಾ ಕಲ್ಲಿನ ಶಿರವನ್ನು ಮಾಡಿ ದೇವಾಲಯದ ಎದುರು ಎಲ್ಲಿಯಾದರೂ ಇಡುವುದು. ಶ್ರೀಸ್ಥಳದಲ್ಲಿ ಇಂತಹ ಕಲ್ಲಿನ ಮೂರ್ತಿ ಇರುವುದು ನೀನು ಬಲ್ಲೆ.

ಆಗಿನಿಂದ ಈ ಎಲ್ಲ ವಠಾರದಲ್ಲಿ ಜಯದ ಘೋಷ ಕೂಗುತ್ತಾ ಉತ್ಸವದ ಮೆರವಣಿಗೆಯನ್ನು ಮಾಡುತ್ತಾರೆ. ಮೊದಲು ಮೆರವಣಿಗೆಯ ಎದುರುಭಾಗದಲ್ಲಿ ಪೂಜಾರಿಗಳು ಖಡ್ಗ ಹಿಡಿದು ಹೋಗುತ್ತಿದ್ದರು. ನಂತರ ಪೋರ್ತುಗೀಸರು ಇದಕ್ಕೆ ತಡೆ ಹಾಕಿದ್ದರಿಂದ ಈ ಪದ್ಧತಿ ನಿಂತುಹೋಯಿತು. ಶಿವೇಶ್ವರದ ಬಳಿ ಇರುವ ಮ್ಹಾಜಾಳಿ ಎನ್ನುವ ಊರಿನಲ್ಲಿ ನಮಗೆ ಪ್ರವೇಶವಿಲ್ಲ. ಅಲ್ಲಿ 'ವೀರದನಿ' ಎಂಬ ಒಬ್ಬ ಭಯಾನಕ ಕರ್ಣವೀರನಿದ್ದನು. ಅವನು ಹವಿಗರನ್ನು ಓಡಿಸುವುದರಲ್ಲಿ ಮಲ್ಲಿಕಾರ್ಜುನನ ಜೊತೆ ಇದ್ದವನು. ಈ ವೀರದನಿಯು ಮಲ್ಲಿಕಾರ್ಜುನನ ದಳಪತಿ ಅವತಾರ ಪುರುಷ ಅಂದರೆ ಮ್ಹಾಜಾಳಿ ರಾಮನಾಥನ ದಳಪತಿ. ಇವರಿಬ್ಬರೂ ಜೊತೆಯಲ್ಲಿ ಹೋರಾಡಿದರು ಮತ್ತು

ಜಯವನ್ನು ಗಳಿಸಿದರು. ಮಲ್ಲಿಕಾರ್ಜುನನು ವೀರದನಿಗೆ ಮಾನ್ಯತೆ ನೀಡಿದನು. ಅವನಿಗೆ ಮಾನ್ಯತೆ ಪತ್ರವನ್ನು ನೀಡಿ, "ನೀನು ನಿನ್ನ ರಾಜ್ಯವನ್ನು....." ಸಂಭಾಳಿಸು. ಅದರಲ್ಲಿ ನಾನು ಬರುವುದಿಲ್ಲ" ಎಂದು ಹೇಳಿದನು. ಈ ವೀರದನಿಯ ಸ್ಥಳವನ್ನು ಇವತ್ತೂ ಸಹ ನಾವು ಮ್ಹಾಜಾಳಿಯಲ್ಲಿ ನೋಡಬಹುದು. ಇದು ಹವಾಸ್ಥಾನದ ನೆನಪಿನ ಚಿಹ್ನೆ.

ನಮ್ಮ ಉತ್ಸವ ಹೋಗುವ ಹಾದಿಯು ಬಹಳ ಹಿಂದೆಯೇ ನಿರ್ಧಾರಿತವಾದುದು. ಮಾಲ್ಲೆಯಲ್ಲಿ ರಾತ್ರಿಯನ್ನು ಕಳೆದು ಶಿವೇಶ್ವರದಲ್ಲಿ ಇಳಿಯುವಾಗ ಮೊದಲ ಕಟ್ಟೆಯೇ ಪಂಟಲಬಾಗ್. ನಂತರ ವಿಶ್ರಮಿಸುವುದು ಸಾನ್ ಮೂದಗಿರಿಯಲ್ಲಿ. ಆಮೇಲಿನ ದಿನ ಹೊಸಾಳಿಯಲ್ಲಿ. ನಂತರ ಒಂದರ ಹಿಂದೆ ಒಂದರಂತೆ ಊರುಗಳು–ನಾಗಪೋಣ್, ಚಿತ್ತಾಕುಲ, ಕಣಸಗಿರಿ, ವಾಡ, ಮಕ್ಕೇರಿ, ಕಠಿಣಕೋಣ, ವೆಂಡಿಡಚೆ, ಶಿರ್ವಡೆ, ಕಿನ್ನರ, ಸಿದ್ಧರ, ಖಾರ್ಗೆ, ಕೇರ್ವಡಿ, ಬೊಡಯೆ, ಬ್ಯೆರೆ, ಹುಳ್ಗೆ, ಹಳ್ಗೆ. ಅಂತಿಮವಾಗಿ ಹಣಕ್ಕಾಣ. ಮರಳಿ ಕಾಣಕೋಣ. ಇನ್ನು ಸಣ್ಣಪುಟ್ಟ ಬಡಾವಣೆಗಳು ಎಲ್ಲೆಲ್ಲೂ ಇವೆ. ಎಲ್ಲಿಯೂ ಯಾವ ಕಟ್ಟೆಯನ್ನೂ ಬಿಡುವ ಹಾಗಿಲ್ಲ. ಜನರು ಉತ್ಸವದ ದಾರಿ ನೋಡಲು ಕಾತರದಿಂದ ಕಾಯುತ್ತಾರೆ. ಡೋಲು ಮತ್ತು ಜಾಗಟೆಯ ಶಬ್ದ ಕೇಳಿದ ಕೂಡಲೇ ಇಡೀ ಊರಿನ ಜನ ಬೆಟ್ಟದಿಂದ ಕೆಳಗೆ ಇಳಿದು ಸೇರುತ್ತಾರೆ. ಭಕ್ತಿಭಾವದಿಂದ ಕೈಮುಗಿದು ಉತ್ಸವಕ್ಕೆ ಬರುತ್ತಾರೆ. ನಂತರ ಹಿಂದಿನಿಂದಲೂ ನಡೆದು ಬಂದಂತೆ ಉತ್ಸವ ಅಲ್ಲಿಯ ಮಠದಲ್ಲಿ, ಮನೆಯ ಅಂಗಣದಲ್ಲಿ ವಿಶ್ರಮಿಸುತ್ತದೆ.

ಊರಿನ ಪ್ರಮುಖರೆಲ್ಲರೂ ಉತ್ಸವದ ಪ್ರಯುಕ್ತ ಊಟದ ವ್ಯವಸ್ಥೆ ಮಾಡಲು ಉತ್ಸಾಹದಿಂದ ಮುಂದಾಗುತ್ತಾರೆ. ಅಕ್ಕಿ ಮತ್ತು ಪಾತ್ರೆಗಳನ್ನು ಒಟ್ಟು ಮಾಡಲು ಜನರು ಊರೆಲ್ಲಾ ಓಡಾಡುತ್ತಾರೆ. ಭಕ್ತರು ತಮಗೆ ತೃಪ್ತಿಯಾದ ಜಾಗದಲ್ಲಿ ದೇವರ ಮೂರ್ತಿಯನ್ನು ಪೀಠದಲ್ಲಿ ಸ್ಥಾಪಿಸುತ್ತಾರೆ. ಧ್ವಜವನ್ನು ನಿಲ್ಲಿಸುತ್ತಾರೆ. ಮತ್ತು ಅಲ್ಲಿಯೇ ಆ ಊರಿನ ಜನರೆಲ್ಲರೂ ಸೇರಿ ಸ್ತಂಭ ಉತ್ಸವದ ಪೂಜೆ ಮಾಡುತ್ತಾರೆ.

ಕಾಳಿನದಿಯ ಆಚೆ ಇರುವ ಮಕೇರಿ, ಕಿನ್ನರ, ಸಿದ್ಧರ ಇತ್ಯಾದಿ ಊರುಗಳ ಜನರ ಮ್ಯೆಮೇಲೆ ಮಲ್ಲಿಕಾರ್ಜುನನ ಅವತಾರ ಬರುತ್ತದೆ. ಒಂದು ಬಾರಿ ಈ ವಠಾರದಲ್ಲಿ ಇರುವವರೆಲ್ಲರೂ ದೇವರ ಮುಂದೆ ನಿಂತು ಹೀಗೆ ಪ್ರಾರ್ಥಿಸಿದರು: "ದೇವರೇ, ನಾವು ನಿನ್ನದೇ ಮಕ್ಕಳು. ನದಿಯ ಆಚೆ ಕಡೆ ಮನೆಕಟ್ಟಿಕೊಂಡಿದ್ದೇವೆ. ನದಿಯನ್ನು ದಾಟಿ ಬರುವ ಕೆಲಸ ಕಷ್ಟಕರವಾದುದು. ಯಾವಾಗ ದಾಟಬಹುದು ಮತ್ತು ಯಾವಾಗ ದಾಟಲಾಗದು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ಬಿರುಗಾಳಿ ಮತ್ತು ಪ್ರವಾಹವಿರುವಾಗ. ಆದ್ದರಿಂದ ವರ್ಷಕ್ಕೆ ಒಂದು ಬಾರಿ ಸ್ತಂಭ ಉತ್ಸವದೊಂದಿಗೆ ಬರುತ್ತೇವೆ. ಆಗಲೇ ನೀನು ನಮಗೆ ನಿನ್ನ ದರ್ಶನವನ್ನು ನೀಡಿ ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನಮ್ಮ ಕಷ್ಟಗಳನ್ನು ನಿವಾರಿಸಿ ಕೊಡಬೇಕು."

ಮ್ಯೆಮೇಲೆ ದೇವರು ಬಂದಾಗ ಭಕ್ತಜನ ಕಳಶ ಧ್ವಜವನ್ನು ಕ್ಯೆಯಲ್ಲಿ ಹಿಡಿದು ಅಲ್ಲಲ್ಲಿ ಕುಣಿಯುತ್ತಾರೆ. ಮಲ್ಲಿಕಾರ್ಜುನನ ಈ ಸವಾರಿ ನೋಡಲು ಚೆಂದ. ಜನರು ಭಕ್ತಿಭಾವದಿಂದ ಕೈ ಜೋಡಿಸಿ ನಮಸ್ಕರಿಸುತ್ತಾರೆ ಮತ್ತು ತಮ್ಮ ಬೇಡಿಕೆಗಳನ್ನು ಕೋರುತ್ತಾರೆ.

ಶಿವೇಶ್ವರ ವಠಾರದಲ್ಲಿ ಇರುವ ಜನರು ಭಾವುಕರು ಮತ್ತು ಸತ್ಯದಲ್ಲಿಯೇ ನಡೆಯುವವರು. ಅವರು ಜೀವನದಲ್ಲಿ ಅನುಭವ ಉಳ್ಳವರು. ಆದರೆ ನೀತಿಯನ್ನು ಪಾಲಿಸುವವರು. ಮನೆಬಾಗಿಲಿಗೆ ಬಂದ ಅತಿಥಿಗಳನ್ನು ದೇವರಂತೆ ಕಂಡು ಸ್ವಾಗತಿಸುತ್ತಾರೆ. ಅವರನ್ನು ಚೆನ್ನಾಗಿ ಸತ್ಕರಿಸುತ್ತಾರೆ. ಯಾವ ಊರಿಗೆ ಹೋಗುತ್ತಾರೋ ಆ ಊರಿನಲ್ಲಿ ನಮ್ಮ ಮನೆ ಇದೆ, ಮತ್ತೆ ಆ ಮನೆಯಲ್ಲಿ ಇರುವವರು ನಮ್ಮ ಸೋದರರು ಎಂದು ಭಾವಿಸುತ್ತಾರೆ. ಅವರು ಎಷ್ಟು ಕಷ್ಟಜೀವಿಗಳೆಂದರೆ ಹೊಲದಲ್ಲಿ ಶ್ರಮಪಟ್ಟು ದುಡಿಯುತ್ತಾರೆ ಮತ್ತು ದೇವರು, ಧರ್ಮಕ್ಕೆ ಹೆದರಿ ಜೀವನ ನಡೆಸುತ್ತಾರೆ. ಭತ್ತದ ಕದಿರು ಬರುವ ಭೂಮಿಯನ್ನು ಅವರು ತಾಯಿ ದೇವರೆಂದು ತಿಳಿಯುತ್ತಾರೆ. ಹಾಗೆಯೇ ಭೂಮಿಯನ್ನು ಉಳುವ ಮೊದಲು ಮತ್ತು ಭತ್ತ ನಾಟಿ ಮಾಡುವ ಮೊದಲು ಭೂಮಿಪೂಜೆ ಮಾಡುತ್ತಾರೆ. ಭತ್ತದ ಕಾಳನ್ನು ಬೇರ್ಪಡಿಸುವ ಮೊದಲು ಆ ಜಾಗದ, ಆ ನೆಲದ ಪೂಜೆ ಮಾಡದೆ ಮುಂದುವರಿಯುವವರಲ್ಲ. ಮನೆಯ ಅಂಗಣವನ್ನು ದೇವಾಲಯದ ಸಭಾಮಂಟಪದ ಹಾಗೆ ಶುಚಿಯಾಗಿ, ಅಂದವಾಗಿ ಇಟ್ಟುಕೊಳ್ಳುತ್ತಾರೆ. ಮನೆಯ ಮುಂದೆ ಜೇಡಿಮಣ್ಣಿನಿಂದ ಕಟ್ಟೆಕಟ್ಟಿ, ಸಗಣಿ ಸಾರಿಸಿ, ತೆಂಗಿನ ಗರಿಗಳಿಂದ ಮಂಟಪ ರಚಿಸುತ್ತಾರೆ."

ಅವರು ಮಾತನಾಡುತ್ತಾ ಇರುವಾಗಲೇ ಉತ್ಸವ ಗೋವಾ ಮತ್ತು ಕಾರವಾರದ ನಡುವಿನ ಜಾಗವನ್ನು ತಲುಪಿತು. ಆ ಹಾದಿಯ ಒಂದು ಬದಿ ನಾಲ್ಕೈದು ದೊಡ್ಡಗಾತ್ರದ ಗೇರುಹಣ್ಣಿನ ಮರಗಳು ಇದ್ದವು. ಅದರ ಕೆಳಗೆ ಪೂಜಿಸಲ್ಪಟ್ಟ ಕಲ್ಲನ್ನು ನಿಲ್ಲಿಸಲಾಗಿದೆ. ಅದಕ್ಕೆ ಆಧಾರವಾಗಿ ಇನ್ನೂ ಎರಡುಮೂರು ಕಲ್ಲುಗಳು. ಅಲ್ಲಿ ಸ್ತಂಭ ಉತ್ಸವದ ಧ್ವಜವನ್ನು ನೇರವಾಗಿ ನಿಲ್ಲಿಸಲಾಯಿತು.

ಗುಣೋ ಅಣ್ಣ ಹೇಳಿದರು, "ಮೊದಲು ಕಾಣಕೋಣದಿಂದ ಕಾರವಾರದವರೆಗೆ ಇದು ಒಂದೇ ವಠಾರವಾಗಿತ್ತು. ಪೋರ್ಚುಗೀಸರು ಇದನ್ನು ಒಡೆದು ನಮ್ಮ ನಡುವೆ ತಡೆ ಹಾಕಿದರು."

ಸ್ತಂಭ ಉತ್ಸವ ಎದ್ದು ಇಳಿಜಾರಿನಲ್ಲಿ ಹೋಗತೊಡಗಿತು. ಗುಣೋ ಅಣ್ಣ ಉತ್ಸಾಹದಿಂದ ಮುಂದೆ ಬಂದು ನರೇಶನಲ್ಲಿದ್ದ ಕಳಶ ಧ್ವಜವನ್ನು ತೆಗೆದುಕೊಂಡು ತಮ್ಮ ಹೆಗಲ ಮೇಲೆ ಎತ್ತಿಹಿಡಿದು ಹೇಳಿದರು, "ನಾನು ಉತ್ಸವಕ್ಕೆ ಬರುವುದು ಇದೇ ಕೊನೆಯ ಬಾರಿ. ಇದರಲ್ಲಿ ನಾನೇ ಕಳಶ ಧ್ವಜವನ್ನು ಎತ್ತಿ ಮೆರೆಯುತ್ತೇನೆ. ಇಡೀ ಶಿವೇಶ್ವರವನ್ನು ಎಬ್ಬಿಸುತ್ತೇನೆ."

ಗುಣೋ ಅಣ್ಣ ಕಲಶ ಧ್ವಜವನ್ನು ಎತ್ತಿಕೊಂಡು ಎಲ್ಲರಿಗಿಂತ ಮುಂದೆ ದೊಡ್ಡ ದೊಡ್ಡ ಹೆಜ್ಜೆಗಳನ್ನಿಡುತ್ತಾ ಹೊರಟರು. ಅವರ ಹಿಂದೆ ಸ್ತಂಭ ಉತ್ಸವದ ಉಳಿದ ಪೂಜಾರಿಗಳು ಸಾಲಾಗಿ ಹೊರಟರು.

ಅನುವಾದಕರು: **ಡಾ. ಜಿ. ಸಂಧ್ಯಾ ನಾಯಕ**

❖ ❖ ❖❖ ❖

ಬೆಟ್ಟ ಅರಳಿತು

✍ ಮೀನಾ ಸು. ಕಾಕೋಡಕರ

ಬ್ಯಾಂಕಿನ ಹೊಸ ಶಾಖೆ ತೆರೆದ ಕಾರಣವಾಗಿ ನನ್ನವರಿಗೆ ಪಿಸೋಳಿಗೆ ವರ್ಗಾವಣೆ ಆಯಿತು. ಇದರಿಂದ ನನಗೆ ಬಹಳ ಬೇಸರವಾಯಿತು. ಇಡೀ ಜೀವನವನ್ನು ನಗರದಲ್ಲಿ ಕಳೆದು ಈಗ ಹಳ್ಳಿಯಲ್ಲಿ ಇರುವುದು ಹೇಗೆ? ಅದು ಸಾಧ್ಯವಿಲ್ಲವೆಂದು ಮನಸ್ಸಿಗೆ ಹೊಳೆದು ದುಃಖವಾಯಿತು. ನಗರದ ಥಳಕು, ವೇಗ, ಜನಜಂಗುಳಿ ಇವೆಲ್ಲದರ ಮೇಲೆ ಪ್ರೀತಿ ಇದ್ದ ನನಗೆ ಅದನ್ನೆಲ್ಲಾ ಬಿಟ್ಟು ಮೂಲೆಯಲ್ಲಿರುವ ಪಿಸೋಳಿಯಂತಹ ಊರಿನಲ್ಲಿ ಕಾಲ ಕಳೆಯಬೇಕಲ್ಲ ಎಂದು ನಿರಾಶೆ ಕವಿಯಿತು. ನನ್ನವರು ಮಾತ್ರ ಖುಷಿಯಿಂದ ಇದ್ದರು. ಏಕೆಂದರೆ ಅವರ ಬಾಲ್ಯ ಕಳೆದದ್ದು ಹಳ್ಳಿಯಲ್ಲಿ. ಹೀಗಾಗಿ ಆ ಮಣ್ಣಿನ ವಾಸನೆ ಅವರಲ್ಲಿ ಇನ್ನೂ ಇತ್ತು. ಅದು ಎಲ್ಲಿಯೂ ಹೋಗುವುದಿಲ್ಲ ತಾನೇ? ಹಾಗಾಗಿ 'ಪಟ್ಟಣಕ್ಕಿಂತ ಹಳ್ಳಿಯೇ ಒಳ್ಳೆಯದು' ಎಂದು ಹೇಳುತ್ತಾ ಅವರು ತಮ್ಮ ಬಾಲ್ಯದ ದಿನಗಳನ್ನು ನನ್ನ ಕಣ್ಣಮುಂದೆ ತರಲು ಪ್ರಯತ್ನಪಟ್ಟರು. ಹಾಗೆಂದುಕೊಂಡು ನನಗೆ ನನ್ನ ಬಾಲ್ಯದ ನೆನಪು ಕಾಡುವುದಿಲ್ಲವೇ? ಚಿಕ್ಕವಳಿದ್ದಾಗ ನೆಲೆಯೂರಿದ್ದ ನಗರದೊಳಗಿನ ಖುಷಿ ಹಳ್ಳಿಯತ್ತ ಪಯಣಿಸಿದರೆ ತಪ್ಪಿಹೋಗಬಹುದು ಎಂದು ಇವರಿಗೆ ತಿಳಿಯುವುದಿಲ್ಲವೇ? ಇರಲಿಕ್ಕಿಲ್ಲ. ಯಾಕೆಂದರೆ ಪಿಸೋಳಿಗೆ ಹೋಗುವ, ಅಲ್ಲಿ ನೆಲೆಯೂರುವ ಕುರಿತು ಅವರಿಗೆ ಉಂಟಾಗಿರುವ ಸಂತೋಷವನ್ನು ಗಮನಿಸಿದರೆ, ಇಷ್ಟು ದಿನಗಳನ್ನು ನಗರದಲ್ಲಿ ಕಳೆಯುವಂತಾದದ್ದು ಅವರಿಗೆ ದುಃಖದ ಸಂಗತಿಯಾಗಿ ರಬಹುದೆಂದು ನನ್ನ ಮನಸ್ಸಿಗೆ ಬಂತು.

ಮನೆ ಸಾಮಾನು ಸರಂಜಾಮು ಕಟ್ಟುವಾಗ ನನಗೆ ಉತ್ಸಾಹವೇ ಇರಲಿಲ್ಲ. ವರ್ಗವಾದ ಕಾರಣ ನಮಗೆ ಪಾರ್ಟಿ ಕೊಟ್ಟಿದ್ದರು. ನೆರೆಹೊರೆಯವರು ಊಟಕ್ಕೆ ಕರೆದಿದ್ದರು. ಆ ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳನ್ನು ಪಡೆದಾಗ ನನ್ನ ಮನಸ್ಸು ಮತ್ತಷ್ಟು ಭಾರವಾಯಿತು. ಹಾಗೆ ನೋಡಲು ಹೋದರೆ ಪಿಸೋಳಿ ಮಡಗಾಂವ್‌ನಿಂದ ಬಹಳ ದೂರವೇನಿಲ್ಲ. ನಗರಕ್ಕೆ ಯಾವಾಗ ಬೇಕಾದರೂ ಹೋಗಿ ಬರಬಹುದು. ಆದರೆ ನಗರದಲ್ಲಿ ಉಳಿಯುವುದೇ ಬೇರೆ, ಹೋಗಿ ಬರುವುದೇ ಬೇರೆಯಲ್ಲವೇ?

* * *

ನಾವು ಪಿಸೋಳಿಗೆ ಹೋಗಿ ತಲುಪಿದಾಗ ಸಂಜೆಯಾಗಿತ್ತು. ಇಡೀ ಊರಿನಲ್ಲಿ ಕತ್ತಲೆ ಕವಿಯಲಾರಂಭಿಸಿತ್ತು. ಹಟ್ಟಿಗೆ ಮರಳಿದ ಹಸುಗಳ ಕೊರಳಲ್ಲಿದ್ದ ಗಂಟೆಗಳ ಸದ್ದು ಕಿವಿಯಲ್ಲಿ ಗುಣಗುಣಿಸುತ್ತಿತ್ತು. ಸೆಗಣಿ ವಾಸನೆ ಮೂಗಿಗೆ ಬಡಿಯುತ್ತಿತ್ತು. ಕಣ್ಣು ಹಾಯಿಸಿದೆಡೆ ಚಿಮಿಣಿ ದೀಪದ ಬೆಳಕು ಕಾಣಲಾರಂಭಿಸಿತು. ವಿದ್ಯುತ್ ದೀಪದ ನೆನಪಾಗಿ ನಾನು ಕಣ್ಣುಮುಚ್ಚಿಕೊಂಡೆ. ಇಂತಹ ಪಿಸೋಳಿ ನನಗೆ ಮಾತ್ರ ಸೇರಲೇ ಇಲ್ಲ.

ಮರುದಿನ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದ ಸಾಮಾನುಗಳನ್ನೆಲ್ಲಾ ವ್ಯವಸ್ಥಿತವಾಗಿ ಜೋಡಿಸಿಕೊಳ್ಳುವುದರಲ್ಲಿ ಸಮಯ ಜಾರಿದ್ದು ಗೊತ್ತಾಗಲೇ ಇಲ್ಲ. ಮಧ್ಯಾಹ್ನದ ಹೊತ್ತು ಪುಸ್ತಕಗಳನ್ನು ಕಪಾಟಿನಲ್ಲಿ ಜೋಡಿಸುವಾಗ ಕಿಟಕಿಯಿಂದ ಯಾರೋ ಒಬ್ಬರು ಒಳಗೆ ಇಣಿಕಿ ನೋಡುತ್ತಿರುವುದು ನನ್ನ ಗಮನಕ್ಕೆ ಬಂತು. ಸುಮಾರು ಏಳೆಂಟು ವರ್ಷದ ಹುಡುಗನೊಬ್ಬ ಕಿಟಕಿಯ ಆಚೆ ನಿಂತುಕೊಂಡಿದ್ದ. ನಾನು ಅವನ ಕಡೆ ನೋಡಿದಾಗ ಅವನು ನಕ್ಕ. ಆಮೇಲೆ ಚಿಕ್ಕಮ್ಮ, ನಾನು ಒಳಗೆ ಬರಲೇ? ಎಂದು ಕೇಳಿದ. "ಬಾ" ಎಂದೆ ನಾನು. ಕಪ್ಪು ದೇಹವಾದರೂ ಒಪ್ಪಾಗಿತ್ತು. ಹೊಳಪಾದ ಕಂಗಳು. ಮಂದಸ್ಮಿತ ಮುಖ. ಇದು ನಾನು ಅವನಲ್ಲಿ ಕಂಡ ವಿಶೇಷತೆ.

"ಮಗೂ, ನಿನ್ನ ಹೆಸರೇನು?"

"ಭಾನುದಾಸ" ಅವನು ಸೊಂಟದಿಂದ ಕೆಳಗೆ ಜಾರಿಕೊಳ್ಳುತ್ತಿದ್ದ ಚಡ್ಡಿಯನ್ನು ಮೇಲೆ ಎಳೆದುಕೊಳ್ಳುತ್ತಾ ಹೇಳಿದ.

"ನೀನು ಎಲ್ಲಿ ವಾಸಿಸುತ್ತಿ?"

"ಆ ಕಡೆ ಕೇರಿಯಲ್ಲಿ ಒಂದು ಗುಡಿಸಲು ಇದೆ. ಅಲ್ಲಿ ನಾವು ಇರುತ್ತೇವೆ" ಬಾಗಿಲಿನಿಂದ ಆಚೆ ಕೈ ತೋರಿಸುತ್ತಾ ಅವನು ಹೇಳಿದ. ಆಮೇಲೆ ಕೋಣೆಯೊಳಗಿರುವ ಸಾಮಾನುಗಳನ್ನು ನೋಡುತ್ತಾ, "ನಿಮ್ಮ ಮನೆಯಲ್ಲಿ ಬೇಕಾದ ಸಾಮಾನುಗಳೆಲ್ಲಾ ಇವೆಯಲ್ಲ?" ಎಂದು ಹೇಳಿದ. ಅಲ್ಲಿರುವುದೆಲ್ಲಾ ತನ್ನದೇ ಮನೆಯ ಸಾಮಾನುಗಳೆನ್ನುವಂತೆ ಅವನು ಖುಷಿ ಪಟ್ಟ ಹಾಗೆ ಕಾಣಿಸಿತು. ಅವನು ಕಪಾಟಿನ ಕನ್ನಡಿಗೆ ಮೂಗನ್ನು ಒತ್ತಿ ನಾಲಿಗೆ ಹೊರಚಾಚಿದ. ನನಗೆ ನಗು ಬಂತು. ಅವನ ಕೈಗೆ ಎರಡು ಬಿಸ್ಕತ್ತು ಕೊಟ್ಟು ನಾನು ನನ್ನ ಕೆಲಸದಲ್ಲಿ ಮಗ್ನಳಾದೆ.

ಅಂದಿನಿಂದ ಭಾನುದಾಸ ನನ್ನ ಹಿಂದೆಮುಂದೆ ಇರಲಾರಂಭಿಸಿದ. ಅವನು 'ಚಿಕ್ಕಮ್ಮ' ಎಂದು ಕರೆಯುವಾಗ ನನಗೆ ಬಹಳ ಸಂತೋಷವಾಗುತ್ತಿತ್ತು. ಇವರು ಬ್ಯಾಂಕಿಗೆ ಹೋದ ಬಳಿಕ ನಾನು ಇಡೀ ದಿನ ಪುಸ್ತಕಗಳೊಂದಿಗೆ ಕಾಲಕಳೆಯುತ್ತಿದ್ದೆ. ಬೇಸರವಾದರೆ ಹೊರಗೆ ಅಂಗಳದಲ್ಲಿ ಕುಳಿತು ತೆಂಗಿನ ಮರವನ್ನು ನೋಡುತ್ತಿದ್ದೆ. ಹೀಗೆ ವೇಳೆ ಕಳೆಯುತ್ತಿರುವಾಗ ನನಗೆ ಮುಂಬೈಯ 'ನಾರಿಯಲ್ ಪಾನಿ' ನೆನಪು ಬಂತು. ಹಿಂದಿನ ನೆನಪುಗಳು ಒಂದರ ಹಿಂದೆ ಒಂದರಂತೆ ಕಾಡತೊಡಗಿ ಪಿಸೋಳಿ ಬೇಸರ ಬರಿಸಿತು. ನೆರೆಹೊರೆಯಲ್ಲಿ ಹೆಂಗಸರು ಇಲ್ಲವೆಂದಲ್ಲ. ಆದರೂ ನನ್ನ ಸಂಸಾರದಲ್ಲಿ ಒಂಟಿತನ ಕಾಡತೊಡಗಿತು. ನನ್ನವರಿಗೆ ಮಹಿಳಾ ಮಂಡಲ, ಸಭೆ ಇತ್ಯಾದಿಗಳಲ್ಲಿ ಮೊದಲಿನಿಂದಲೇ ಆಸಕ್ತಿ ಇರಲಿಲ್ಲ. ಭಾನುದಾಸ ಬರತೊಡಗಿದ್ದರಿಂದ ನನ್ನ ಸಮಯ ಸುಲಭವಾಗಿ ಕಳೆಯಲಾರಂಭಿಸಿತು.

"ಚಿಕ್ಕಮ್ಮ ಅಣ್ಣ ಎಲ್ಲಿ ಹೋಗುತ್ತಾರೆ?" "ಚಿಕ್ಕಮ್ಮ ಅಣ್ಣ ಒಳ್ಳೆಯದಾಗಿ ನಡೆಸಿಕೊಳ್ಳುತ್ತಾರೆ, ಅಲ್ಲವೇ?" "ಚಿಕ್ಕಮ್ಮ ಅಣ್ಣ ದೊಡ್ಡ ನೌಕರಿಯಲ್ಲಿದ್ದಾರೆಯೇ?."

ಭಾನುದಾಸನಿಗೆ ನನಗಿಂತ ನಮ್ಮ ದೊಡ್ಡಸ್ತನವೇ ಹೆಚ್ಚು ಕಾಣಿಸುತ್ತಿತ್ತು. ಅವನು ತನ್ನ ಮನೆಗಿಂತ ನಮ್ಮ ಜಗಲಿಯಲ್ಲಿಯೇ ಹೆಚ್ಚು ಸಮಯ ಕಳೆಯುತ್ತಿದ್ದ. ಅವನ ಮನೆಯಲ್ಲಿ ಅವನ ತಂದೆ, ತಾಯಿ ಮತ್ತು ಮೂರು ಮಂದಿ ಒಡಹುಟ್ಟಿದವರು ಇದ್ದರು. ಮಕ್ಕಳಲ್ಲಿ ಭಾನುದಾಸನೇ ದೊಡ್ಡವನು. ಇಡೀ ದಿನ ಮಣ್ಣಿನಲ್ಲಿ ಹೊರಳಾಡುತ್ತಿರುತ್ತಾನೆ. ಒಂದು ದಿನ ನಾನು ಅವನನ್ನು ಉದ್ದೇಶಿಸಿ ಕೇಳಿದೆ,

"ಭಾನುದಾಸ, ನೀನು ಶಾಲೆಗೆ ಹೋಗುವುದಿಲ್ಲವೇ?" ಅವನು ಸಿಕ್ಕಿಬಿದ್ದ ಕಳ್ಳನಂತೆ ಮುಖ ಕೆಳಗೆ ಹಾಕಿ ನಿಂತುಕೊಂಡ.

"ಅವನು ಶಾಲೆಗೆ ಹೋಗುವುದಿಲ್ಲವೆಂದು ಅಪ್ಪ ಅವನಿಗೆ ಚೆನ್ನಾಗಿ ಹೊಡೆಯುತ್ತಾನೆ" ಅವನ ಕಿರಿತಂಗಿ ಹೇಳಿದಳು.

ಭಾನುದಾಸ ಕಣ್ಣನ್ನು ದೊಡ್ಡದು ಮಾಡಿ, 'ನಿಲ್ಲು, ನಿನಗೆ ಮಾಡುತ್ತೇನೆ, ಹೊಡೆಯುತ್ತೇನೆ' ಎಂದು ಹೇಳುತ್ತಾ ಅವಳನ್ನು ಅಟ್ಟಿಸಿಕೊಂಡು ಹೋದ. ನಾನು ಅವನನ್ನು ತಡೆದು ನಿಲ್ಲಿಸಿದೆ.

"ಭಾನುದಾಸ, ನೀನು ಶಾಲೆಗೆ ಹೋಗುವುದಿಲ್ಲ ನಾಚಿಕೆಗೇಡು. ಜಾಣಮಕ್ಕಳು ಯಾವಾಗಲೂ ಶಾಲೆಗೆ ಹೋಗುತ್ತಾರೆ. ಶಾಲೆಗೆ ಹೋದರೆ ಮಾತ್ರ ನೀನು ದೊಡ್ಡ ವ್ಯಕ್ತಿಯಾಗುತ್ತಿ"

"ಅಣ್ಣ ಸಣ್ಣವರಿರುವಾಗ ಶಾಲೆಗೆ ಹೋಗುತ್ತಿದ್ದರೇನು?" ಅವನು ಕೇಳಿದ.

"ಹೌದು, ಮತ್ತೆ" ಅವನು ಕಣ್ಣು ಪಿಳಿಪಿಳಿ ಮಾಡಿ ನೋಡತೊಡಗಿದ. ನಾಳೆಯಿಂದ ನೀನು ಶಾಲೆಗೆ ಹೋಗುತ್ತೀಯಾ"

ಅವನು ನಿಜವಾಗಿಯೂ ಶಾಲೆಗೆ ಹೋಗಲು ಪ್ರಾರಂಭಿಸಿದ. ಪಾಟಿಚೀಲ ಹಿಡಿದು ನೇರವಾಗಿ ನಮ್ಮ ಮನೆಗೆ ಬರುತ್ತಿದ್ದ. ಅಡುಗೆಮನೆಯ ಕಂಬಕ್ಕೊರಗಿ ಕುಳಿತು ಬಳಪದಿಂದ ಪಾಟಿಯ ಮೇಲೆ ಬರೆಯತೊಡಗಿದ.

"ಎರಡ ಒಂದ್ಲೆ ಎರಡು, ಎರಡ ಎರಡ್ಲೆ ನಾಲ್ಕು, ಎರಡ ಮೂರ್ಲೆ ಒಂಭತ್ತು"

"ಭಾನುದಾಸ, ಎರಡ ಮೂರ್ಲೆ ಒಂಭತ್ತಲ್ಲ, ಆರು.."

ಎಲ್ಲಾ ಮಗ್ಗಿಯಲ್ಲಿಯೂ ಮೂರ್ಲೆ ಎನ್ನುವಾಗ ಅವನು ತಪ್ಪುತ್ತಿದ್ದ. ನಾಲ್ಕ್ ಮೂರ್ಲೆ ಹದಿಮೂರು, ಆರ್ ಮೂರ್ಲೆ ಹದಿನೈದು, ಎಂಟ್ ಮೂರ್ಲೆ ಹದಿನೆಂಟು..ಹೀಗೆ. ಎಷ್ಟು ಹೇಳಿದರೂ ಮಾರನೆಯ ದಿನ ಮತ್ತೆ ಅದೇ ಹಾಡು. ನಾನು ಅವನಿಗೆ ಗೋಡೆಯ ಕಡೆಗೆ ಮುಖ ಮಾಡಿ ಬಗ್ಗಿ ನಿಂತು ಮಗ್ಗಿ ಬಾಯಿಪಾಠ ಮಾಡಲು ಹೇಳಿದೆ. ಆದರೂ ಅವನಿಗೆ ನಾಚಿಕೆ ಇಲ್ಲ. ಬಗ್ಗಿ ನಿಂತುಕೊಂಡವ ಹೊಲದ ಆಚೆಗಿನ ಗುಡ್ಡದ ಮೇಲೆ ಕವಳೆಹಣ್ಣುಗಳು ಆಗಿರುವ ವಿಚಾರವನ್ನು ಸಂತೋಷದಿಂದ ಹೇಳತೊಡಗಿದ. "ನಾಳೆ

ನಿಮಗೆ ತುಂಬಾ ಹಣ್ಣುಗಳನ್ನು ತಂದು ಕೊಡುತ್ತೇನೆ ಚಿಕ್ಕಮ್ಮಾ" ಕಾಲುಗಳ ನಡುವೆ ತಲೆ ಇಟ್ಟು ಹೇಳಿದವನ ಬೆನ್ನಿನ ಮೇಲೆ ಗುದ್ದಿದೆ. "ನನಗೆ ನೀನು...." ಕವಳೆ ಹಣ್ಣುಗಳನ್ನು ತಂದುಕೊಡುವುದೇನೂ ಬೇಡ, ಮಗ್ಗಿ ಸರಿಯಾಗಿ ಓದು." ಅವನ ಕಣ್ಣಾಲಿಗಳು ತುಂಬಿಬಂದವು. ಒಳಗೊಳಗೆ ಅಳುತ್ತಾ ಅವನು ಮಗ್ಗಿ ಹೇಳತೊಡಗಿದ.

'ಎರಡ ಒಂದ್ಲೆ ಎರಡು, ಎರಡ ಎರಡ್ಲೆ ನಾಲ್ಕು.. ಎರಡ ಮೂರ್ಲೆ ಆರು..' ತಾನು ತಪ್ಪಬಹುದೆಂದುಕೊಂಡು ಅವನು ಬೇಗಬೇಗನೆ ಹೇಳತೊಡಗಿದ. ನಾನು ಅವನಿಗೆ ಕುಳಿತುಕೊಳ್ಳಲು ಹೇಳಿದೆ. ಅವನು ಹಾರುತ್ತಾ, ಕುಣಿಯುತ್ತಾ ನನ್ನ ಮುಂದೆ ಬಂದು ಕುಳಿತುಕೊಂಡ. ನಾವಿಬ್ಬರೂ ಸೇರಿ ಹೇಗೋ ಮಗ್ಗಿಯನ್ನು ಮುಗಿಸಿಬಿಟ್ಟೆವು. ಅವನು ತಾನು ಅರ್ಧಕ್ಕೆ ನಿಲ್ಲಿಸಿದ್ದ ಕವಳೆಹಣ್ಣುಗಳ ಕತೆಯನ್ನು ಹೇಳಲು ಪ್ರಾರಂಭಿಸಿದ.

"ಚಿಕ್ಕಮ್ಮ, ಬೆಟ್ಟದ ಮೇಲೆ ಸಾಕಷ್ಟು ಕವಳೆ ಹಣ್ಣಿನ ಗಿಡಗಳು ಇವೆ. ಮುಳ್ಳು, ಕೀಟಗಳಿಂದ ಕೂಡಿದ ಗಿಡದಿಂದ ನಿಧಾನವಾಗಿ ಹಣ್ಣುಗಳನ್ನು ಕೀಳಬೇಕು" ಭಾನುದಾಸ ಕವಳೆಹಣ್ಣುಗಳನ್ನು ಕೀಳುತ್ತಾ ನನ್ನನ್ನೂ ಕರೆಯತೊಡಗಿದ, "ಚಿಕ್ಕಮ್ಮಾ ಬನ್ನಿ." ಮುಳ್ಳುಗಳು ಚುಚ್ಚುತ್ತವೆ, ಕೀಟಗಳು ಕಡಿಯುತ್ತವೆ. ಹೀಗಿರುವಾಗ ಆ ಗಿಡಕ್ಕೆ ಕೈ ಹಚ್ಚಿ ಕವಳೆ ಹಣ್ಣುಗಳನ್ನು ತಿನ್ನುವವರು ಯಾರು? ಹತ್ತು ಪೈಸೆ ಕೊಟ್ಟು ಒಂದು ದೊನ್ನೆ ಕವಳೆಹಣ್ಣು ಖರೀದಿಸಿ ತಿನ್ನುವ ಪೇಟೆ ಜನ ನಾವು. "ಬೇಡಪ್ಪಾ ನನಗೆ ನಿನ್ನ ಆ ಹಣ್ಣು ಬೇಡ." ಭಾನುದಾಸನಿಗೆ ನಗು ಬಂತು. ಅವನು ಎರಡೂ ಕೈಗಳಿಂದ ತನ್ನ ಚಡ್ಡಿಯನ್ನು ಹಿಡಿದುಕೊಂಡು ನಗತೊಡಗಿದ.

ಎರಡನೇ ಬಾರಿ ಕರೆದಾಗ ನಾನು ಅವನ ಸಂಗಡ ಹೊರಡಲು ಸಿದ್ಧಳಾದೆ. ನನ್ನ ಜೊತೆ ಚಿಕ್ಕಮ್ಮ ಇದ್ದಾಳೆ ಎಂದು ಭಾನುದಾಸನಿಗೆ ತುಂಬಾ ಖುಷಿ. ಹೊಲದ ಬದುವಿನ ಮೇಲೆ ಪಟಗುಟ್ಟುತ್ತಾ ಅವನು ಸಾಗುತ್ತಿದ್ದ. ಎಲ್ಲಿಂದಲೋ ಹಾರಿ ಬಂದ ಬಿಳಿಬಣ್ಣದ ಕೊಕ್ಕರೆ ತನ್ನ ರೆಕ್ಕೆಗಳನ್ನು ಅಲುಗಾಡಿಸುತ್ತಾ ಹಳ್ಳದ ಪಕ್ಕಕ್ಕೆ ಇಳಿಯಿತು. "ಚಿಕ್ಕಮ್ಮಾ ಕೊಕ್ಕರೆ ನೋಡು" ಭಾನುದಾಸ ಕಲ್ಲನ್ನು ತೆಗೆದುಕೊಂಡು ಕೊಕ್ಕರೆಯ ಕಡೆಗೆ ಎಸೆದ. ಅದರ ರೆಕ್ಕೆಗಳು ಅರಳಿದವು. ಉದ್ದಕಾಲುಗಳುಳ್ಳ ಕೊಕ್ಕರೆ ಮೇಲೆ ಹಾರಿತು. ಒಣಗಿದ ಎಲೆಗಳಿದ್ದ ನೆಲದ ಮೇಲೆ ನಡೆಯುತ್ತಾ ನಾವು ಇಬ್ಬರೂ ಗುಡ್ಡವನ್ನೇರಲು ಪ್ರಾರಂಭಿಸಿದೆವು. ಸುಗಂಧಯುಕ್ತ ಗಾಳಿ ಮೈಮೇಲೆ ಬೀಸತೊಡಗಿತು. ಭಾನುದಾಸ ಹಾರುತ್ತಾ ಮುಂದೆ ಮುಂದೆ ಓಡುತ್ತಿದ್ದನು. ನಾನು ಮಾತ್ರ ಜೀವವನ್ನು ಸಂಭಾಳಿಸುತ್ತ, ಮುಳ್ಳು ಚುಚ್ಚಬಹುದು, ಬಟ್ಟೆ ಸಿಲುಕಿಕೊಳ್ಳಬಹುದು ಎಂಬ ಭಯದಿಂದ ನಿಧಾನವಾಗಿ ನಡೆಯುತ್ತಿದ್ದೆನು. ನಡುವೆ ನಿಂತುಕೊಂಡ ಭಾನುದಾಸ ಕುಸುಮಮಾಲೆ ಹಣ್ಣಿನ ಹೂಗೊಂಚಲೊಂದನ್ನು ಹರಿದು ನನ್ನ ಮುಂದೆ ಹಿಡಿದ.

"ಚಿಕ್ಕಮ್ಮಾ, ಹೂವಿನ ದಳಗಳನ್ನು ಎಣಿಸು"

"ನಾಲ್ಕು"

"ಐದು ದಳಗಳ ಹೂ ಸಿಕ್ಕಿದವರು ಭಾಗ್ಯವಂತರಂತೆ"

"ಹೌದೇನು?"

"ಮೇಲಿನ ಕೇರಿಯ ಪೆದ್ರುವಿಗೆ ಒಮ್ಮೆ ಐದು ದಳದ ಹೂವು ಸಿಕ್ಕಿತಂತೆ. ಕೂಡಲೇ ಅವನ ಅಜ್ಜ ಅವನಿಗೆ ಹೊಸ ಅಂಗಿ ಹೊಲಿಸಿದನಂತೆ. ಬಾಬಣ್ಣಿಯ ಮೀರಾಳಿಗೆ ಇಂತಹದೇ ಹೂ ಸಿಕ್ಕಿತ್ತಂತೆ. ಅವರ ಮನೆಗೆ ಬಂದ ನೆಂಟರೊಬ್ಬರು ಅವಳಿಗೆ ಎರಡು ರೂಪಾಯಿ ಕೊಟ್ಟರಂತೆ. ಗುಣನಿಗೆ ಹೂ ಸಿಕ್ಕಿದಾಗ ಅವನಿಗೆ ಅಂಕಿಗಳನ್ನು ಬರೆಯುವ ಪೆನ್ಸಿಲ್ ಹಾದಿಯಲ್ಲಿ ಸಿಕ್ಕಿತು"

ಭಾನುದಾಸ ಕಣ್ಣರಳಿಸಿ ನನಗೆ ಹೇಳುತ್ತಿದ್ದ. ಆದರೆ ಆದಿನ ನನಗೆ ಐದು ದಳಗಳ ಯಾವುದೇ ಹೂ ಸಿಗಲಿಲ್ಲ. ಹಸಿರು ಕವಳೆಹಣ್ಣಿನ ಗಿಡದಲ್ಲಿ ಕಪ್ಪು-ಕೆಂಪು ಬಣ್ಣದ ಹಣ್ಣುಗಳ ಗೊಂಚಲನ್ನು ಕಂಡವನೇ ಭಾನುದಾಸ ಖುಷಿಯಿಂದ ಹಾರುತ್ತಾ ಅದರೆಡೆಗೆ ಹೋದ. ಮುಳ್ಳಿನೊಳಗೆ ಕೈಹಾಕಿ ಪಟಪಟನೆ ಅವುಗಳನ್ನು ಕೀಳಿ ನನ್ನತ್ತ ನಡೆದು ಬಂದ. "ತೆಗೆದುಕೋ ಚಿಕ್ಕಮ್ಮಾ" ಎಲ್ಲಾ ಹಣ್ಣುಗಳನ್ನು ನನ್ನೆದುರು ಹಿಡಿದ. ನಾನು ಅವನ ತಲೆಯನ್ನು ನೇವರಿಸುತ್ತಾ, "ನೀನು ತಿನ್ನು ಮಗಾ, ನಾನು ನಿನಗೆ ತೆಗೆದುಕೊಡುತ್ತೇನೆ" ಎಂದೆ.

"ಬೇಡ ಚಿಕ್ಕಮ್ಮಾ, ನೀನು ಹಣ್ಣು ತೆಗೆಯುವುದು ಬೇಡ. ನಿನಗೆ ಮುಳ್ಳು ಚುಚ್ಚಬಹುದು, ಕೀಟಗಳು ಕಚ್ಚಬಹುದು. ನಾನೇ ತೆಗೆದುಕೊಡುತ್ತೇನೆ."

ನನಗೆ ನಾಚಿಕೆಯಾಯಿತು. "ಇಲ್ಲ, ಭಾನುದಾಸ, ನನಗೆ ಮುಳ್ಳು, ಕೀಟ ಇಂತಹವುಗಳ ಭಯವಿಲ್ಲ ನೋಡೋಣ ನಿನ್ನ ಬೊಗಸೆ ಮೊದಲು ತುಂಬುವುದೋ ನನ್ನದೋ" ಎಂದೆ.

"ಹೌದಾ ಹಾಗಾದರೆ.." ಅವನ ಮುಖವರಳಿತು. ಮತ್ತಷ್ಟು ಹಣ್ಣುಗಳನ್ನು ಅವನು ಕೀಳತೊಡಗಿದ. ನಾನು ಸೆರಗನ್ನು ಕಟ್ಟಿಕೊಂಡು ಮುಳ್ಳಿನ ಗಿಡಕ್ಕೆ ಕೈ ಹಚ್ಚಿದೆ. ಹಣ್ಣೊಂದನ್ನು ಕಿತ್ತು ಬಾಯಿಗಿಟ್ಟೆ. ನಾಲಗೆ ಹುಳಿ-ಸಿಹಿ ರುಚಿಯನ್ನು ಸವಿಯಿತು. ಹತ್ತು ಪೈಸೆ ನೀಡಿ ಖರೀದಿಸಿದ ಒಂದು ಬೊಗಸೆ ಹಣ್ಣಿನ ರುಚಿಗಿಂತ ನಾನು ಸ್ವತಃ ಕಿತ್ತು ತಂದು ತಿಂದ ಹಣ್ಣಿನ ರುಚಿ ಬೇರೆಯೇ ಆಗಿತ್ತು. ಭಾನುದಾಸ ಎಲೆದೊನ್ನೆ ತಯಾರಿಸಿ ನೀಡಿದ. ಅವನು ಎರಡು ದೊನ್ನೆ ತುಂಬಾ ಹಣ್ಣುಗಳನ್ನು ತುಂಬಿಕೊಂಡು ಬಂದಾಗ ನಾನು ನಿಂತೇ ಇದ್ದೆ. ನನ್ನ ಕೈಯಲ್ಲಿದ್ದ ಅರ್ಧ ತುಂಬಿದ ದೊನ್ನೆಯನ್ನು ಅವನ ಮುಂದೆ ಹಿಡಿದೆ. ಅವನು ತನ್ನ ದೊನ್ನೆಗಳನ್ನು ಅಲುಗಾಡಿಸುತ್ತಾ ನಗತೊಡಗಿದ. ಹಣ್ಣು ತಿನ್ನುವಾಗ ಮುಳ್ಳಿನಿಂದ ಚುಚ್ಚಿಸಿಕೊಂಡ ಗಾಯ ನೆನಪಾದರೂ, ನನ್ನಿಂದ ಅರ್ಧ ದೊನ್ನೆಯನ್ನಾದರೂ ತುಂಬುವುದು ಸಾಧ್ಯವಾಯಿತಲ್ಲಾ ಎಂಬ ತೃಪ್ತಿಯುಂಟಾಯಿತು.

ನಂತರ ನಾವು ಅಲ್ಲಿಯೇ ಒಂದು ಕಲ್ಲಿನ ಮೇಲೆ ಕುಳಿತುಕೊಂಡೆವು. ನನ್ನ ಮುಂದೆ ಕವಳೆಹಣ್ಣೊಂದನ್ನು ಹಿಡಿದ ಭಾನುದಾಸ ಕೇಳಿದ,

"ಚಿಕ್ಕಮ್ಮಾ ಹುಂಜವೋ ಹೆಂಟೆಯೋ?"

"ಎಲ್ಲಿದೆ?" ನಾನು ಅತ್ತಿತ್ತ ಕಣ್ಣು ಹಾಯಿಸುತ್ತಾ ಕೇಳಿದೆ.

"ಚಿಕ್ಕಮ್ಮ ನಿನಗೆ ಏನು ತಿಳಿಯುವುದಿಲ್ಲ" ಅವನು ಹೇಳತೊಡಗಿದ. "ಕವಳೆ ಹಣ್ಣು ಕೆಂಪಾಗಿದ್ದರೆ ಹೆಂಟೆ. ಬಿಳಿ ಇದ್ದರೆ ಹುಂಜ. ಹಾಗಾದರೆ ಈಗ ಹೇಳು ನೋಡೋಣ"

ನಾನು ಹಣ್ಣನ್ನು ತುಂಡರಿಸಿ, "ಹೆಂಟೆ" ಎಂದೆ.

"ಹಾಗಲ್ಲ. ನೋಡುವ ಮೊದಲೇ ಹೇಳಬೇಕು"

ಆನಂತರ ನಾನು ಮತ್ತು ಭಾನುದಾಸ ಹುಂಜ-ಹೆಂಟೆ ಮಾಡುತ್ತಾ ಅರ್ಧ ಕವಳೆಹಣ್ಣುಗಳನ್ನು ಮುಗಿಸಿದೆವು.

"ಅಣ್ಣ ಸಂಜೆ ಬರುತ್ತಾನೋ ಕೇಳಿ ಚಿಕ್ಕಮ್ಮಾ" ಕವಳೆಹಣ್ಣಿನ ದೊನ್ನೆ ಮುಚ್ಚಿಕೊಳ್ಳುತ್ತಾ ಭಾನುದಾಸ ಕೇಳಿದ.

"ಯಾಕಪ್ಪಾ?"

"ಹುಂಜವೋ ಹೆಂಟೆಯೋ"

ನಾನು ಸೊನೆಯಿಂದ ಅಂಟಿಕೊಂಡಿದ್ದ ತುಟಿಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು ನಕ್ಕೆ.

* * *

ಒಮ್ಮೆ ಮನೆಗೆ ಬಂದ ಭಾನುದಾಸ ಸುಗ್ಗಿಹಾಡಿನ ಸಾಲುಗಳನ್ನು ಹಾಡುತ್ತಾ ಕುಣಿಯತೊಡಗಿದ.

"ಅರೆ! ಏನೋ ಇದು?"

"ಚಿಕ್ಕಮ್ಮ ಸುಗ್ಗಿ ಹತ್ತಿರ ಬರುತ್ತಿದೆಯಲ್ಲ"

"ಹೌದಲ್ಲ" ನನಗೆ ಹಿಂದಿನ ನೆನಪಾಯಿತು.

ಸುಗ್ಗಿಯು ಬಂದಿತು
ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕ್ಕೆಲ್ಲ
ಹೋ ಹೋ ಚೋಯ್

ಹೀಗೆ ಹಾಡಿಕೊಂಡು ಹೆಜ್ಜೆ ಹಾಕುತ್ತಾ ವೇಷಭೂಷಣ ತೊಟ್ಟ ಸುಗ್ಗಿಯ ತಂಡ ಬರುತ್ತಿದ್ದುದು ನೆನಪಿಗೆ ಬಂತು. ಸುಗ್ಗಿ ಬರುತ್ತದೆ. ಹೋಗುತ್ತದೆ. ಆದರೆ ಈ ಹಿಂದೆ

ಯಾವತ್ತೂ ನಾವು ಈ ರೀತಿಯ ಸುಗ್ಗಿ ತಯಾರಿಯನ್ನು ಮಾಡಿರಲಿಲ್ಲ. ಸುಗ್ಗಿಯ ಕಾಲ ಪ್ರಾರಂಭವಾದಂದಿನಿಂದ ಇಡೀ ಪಿಸೋಳಿ ಸುಗ್ಗಿಯ ಆಗಮನಕ್ಕೆ ಸಿದ್ಧವಾಗತೊಡಗಿತು. ಭಾನುದಾಸನಂತೂ ಹತ್ತೆಂಟು ಸಾರಿ ಹಿಂದೆ ಮುಂದೆ ಓಡಾಡತೊಡಗಿದೆ.

"ಚಿಕ್ಕಮ್ಮಾ, ಅಂಗಳ ಸಾರಿಸಬೇಕು, ಚಪ್ಪರ ಹಾಕಬೇಕು. ಸುಗ್ಗಿಯ ಮೇಳ ಬರುತ್ತಿದೆಯಲ್ಲ?"

"ಹೌದಪ್ಪಾ, ನಾವೆಲ್ಲ ಸೇರಿ ಚಪ್ಪರ ಹಾಕೋಣ"

"ಸುಗ್ಗಿಯ ಮೇಳ ಹೇಗೆ ಕುಣಿಯುತ್ತೆ ಗೊತ್ತಾ?"

"ಹೇಗೆ?"

ಬಾಳೆಗಿಡ ಸುರಗಿಹೂವು

ಬಣ್ಣಬಣ್ಣದ ಹೂಗಳಿಂದ

ನಾವೆಲ್ಲಾ ಸೇರಿ ಸಿಂಗರಿಸೋಣ

ಹಾಡುತ್ತಾ ಕೈಗಳನ್ನು ಅಲುಗಾಡಿಸುತ್ತಾ ಭಾನುದಾಸ ಕುಣಿಯತೊಡಗಿದ. ಹಾಗೆ ನೋಡಿದರೆ ಸುಗ್ಗಿ ಬರಲು ಇನ್ನೂ ಹದಿನೈದು ದಿನಗಳು ಇವೆ. ಭಾನುದಾಸನ ಮೈತುಂಬಾ ಆಸಕ್ತಿ. ಆ ಉಮೇದು ನನ್ನ ದೇಹದೊಳಗೆ ಯಾವಾಗ ಪ್ರವೇಶ ಪಡೆಯಿತೋ ನನಗೇ ಗೊತ್ತಿಲ್ಲ. ಅಂಗಳ ಸಾರಿಸುವಾಗ, ಚಪ್ಪರದ ಕಂಬಗಳನ್ನು ನಿಲ್ಲಿಸಿ ತೆಂಗಿನ ಗರಿಗಳನ್ನು ಕಟ್ಟುವಾಗಲೆಲ್ಲಾ ನಾನು ಸುಗ್ಗಿಯ ದಾರಿ ಕಾಯತೊಡಗಿದೆ.

ತಲೆಗೆ ರುಮಾಲು ಕಟ್ಟಿಕೊಂಡು ಹೊಲದ ಕಡೆಯಿಂದ ಆಖಾಡಕ್ಕೆ ಬರುತ್ತಿದ್ದ ವೃದ್ಧ ಗೋಪಾಲದಾದ ನನ್ನನ್ನು ಉದ್ದೇಶಿಸಿ ಹೇಳಿದ, "ವೈನಿ, ಸುಗ್ಗಿ ಬಂತು". ನಾನು ನಗುತ್ತಾ ಚಪ್ಪರದ ಕಡೆಗೆ ಬೆರಳು ತೋರಿಸುತ್ತಾ ಹೇಳಿದೆ, ಹೌದು ಗೋಪಾಲದಾದ, ತಯಾರಿ ನಡೆಯುತ್ತಿದೆ. ಗೋಪಾಲದಾದ ತಲೆಯ ಮೇಲಿನ ರುಮಾಲನ್ನು ಬಿಚ್ಚಿ ಬೆವರನ್ನು ಒರೆಸಿಕೊಂಡರು. ನಂತರ ಸಂತೋಷದ ರಂಗಿನಲ್ಲಿ ಹೇಳಿದರು,

"ನಮ್ಮ ಸುಗ್ಗಿ ಹೇಗಿರುತ್ತದೆ ಗೊತ್ತಾ ವೈನಿ?"

"ಹೇಗಿರುತ್ತದೆ ಗೋಪಾಲದಾದ?"

ಡೋಲಿನ ಮೇಲೆ ಕೋಲು ಆಡುತ್ತೆ

ಸುಗ್ಗಿ ಬಾಗಿಲಿಗೆ ಬರುತ್ತೆ

ಕೆಟ್ಟದೆಲ್ಲ ದೂರವಾಗಿ

ಉತ್ಸಾಹ ಬಾಗಿಲಿಗೆ ಬರುತ್ತೆ

ಕೋಲಣ್ಣಾ ಕೋಲೆ ಕೋಲು ಕೋಲಣ್ಣಾ ಕೋಲೆ...

ಹಾಡುತ್ತಾ ತಲೆ ರುಮಾಲು ಸುತ್ತಿಕೊಂಡು ಗೋಪಾಲದಾದ ಆಚೆ ಹೋದರೂ ಅವರ ಹಾಡಿನ ಮೋಡಿ ಮಾತ್ರ ನನ್ನ ಕಿವಿಯಲ್ಲಿ ಗುಂಯ್‌ಗುಟ್ಟುತ್ತಲೇ ಇತ್ತು. ಸುಗ್ಗಿ

ಮುಗಿದು ಬಹಳ ದಿನಗಳಾದರೂ ಆ ಸುಗ್ಗಿಯ ಹಾಡುಗಳು ಮಾತ್ರ ನನ್ನ ತುಟಿಯ ಮೇಲೆ ನಲಿದಾಡುತ್ತಿದ್ದವು.

ಹೂವಿನ ಬನದ ನಡುವೆ
ಕೋಮಲ ಪರಿಮಳ
ಅಲ್ಲಿನ ಪರಿಮಳ
ನೇಕಾರನ ಮನೆಗೆ ऽऽ
ನೇಕಾರನ ಮಗನು
ಬಣ್ಣದ ದಾರವ ಮಾಡಿದ. ऽऽऽ
ಅಲ್ಲಿಂದ ಹೋಯಿತು
ಚಿತ್ರಕಾರನ ಮನೆಗೆ
ಚಿತ್ರಕಾರನ ಮಗನು
ರಂಗಿನ ಚಿತ್ರವ ಬರೆದ..ऽऽऽ

ಆ ವರ್ಷ ನಿಜವಾಗಿಯೂ ನನಗೆ ಸುಗ್ಗಿಯ ಅನುಭವವಾಯಿತು.

* * *

ಪಿಸೋಳಿಯ ಸಮುದ್ರದ ಅನುಭವ ಬೇರೆಯೇ ಆಗಿತ್ತು. ಸಮುದ್ರದ ಹಸಿರು ನೀಲಿ ಬಣ್ಣದ ನೀರು ಬೆಳದಿಂಗಳ ರಾತ್ರಿಯಲ್ಲಿ ಸ್ನಾನ ಮಾಡಿದ ಹಾಗಿತ್ತು. ಹಾಗೆ ನೋಡಿದರೆ ನಾನು ಸಮುದ್ರವನ್ನು ಇದೇ ಮೊದಲ ಬಾರಿ ನೋಡುವುದೇನಲ್ಲ. ಜನದಟ್ಟಣೆ ತುಂಬಿರುವ ಸಾಗರತೀರಗಳನ್ನು ಕಂಡಿದ್ದೇನೆ. ಪಿಸೋಳಿಯ ಸಮುದ್ರ ದಂಡೆ ಮಾತ್ರ ಶಾಂತ, ಶೋಭಿತ ಮತ್ತು ಸಭ್ಯವಾಗಿತ್ತು. ಅದು ಹೇಗೆಂದರೆ ಆ ದಂಡೆಯ ಮೃದುವಾದ ಮರಳಿನ ಮೇಲೆ ಕಾಲಿಡುವಾಗಲೆಲ್ಲಾ ಆ ಅನುಭವವಾಗುತ್ತಿತ್ತು. ಸಮುದ್ರತೀರವಿಡೀ ನಿನ್ನದೇ ಎಂಬಂತೆ ಭಾಸವಾಗುತ್ತಿತ್ತು.

ಸಣ್ಣಂದಿನಲ್ಲಿ ಎಲ್ಲಾ ಮಕ್ಕಳು ಮಾಡುವಂತೆ ನಾನು ಕೂಡಾ ಹಸಿ ಮರಳನ್ನು ಪಾದದ ಮೇಲೆ ತಟ್ಟಿ ಮನೆ ಕಟ್ಟುತ್ತೇನೆ. ಆದರೆ ಭಾನುದಾಸನ ಹಾಗೆ ಚಿಕ್ಕಚಿಕ್ಕ ಏಡಿಗಳನ್ನು ಮಾತ್ರ ಹಿಡಿಯಲಾಗಲಿಲ್ಲ. ಅವನು ಏಡಿಗಳ ಹಿಂದೆ ಓಡುತ್ತಿದ್ದ. ಅವುಗಳ ಮೇಲೆ ಕಾಲನ್ನು ಇರಿಸುತ್ತಿದ್ದ. ಅವು ಮರಳಿನ ಕುಳಿಗಳಲ್ಲಿ ಬಚ್ಚಿಟ್ಟುಕೊಂಡರೆ ಮರಳನ್ನು ಹೊರಹಾಕಿ ಅವುಗಳನ್ನು ಹಿಡಿಯುತ್ತಿದ್ದ. ನೀರಿನತ್ತ ಓಡುವ ಏಡಿಗಳ ಮೇಲೆ ಕಾಲಿಟ್ಟು ಅವುಗಳ ಎರಡೂ ಕೊಂಬುಗಳನ್ನು ಮುರಿದು ಚೀಲದಲ್ಲಿ ತುಂಬಿಸುತ್ತಿದ್ದ.

ತೆಂಗಿನಮರ ಹತ್ತಿಕೊಂಡು ತೆಂಗಿನ ಕಾಯಿಗಳನ್ನು ಕೀಳುವಾಗ ಹೇಳುವ ಹಾಡುಗಳನ್ನು ನಾನು ಪಿಸೋಳಿಗೆ ಬಂದು ಕೇಳಿದೆನು. ಮನೆಯೊಳಗೆ ತೆಂಗಿನಕಾಯಿ

ಖಾಲಿಯಾದಾಗ ಅಂಗಡಿಗೆ ಹೋಗಿ ತರುವುದಷ್ಟೇ ನನ್ನ ಮತ್ತು ತೆಂಗಿನಕಾಯಿಯ ನಡುವಿನ ಸಂಬಂಧವಾಗಿತ್ತು. ತೆಂಗಿನಕಾಯಿಗಳು ಮರದಲ್ಲಿ ಬೆಳೆಯುತ್ತವೆ ಎಂದು ಇಷ್ಟು ಮಾತ್ರ ತಿಳಿದಿದ್ದೆ. ಇಲ್ಲಿ ಬಂದ ಮೇಲೆ ಓಲಾಡುವ ತೆಂಗಿನಮರಗಳ ಮೇಲೆ ಕವಿತೆ ಹಾಡುವುದನ್ನು ನಾನು ಕೇಳಿದೆ. ತೆಂಗಿನ ಗರಿಗಳ ಮೇಲೆ ಹಾಯುವ ಗಾಳಿ, ಆ ಗಾಳಿ ತೆಂಗಿನಮರದ ಮೇಲೆ ಬೀಸುವಾಗ ಅಲುಗಾಡುವ ಒಂದು ಜಾತಿಯ ಕೀಟ, ಪಟಪಟನೆ ತೆಂಗಿನಮರವನ್ನು ಹತ್ತುವ ಅಳಿಲುಗಳು, ಆಗ ಉಂಟಾಗುವ ಮಧುರವಾದ ಶಬ್ದ ಒಂದು ಸಂಗೀತಾತ್ಮಕ ಕವಿತೋಪಾದಿಯಲ್ಲಿ ನನ್ನ ಕಿವಿಗಳಲ್ಲಿ ಕುಳಿತಿತು. ಈಗ ತೆಂಗಿನಕಾಯಿಯನ್ನು ನೋಡಿದಾಗಲೆಲ್ಲಾ ನನಗೆ ಆ ಕವಿತೆ ನೆನಪಾಗುತ್ತದೆ.

ಮಗುವೇ ನಿನ್ನ ದಾರಿಯನು
ನಾನು ಕಾಯುತಿರುವೆ ಕಾಯುತಿರುವ
ದಾರಿ ಕಾಯುತಿರುವೆ ದಾರಿ ಕಾಯುತಿರುವೆ
ಕಾಯುತ್ತಾ ಕಾಯುತ್ತಾ ರಾತ್ರಿಯಾಗಿದೆ..

ಈ ಕವಿತೆಯನ್ನು ಕೇಳುತ್ತಾ ದಿನಗಳು ಉರುಳಿದವು. ಎರಡು ವರ್ಷ ಹೇಗೆ ಕಳೆಯಿತು ಎಂಬುದು ಅರಿವಿಗೇ ಬರಲಿಲ್ಲ. ಭಾನುದಾಸನ ಪಿಸೋಳಿ ಅದು ಹೇಗೆ ನನ್ನ ದೇಹದಲ್ಲಿ ಒಂದಾಯಿತೋ ನನಗೆ ಗೊತ್ತಿಲ್ಲ. ಮುಂದೊಂದು ದಿನ ಇವರಿಗೆ ಪಣಜಿಗೆ ವರ್ಗಾವಣೆಯಾಯಿತು. ಈ ವಿಷಯದಲ್ಲಿ ನನಗೆ ನಿಜವಾಗಿಯೂ ಸಂತೋಷವಾಗಬೇಕಿತ್ತು. ಆದರೆ ಬದಲಿಗೆ ದುಃಖವಾಯಿತು. ಪಿಸೋಳಿಯನ್ನು ಬಿಟ್ಟುಹೋಗುವುದು ಕಷ್ಟದಾಯಕವಾಗಿತ್ತು. ನನ್ನ ಕೈಯಿಂದ ಆಗಬೇಕಾಗಿದ್ದ ಕೆಲಸ ಅರ್ಧದಲ್ಲಿಯೇ ನಿಂತುಬಿಟ್ಟಿತು. ಶಹರದೊಂದಿಗೆ ಯಾವುದೇ ರೀತಿಯ ಬಾಂಧವ್ಯವನ್ನು ಬೆಸೆಯದ ನನಗೆ ಪಿಸೋಳಿಯಂತಹ ಸಣ್ಣ ಊರಿನೊಂದಿಗೆ ಬಾಂಧವ್ಯ ಬೆಸೆಯಿತು. ಅದೂ ನನಗೆ ಗೊತ್ತಿಲ್ಲದೆ..

ನಾನು ಭಾರವಾದ ಮನಸ್ಸಿನಿಂದ ಸಾಮಾನು ಕಟ್ಟಿದೆ. ಅದನ್ನು ಟ್ರಕ್‌ಗೆ ಹೇರುವಾಗ ಭಾನುದಾಸ ಬೇಕಾದಷ್ಟು ಗೋಳಾಡಿದ. ನನ್ನ ಹಿಂದೆಮುಂದೆ ತಿರುಗಾಡಿದ.

"ಚಿಕ್ಕಮ್ಮಾ, ಈ ವರ್ಷ ಇಡೀ ಬೆಟ್ಟ ಚಿಕ್ಕಚಿಕ್ಕ ಹಣ್ಣುಗಳಿಂದ ತುಂಬಿದೆ. ನೀವು ಮುಂದಿನ ವರ್ಷ ಹೋದರೆ ಆಗುವುದಿಲ್ಲವೇ? ಚಿಕ್ಕಮ್ಮಾ, ನೀವು ಹೋದರೆ ನನಗೆ ಅಭ್ಯಾಸ ಮಾಡಿಸುವವರು ಯಾರು? ಚಿಕ್ಕಮ್ಮಾ ನಿನಗೆ ನಾನು ಇನ್ನೂ ಅನೇಕ ವಿಷಯವನ್ನು ಹೇಳಿಕೊಡುವುದಿದೆ. ಅದನ್ನು ಕಲಿತು ಆಮೇಲೆ ನೀನು ಹೋಗು"

ಚಿಕ್ಕಮ್ಮಾ..ಚಿಕ್ಕಮ್ಮಾ.. ಚಿಕ್ಕಮ್ಮಾ.... ಅವನಿಗೆ ಸಮಾಧಾನ ಹೇಳುವಾಗ ನನ್ನ ಹೃದಯ ತುಂಬಿ ಬರುತ್ತಿತ್ತು. ನಾನು ಕೇಳಿಸದೆ ಇರುವುದನ್ನು ನೋಡಿ ಅವನು ನನ್ನವರ

ಬಳಿ ಹೋದನು. "ಅಣ್ಣ, ಮುಂದಿನ ಬೆಟ್ಟ ಹತ್ತುವುದು ಇನ್ನೂ ಬಾಕಿ ಇದೆ. ನೀವು ಈ ವರ್ಷ ಇಲ್ಲೇ ಇರಿ.." ಇಷ್ಟು ಹೇಳುವಾಗ ಅವನ ಗಂಟಲು ಕಟ್ಟಿತು. ಇವರಿಗೂ ತುಂಬಾ ಕೆಟ್ಟದೆನಿಸಿರಬೇಕು. ಅವರು ಭಾನುದಾಸನ ಬೆನ್ನಿನ ಮೇಲೆ ಕೈಯಾಡಿಸಿ ಹೇಳಿದರು, "ಕವಳೆಹಣ್ಣು ಆದಾಗ ನನಗೆ ಹೇಳಿ ಕಳಿಸು. ನಿನ್ನ ಚಿಕ್ಕಮ್ಮನನ್ನು ಕರೆದುಕೊಂಡು ನಾನು ಬರುತ್ತೇನೆ". ಭಾನುದಾಸನ ಕಣ್ಣೀರು ಅವನ ಕೆನ್ನೆಯ ಮೇಲೆ ಹರಿಯಿತು.

ನಾವು ಪಣಜಿಗೆ ಹೊರಟು ನಿಂತೆವು. ಹಸುಗಳ ಕೊರಳಿನ ಗಂಟೆಗಳ ನಾದಕ್ಕೆ ಹೆಜ್ಜೆ ಇಡುತ್ತಾ ಪಿಸೋಳಿಯಲ್ಲಿ ಸಂಜೆ ಆವರಿಸತೊಡಗಿತು. ಮನೆಯ ಮುಂದೆ ಸಾರಿಸಿದ ಸೆಗಣಿಯ ವಾಸನೆ, ಅಂಗಳದ ತುಳಸಿಯ ಮುಂದೆ ಹಚ್ಚಿಟ್ಟ ದೀಪದ ನೆನಪು ಕಾಡತೊಡಗಿತು.

ವಾಹನ ಹೊರಟಿತು. ನನ್ನ ಕಣ್ಣುಗಳು ತುಂಬಿಬಂದವು. ನಾನು ಭಾನುದಾಸನನ್ನು ನೋಡುವ ಪ್ರಯತ್ನ ನಡೆಸಿದೆ. ಅವನು ಅಳುಮೋರೆಯೊಂದಿಗೆ ನಿಂತುಕೊಂಡೇ ಇದ್ದನು. ಅವನ ಹಿಂದೆ ಬೆಟ್ಟ ಕಾಣುತ್ತಿತ್ತು. ಸಣ್ಣಸಣ್ಣ ಕವಳೆಹಣ್ಣುಗಳಿಂದ ಕೂಡಿದ ಬೆಟ್ಟ. ಹಸಿರು ನೀಲಿ ಬಣ್ಣದ ಬೆಟ್ಟ. ಭಾನುದಾಸ ಕೈಯಾಡಿಸಿದ. ನಾನೂ ಕೈಯಾಡಿಸಿದೆ. ವಾಹನ ಮುಂದೆ ಸರಿಯಿತು. ಮೇಲೆದ್ದ ಕೆಂಪು ಧೂಳಲ್ಲಿ ಭಾನುದಾಸ ಕಾಣಿಸದಾದ. ಆದರೂ ನಾನು ನೀರು ತುಂಬಿದ ಕಣ್ಣುಗಳಿಂದ ಹಿಂದೆ ನೋಡುತ್ತಾ, ಕೈಬೀಸುತ್ತಾ ಉಳಿದೆನು.

ಅನುವಾದಕರು: **ವೆಂಕಟೇಶ ಪೈ**

❖ ❖ ❖❖ ❖

ಹಿಪ್ಪಿ ಹುಡುಗಿ

✍ **ಚಂದ್ರಕಾಂತ ಕೇಣಿ**

ಸಂಜೆ ಸುಮಾರು ಐದು ಗಂಟೆಯ ಸಮಯ. ಮಳೆ ಧಾರಾಕಾರವಾಗಿ ಬೀಳುತ್ತಿದೆ. ಆಕಾಶದಲ್ಲಿ ಮೋಡ ದಟ್ಟವಾಗಿದೆ. ಮಳೆ ನಿಲ್ಲುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ನಾನು ಮನೆಯ ದಿಕ್ಕಿನತ್ತ ನಿಧಾನವಾಗಿ ಕಾರು ಓಡಿಸುತ್ತಿದ್ದೆ. ಅಷ್ಟರಲ್ಲಿ ದಾರಿಯ ನಡುವೆ ಆ ಹುಡುಗಿ ಕೈ ತೋರಿಸಿದಳು. ಅವಳ ಹತ್ತಿರ ಕೊಡೆಯಾಗಲೀ, ರೇನ್‌ಕೋಟ್ ಆಗಲೀ ಇರಲಿಲ್ಲ. ಅವಳು ತುಂಬಾ ನೆನೆದಿದ್ದಳು. ನಾನು ಕಾರು ನಿಲ್ಲಿಸಿ ಅವಳನ್ನು ಒಳಗೆ ಕರೆದುಕೊಂಡೆ.

"ಥಾಂಕ್ಯೂ" ಅವಳು ಹೇಳಿದಳು.

"ನಿನಗೆ ಎಲ್ಲಿ ಹೋಗಬೇಕಾಗಿದೆ?"

"ಎನಿ ವ್ಹೇರ್ ಅಂಡರ್ ಎ ಶೆಲ್ಟರ್."

ನಾನು ಅವಳನ್ನು ಕರೆದುಕೊಂಡು ಮನೆಗೆ ಬಂದೆ. ಹಿಪ್ಪಿ ಹುಡುಗಿಯನ್ನು ಜೊತೆಗೆ ಕರೆದುಕೊಂಡು ಬಂದದ್ದನ್ನು ನೋಡಿ ನನ್ನ ಹೆಂಡತಿಗೆ ಆಶ್ಚರ್ಯವಾಯಿತು. ಅವಳ ಇಡೀ ದೇಹ ಒದ್ದೆಯಾಗಿತ್ತು. ಅವಳು ನಡುಗುತ್ತಿದ್ದಳು. ನಾನು ಅವಳನ್ನು ಒಳಗೆ ಕರೆದುಕೊಂಡು ಹೋಗಿ ಬೇರೆ ಉಡುಪನ್ನು ನೀಡುವಂತೆ ನನ್ನ ಹೆಂಡತಿಗೆ ಹೇಳಿದೆ.

ಅರ್ಧ ಗಂಟೆ ಬಿಟ್ಟು ಅವಳು ಸೀರೆಯುಟ್ಟು, ಕೂದಲು ಬಾಚಿಕೊಂಡು ಹೊರಗೆ ಬಂದಳು. ಅವಳು ಹಣೆಗೆ ಕುಂಕುಮವನ್ನಿಟ್ಟಿದ್ದಳು. ಹೊರಗಿನ ಕೋಣೆಗೆ ಬಂದು ನನ್ನ ಮುಂದೆ ನಿಂತು ಕೇಳಿದಳು,

"ನಾನು ಹೇಗೆ ಕಾಣುತ್ತೇನೆ?"

'ಸುಂದರವಾಗಿ ಕಾಣಿಸುತ್ತಿ!' ಎಂದು ಹೇಳಬೇಕೆಂದುಕೊಂಡವನು ಅವಳ ಹಿಂದೆ ನನ್ನ ಹೆಂಡತಿ ನಿಂತಿರುವುದನ್ನು ನೋಡಿ ತುಟಿಯವರೆಗೆ ಬಂದ ಮಾತನ್ನು ನುಂಗಿ ಹೇಳಿದೆ, "ನೀನು ಅಪ್ಪಟ ಭಾರತೀಯಳಂತೆ ಕಾಣುತ್ತಿ."

ನನ್ನ ಮಾತಿಗೆ ಅವಳು ನಕ್ಕಳು. ಆಪ್ತಳಂತೆ ಕುರ್ಚಿಯ ಮೇಲೆ ಕುಳಿತುಕೊಂಡಳು.

ಮಡದಿ ತಂದುಕೊಟ್ಟ ಬಿಸಿಬಿಸಿ ಚಹಾ ಮತ್ತು ತಾಜಾ ಈರುಳ್ಳಿ ಬಜ್ಜಿಯನ್ನು ತಿನ್ನುತ್ತಾ ನಾವು ಮಾತನಾಡಿದೆವು.

ಅವಳ ಹೆಸರು ಸಿಂಡ್ರೆಲಾ. ಮೂಲತಃ ಫ್ರಾನ್ಸ್ ದೇಶದವಳು. ಭಾರತಕ್ಕೆ ಬಂದು ಆರು ತಿಂಗಳಾಯಿತು. ಮೊದಲು ಕಾಲೇಜೊಂದರ ವಿಜ್ಞಾನ ವಿಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದಳು. ಸದ್ಯ ಕೊಲ್ವಾದಲ್ಲಿ ಹಿಪ್ಪಿಗಳೊಂದಿಗೆ ಇದ್ದಾಳೆ. ವಯಸ್ಸು ಇಪ್ಪತ್ತು ಎಂದಳು. ಆದರೆ ನೋಡಲು ಮೂವತ್ತು ವರ್ಷದವಳಂತೆ ಕಾಣುತ್ತಿದ್ದಳು.

"ನೀನು ಈ ಮಳೆಯಲ್ಲಿ ಕೊಡೆ ಅಥವಾ ರೇನ್‌ಕೋಟ್ ತರದೆ ಯಾಕೆ ಹೊರಟೆ?"

"ನನ್ನ ಬಳಿ ಕೊಡೆಯಾಗಲೀ, ರೇನ್‌ಕೋಟ್ ಆಗಲೀ ಇಲ್ಲ. ಈ ಮಳೆಯಲ್ಲಿ ನೆನೆಯುವುದೇ ಒಂದು ಆನಂದ, ಗೊತ್ತೇನು ನಿನಗೆ?"

"ಕಾವ್ಯ ನನಗೂ ಹಿಡಿಸುತ್ತದೆ. ಆದರೆ ನಿಜ ಹೇಳಬೇಕೆಂದರೆ ಮಳೆಯಲ್ಲಿ ಹೊರಬೀಳುವುದು ನಮಗೆ ಬೇಸರದ ಸಂಗತಿ."

"ನಿಸರ್ಗ ಕುಣಿಯುವಾಗ ನೀವು ಸೂತಕದ ಕಳೆ ಹೊತ್ತು ಮನೆಯಲ್ಲಿ ಕುಳಿತುಕೊಳ್ಳುವಿರಾದರೂ ಹೇಗೆ? ನಿಜವಾದ ಆನಂದ ಮುಚ್ಚಿದ ಈ ನಾಲ್ಕು ಗೋಡೆಗಳ ಆಚೆ ಇದೆ."

ಅವಳ ಮಾತು ಕೇಳುವುದು ನನಗೆ ಇಷ್ಟವಾಗುತ್ತಿತ್ತು. ಆದರೆ ಅವಳ ವಿಚಾರ ಮಾತ್ರ ನನಗೆ ಸೇರಲಿಲ್ಲ.

"ನೀನು ಮನೆ, ಮಠ, ಶಿಕ್ಷಣ ಎಲ್ಲಾ ಬಿಟ್ಟು ಹೀಗೆ ಯಾಕೆ ಸುತ್ತಾಡುತ್ತಿರುವೆ?"

"ನಿಸರ್ಗದ ಮಡಿಲಲ್ಲಿ ಕುಳಿತು ಹೊಸ ತಿಳಿವಳಿಕೆ ಪಡೆಯಲು, ಹೊಸ ತತ್ವಜ್ಞಾನವನ್ನು ತಿಳಿದುಕೊಳ್ಳಲು.."

"ಆದರೆ, ನಿನ್ನ ತಂದೆ ತಾಯಿ ನಿನ್ನನ್ನು ಹೋಗಲು ಬಿಟ್ಟರಾದರೂ ಹೇಗೆ?"

ಸಿಂಡ್ರೆಲಾ ನಕ್ಕಳು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ನಂತರ ಅವಳೇ ಹೇಳಿದಳು, "ನೀನು ಹೀಗೆ ಮಾಡು. ನಾಲ್ಕು ದಿನ ನಮ್ಮ ಜೊತೆ ಇರಲು ಬಾ" ಆ ಆಮಂತ್ರಣವನ್ನು ತಕ್ಷಣ ಸ್ವೀಕರಿಸಿ ನಾನು ಅವಳನ್ನು ಕೇಳಿದೆ,

"ನಿಮ್ಮ ಸಂಸಾರದಲ್ಲಿ ನನಗೆ ಪ್ರವೇಶ ಸಿಗುವುದಲ್ಲವೇ?"

"ಹಾಗೆ ನಾವು ಯಾರಿಗೂ ಪ್ರವೇಶ ನೀಡುವುದಿಲ್ಲ. ಆದರೆ ನಿನ್ನ ವಿಷಯ ಬೇರೆ. ನೀನು ಸಂಸಾರಿ ಗೃಹಸ್ಥ. ನಾಲ್ಕು ದಿನ ನಮ್ಮೊಂದಿಗೆ ಇದ್ದರೆ ನಮ್ಮದೇನು ಹಾಳು ಮಾಡುವುದಿಲ್ಲ."

"ಮತ್ತೆ, ನಿಮ್ಮ ಸಹವಾಸದಲ್ಲಿ ಬಿದ್ದು ನಾನು ನನ್ನ ಮನೆ, ಮಠ ತೊರೆದರೆ?"

"ಹಾಗೆ ನಡೆದರೆ, ಅದು ನನ್ನ ಸಾಧನೆ ಎಂದುಕೊಳ್ಳುತ್ತೇನೆ"

ಆ ರಾತ್ರಿ ಸಿಂಡ್ರೆಲಾ ನಮ್ಮಲ್ಲಿಯೇ ಊಟ ಮಾಡಿದಳು. ಆಮೇಲೆ ನಾನು ನನ್ನ ಹೆಂಡತಿಯೊಂದಿಗೆ ಅವಳನ್ನು ಕರೆದುಕೊಂಡು ಕೊಲ್ವಾ ಮುಟ್ಟಿಸಿದೆ. ಅವಳು ಹೋಗುವಾಗ ತನ್ನ ಮೊದಲ ಉಡುಪನ್ನೇ ಧರಿಸಿದ್ದಳು. ಆದರೆ ಹಣೆಯ ಕುಂಕುಮವನ್ನು ಅಳಿಸಿರಲಿಲ್ಲ.

೦ ೦ ೦

ರವಿವಾರ

ಇಂದು ಇಳಿಹೊತ್ತಿನಲ್ಲಿ ಸಿಂಡ್ರೆಲಾ ಕೊಲ್ವಾದಲ್ಲಿ ಕಾಣಸಿಕ್ಕಿದಳು. ಒಬ್ಬಳೇ ನಡೆದು ಹೋಗುತ್ತಿದ್ದಳು. ನನ್ನನ್ನು ಕರೆದಳು. ನಾವು ಒದ್ದೆ ಮರಳಿನ ಮೇಲೆ ಕುಳಿತುಕೊಂಡೆವು. ಅವಳ ಬಿಚ್ಚಿದ ಕೂದಲು ಗಾಳಿಗೆ ಹಾರಾಡುತ್ತಿತ್ತು. ಅವಳು ಧರಿಸಿದ ಸಡಿಲವಾದ ನಿಲುವಂಗಿಯ ಎರಡು ಗುಂಡಿಗಳು ತೆರೆದಿದ್ದವು. ನನ್ನ ನೋಟ ಅದೇ ಭಾಗದಲ್ಲಿ ನೆಟ್ಟಿತ್ತು.

"ಸಿಂಡ್ರೆಲಾ ಹೇಳು, ನಾವು ಉಡುಪು ಧರಿಸುವುದು ಯಾರಿಗಾಗಿ?" ನನ್ನ ಪ್ರಶ್ನೆ ಮುಗಿಯುತ್ತಿದ್ದಂತೆ ಅವಳು ಗುಂಡಿ ಹಾಕಿ ನನಗೆ ತೀಕ್ಷ್ಣವಾಗಿ ಉತ್ತರಿಸಿದಳು.

"ಮನುಷ್ಯರು ತಮ್ಮ ದೇಹವನ್ನು ಮುಚ್ಚುವುದಕ್ಕೆ ಉಡುಪು ಧರಿಸುತ್ತಾರೆ."

"ಈ ಮುಚ್ಚುವುದು ಯಾರಿಗಾಗಿ?"

"ಬೇರೆಯವರ ನೋಟಕ್ಕಾಗಿಯಂತೂ ಅಲ್ಲ. ಚಳಿ, ಮಳೆ, ಬಿಸಿಲಿನ ಸಲುವಾಗಿ."

"ಇದೇ ಏನು ನಿಮ್ಮ ಸಿದ್ಧಾಂತ?"

"ಮತ್ತೆ, ನಿಮ್ಮದು ಯಾವುದು?"

"ನಾವು ಸಮಾಜದಲ್ಲಿ ಇರುವವರು. ಮನುಷ್ಯನ ಉಡುಪು ಸಭ್ಯತೆಗೆ ತಕ್ಕಂತಿರಬೇಕು. ಪ್ರಾಣಿ ಪಕ್ಷಿಗಳು ಉಡುಪು ಧರಿಸುವುದಿಲ್ಲ. ಆದರೆ ಮಾನವ ಧರಿಸುತ್ತಾನೆ. ಹಾಗಾಗಿ ಅದನ್ನು ಅವನು ಸರಿಯಾದ ರೀತಿಯಿಂದ ಧರಿಸಿಕೊಳ್ಳಬೇಕು"

"ನಿಮ್ಮ ಸಾಧು, ಸನ್ಯಾಸಿಗಳು ಬಟ್ಟೆ ಹೇಗೆ ಧರಿಸುತ್ತಾರೆ?"

"ಅವರು ಸಂಸಾರ ತ್ಯಾಗ ಮಾಡಿರುವವರು"

"ಹಾಗೆಯೇ ನಾವು ಕೂಡಾ ಮಾಡಿದ್ದೇವೆ"

"ಆದರೆ ಅವರ ಸಂಸಾರದಲ್ಲಿ ವಿಕಾರ ಇರುವುದಿಲ್ಲ. ನಿಮ್ಮ ಸಂಸಾರದಲ್ಲಿ ಅದು ಹೇಗೆ ಇದೆಯೋ ನಾನು ಅರಿಯೆ"

"ನೀವು ಅಂದುಕೊಂಡ ರೀತಿಯಿಂದ ಅದು ನಮ್ಮಲ್ಲಿ ಇಲ್ಲ. ನಮ್ಮ ಹಿಪ್ಪಿ ಹುಡುಗರು ತೆರೆದ ಎದೆ ನೋಡಿ ವಿಕಾರಕ್ಕೊಳಗಾಗುವವರಲ್ಲ."

"ಅವರಿಗೆ ಸಂಯಮವಿದೆ. ಆದರೆ ಸಂಯಮವಿಲ್ಲದಂತಹ ನಮ್ಮ ಹುಡುಗರು ಮತ್ತು ಹುಡುಗಿಯರ ಪಾಡೇನು?"

"ನಾವು ಅವರ ಸಂಸಾರದಲ್ಲಿ ಪ್ರವೇಶ ಮಾಡುವುದಿಲ್ಲ. ಅವರು ನಮ್ಮ ಸಂಸಾರದಲ್ಲಿ ಬರಕೂಡದು"

"ಆದರೆ ನಮ್ಮವರಿಗೆ ಬೇಲಿ ಹಾಕಲು ಸಾಧ್ಯವೇ? ನೀವು ಇಲ್ಲಿ ಸಮುದ್ರ ತೀರದಲ್ಲಿ ಇರುತ್ತೀರಿ. ಪೇಟೆಬೀದಿ ಸುತ್ತುತ್ತೀರಿ.."

"ಅಂದರೆ ನಾವು ಅಸಭ್ಯವಾಗಿ ವರ್ತಿಸುತ್ತೇವೆಯೇ"

"ತರುಣ ಹುಡುಗಿಯರ ತೆರೆದ ಮೈಮಾಟ ನೋಡುತ್ತಿದ್ದಂತೆ ವಯಸ್ಸಿಗೆ ಬಂದ ಹುಡುಗರು ಮನೋವಿಕಾರಕ್ಕೆ ಒಳಗಾಗುತ್ತಾರೆ"

"ಅದಕ್ಕೆ ಕಾರಣವೇನೆಂದರೆ, ನೀವು ಸಮಾಜದಲ್ಲಿ ಸಭ್ಯತೆಯ ಹೆಸರಿನಿಂದ ಭಾವನೆಗಳನ್ನು ಅದುಮಿಡುತ್ತೀರಿ. ಹುಡುಗರಿಗೆ, ಹುಡುಗಿಯರಿಗೆ ಮುಕ್ತವಾಗಿ ಇರಲು ಬಿಡಿ. ಆಗ ಅವರಲ್ಲಿ ಚಂಚಲ ವಿಚಾರಗಳು ಬರುವುದಿಲ್ಲ."

"ಅದು ಅರ್ಧ ಸತ್ಯ. ಮುಕ್ತವಾಗಿ ವ್ಯವಹರಿಸಿದಲ್ಲಿ ಶರೀರ ಸುಖದ ಇಚ್ಛೆ ಇರುವುದಿಲ್ಲ"

"ಹುಡುಗ ಮತ್ತು ಹುಡುಗಿ ಒಪ್ಪಿದಲ್ಲಿ ಅವರು ಸುಖವನ್ನು ಅನುಭವಿಸಲಿ"

"ಮತ್ತು ಮಕ್ಕಳ ಗತಿಯೇನು?"

"ಅವರು ದೊಡ್ಡವರಾಗುವವರೆಗೆ ಹೆತ್ತವರೇ ಸಂಭಾಳಿಸುತ್ತಾರೆ. ಆಮೇಲೆ ಅವರ ಪ್ರಶ್ನೆಯನ್ನು ಸರಕಾರ ಮತ್ತು ದೇವರು ನಿಭಾಯಿಸಬೇಕಾಗುತ್ತದೆ"

"ಹೀಗೆ ಮಾಡಿದರೆ ಕುಟುಂಬ ಕುಸಿಯುವುದಿಲ್ಲವೇ?"

"ಕುಟುಂಬವೆಂದರೇ ಗುಲಾಮತನದ ಬಂಧನ"

ನಮ್ಮ ವಿಚಾರದ ಹಾದಿ ಬೇರೆಂಯೇ ಆಗಿತ್ತು. ಅವು ಒಂದಕ್ಕೊಂದು ಹೊಂದುತ್ತಿರಲಿಲ್ಲ. ಹಾಗೆಂದುಕೊಂಡು ನಾನು ಏಳಲು ಹೊರಟೆ.

"ಹೋಗ್ತಿಯಾ?"

"ತಡವಾಗಿದೆ. ಮನೆಯಲ್ಲಿ ಹೆಂಡತಿ ಕಾಯುತ್ತಿರಬಹುದು"

"ಅವಳನ್ನು ಯಾಕೆ ಕರೆತರಲಿಲ್ಲ?"

"ಇಲ್ಲೇ ಹತ್ತಿರ ಬಂದಿದ್ದೆ. ಹಾಗೇ ಒಬ್ಬನೇ ಸಮುದ್ರತೀರಕ್ಕೆ ಬಂದೆ. ನೀನು ಸಿಕ್ಕಿದೆ"

ಸಿಂಡ್ರೆಲಾ ತನ್ನ ಚೀಲದಿಂದ ಒಂದು ಡಬ್ಬಿಯನ್ನು ಹೊರತೆಗೆದಳು. "ನನಗೆ ಕುಂಕುಮ ಹಚ್ಚು" ಎಂದಳು.

"ನೀನೇ ಯಾಕೆ ಹಚ್ಚಿಕೊಳ್ಳುವುದಿಲ್ಲ?"

"ನನ್ನ ಹತ್ತಿರ ಕನ್ನಡಿ ಇಲ್ಲ. ಕನ್ನಡಿ ಹೆಂಗಸರಿಗೆ ಒಂದು ಬಂಧನ"

ನಾನು ಡಬ್ಬಿ ತೆರೆದೆ. ಆಮೇಲೆ ಕಿಸೆಯಿಂದ ಬೆಂಕಿಕಡ್ಡಿಯನ್ನು ತೆಗೆದು ಅದರಲ್ಲಿ ಅದ್ದಿದೆ. ಅಷ್ಟರಲ್ಲಿ ನನ್ನ ತಲೆಗೆ ವಿಚಾರವೊಂದು ಹೊಳೆಯಿತು. ನಾನು ಕಡ್ಡಿಗೆ ಮೆತ್ತಿಕೊಂಡಿದ್ದ ಕುಂಕುಮವನ್ನು ಒರೆಸಿಬಿಟ್ಟೆ.

"ಏನಾಯ್ತು?" ಅವಳು ಕೇಳಿದಳು.

"ನಮ್ಮ ದೇಶದಲ್ಲಿ ಗಂಡಸು ಕೇವಲ ತನ್ನ ಹೆಂಡತಿಗೆ ಕುಂಕುಮ ಹಚ್ಚುತ್ತಾನೆ. ಹೆಂಗಸಿಗೆ ಕುಂಕುಮ ಹಚ್ಚುವುದೆಂದರೆ ಅವಳನ್ನು ಮದುವೆಯಾಗುವುದು, ಅವಳನ್ನು ಕರೆದೊಯ್ಯುವುದು ಎಂದಾಗುತ್ತದೆ."

"ನೀನೂ ನನ್ನನ್ನು ಕರೆದುಕೊಂಡು ಹೋಗು" ಅವಳು ನಗುತ್ತಾ ಹೇಳಿದಳು.

"ನಾವು ಏಕಪತ್ನೀವ್ರತಸ್ಥ ರಾಮನ ವಂಶಜರು"

"ಸಂಸಾರವೆಂದರೆ ಬಹಳ ಕಷ್ಟದಾಯಕವಾದುದಲ್ಲವೇ? ಈಗ ನಾನು ನಿನ್ನ ಪ್ರೇಮದಲ್ಲಿ ಬಿದ್ದರೆ ಏನಾಗಬಹುದು?"

"ನಮ್ಮ ಸಂಸಾರ ಉದ್ವಸ್ತವಾಗುತ್ತದೆ"

"ಯಾಕಾಗಬೇಕು? ನಾವು ಒಬ್ಬರಿಗೊಬ್ಬರು ಪ್ರೀತಿ ಮಾಡುವುದರಿಂದ ನಿನ್ನ ಹೆಂಡತಿಯ ಮೇಲಿನ ಪ್ರೀತಿ ಕಡಿಮೆಯಾಗುವುದೇ?"

ನಾನು ಗೊಂದಲದಲ್ಲಿ ಬಿದ್ದೆ. ಸಿಂಡ್ರೆಲಾ ಪ್ರಶ್ನೆಗೆ ಉತ್ತರ ನೀಡುವುದಕ್ಕಿಂತ ಅವಳಿಗೆ ಕುಂಕುಮ ಹಚ್ಚುವುದೇ ವಾಸಿ ಎಂದುಕೊಂಡು ನಾನು ಅವಳ ಹಣೆಗೆ ಕುಂಕುಮ ಹಚ್ಚಿದೆ. ಅವಳು ನಕ್ಕಳು. ತನ್ನ ಎರಡೂ ಕೈಗಳಿಂದ ನನ್ನ ಬಲಗೈ ಹಿಡಿದು ಬಗ್ಗಿ ತುಟಿಯೊತ್ತಿ ಚುಂಬಿಸಿದಳು. ನನ್ನ ಇಡೀ ಶರೀರ ಬೆಂಕಿ ಹಚ್ಚಿಕೊಂಡಂತೆ ಕಂಪಿಸಿತು. ನಾನು ಎದ್ದು ಕಾರಿದ್ದಲ್ಲಿ ನಡೆಯತೊಡಗಿದೆ. ಅವಳು ನನ್ನೊಂದಿಗೆ ಹೆಜ್ಜೆ ಹಾಕಿದಳು.

"ಮತ್ತೆ ಎಂದು ಸಿಕ್ತಿಯಾ?" ಅವಳು ಕೇಳಿದಳು.

"ಮುಂದಿನ ಭಾನುವಾರ"

"ಬೇಡ, ಭಾನುವಾರ ತುಂಬಾ ದೂರವಿದೆ, ನೀನು ನಾಳೆ ಬಾ"

"ನೋಡುತ್ತೇನೆ. ಆದರೆ ಮಾತು ಕೊಡಲಾರೆ"

ನಾವು ಮಾತನಾಡುತ್ತಿದ್ದಂತೆ ಒಬ್ಬ ಹಿಪ್ಪಿ ಹುಡುಗ ಎದುರು ಕಾಣಿಸಿಕೊಂಡ. ಸಿಂಡ್ರೆಲಾ ಅವನನ್ನು ಕೈಬೀಸಿ ಕರೆದಳು. ಅವನು ಹತ್ತಿರ ಬರುತ್ತಿದ್ದಂತೆ ಅವನನ್ನು ಅಪ್ಪಿಕೊಂಡಳು. ಅವನು ಅವಳ ತಲೆಯ ಮೇಲೆ ತನ್ನ ತಲೆಯನ್ನು ಆನಿಸಿಕೊಂಡು, ಬಲಗೈಯಿಂದ ಅವಳ ಎದೆಯನ್ನು ಬಳಸಿ ಹಿಡಿದುಕೊಂಡ. ಸಿಂಡ್ರೆಲಾ ಅವನ ಪರಿಚಯ ಮಾಡಿಕೊಟ್ಟಳು, "ಇವನು ಪಾಲ್ ನನ್ನ ಆಪ್ತಮಿತ್ರ". ನಾನು ಪಾಲ್‌ಗೆ ಅಭಿವಂದಿಸಿದೆ. ಆದರೆ ನನ್ನ ಹೃದಯಕ್ಕೆ ಬೆಂಕಿ ಹತ್ತಿಕೊಂಡಿತು. ಅದು ನನ್ನ ಮುಖದ ಮೇಲೆ ಕಾಣಿಸಿಕೊಂಡಿರಬಹುದೇ?

o o o

ಮಂಗಳವಾರ

ಇಂದು ಸಂಜೆ ಸಿಂಡ್ರೆಲಾ ನಮ್ಮ ಮನೆಗೆ ಬಂದಳು. ನಾನು ಮನೆಯಲ್ಲಿ ಇರಲಿಲ್ಲ. ನನ್ನ ಹೆಂಡತಿಗೆ ಇಂಗ್ಲಿಷ್‌ನಲ್ಲಿ ಮಾತನಾಡಲು ಬರುವುದಿಲ್ಲ. ಅವಳು ಒಂದೊಂದೇ ಶಬ್ದವನ್ನು ಆಯ್ದು ತಿಳಿದುಕೊಳ್ಳುತ್ತಿದ್ದಳು. ಸಿಂಡ್ರೆಲಾ ಸಂಜೆ ಇಡೀ ಅಡುಗೆ ಮನೆಯಲ್ಲಿಯೆ ಕಾಲಕಳೆದಳು. ಸೀಕರಣೆ ಮಾಡುವುದನ್ನು ಕಲಿಯಬೇಕೆಂದಳು. ನಾವು ಮಧ್ಯಾಹ್ನ ಮಾಡಿದ ಸೀಕರಣೆಯನ್ನೇ ಸ್ವಲ್ಪ ರಾತ್ರಿಗೂ ತೆಗೆದಿಡುವುದರಿಂದ ಅದನ್ನು ಮಾಡುವ ಕ್ರಮ ಅವಳಿಗೆ ನೋಡಲು ಸಿಗಲಿಲ್ಲ. ಒಣಬಂಗಡೆ ಮೀನಿನ ಚಟ್ನಿ ಅವಳಿಗೆ ಹಿಡಿಸಿತಂತೆ. ಮಾಡುವಾಗಲೇ ಅದನ್ನು ಕೇಳಿ ತಿಂದಳು. ರಾತ್ರಿ ಊಟ ಮಾಡುತ್ತಿದ್ದಾಗ ನಾನು ಅವಳಿಗೆ ರಾತ್ರಿ ನಮ್ಮಲ್ಲಿಯೇ ಉಳಿಯುವಂತೆ ಆಗ್ರಹಿಸಿದೆ.

"ನಿನ್ನ ಮತ್ತು ನಿನ್ನ ಮುದ್ದಿನ ಹೆಂಡತಿಯ ನಡುವೆ ನಾನೇಕ ಗೋಡೆಯಾಗಲಿ?" ಅವಳು ಕೇಳಿದಳು.

"ನಿನಗೆ ನಾವು ಬೇರೆ ಕೋಣೆ ನೀಡುತ್ತೇವೆ"

"ಇದು ನಿನಗೆ ಆತಂಕ ಹುಟ್ಟಿಸಲಿಕ್ಕಿಲ್ಲವೇ?"

ನನಗೆ ನಗು ಬಂತು. ನನ್ನ ಹೆಂಡತಿಗೆ ಏನೂ ತಿಳಿಯಲೇ ಇಲ್ಲ. ನಾನೂ ಹೇಳಲು ಹೋಗಲಿಲ್ಲ.

"ಹಾಗಾದರೆ ನೀನು ಇಲ್ಲಿ ನಿಲ್ಲುವವಳಲ್ಲ?"

"ನಾನು ನಿಲ್ಲುವುದಿದ್ದರೆ ಒಂದೇ ಗುಂಪಿನಲ್ಲಿ ನಿಲ್ಲುತ್ತೇನೆ. ನಾವು ಮೂರೂ ಮಂದಿ ಒಟ್ಟಿಗೆ ಮಲಗೋಣ"

"ಅದು ಸಾಧ್ಯವಿಲ್ಲ. ನಾನು ನಿನ್ನನ್ನು ಕಳುಹಿಸುತ್ತೇನೆ"

"ನೀನೇ ಯಾಕೆ ನಮ್ಮಲ್ಲಿಗೆ ಬಂದು ಇರುವುದಿಲ್ಲ?" ಅವಳು ನನಗೆ ಮರುಪ್ರಶ್ನೆ ಹಾಕಿದಳು.

"ನನ್ನ ಹೆಂಡತಿ ಮನೆಯಲ್ಲಿ ಒಬ್ಬಳೇ ಇರಬೇಕಾಗುತದೆ"

"ಹಾಗಾದರೆ ನೀನು ಅವಳನ್ನು ಬಿಟ್ಟು ಯಾವತ್ತೂ ಹೊರಗೆ ಹೋಗುವುದಿಲ್ಲವೇ?"

"ಹೋಗುತ್ತೇನೆ. ಆದರೆ ಇಂದು ಅವಳ ಕಣ್ಣೆದುರಿಗೇ ನಿನ್ನ ಜೊತೆ ಹೋಗಿ ನಿಮ್ಮಲ್ಲಿ ರಾತ್ರಿ ಕಳೆದರೆ ಅವಳಿಗೆ ಹೇಗನಿಸಬೇಡ?"

"ಅದು ನಿಜ. ನೀನು ನನ್ನನ್ನು ಕಳುಹಿಸಿ ಹಿಂದೆ ಬಾ"

ನಾನು ಕಾರು ಹೊರತೆಗೆದೆ. ಸಿಂಡ್ರೆಲಾ ನನ್ನ ಹತ್ತಿರ ಕುಳಿತುಕೊಂಡಳು.

"ನಿನ್ನ ವರ್ತನೆ ನನಗೆ ವಿಚಿತ್ರವೆನಿಸುತ್ತದೆ. ನೀನು ನನ್ನನ್ನು ಇನ್ನೂ ಪರಕೀಯಳಂತೆ ಯಾಕೆ ಭಾವಿಸುತ್ತಿ?" ಸಿಂಡ್ರೆಲಾ ಕೇಳಿದಳು.

"ನಿನಗೆ ಹಾಗೆ ಅನಿಸುತ್ತಿದೆಯಾ?"

"ಹೌದು, ಆ ದಿನ ನೀನು ನನಗೆ ಕುಂಕುಮ ಹಚ್ಚಿದೆ. ಆದರೆ ನನ್ನ ಕೈ ನಿನಗೆ ತಾಗಿದ ಕೂಡಲೇ ನೀನು ಹಿಂದೆ ಸರಿಯುತ್ತಿ"

"ಅದು ಸಂಸ್ಕಾರ"

"ನಿನಗೆ ನಿನ್ನ ಹೆಂಡತಿ ಬಿಟ್ಟು ಉಳಿದ ಎಲ್ಲ ಹೆಂಗಸರು ನಿಜವಾಗಿಯೂ ತಾಯಿ ತಂಗಿಯರಂತೆ ಕಾಣುವರೇನು?"

"ನಿಜ ಹೇಳಬೇಕೆಂದರೆ ಇಲ್ಲ. ಆದರೆ ಸಂಸ್ಕಾರದ ಬಂಧನ ಒಪ್ಪಲು ಹಚ್ಚುತ್ತದೆ"

"ಅಂದರೆ ನಿನ್ನ ಮನಸ್ಸಿನಲ್ಲಿ ಬಯಕೆ ಇದೆ. ಆದರೆ ಅದನ್ನು ನೀನು ಅದುಮಿಡುತ್ತೀಯಾ"

"ನೀನು ಹೇಳಿದ್ದು ನಿಜ. ಹಾಗೆ ಮಾಡುವುದು ಸಭ್ಯತೆ"

"ಮತ್ತೆ ಸಭ್ಯತೆಯ ವಿಷಯ ತಂದೆ. ಒಂದು ಹೇಳು ಸನ್ಯಾಸಿ, ಬ್ರಹ್ಮಚಾರಿ, ಯೋಗಿ ಇವರು ಹೀಗೇ ಮಾಡುತ್ತಾರೇನು?"

"ಇಲ್ಲ ಅವರ ಮನಸ್ಸಿನಲ್ಲಿ ವಿಕಾರ ಏಳುವುದಿಲ್ಲ"

"ಅದು ಹೇಗಾಗುತ್ತದೆ?"

"ಅದರ ಸಲುವಾಗಿ ಅವರು ಸಾಧನೆಯನ್ನು ಮಾಡುತ್ತಾರೆ. ಕಾಲಿನ ಪಾದದ ಮೇಲೆ ಬೇರೆ ಯಾರಾದರೂ ಬೆರಳನ್ನು ಓಡಾಡಿಸಿದರೆ ಕಚಗುಳಿ ಉಂಟಾಗುತ್ತದೆ. ಆದರೆ ಸ್ವತಃ ನಾವೇ ನಮ್ಮ ಪಾದಗಳ ಮೇಲೆ ಬೆರಳನ್ನು ಓಡಾಡಿಸಿದರೆ ಕಚಗುಳಿ ಅಗುವುದಿಲ್ಲ, ಯಾಕೆ ಹೇಳು?"

"ನೀನು ಹೇಳು?"

"ಯಾಕೆಂದರೆ ನಮ್ಮ ಪಾದದ ಮೇಲೆ ಓಡಾಡುವ ಬೆರಳು ನಮ್ಮದೇ ಎನ್ನುವುದು ನಮ್ಮ ಮನಸ್ಸಿಗೆ ಗೊತ್ತಿರುತ್ತದೆ. ಅದರಂತೆಯೇ ಇದು. ಬೇರೆ ಹೆಂಗಸರನ್ನು ನಮ್ಮ ತಾಯಿ ಅಥವ ತಂಗಿಯೆಂದು ಮನ್ನಿಸಲು ಮನಸ್ಸಿನಲ್ಲಿ ಸಂಕಲ್ಪ ಮಾಡಬೇಕಾಗುತ್ತದೆ."

"ಅಂದರೆ ಈ ವಿಚಾರಕ್ಕೆ ಜಯ ಸಿಗಬಹುದೇ?"

"ಸಿಗುತ್ತದೆ"

"ಆದರೆ ನೀನು ನಿನ್ನ ಮನೋಭಿಲಾಷೆಯನ್ನು ಯಾಕೆ ಅದುಮಿಡುತ್ತೀಯಾ?"

"ನನ್ನ ಹೆಂಡತಿಗೆ ಅನ್ಯಾಯವಾಗುತ್ತದೆಂದು ನನಗೆ ಭಯ"

"ಮತ್ತೆ, ನಿನ್ನ ಹೆಂಡತಿಯ ಮನಸ್ಸಿನಲ್ಲಿ ಬೇರೊಬ್ಬ ಗಂಡಸು ಬಂದರೆ?"

"ನನಗೆ ಅದು ಮಾನ್ಯವಿಲ್ಲ"

"ಅಂದ ಮೇಲೆ ನೀನು ಅವಳ ಸ್ವಾತಂತ್ರ್ಯಕ್ಕೆ ಅಡ್ಡಿಬರುತ್ತಿ ಎಂದಾಯಿತಲ್ಲ?"

"ಅದಕ್ಕೆ ಉಪಾಯವೇನು?"

"ಉಪಾಯವಿದೆ. ಸಂಸ್ಕಾರದ ಬಂಧನ ತೊರೆದು ಮನಸ್ಸನ್ನು ಮುಕ್ತಗೊಳಿಸಬೇಕು. ಆಶೆಯನ್ನು ಅದುಮಿಟ್ಟರೆ ಅದು ಬೆಳೆಯುತ್ತದೆ. ಅನುಭವಿಸಿದರೆ ಅದು ಕೊನೆಗೊಳ್ಳುತ್ತದೆ"

ಕಾರು ಕೊಲ್ವಾ ಸಮೀಪಿಸಿತು.

"ಎಷ್ಟು ಬೇಗ ಬಂದು ತಲುಪಿದೆವು. ನೀನು ಇಳಿ, ನಾವು ಸಮುದ್ರ ದಂಡೆಯ ಮೇಲೆ ಕುಳಿತುಕೊಳ್ಳುವ" ಸಿಂಡ್ರೆಲಾ ಹೇಳಿದಳು.

"ಮನೆಯಲ್ಲಿ ಹೆಂಡತಿ ಒಬ್ಬಳೇ ಇದ್ದಾಳಲ್ಲ?"

"ಹೆಚ್ಚು ಹೊತ್ತು ಬೇಡ. ವಿಷಯ ಪೂರ್ತಿ ಮಾಡುತ್ತೇನೆ. ಭಾರತಕ್ಕೆ ಬರುವ ಮೊದಲು ನಾನು ಇರಾನಿಗೆ ಹೋಗಿದ್ದೆ. ಅಲ್ಲಿಯ ವಿಷಯ ಹೇಳುವುದಿದೆ"

"ಆಶೆಯನ್ನು ಅನುಭವಿಸುವುದಲ್ಲವೇ?"

"ಹೌದು"

ನಾವಿಬ್ಬರೂ ನಕ್ಕೆವು. ಸಮುದ್ರದಂಡೆಯಲ್ಲಿ ಕುಳಿತುಕೊಂಡೆವು. ಆಗ ಸಿಂಡ್ರೆಲಾ ಕೇಳಿದಳು,

"ಹೆಂಗಸರ ಎದೆ ಯಾವಾಗಲೂ ಮುಚ್ಚಿಕೊಂಡೇ ಇರಬೇಕೆಂದು ಸಮಾಜದ ಆಗ್ರಹವೇಕೆ?"

"ನೋಡುವವರ ಮನಸ್ಸಿನಲ್ಲಿ ಆಸೆ ಹುಟ್ಟಿಕೊಳ್ಳಬಾರದೆಂದು"

"ನೋಡುವವರು ಗಂಡಸರು ತಾನೇ?"

"ಹೌದು"

"ಮತ್ತೆ ಗಂಡಸರ ಎದೆ ನೋಡಿ ಹೆಂಗಸರ ಮನಸ್ಸಿನಲ್ಲಿ ಆಸೆ ಹುಟ್ಟಿಕೊಳ್ಳಬಾರದೇ?"

"ನನಗೇನು ಗೊತ್ತು?"

"ಅಂದ ಮೇಲೆ ಸಭ್ಯತೆಯ ನಿಯಮ ಮಾಡಿರುವವರು ಗಂಡಸರು, ಅದೂ ಹೆಂಗಸರಿಗಾಗಿ."

ನಾನು ಸುಮ್ಮನಾದೆ. ಸಿಂಡ್ರೆಲಾ ತನ್ನ ಮೇಲುಡುಪನ್ನು ಕಳಚಿದಳು. ನಾನು ಬೇರೆಡೆ ನೋಟ ಹರಿಸಿದೆ.

"ಹೀಗೆ ನಾಚಿಕೊಳ್ಳಬೇಡ. ಸಂಯಮವಿದ್ದರೆ ಮನಸ್ಸು ವಿಕಾರಗೊಳ್ಳುವುದಿಲ್ಲ"

"ಆದರೆ ಈಗ ಮನಸ್ಸಿಗೆ ಬಂದಿರುವ ಈ ಬಯಕೆಯನ್ನು ಏನು ಮಾಡಬೇಕು?"

"ಅದು ಬಂದಿದ್ದರೆ ಅದನ್ನು ಅದುಮಿಡಬೇಡ"

ನಾನು ಸಂಯಮವನ್ನು ಕಾಪಾಡಿಕೊಳ್ಳುತ್ತ ಕುಳಿತುಕೊಂಡೆ. ಸಿಂಡ್ರೆಲಾ ಮಾತ್ರ ಯಾವ ಸಂಕೋಚವೂ ಇಲ್ಲದೆ ಮಾತನಾಡುತ್ತಿದ್ದಳು. ಅವಳು ಇರಾನಿನ 'ಮಜೂಕ' ಹೆಸರಿನ ಸನ್ಯಾಸಿಯ ಕತೆ ಹೇಳಿದಳು. ಅದು ಹೀಗಿದೆ:

ಮಜೂಕ ಸಂಸಾರದ ದುಃಖವನ್ನು ಹೋಗಲಾಡಿಸಲು ಹೊರಟ. ಎಲ್ಲಾ ದೇಶಗಳನ್ನು ಸುತ್ತಾಡುತ್ತಿದ್ದಂತೆ ಅವನಿಗೆ ಅನಿಸಿತು, ಮನುಷ್ಯನ ಬಯಕೆಗಳು ಈಡೇರದೇ ಇದ್ದಾಗ ಅವನು ಅಸಂತುಷ್ಟನಾಗುತ್ತಾನೆ. ಮನುಷ್ಯನಿಗೆ ಎರಡು ರೀತಿಯ ಹಸಿವು ಇರುತ್ತದೆ. ಅನ್ನ ಮತ್ತು ಭೋಗದ ಹಸಿವು. ಈ ಹಸಿವು ತೀರಿತೆಂದರೆ ಸಂಸಾರ ಸುಖಮಯವಾಗುತ್ತದೆ. ಒಮ್ಮೆ ಒಂದು ನದಿತೀರದಲ್ಲಿ ತರುಣನೊಬ್ಬ ಕರುಣಾಜನಕ ಹಾಡನ್ನು ಹಾಡುತ್ತಿದ್ದನು. ಮಜೂಕನಿಗೆ ಅದು ಹಾಡಲ್ಲ, ದುಃಖದ ಹೊಳೆ ಎನಿಸಿತು. ಅವನು ಆ ತರುಣನಲ್ಲಿ ಹೋಗಿ ಅವನ ದುಃಖದ ಬಗ್ಗೆ ಕೇಳಿದಾಗ ಆತ ಹೇಳಿದ,

"ನನಗೆ ಒಂದು ಹುಡುಗಿಯ ಮೇಲೆ ಪ್ರೇಮ ಹುಟ್ಟಿದೆ. ಆದರೆ ಅವಳು ಒಪ್ಪುತ್ತಿಲ್ಲ"

"ಯಾಕೆ ಒಪ್ಪುತ್ತಿಲ್ಲ?"

"ನನಗೆ ಗೊತ್ತಿಲ್ಲ"

"ಆ ಹುಡುಗಿ ತಪ್ಪಿತಸ್ಥಳು. ಯಾರು ದುಃಖಕ್ಕೆ ಕಾರಣರಾದರೋ ಅದು ನಿಜ ಇರಲಿಕ್ಕಿಲ್ಲ. ನಡಿ, ನಾವು ಅವಳ ಮನೆಗೆ ಹೋಗೋಣ"

ಅವರಿಬ್ಬರೂ ಆ ಹುಡುಗಿಯ ಮನೆಗೆ ಹೋದರು. ಮಜೂಕ ಅವಳನ್ನು ಕೇಳಿದ,

"ನೀನು ಅವನ ಬಯಕೆಯನ್ನು ಯಾಕೆ ತಿರಸ್ಕರಿಸಿದೆ?"

"ನಾನು ಅವನಿಗೆ ಏನೂ ಮಾಡಲಿಲ್ಲ. ಆದರೆ ಅವನು ಕೇಳುವುದನ್ನು ನೀಡಲು ನನ್ನಿಂದ ಆಗಲಿಲ್ಲ" ಹುಡುಗಿ ಉತ್ತರಿಸಿದಳು.

"ನಿನಗೆ ಏನು ಬೇಕು?" ಮಜೂಕ ತರುಣನಲ್ಲಿ ಕೇಳಿದ.

"ನನಗೆ ಅವಳ ಅಪ್ಪುಗೆ ಬೇಕು. ಒಬ್ಬ ಗಂಡಸಿಗೆ ಹೆಂಗಸಿನಿಂದ ಯಾವ ಸುಖ ಬೇಕೋ ಅದೆಲ್ಲವೂ ನನಗೆ ಬೇಕು"

"ಹುಡುಗೀ, ನೀನೇಕೆ ಒಪ್ಪುತ್ತಿಲ್ಲ?"

"ನಾನು ನನ್ನ....." ಶೀಲವನ್ನು ಅವನಿಗೆ ಒಪ್ಪಿಸಲೇ?

"ಶೀಲ?...." ದೇವರ ಸಂಸಾರದಲ್ಲಿ ಇದಕ್ಕೆ ಆಸ್ಪದವಿಲ್ಲ. ಬಂಧನದ ಸಂಕೋಲೆಯಿಂದ ಶೋಭಿತವಾಗಿದೆ ಇದು. ಯಾರಿಗೆ ಹಸಿವಾಗಿದೆ ಅವರಿಗೆ ಊಟ ಸಿಗಲೇಬೇಕು. ಯಾರಿಗೆ ಯಾವ ಮನೋಭಿಲಾಷೆ ಇದೆ ಅದು ಅವರಿಗೆ ಅನುಭವಿಸಲು ಸಿಗಲೇಬೇಕು

"ಇದು ಪ್ರಾಣಿಗಳ ವರ್ತನೆಯಾಗುವುದಿಲ್ಲವೇ?"

"ಆಗಲಿ. ಆ ವರ್ತನೆಯಲ್ಲಿ ಸುಖ ಇದೆ. ಶಾಂತಿ ಇದೆ. ಮನುಷ್ಯನ ಸಭ್ಯತೆಯಿಂದ ಯಾರ ಉದ್ಧಾರವಾಗಿದೆ?"

ನನಗೆ ನಗುಬಂತು. ನಾನು ನಕ್ಕೆ.

"ಯಾಕೆ ನಗುತ್ತಿ? ಇದು ನಿಮ್ಮ ಕ್ಷುಲ್ಲಕ ದೃಷ್ಟಿಯಲ್ಲವೇ?" ಸಿಂಡ್ರೆಲಾ ಕೇಳಿದಳು.

"ಹೌದು. ಆದರೆ ಒಬ್ಬರ ಹಸಿವು ತೀರಿಸಲು ಇನ್ನೊಬ್ಬರ ಮೇಲೆ ಬಲವಂತ ಯಾಕೆ?"

"ಅದೇನೋ ನಿಜ. ಬಲವಂತ ಮಾಡುವಂತಿಲ್ಲ. ಈಗ ನನಗೆ ನಿನ್ನ ಶರೀರ ಉಪಭೋಗಿಸುವ ಆಸೆ ಆಗಿತ್ತು. ನಿನ್ನ ಸಹಮತವೂ ಇತ್ತು"

ನಾನು ನನ್ನ ನೋಟ ಬದಲಾಯಿಸಿದೆ. ಅಷ್ಟರಲ್ಲಿ ಸಿಂಡ್ರೆಲಾ ನನ್ನ ತೋಳಿನೊಳಗೆ ಬಂದಳು. ಕ್ಷಣಮಾತ್ರದಲ್ಲಿ ಸಭ್ಯತೆಯ ನಡತೆ ಕುಸಿದು ಬಿತ್ತು. ನಡುಗುವ ತುಟಿಗಳಿಂದ ನಾನು ಅವಳನ್ನು ಚುಂಬಿಸಿದೆ.

"ನಿನಗೆ ಸಮಾಧಾನವಾಯಿತೆ?"

"ಇಲ್ಲ. ಇದೀಗ ತಾನೇ ಪ್ರಾರಂಭವಾಗಿದೆ" ಸಿಂಡ್ರೆಲಾ ಉತ್ತರಿಸಿದಳು.

ಆಮೇಲೆ ಎಷ್ಟು ಹೊತ್ತು ನಾವಿಬ್ಬರೂ ಇದೇ ಸ್ಥಿತಿಯಲ್ಲಿ ಇದ್ದೆವೋ ಆ ದೇವರೇ ಬಲ್ಲ. ಒಮ್ಮೆಲೇ ನನಗೆ ಮನೆಯ ನೆನಪು ಬಂತು. ನನ್ನ ಅಪ್ಪುಗೆ ಸಡಿಲವಾಯಿತು.

"ಏನಾಯಿತು?" ಅವಳು ಕೇಳಿದಳು.

"ಮನೆಗೆ ಹೋಗಬೇಕು. ರಾತ್ರಿ ಬಹಳವಾಗಿದೆ"

"ನನ್ನ ಮೇಲೆ ಇದು ಅನ್ಯಾಯ, ಹೌದಲ್ಲ?" ಅವಳು ಕೇಳಿದಳು.

ನಾನು ಪ್ರಾಯಶ್ಚಿತ್ತವಾಗಿ ಮತ್ತೆ ಅವಳನ್ನು ಚುಂಬಿಸಿದೆ.

೦ ೦ ೦

ರವಿವಾರ

ನಾನು ಸಿಗರೇಟ್ ಸೇದುವುದಿಲ್ಲ. ಆದರೆ ಹುಕ್ಕಾ ಸೇದಿ ಸಿಗುವ ಆನಂದದ ಅನುಭವ ಯಾವ ರೀತಿಯದು ಎಂಬುದನ್ನು ತಿಳಿದುಕೊಳ್ಳಬೇಕೆನಿಸಿತು. ನಾವು ಹಿಪ್ಪಿಯ ಮನೆಯ ಕೋಣೆಯೊಂದರಲ್ಲಿ ಕುಳಿತಿದ್ದೆವು. ಅಲ್ಲಿ ಯಾರಿಗೂ ದೇಹದ ಪರಿವೆ ಇರಲಿಲ್ಲ. ಸಿಂಡ್ರೆಲಾಳಂತೂ ಎಂದಿನಂತೆ ದಿಗಂಬರ ಅವತಾರ ಹೊಂದಿದ್ದಳು. ಅವಳು ತಂಬಾಕಿನಲ್ಲಿ ಚರಸ್ ಸೇರಿಸಿ ತಾನು ಸೇದುತ್ತಿದ್ದ ಸಿಗರೇಟಿನಿಂದ ಚರಸ್ ತುಂಬಿದ ಸಿಗರೇಟನ್ನು ಹೊತ್ತಿಸಿದಳು. ಒಮ್ಮೆ ಬಾಯಿಗಿಟ್ಟು ಉಸಿರೆಳೆದುಕೊಂಡು ಅದನ್ನು ನನ್ನ ಬಾಯಿಗೆ ಹಿಡಿದಳು. ನಾನು ದೀರ್ಘ ಉಸಿರಿನೊಂದಿಗೆ ಸೇದಿದೆ. ಅದರ ಘಾಟು ನನ್ನ ನೆತ್ತಿಗೇರಿತು. ನಾನು ಕೆಮ್ಮತೊಡಗಿದೆ. ಸಿಂಡ್ರೆಲಾ ನನ್ನ ಬೆನ್ನು, ಗಂಟಲು ಸವರುತ್ತಾ, ನಿಧಾನ ಎಂದು ಹೇಳಿದಳು. ನನಗೆ ಅದೇ ಮೊದಲ ಬಾರಿ ಜಗತ್ತು ಸುತ್ತುತ್ತಿರುವ ಅನುಭವವಾಗತೊಡಗಿತು.

"ಸಾಕು" ಎಂದು ಹೇಳಿದೆ.

"ಇನ್ನೂ ನೀನು ಏನನ್ನೂ ನೋಡಿಲ್ಲ. ಸ್ವಲ್ಪ ಸೇದು" ಅವಳು ಹೇಳಿದಳು.

"ನಿಲ್ಲು" ನಾನು ವಿಚಲಿತನಾದೆ. ನನ್ನಲ್ಲಿದ್ದ ಮೃಗೀಯ ಗುಣ ಜಾಗ್ರತಗೊಂಡಿತು. ಅವಳ ದೇಹ ನನ್ನನ್ನು ಕೆಣಕುತ್ತಿತ್ತು. ಸಿಗರೇಟ್ ಸೇದುತ್ತಾ ಸೇದುತ್ತಾ ಮನುಷ್ಯತ್ವದ ಗಡಿದಾಟಿ ನನ್ನ ತೃಷೆಯನ್ನು ಪೂರೈಸಿಕೊಂಡೆ.

ನನಗೆ ಎಚ್ಚರವಾದಾಗ ನನ್ನ ತಲೆ ಅವಳ ತೆರೆದ ಹೊಟ್ಟೆಯ ಮೇಲೆ ಇತ್ತು. ನಾನು ತಲೆ ಕೊಡವಿಕೊಳ್ಳುತ್ತಾ ಎದ್ದು ಕುಳಿತೆ. ಅವಳು ಇನ್ನೂ ಮಲಗಿಕೊಂಡಿದ್ದಳು. ಅವಳನ್ನು ನೋಡುತ್ತಿದ್ದಂತೆ ನನ್ನ ಅಂಗಾಂಗಗಳು ಕಂಪಿಸಿದವು. ದೇಹದ ಮೇಲಿನ ವ್ಯಾಮೋಹ ಬುದ್ಧಿಯನ್ನು ಕುರುಡಾಗಿಸುವ ಕಲ್ಪನೆಯ ಅನುಭವವಾಯಿತು. ನಾನು ನನ್ನನ್ನೇ ನೋಡಿಕೊಂಡೆ. ಅಲ್ಲಿ ಸಭ್ಯತೆಯ ಮುಖವಾಡ ಇರಲಿಲ್ಲ. ನನಗೆ ನಾಚಿಕೆಯಾಯಿತು. ಎದ್ದು ಬಟ್ಟೆ ಧರಿಸಿದೆ.

ಸಿಂಡ್ರೆಲಾ ಇನ್ನೂ ಅಸ್ತವ್ಯಸ್ತಳಾಗಿಯೇ ಬಿದ್ದುಕೊಂಡಿದ್ದಾಳೆ. ಅವಳನ್ನು ಆ ಸ್ಥಿತಿಯಲ್ಲಿ ನೋಡಲಾಗದೆ ಅವಳ ಮೈಮೇಲೆ ಚಾದರವನ್ನು ಹೊದಿಸಿದೆ. ಆಮೇಲೆ ಕಾಗದದ ತುಂಡಿಗಾಗಿ ಕಿಸೆಗೆ ಕೈಹಾಕಿದೆ. ಆದರೆ ಅಲ್ಲಿ ಅದು ಇರಲಿಲ್ಲ. ಆ ಕೋಣೆಯಲ್ಲಿ

ಕೂಡಾ ಇರಲಿಲ್ಲ. ನಂತರ ಕೈಗೆ ಸಿಕ್ಕಿದ ಹಳೆಬಿಲ್ ಒಂದರ ಹಿಂಭಾಗದಲ್ಲಿ ಬರೆಯತೊಡಗಿದೆ–

ಸಿಂಡ್ರೆಲಾ, ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ನನ್ನ ಬಯಕೆ ತೀರಿತು. ನನ್ನ ಮನೆಯ ಬಾಗಿಲು ನಿನಗೆ ಯಾವತ್ತೂ ತೆರೆದಿರುತ್ತದೆ. ಆದರೆ ನನ್ನನ್ನು ಮಾತ್ರ ಇಲ್ಲಿಗೆ ಕರೆಯಬೇಡ. ನಿಮ್ಮ ಸಿದ್ಧಾಂತ ನಿಜವೂ, ಸಮಂಜಸವೂ ಉತ್ತಮವೂ ಇರಬಹುದು. ಆದರೆ ಭೋಗದ ಆಸೆಯನ್ನು ಈಡೇರಿಸಿಕೊಂಡು ಜೀವನವನ್ನು ನಡೆಸಲು ನನ್ನಿಂದ ಸಾಧ್ಯವಿಲ್ಲ. ಅದನ್ನು ರೂಢಿಗೆ ತರುವುದು ಕೂಡಾ ಇಷ್ಟವಿಲ್ಲ.

ರಾತ್ರಿ ಮನೆಗೆ ಬಂದೆ. ಆದರೆ ಹೆಂಡತಿಯ ಕಣ್ಣುಗಳನ್ನು ಎದುರಿಸುವ ಧೈರ್ಯ ಮಾತ್ರ ಇರಲಿಲ್ಲ. ಬಾಯಿಬಿಟ್ಟು ಹೇಳದಿದ್ದರೂ ಅದನ್ನು ತಿಳಿದುಕೊಳ್ಳುವ ಸಾಮರ್ಥ್ಯ ಹೆಂಡಂದಿರಿಗೆ ಇರುತ್ತದೆ. ಅವಳಿಗೆ ಗೊತ್ತಾಯಿತೆಂದೇ ಇಟ್ಟುಕೊಳ್ಳೋಣ ಆದರೂ ಅವಳು ಏನೂ ಮಾತನಾಡಲಿಲ್ಲ.

○ ○ ○

ಎಂಟು ದಿನಗಳು ಕಳೆದವು. ಸಿಂಡ್ರೆಲಾ ಬರಲೇ ಇಲ್ಲ. ನನಗೆ ಪದೇಪದೇ ಅವಳ ನೆನಪು ಬರುತ್ತಿತ್ತು. ನಾನಿರುವಾಗಲೇ ಮನೆಗೆ ಬಂದು ನನ್ನ ಹೆಂಡತಿಯಲ್ಲಿ ಎಲ್ಲವನ್ನೂ ಹೇಳಬಹುದೆಂಬ ಭ್ರಮೆ ನನ್ನನ್ನು ಕಾಡುತ್ತಿತ್ತು. ಆದರೆ ಸಿಂಡ್ರೆಲಾ ಬರಲೇ ಇಲ್ಲ.

"ಸಂಜೆ ಕೋಲ್ವಾ ಬೀಚಿಗೆ ಬರ್ತೀಯಾ?" ನಾನು ಹೆಂಡತಿಯಲ್ಲಿ ಕೇಳಿದೆ.

"ಯಾಕೆ ಸಿಂಡ್ರೆಲಾಳನ್ನು ಭೇಟಿಯಾಗಲು ಅಲ್ಲವೇ? ನನ್ನ ಅಡಚಣೆ ಯಾಕೆ?"

ಅವಳ ಪ್ರಶ್ನೆ ನನ್ನ ಹೃದಯವನ್ನು ಬಾಣದಂತೆ ಚುಚ್ಚಿತು. ನಾನು ನಗುತ್ತಾ ಕೇಳಿದೆ, "ನಿನಗೆ ಅನುಮಾನವೇ?"

"ಅನುಮಾನ ಇಲ್ಲ. ಆದರೆ ಮೊದಲನೆಯ ಬಾರಿ ಆ ವಿದೇಶಿಯಳನ್ನು ಮನೆಗೆ ಕರೆದುಕೊಂಡು ಬಂದಾಗ ನನ್ನ ಮನಸ್ಸಿಗೆ ಕಸಿವಿಸಿಯಾಗಿತ್ತು."

"ಆಯ್ತು ಮಾರಾಯ್ತಿ. ಈಗ ನೀನು ಬಾ"

"ನನಗೆ ಕೆಲಸವಿದೆ. ಅದನ್ನು ಯಾರು ಮಾಡುತ್ತಾರೆ?"

"ಈವತ್ತು ತಿರುಗಾಡಲು ಸಿಕ್ಕಿದೆ ಎಂದು ನಾಳೆ ಅದು ಸಿಗುವುದೆಂಬ ಭರವಸೆ ಇಲ್ಲ. ಮಕ್ಕಳು ಹುಟ್ಟುವವರೆಗೆ...."

"ನೀವು ಹೋಗುವುದಿದ್ದರೆ ಹೋಗಿ ನೋಡುವಾ.." ಅಷ್ಟು ಹೇಳಿ ಅವಳು ಒಳಗೆ ಹೋದಳು.

ನಾನು ಎಷ್ಟೋ ಹೊತ್ತಿನವರೆಗೆ ಸಮುದ್ರದಂಡೆಯ ಮೇಲೆ ಕುಳಿತುಕೊಂಡಿದ್ದೆ.

ನನಗೆ ಸಿಂಡ್ರೆಲಾ ನೆನಪು ಬರುತ್ತಿತ್ತು. ಹೆಂಡತಿ ಏನು ತಿಳಿದುಕೊಂಡಳೋ ಅದೂ ಕಾಡುತ್ತಿತ್ತು. ನನ್ನಲ್ಲಿ ಅಪರಾಧದ ಭಾವನೆ ಇದ್ದುದರಿಂದ ಹೆಂಡತಿಯೊಂದಿಗೆ ಇದ್ದರೆ ಮಾತ್ರ ಸಿಂಡ್ರೆಲಾಳ ಕಣ್ಣುಗಳನ್ನು ಸಂಧಿಸುವ ಶಕ್ತಿ ನನಗೆ ಬರುತ್ತಿತ್ತು. ಕೊನೆಗೂ ನಾನು ಒಂಟಿಯಾಗಿಯೇ ಕೊಲ್ವಾಗೆ ಹೋದೆ. ಕಾರನ್ನು ನಿಲ್ಲಿಸುತ್ತಿದ್ದಂತೆ ಪಾಲ್ ಕಾಣಲು ಸಿಕ್ಕಿದ. ಸಿಂಡ್ರೆಲಾ ರೆಸ್ಟೋರೆಂಟ್‌ನಲ್ಲಿ ಇದ್ದಾಳೆ ಎಂದು ತಿಳಿಸಿದ.

ಅಲ್ಲಿ ಎರಡು ಜೋಡಿಗಳು ಕುಳಿತು ಬಿಯರ್ ಕುಡಿಯುತ್ತಿದ್ದರು. ಸಿಂಡ್ರೆಲಾ 'ಹಾಯ್' ಎಂದು ಕೈಬೀಸಿದಳು. ನಾನು ಹೋಗಿ ಕುರ್ಚಿಯೊಂದನ್ನು ಎಳೆದುಕೊಂಡು ಅವರ ನಡುವೆ ಕುಳಿತುಕೊಂಡೆ.

"ನೀನು ಏನು ತಗೋತಿಯಾ?"

"ಕೋಕ್"

"ಹ್ಯಾವ್ ಸಮ್ ಬಿಯರ್. ವಿ ಆರ್ ಸೆಲೆಬ್ರೇಟಿಂಗ್" ಅಲ್ಲಿದ್ದ ಒಬ್ಬ ಹೇಳಿದ.

ನಾನು ಗಾಬರಿ ಬಿದ್ದು ಸಿಂಡ್ರೆಲಾ ಕಡೆಗೆ ನೋಡಿದೆ. ಅವಳು ಕಣ್ಣಿನಲ್ಲಿಯೇ ನಕ್ಕು ನಾಚಿಕೆ ವ್ಯಕ್ತಪಡಿಸಿದಳು. ನಾನು ಮತ್ತೆ ಮಾತನಾಡುವ ಮೊದಲೇ ಬಿಯರ್ ಗ್ಲಾಸ್ ನನ್ನೆದುರಿಗೆ ಬಂತು. ನಾನು ಅದನ್ನೆತ್ತಿ "ಚಿಯರ್ಸ್!" ಎಂದೆ

"ಚಿಯರ್ಸ್ ಟು ಸಿಂಡ್ರೆಲಾ ಆಂಡ್ ಹರ್ ಬೇಬಿ ಇನ್ ದಿ ವೂಂಬ್!" ಅಲ್ಲಿದ್ದ ಹಿಪ್ಪಿ ಹೇಳಿದ.

ನನ್ನ ಕೈ ನಡುಗಿತು. ಸ್ವಲ್ಪ ಬಿಯರ್ ಮೈಮೇಲೆ ಚೆಲ್ಲಿಕೊಂಡಿತು.

"ಏನಾಯ್ತು?" ಇನ್ನೊಂದು ಹುಡುಗಿ ಕೇಳಿದಳು.

"ಹೀ ಇಸ್ ತ್ರಿಲ್ಡ್"

ನಾನು ಕಿಸೆಯಿಂದ ಕರವಸ್ತ್ರ ತೆಗೆದು ಮೈ, ಕೈ ಒರೆಸಿಕೊಂಡೆ. ಇದು ನಡೆಯುತ್ತಿದ್ದಂತೆ ಅಲ್ಲಿದ್ದ ಇನ್ನೊಬ್ಬ ಹಿಪ್ಪಿ ಸಿಂಡ್ರೆಲಾಳಿಗೆ ಮುತ್ತಿಟ್ಟ. ಅವಳ ಕಿಬ್ಬೊಟ್ಟೆಯ ಮೇಲೆ ಕೈಯಾಡಿಸಿದ. ನಾನು ಅಪರಾಧಿಯಂತೆ ಮುಖ ಕೆಳಗೆ ಹಾಕಿ ಬಿಯರ್ ಕುಡಿಯತೊಡಗಿದೆ. ಸ್ವಲ್ಪ ಸಮಯ ಕಳೆದು ಅವರೆಲ್ಲಾ ಎದ್ದು ಹೋದರು. ನಾನು ಮತ್ತು ಸಿಂಡ್ರೆಲಾ ಮಾತ್ರ ಹಿಂದೆ ಉಳಿದೆವು.

"ಸಿಂಡ್ರೆಲಾ, ಇದು ನಿಜವೇ?" ನಾನು ಅವಳನ್ನು ಕೇಳಿದೆ. ನನ್ನ ಮಾತುಗಳು ತಡವರಿಸುತ್ತಿದ್ದವು.

"ನಾನು ಗೆದ್ದೆ ನೀನು ಸೋತೆ" ಸಿಂಡ್ರೆಲಾ ಹೇಳಿದಳು.

"ನಿನಗೆ ಏನು ಹೇಳುವುದಿದೆ ಸಿಂಡ್ರೆಲಾ?"

"ಆ ದಿನ ಚೀಟಿ ಬರೆದು ಹೋದೆ ನೀನು. ಆದರೆ ನನಗೆ ಗೊತ್ತಿತ್ತು. ನೀನು ಬಂದೇ ಬರುತ್ತಿಯಾ ಅಂತ. ನಾನು ಗೆದ್ದೆ"

"ಇದು ನಿಜವೇ?" ಸಮಾಧಾನದಿಂದ ಉಸಿರೆಳೆದುಕೊಳ್ಳುತ್ತಾ ನಾನು ಮತ್ತೆ ಕೇಳಿದೆ.

"ದೇವರಾಣೆಗೂ ನಿಜ!"

"ಅವನು ಯಾರು?"

"ನಾನು ಹೇಗೆ ಹೇಳಲಿ?"

"ನಾನು ಅಲ್ಲ.."

"ಅದನ್ನು ಯಾರಿಂದ ಹೇಳಲು ಆಗುತ್ತದೆ? ಆದರೆ ನೀನು ಹೆದರಬೇಡ. ನಾನು ಹುಡುಗಿ. ಅದನ್ನು ಕಾಯಿದೆಬದ್ಧ ಮಗುವಾಗಿ ಬೆಳೆಸುವೆ"

"ಆ ಮಗುವಿನದೇನು ತಪ್ಪು?"

"ತಂದೆಗೇ ಧೈರ್ಯ ಇಲ್ಲದಿದ್ದರೆ ಬೇರೆ ಯಾರಾದರೂ ಯಾಕೆ ಬರುತ್ತಾರೆ?"

"ಆದರೆ ಮುಂದೆ ಏನು?"

"ನನ್ನದೇ? ನಾನು ತಾಯಿಯಾಗಬಹುದು"

"ಮದುವೆಯಾಗದೇ?"

"ಅದರಲ್ಲಿ ಏನುಂಟು? ನನಗೆ ಅಭಿನಂದನೆಯನ್ನಾದರೂ ಹೇಳು ಮಾರಾಯ!"

"ಅಭಿನಂದನೆಗಳು. ಇನ್ನು ನಾನು ಹೋಗಲೇ?"

"ಹೋಗು. ಆದರೆ, ನನ್ನನ್ನು ಮರೆಯಬೇಡ. ಈ ನಡುವೆ ಯಾವಾಗಲಾದರೂ ಬಂದು ಹೋಗು. ಅಥವಾ.. ನಾನೇ ನಿಮ್ಮ ಮನೆಗೆ ಬರಲೇ?"

"ನಿನಗೆ ನಮ್ಮ ಮನೆಗೆ ಬರಬೇಡವೆಂದು ಹೇಳುವುದು ನನ್ನಿಂದ ಸಾಧ್ಯವಿಲ್ಲ. ಆದರೆ ನೀನು ಬರಬೇಡ, ಪ್ಲೀಸ್. ನನಗೆ ಉಪಕಾರ ಮಾಡು"

"ನಿಮ್ಮ ಮನೆಗೆ ನಾನು ಹೆರಿಗೆಗೆ ಬರುವುದಿಲ್ಲವೋ!"

"ಅದು ನನಗೆ ಗೊತ್ತಿದೆ. ಆದರೆ ನನ್ನ ಹೆಂಡತಿ.."

"ನಾನು ನಿನ್ನ ಹೆಸರು ಹೇಳುವುದಿಲ್ಲ.. ಆಣೆ ಮಾಡುತ್ತೇನೆ"

"ಅಲ್ಲ ಸಿಂಡ್ರೆಲಾ ನಮ್ಮ ಮದುವೆಯಾಗಿ ಎಂಟು ವರ್ಷಗಳಾದವು. ಆದರೆ ಇದುವರೆಗೆ ನನ್ನ ಹೆಂಡತಿ ಬಸಿರಾಗಿಲ್ಲ."

ಸಿಂಡ್ರೆಲಾ ನಕ್ಕಳು. "ಹಾಗಾದರೆ..ಅವನು ನೀನಲ್ಲ!" ಇಷ್ಟು ಹೇಳಿದವಳೇ ಅವಳು ಎದ್ದು ನಿಂತಳು.

ಅನುವಾದ: **ಮದನ ಪ್ರಕಾಶ ನಾಯಕ**

❖ ❖ ❖❖ ❖

ಕೆಂಪು ಮೆಣಸಿನಕಾಯಿ

✍ ಸ್ಟೇನ್ ಅಗೇರಾ

ಅನಿಲನ ಬಳಿ ಸಮಯ ಇರಲಿಲ್ಲ. ಅವನು ಎಷ್ಟು ವೇಗವಾಗಿ ಮೆಟ್ಟಲು ಹತ್ತಿ ಮೂರನೆಯ ಮಹಡಿ ತಲುಪಿದನೆಂಬುದನ್ನು ಅವನೇ ಬಲ್ಲ. ಆಯಾಸದಿಂದ ಅವನ ಕಾಲುಗಳು ಬಳಲಿದ್ದವು. ಉಸಿರಾಟದ ಹದ ತಪ್ಪಿ ಮೇಲುಸಿರು ಬರುತ್ತಿತ್ತು. ಆದರೂ ಅದನ್ನು ಗಮನಕ್ಕೆ ತಂದುಕೊಳ್ಳದೆ ತನ್ನ ಅಪಾರ್ಟಮೆಂಟಿನತ್ತ ಹೆಜ್ಜೆ ಹಾಕತೊಡಗಿದ.

ರಜಾದಿನಗಳನ್ನು ಕಳೆಯಲು ಹೊರಗೆ ಹೋಗುವ ಸಂತಸ. ತನ್ನ ಉದ್ಯೋಗದ ದೀರ್ಘ ಅನುಭವದಲ್ಲಿ ತಿಂಗಳ ರಜೆಯನ್ನು ಯಾವುದೇ ವರ್ಷದಲ್ಲಿ ಅವನು ತಪ್ಪಿಸಿಕೊಂಡಿರಲಿಲ್ಲ. ಇಡೀ ವರ್ಷದ ಕೆಲಸವನ್ನು ಪೂರೈಸಿದ ಬಳಿಕ, ರಜಾದಿನಗಳು ಹತ್ತಿರವಾಗುತ್ತಿದ್ದಂತೆ ಅನಿಲನ ನರನಾಡಿಗಳಲ್ಲಿ ಸಾಹಸದ ಹುಮ್ಮಸ್ಸು ಪ್ರವಹಿಸುತ್ತಿತ್ತು. ಎದೆಯೊಳಗೆ ಸಂತಸ ತುಂಬಿಕೊಳ್ಳುತ್ತಿತ್ತು. ಮನಸ್ಸು ವಿಶ್ರಾಂತಿಯನ್ನು ಬಯಸುತ್ತಿತ್ತು. ರಜೆಯ ತಯಾರಿಯ ತರಾತುರಿ.

ಅನಿಲ ಮನೆಯ ಕರೆಗಂಟೆಯ ಗುಂಡಿಯನ್ನು ಒತ್ತಿದ.

ಬಾಗಿಲನ್ನು ತೆರೆಯುತ್ತಲೇ ಜೆಸ್ಸಿಯ ಪಿರಿಪಿರಿ ವಾಕ್ಪ್ರವಾಹ ಆರಂಭವಾಗುವುದೆಂದು ಅವ ಬಲ್ಲ. ಜೆಸ್ಸಿ ನಾಟಕೀಯವಾಗಿ ಮೋರೆ ತಿರುವಿದಳು. ಮಡದಿಯರ ಈ ನಾಟಕ ಸರ್ವೇಸಾಮಾನ್ಯವಾದುದು ತಾನೇ. ತಪ್ಪು ಹುಡುಕಿ ಗಂಡಂದಿರ ಮೇಲೆ ಒತ್ತಡ ಹೇರಿದರೆ ಮಾತ್ರ ಅವರಿಗೆ ಸಮಾಧಾನ. ಹಣೆಯ ಮೇಲೆ ಮೂಡಿದ ಬೆವರನ್ನು ಒರಸಿಕೊಳ್ಳುತ್ತಾ ಅನಿಲ ಮನೆಯೊಳಗೆ ಪ್ರವೇಶಿಸಿದ.

"ಎಲ್ಲಿ ಮಾಯವಾಗಿದ್ದೆ ನೀನು?" ತಪ್ಪು ಹುಡುಕಲು ಜೆಸ್ಸಿ ತಡ ಮಾಡಲಿಲ್ಲ. "ನಿನ್ನ ಉದ್ದೇಶ ಏನೂಂತ ನನಗೆ ಅರ್ಥವಾಗಲಿಲ್ಲ"

"ಆಫೀಸಿನ ನಮ್ಮ ಕಷ್ಟ ಏನೂ ಅಂತ ನಿನಗೆ ಅರ್ಥವಾಗದು ಜೆಸ್ಸಿ" ಅವನು ಮಾತು ಹಾರಿಸಿದ. "ರಜೆಯಲ್ಲಿ ಹೋಗುವಾಗ ಕೆಲಸದ ಜವಾಬ್ದಾರಿಯನ್ನು ಬೇರೆಯವರಿಗೆ ಹಸ್ತಾಂತರಿಸುವುದು ತಮಾಷೆಯ ಆಟವೇನಲ್ಲ. ವ್ಯವಹಾರದಲ್ಲಿ ನೂರೆಂಟು ಸಮಸ್ಯೆಗಳು ಇರುತ್ತವೆ. ಪರಿಹಾರವನ್ನೂ ತೋರಿಸಿ ಕೊಡಬೇಕಾಗುತ್ತದೆ. ಬಾಸ್‌ಗೆ ಸಮಾಧಾನವಿಲ್ಲದೇ ಹೋದರೆ ಅವನು ರಜೆಯನ್ನೇ ರದ್ದುಪಡಿಸುವ ಸಾಧ್ಯತೆಯೂ ಇರುತ್ತದೆ"

"ಹೌದು ಹೌದು.. ಸಾಕು, ಸಾಕು.." ಜೆಸ್ಸಿ ಬೆನ್ನು ತಿರುಗಿಸಿ ಮಲಗುವ ಕೋಣೆಗೆ ಹೋದಳು. "ಅಂದ್ರೆ ನಿಮ್ಮ ಇಷ್ಟು ದೊಡ್ಡ ಕಂಪೆನಿ ನಿನ್ನೊಬ್ಬನಿಂದಲೇ ನಡೆಯುತ್ತದೆ ಎಂಬ ರೀತಿಯಲ್ಲಿ ಬಡಾಯಿ ಕೊಚ್ಚಬೇಡ."

"ಈಗ ರಜೆಯಲ್ಲಿ ಹೊರಡುವಾಗಲಾದರೂ ಸ್ವಲ್ಪ ಸಮಾಧಾನದಿಂದ ಇರು. ಕೆಂಪುಮೆಣಸಿನಕಾಯಿಯಂತೆ ರಂಗೇರಬೇಡ" ಅನಿಲ ಹೆಂಡತಿಯನ್ನು ಹಿಂಬಾಲಿಸುತ್ತಾ ಹೇಳಿದ, "ನಾನು ಐದೇ ನಿಮಿಷಗಳಲ್ಲಿ ಸ್ನಾನ ಮುಗಿಸಿ ಸಿದ್ಧನಾಗುತ್ತೇನೆ"

"ಅಯ್ಯೋ ದೇವರೇ..ಈಗ ನೀನು ಸ್ನಾನಕ್ಕೆ ಬೇರೆ ಹೋಗ್ತಿಯಾ?" ಜೆಸ್ಸಿ ಕನಲಿ ಹೇಳಿದಳು. "ಸಮಯದ ಪರಿವೆಯೇನಾದರೂ ಇದೆಯಾ ನಿನಗೆ? ಮಧ್ಯಾಹ್ನ ಒಂದು ಗಂಟೆ ಆಗಿದೆ. ನಾಲ್ಕು ಗಂಟೆಯ ವಿಮಾನ ಹಿಡಿಯಬೇಕು. ನಮ್ಮನ್ನು ಏರ್‌ಪೋರ್ಟಿಗೆ ಕರೆದುಕೊಂಡು ಹೋಗುವ ಪೆಲ್ಲಿ ಇನ್ನು ಹದಿನೈದು ನಿಮಿಷಗಳಲ್ಲಿ ಇಲ್ಲಿ ಬರಲಿದ್ದಾನೆ"

ಪೆಲ್ಲಿ ಜೆಸ್ಸಿಯ ತಮ್ಮ. ಆತನ ಹೆಸರು ಫೆಲಿಕ್ಸ್. ಪರದೇಶದಲ್ಲಿ ಅವರ ಸಹಾಯಕ್ಕೆ ಒದಗುವ ಸಮೀಪದ ಬಂಧು. ಅವನು ಕೋರಿಯರ್ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ.

"ಪೆಲ್ಲಿಗೆ ಸಮಯದ ಪರಿವೆ ಇದ್ದರೆ ತಾನೇ. ಆತ ಸಮಯಕ್ಕೆ ಸರಿಯಾಗಿ ಬರುವುದುಂಟಾ?" ಅನಿಲ ಅಗತ್ಯಕ್ಕಿಂತ ಹೆಚ್ಚು ವ್ಯಂಗ್ಯವಾಡಿದ. "ಅವನು ಇಲ್ಲಿಗೆ ಬರಬೇಕಾದರೆ ಎಷ್ಟು ಸಲ ಪೇಜಿಂಗ್ ಮಾಡಬೇಕೆಂಬುದನ್ನು ನೀನೇ ನೋಡುವಿಯಂತೆ"

"ಕೃತಘ್ನ ನೀನು!" ತಮ್ಮನನ್ನು ಹಿಯಾಳಿಸಿ ಮಾತನಾಡಿರುವುದು ಜೆಸ್ಸಿಗೆ ಹಿಡಿಸಲಿಲ್ಲ. "ಅವನೊಬ್ಬ ಇದ್ದುದಕ್ಕೆ ಆಯಿತು. ನಿನ್ನ ಬಿಟ್ಟಿ ಕೆಲಸ ಮಾಡಬೇಕೆಂದಿರುವಾಗ ಮಾತ್ರ ನಿನಗೆ ಅವನ ನೆನಪಾಗುವುದು. ಈ ಊರಿನಲ್ಲಿ ನಮ್ಮ ಅನುಪತ್ಯಕ್ಕೆ ಒದಗುವವರು, ನಿನ್ನವರು ಅನ್ನುವ ಪೈಕಿ ಯಾರಾದರೂ ಇದ್ದಾರೇನು?"

ಆಯ್ತು ಮಾರಾಯ್ತಿ. ಪೆಲ್ಲಿಯನ್ನು ಬಿಟ್ಟರೆ ನಮಗೆ ಯಾರೂ ಇಲ್ಲ. ಅನಿಲ ಸ್ನಾನಕ್ಕೆ ಅಣಿಯಾದ. "ಅದಿರಲಿ, ನಮ್ಮ ಮಕ್ಕಳು ಎಲ್ಲಿದ್ದಾರೆ?"

"ನಿನ್ನ ಮೂರೂ ಹೆಣ್ಣುಮಕ್ಕಳು ಫ್ಯಾಶನ್ ಶೋಗೆ ಹೊರಟವರಂತೆ ಸಿದ್ಧರಾಗಿ ಹೊರಕೋಣೆಯಲ್ಲಿ ಕುಳಿತು ಹರಟುತ್ತಿದ್ದಾರೆ" ಜೆಸ್ಸಿ ಕನ್ನಡಿಯ ಮುಂದೆ ನಿಂತು ಕೂದಲು ಬಾಚಲಾರಂಭಿಸಿದಳು. ಅನಿಲ ಬಚ್ಚಲು ಕೋಣೆಯತ್ತ ಧಾವಿಸಿದ.

ಗಡಿಬಿಡಿಯಿಂದ ಸ್ನಾನ ಮುಗಿಸಿ ಹೊರಬಂದ ಅನಿಲ ಹೆಂಡತಿಯ ಬಾಡಿದ ಮುಖ ನೋಡಿ ಅಚ್ಚರಿಗೊಂಡ. ಯಾವುದೋ ಅನಾಹುತ ನಡೆದಿರಬೇಕೆಂದು ಅವನಿಗೆ ಸಂದೇಹ ಉಂಟಾಯಿತು. ಮಡದಿಯರ ಮನಸ್ಸೇ ವಿಚಿತ್ರ. ಗಂಡ ತಪ್ಪು ಮಾಡಿದರೆ ಅವರ ನಾಲಗೆ ಮಸೆದ ಖಡ್ಗದಷ್ಟು ಹರಿತವಾಗಿರುತ್ತದೆ. ಅದೇ ತಮ್ಮಿಂದ ಏನಾದರೂ ಅಚಾತುರ್ಯ ನಡೆಯಿತೆಂದರೆ ಅವರು ಬಯಸುವುದು ಗಂಡನ ಸಹಾನುಭೂತಿಯನ್ನು. ಅನಿಲ ಹುಬ್ಬೇರಿಸಿ ಹೆಂಡತಿಯ ಮುಖ ನೋಡಿದ.

"ನೀನಾದರೂ ನೆನಪು ಮಾಡಬಹುದಿತ್ತಲ್ಲ?" ಜೆಸ್ಸಿ ಯೋಚನಾಮಗ್ನಳಾಗಿ ಹೇಳಿದಳು. ಅನಿಲ ಅರ್ಥವಾಗದೇ ಕೇಳಿದ, "ಈಗ ಏನಾಗಿದೆ ಅದನ್ನು ಮೊದಲು ಹೇಳು". ಜೆಸ್ಸಿಯ ದೃಷ್ಟಿ ಮಂಚದ ಮೇಲಿರುವ ಒಡವೆಗಳಿರುವ ಪೆಟ್ಟಿಗೆಯತ್ತ ಹರಿಯಿತು. ಅವಳ ನೋಟವನ್ನು ಹಿಂಬಾಲಿಸಿ ನೋಡಿದ ಅವನ ಹಣೆ ನೆರಿಗೆಗಟ್ಟಿತು.

"ಈ ಚಿನ್ನಾಭರಣಗಳನ್ನು ಇನ್ನೂ ಇಲ್ಲೇ ಯಾಕೆ ಉಳಿಸಿಕೊಂಡಿದ್ದೀ, ಯಾವಾಗಲೂ ರಜೆಯಲ್ಲಿ ಹೋಗುವಾಗ ಲಾಕರ್‌ನಲ್ಲಿ ಇಟ್ಟು ಬರ್ತ್ತಿದ್ದಿಯಲ್ಲವೇ? ಓ ದೇವರೇ.."

ಅನಿಲನಿಗೆ ಆತಂಕವಾಯಿತು. "ಅದಕ್ಕೇ ಹೇಳುವುದು ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ ಅಂತ.." ಅವನ ವಿರುಧ್ವನಿ ಕೇಳಿ ಜಿನ್ನಿ, ವಿನ್ನಿ ಮತ್ತು ರೆನ್ನಿ ಮಲಗುವ ಕೋಣೆಗೆ ಧಾವಿಸಿ ಬಂದರು.

"ಏನಾಯ್ತು ಡ್ಯಾಡ್?" ವಿನ್ನಿ ಆತುರದಿಂದ ಕೇಳಿದಳು.

"ಏನಾಯ್ತೆಂದು ಹೇಳಲಿ?" ಅನಿಲ ಹಲ್ಲು ಕಚ್ಚಿಕೊಂಡ. "ನಿಮ್ಮಮ್ಮ ಇರುವ ಎಲ್ಲಾ ಚಿನ್ನದ ಒಡವೆಗಳನ್ನು ತೆಗೆದುಕೊಂಡು ರಜೆಯಲ್ಲಿ ತಿರುಗಾಡಲು ಹೊರಟಿದ್ದಾಳೆ. ಅಪರಿಚಿತ ಊರಿನಲ್ಲಿ ಕಳ್ಳರಿಗೆ ಇದೊಳ್ಳೇ ಅವಕಾಶ. ವಂಡರಫುಲ್"

"ಅದನ್ನೇ ನಾನೂ ಹೇಳ್ತಿರೋದು. ಬ್ಯಾಂಕ್ ಲಾಕರ್‌ನಲ್ಲಿ ಇಡಲು ನೀನು ನೆನಪಿಸಬಹುದಿತ್ತಲ್ಲ?" ಈ ಅಚಾತುರ್ಯಕ್ಕೆ ಗಂಡನನ್ನೇ ಹೊಣೆಗಾರನನ್ನಾಗಿಸುವ ಪ್ರಯತ್ನ ನಡೆಸಿದಳು ಜೆಸ್ಸಿ.

"ಅಂದ್ರೆ ನೀನು ಸಣ್ಣಮಗು. ಪ್ರತಿಯೊಂದೂ ಸಂಗತಿಯನ್ನು ನಾನೇ ನೆನಪು ಮಾಡಿ ಕೂರಬೇಕು ಅಲ್ಲವೇ?" ಅನಿಲ ಸಿಟ್ಟಿನಿಂದ ಉರಿದ.

"ಪ್ಲೀಸ್.." ಜೆಸ್ಸಿ ಅವನಿಗೆ ಕೈ ಮುಗಿದಳು. "ಆದದ್ದು ಆಗಿ ಹೋಯಿತು. ಈಗ ಏನು ಮಾಡೋಣವೆಂದು ಹೇಳು. ಇನ್ನು ಐದು ಹತ್ತು ನಿಮಿಷಗಳಲ್ಲಿ ಪೆಲ್ಲಿ ಬಂದು ತಲುಪಬಹುದು."

ಅನಿಲ ಮಾರುತ್ತರ ನೀಡದೆ ತಲೆ ಕೆರೆದುಕೊಂಡ. ಇಂತಹ ಕಠಿಣ ಸನ್ನಿವೇಶಗಳಲ್ಲಿ ಬುದ್ಧಿ ಉಪಯೋಗಿಸುವ ಶಕ್ತಿ ಅವನಲ್ಲಿ ಇದೆ. ಈ ಚಿನ್ನವನ್ನು ಬಚ್ಚಿಡುವ ಉಪಾಯವೊಂದನ್ನು ಹುಡುಕಬೇಕಾಗಿದೆ. ಅಲ್ಪಸ್ವಲ್ಪ ಚಿನ್ನವಾಗಿದ್ರೆ ಪರವಾಗಿಲ್ಲ ಎನ್ನಬಹುದಿತ್ತು. ಕಡಿಮೆ ಎಂದರೆ ಐದು ಲಕ್ಷದಷ್ಟು ಮೌಲ್ಯದ ಒಡವೆಗಳು!

"ನೀನೇಕೆ ಮಾತನಾಡುತ್ತಿಲ್ಲ?" ಮೌನವನ್ನು ಸಹಿಸಲಾಗದೆ ಜೆಸ್ಸಿ ಕೇಳಿದಳು. "ನಿನ್ನ ಬಳಿ ಐಡಿಯಾಗಳಿಗೆ ಯಾವತ್ತೂ ಕೊರತೆ ಇರುವುದಿಲ್ಲ. ಬ್ಯಾಂಕ್‌ನಲ್ಲಿ ಇಡೋಣವೆಂದರೆ ಈಗ ಸಮಯ ಮೀರಿದೆ."

"ಅದು ನನಗೂ ಗೊತ್ತಿದೆ. ಕಳೆದ ವಾರ ಇದೇ ಕಟ್ಟಡದಲ್ಲಿ ಎರಡು ಕಳ್ಳತನಗಳು ನಡೆದಿವೆ. ಬೀರುವಿನಲ್ಲಿ ಇಟ್ಟು ಹೋಗುವುದು ಮೂರ್ಖತನದ ಕೆಲಸ. ಇದ್ದುದರಲ್ಲಿ ಒಳ್ಳೆಯದೆಂದರೆ ರಜೆಯಲ್ಲಿ ಹೋಗುವಾಗ ಈ ಚಿನ್ನವನ್ನು ಕೂಡಾ ಜೊತೆಯಲ್ಲೇ ತೆಗೆದುಕೊಂಡು ಹೋಗು" ಬೇರೆ ದಾರಿ ಕಾಣದೆ ಅನಿಲ ಹೇಳಿದ.

"ಅಂದ್ರೆ ನಾನು ಬಲಿಪಶುವಾಗಬೇಕು!" ಒಡವೆಗಳನ್ನು ಕೊಂಡೊಯ್ಯಲು ಜೆಸ್ಸಿ ಎಷ್ಟು ಮಾತ್ರಕ್ಕೂ ಸಿದ್ಧಳಿರಲಿಲ್ಲ. "ಯಾರಾದರೂ ನನ್ನಿಂದ ಒಡವೆಗಳನ್ನು ಎಗರಿಸಬಹುದು. ಜೊತೆಗೆ ನನ್ನ ಕುತ್ತಿಗೆಯನ್ನೂ ಕೊಯ್ದು ಬಿಡಬಹುದು. ಅಥವಾ ಒಡವೆಗಳ ನಿಗಾ ವಹಿಸಿ ವಹಿಸಿ ರಜೆ ಕೊನೆಗೊಳ್ಳುವುದರೊಳಗೆ ನಾನು ಹುಚ್ಚಿಯೇ ಆಗಬಹುದು"

"ಇನ್ನೊಂದು ಉಪಾಯ ಇದೆ" ಅನಿಲ ಗಾಳಿಯಲ್ಲಿ ಚಿಟಿಕೆ ಹೊಡೆದ.

"ಪೆಲ್ಲಿಯ ಬಳಿ ಕೊಟ್ಟರೆ ಹೇಗೆ?" ಅವನು ಉತ್ತರಕ್ಕಾಗಿ ಕಾದ.

"ಪೆಲ್ಲಿಯ ಬಳಿ?" ರೆನ್ನಿ ಆಶ್ಚರ್ಯದಿಂದ ಕೇಳಿದಳು.

"ಬೇಡ." ಜೆಸ್ಸಿ ತನ್ನ ಅಸಂತೋಷವನ್ನು ವ್ಯಕ್ತಪಡಿಸಿದಳು. "ಸ್ವತಃ ತಾನು ಎಲ್ಲಿದ್ದೇನೆಂಬ ಪ್ರಜ್ಞೆ ಇಲ್ಲದ ಮನುಷ್ಯ ಈ ಚಿನ್ನದೊಡವೆಗಳನ್ನು ಹೇಗೆ ಜೋಪಾನವಾಗಿ ಇಡಬಲ್ಲ? ಮನೆಯಲ್ಲಿಟ್ಟು ಕಳ್ಳತನವಾಗುವುದಕ್ಕಿಂತ ಪೆಲ್ಲಿಗೆ ಕೊಟ್ಟು ಅವನ ಬೇಜವಾಬ್ದಾರಿತನದಿಂದ ಅವು ಕಳೆದು ಹೋಗುವ ಅವಕಾಶವೇ ಹೆಚ್ಚು."

"ಅದು ಹೌದು ಡ್ಯಾಡ್" ಜೆನ್ನಿ ಹೇಳಿದಳು.

"ಬೇರೆ ಯಾವ ಉಪಾಯವೂ ನನಗೆ ಹೊಳೆಯುತ್ತಿಲ್ಲ. ಇನ್ನೇನು ಪೆಲ್ಲಿ ಬರುವ ಹೊತ್ತಾಯ್ತು." ಅನಿಲ ತಲೆ ಕೆರೆದುಕೊಂಡ.

"ನಾನೊಂದು ಐಡಿಯಾ ಹೇಳಲೇ?" ಜೆನ್ನಿ ಬುದ್ಧಿವಂತಿಕೆ ತೋರಿಸಿದಳು.

"ಬೇಗ ಹೇಳು" ಜೆಸ್ಸಿಗೆ ಅವಸರ.

"ಫ್ರೀಜರ್‌ನಲ್ಲಿ ಇಟ್ಟರೆ?" ಚಪ್ಪಾಳೆಯನ್ನು ನಿರೀಕ್ಷಿಸುತ್ತಾ ಹೇಳಿದಳು, "ಪ್ಲಾಸ್ಟಿಕನಲ್ಲಿ ಸುತ್ತಿ ಫ್ರೀಜರ್‌ನೊಳಗೆ ಇಟ್ಟುಬಿಡು. ಮನೆಯೊಳಗೆ ಕಳ್ಳ ಬಂದರೂ ಫ್ರಿಜ್‌ನೊಳಗೆ ಹುಡುಕಲಾರ. ಒಂದುವೇಳೆ ಫ್ರಿಜ್ಜಿನೊಳಗೆ ದೃಷ್ಟಿ ಹಾಯಿಸಿದರೂ ಪ್ಲಾಸ್ಟಿಕ್‌ನಲ್ಲಿ ಸುತ್ತಿಟ್ಟ ಪೊಟ್ಟಣದಲ್ಲಿ ಏನಿದೆಯೆಂಬುದು ಅವನಿಗೆ ತಿಳಿಯವಂತಿಲ್ಲ."

"ಹೆಣ್ಣಿನ ತಲೆಯೊಳಗೆ ಮಿದುಳು ಇದೆ ಅಂತ ಆಯ್ತು. "ಜೆಸ್ಸಿ ಮಗಳಿಗೆ ಶಹಭಾಸ್‌ಗಿರಿ ನೀಡಿದಳು. "ಐಡಿಯಾ ಚೆನ್ನಾಗಿದೆ."

"ಬೇರೆ ದಾರಿಯೇ ಇಲ್ಲ." ವಿನ್ನಿ ಮಾತನ್ನು ಪುಷ್ಟೀಕರಿಸಿದಳು.

ಇಷ್ಟು ಯೋಚಿಸಿದ್ದು ಸಾಕು. ಇನ್ನು ಹೆಚ್ಚಿನ ಸಮಯವನ್ನು ವ್ಯರ್ಥವಾಗಿ ಕಳೆಯುವುದು ಬೇಡ ರೆನ್ನಿಗಂತೂ ಈ ತಲೆನೋವು ಸಾಕಾಗಿ ಹೋಗಿತ್ತು.

"ಇಷ್ಟೇನಾ ನಿಮ್ಮ ಬುದ್ಧಿವಂತಿಕೆ?" ಅನಿಲ ಆಕ್ಷೇಪಣೆಯ ಧ್ವನಿಯೆತ್ತಿದ. "ಇಂದಿನ ದಿನಗಳಲ್ಲಿ ಒಡವೆ ಮತ್ತು ಕಪ್ಪುಹಣವನ್ನು ಕೊಮೋಡಿನ ಟ್ಯಾಂಕ್‌ಲ್ಲಿ ಅಥವಾ ಫ್ರಿಜ್‌ನಲ್ಲಿ ಬಚ್ಚಿಡುವ ವಿಷಯ ಕಳ್ಳರಿಗೆ ಮಾತ್ರವಲ್ಲ ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳಿಗೆ ಕೂಡಾ ಗೊತ್ತಿದೆ. ಅಂದ್ರೆ ನಾವು ನಾಯಿಗೆ ತಿಂಡಿ ತಿನ್ನಲು ಇಟ್ಟು ಹೋದ ಹಾಗೆ ಇದು"

"ಹೀಗೆ ಯೋಚಿಸುತ್ತಾ ಕುಳಿತರೆ ನಾವು ರಜೆಯಲ್ಲಿ ಹೋದ ಹಾಗೇ." ಜೆಸ್ಸಿಯ ತಲೆ ಸಿಡಿಯುತ್ತಿತ್ತು. "ಇದರ ನಡುವೆ ಈ ಪೆಲ್ಲಿಯೊಬ್ಬ ಎಲ್ಲಿ ಮಾಯವಾದನೋ?"

"ಒಂದು ನಿಮಿಷ," ಅನಿಲ ಆ ಒಡವೆಗಳಿದ್ದ ಪೆಟ್ಟಿಗೆಯನ್ನು ಕೈಗೆತ್ತಿಕೊಂಡ. ಒಂದು ಕ್ಷಣ ಯಾರೂ ಮಾತನಾಡಲಿಲ್ಲ. ಅವರು ಅವನನ್ನು ಹಿಂಬಾಲಿಸಿ ಒಳಹೋದರು.

ಒಡವೆ ಪೆಟ್ಟಿಗೆಯನ್ನು ದಿನಪತ್ರಿಕೆಯೊಂದರಲ್ಲಿ ಸುತ್ತಿಕೊಂಡ ಅನಿಲ ಇದನ್ನು ಎಲ್ಲಿ ಬಚ್ಚಿಡಲಿ ಎಂದು ಯೋಚಿಸುತ್ತಾ, ಅಡುಗೆಕೋಣೆಯೊಳಗೆ ದೃಷ್ಟಿ ಹಾಯಿಸಿದ. ಅವನ ಕಣ್ಣಿಗೆ ಗ್ಯಾಸ್ ಸಿಲಿಂಡರ್ ಪಕ್ಕದಲ್ಲಿದ್ದ ಕೆಂಪು ಮೆಣಸಿನಕಾಯಿ ತುಂಬಿದ ಚೀಲ ಕಂಡಿತು. ಅವನ ಮುಖದಲ್ಲಿ ನಸುನಗೆ ಮೂಡಿತು.

ತಿಂಗಳ ಹಿಂದೆ ಊರಿನಿಂದ ತಂದ ಕೆಂಪು ಮೆಣಸಿನಕಾಯಿ! ಅವನು ಒಡವೆ ಪೆಟ್ಟಿಗೆಯನ್ನು ಅದರೊಳಗೆ ತುರುಕಿಸಿ ಬಚ್ಚಿಟ್ಟ. ಎಲ್ಲರ ಮೊಗದಲ್ಲಿ ಸಮಾಧಾನದ ಛಾಯೆ ಕಂಡಿತು.

"ನಗರದಲ್ಲಿ ಮೆಣಸಿನಕಾಯಿ ಕಳ್ಳತನದ ಕುರಿತು ನಾವು ಇದುವರೆಗೆ ಕೇಳಿಲ್ಲ." ಅನಿಲನಲ್ಲಿ ನಗು ಉಕ್ಕಿಬಂತು. "ಹೆದರಬೇಡಿ. ಮುಂದಿನ ವರ್ಷದ ರಜೆಯಲ್ಲಿ ಹೋಗುವವರೆಗೆ ಚಿನ್ನದ ಒಡವೆಗಳನ್ನು ಇಲ್ಲಿಯೇ ಇಟ್ಟುಕೊಳ್ಳಬಹುದು. ಲಾಕರ್‌ಗೆ ಅನಗತ್ಯ ಖರ್ಚು!"

ಎಲ್ಲರೂ ಜೋರಾಗಿ ನಕ್ಕರು. ಅಷ್ಟರಲ್ಲಿ ಕರೆಗಂಟೆ ಸದ್ದಾಯಿತು. ಪೆಲ್ಲಿ ಬಂದಿದ್ದ. ನಂತರ ಅವರು ಸಮಯ ಹಾಳು ಮಾಡಲಿಲ್ಲ. ಅಷ್ಟರಲ್ಲಿಯೇ ಅವರು ಕೆಂಪುಮೆಣಸಿನ ಕಾಯಿಯೊಳಗೆ ಬಚ್ಚಿಟ್ಟ ಒಡವೆ ಪೆಟ್ಟಿಗೆಯನ್ನು ಮರೆತು ಬಿಟ್ಟಿದ್ದರು. ಎಲ್ಲರಲ್ಲಿಯೂ ರಜೆಯ ಉತ್ಸಾಹ ಮರಳಿತು. ಅವರು ವಿಮಾನ ನಿಲ್ದಾಣಕ್ಕೆ ಹೊರಟರು. ಯಾರೂ ಒಡವೆಗಳ ಕುರಿತು ಪೆಲ್ಲಿಯ ಬಳಿ ಉಸಿರೆತ್ತಲಿಲ್ಲ.

"ವಾರದಲ್ಲಿ ಒಂದು ಸಲವಾದರೂ ಮನೆಯ ಕಡೆಗೆ ಬಂದು ನೋಡುವುದನ್ನು ಮರೆಯಬೇಡ" ಜೆಸ್ಸಿ ತಮ್ಮನಿಗೆ ನೆನಪು ಮಾಡಿದಳು. "ನೀರು ಮತ್ತು ಕರೆಂಟಿನ ಬಿಲ್ಲನ್ನು ಪಾವತಿಸು. ಭಾನುವಾರ ಗಿಡಗಳಿಗೆ ನೀರು ಹಾಕುವುದನ್ನು ಮರೆಯಬೇಡ. ಗಿಡಗಳು ಬಾಡಿದರೆ ನೆವ ಹೇಳುವುದು ಬೇಡ" ವಿಮಾನ ನಿಲ್ದಾಣ ತಲುಪುವವರೆಗೆ ಜೆಸ್ಸಿಯ ಮಾತು ನಿಲ್ಲಲಿಲ್ಲ. ಅವಳ ಯಾವ ಮಾತಿಗೂ ಪೆಲ್ಲಿ ಇಲ್ಲವೆಂದು ಹೇಳಲಿಲ್ಲ. ಅವರೆಲ್ಲರಿಗೂ ಶುಭ ಹಾರೈಸಿ ತನ್ನ ದಾರಿ ಹಿಡಿದ.

○ ○ ○

ಅಕ್ಕನ ಸಂಸಾರದ ರಜಾ ಅವಧಿಯ ಇಪ್ಪತ್ತೈದು ದಿನಗಳು ಯಾವ ತೊಂದರೆಯೂ ಇಲ್ಲದೆ ಕಳೆದು ಹೋದವು. ಮುಂದಿನ ಗುರುವಾರ ಮರಳಿ ಬರುತ್ತೇವೆ ಎಂದು ಬೆಳಿಗ್ಗೆ ಜೆಸ್ಸಿ ಫೋನ್ ಮಾಡಿ ತಿಳಿಸಿದಾಗ ಪೆಲ್ಲಿ ಗಡಬಡಿಸಿ ಎದ್ದುನಿಂತ. ಅವನು ಅವರ ಮನೆಗೆ ಭೇಟಿ ನೀಡದೆ ಹಲವು ದಿನಗಳಾಗಿದ್ದವು. ಭಾನುವಾರ ರಜಾದಿನವಾಗಿದ್ದುದರಿಂದ ಅವನು ಸಂಜೆಯ ಪ್ರಾರ್ಥನೆಯ ನಂತರ ಹೊರಟ. ಮನೆಯೊಳಗೆಲ್ಲಾ ಧೂಳು ತುಂಬಿತ್ತು. ಗಿಡಗಳು ಒಣಗಿ ಹೋಗಿದ್ದವು. ಅವನು ಬಿಲ್ ಮತ್ತು ಅಂಚೆಪತ್ರಗಳನ್ನು ಎತ್ತಿ ಮೇಜಿನ ಮೇಲಿಟ್ಟ. ಮೊದಲು ಗಿಡಗಳಿಗೆ ನೀರುಣಿಸಿದ. ಗಿಡಗಳ ಅವಸ್ಥೆ ನೋಡಿ ಜೆಸ್ಸಿಯ ಪ್ರತಿಕ್ರಿಯೆ ಹೇಗಿರಬಹುದೆಂದು ಯೋಚಿಸಿಯೇ ಹೆದರಿಕೊಂಡ. ಮಿಷನ್ನಿನಿಂದ ನೆಲವನ್ನು

ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿರತನಾದ. ಅಷ್ಟರಲ್ಲಿ ನೆಲದ ಮೇಲೆ ಅತ್ತಿತ್ತ ಹರಿದಾಡುತ್ತಿದ್ದ ಚಿಕ್ಕಚಿಕ್ಕ ಹುಳುಗಳು ಅವನ ಗಮನವನ್ನು ಸೆಳೆದವು. ಇವೆಲ್ಲಿಂದ ಹುಟ್ಟಿಕೊಂಡವು? ಅವನು ಡೆಟ್ಟಾಲ್ ತಂದು ಮತ್ತೆ ನೆಲವನ್ನು ತೊಳೆದು ಸ್ವಚ್ಛಗೊಳಿಸಿದ.

ಕೆಲಸ ಮಾಡಿ ಸುಸ್ತಾಗಿ ಫ್ರಿಜ್‌ನಿಂದ ಬಿಯರ್ ಹೊರತೆಗೆದು, ಟಿವಿ ಚಾಲೂ ಮಾಡಿ ಸೋಫಾದ ಮೇಲೆ ಮೈಚೆಲ್ಲಿದ. ಬಿಯರ್ ಬಾಟಲ್‌ನ್ನು ಸ್ಟೂಲಿನ ಮೇಲಿಡುವಾಗ ಅಲ್ಲಿ ಚಲಿಸುತ್ತಿದ್ದ ಹುಳುಗಳು ಅವನ ಕಣ್ಣಿಗೆ ಬಿದ್ದವು. ಅವು ಸೋಫಾದ ಮೇಲೆ ಕೂಡಾ ಇದ್ದವು. ಅಕ್ಕನ ಮನೆಯನ್ನು ಆಕ್ರಮಿಸಿಕೊಂಡ ಹುಳುಗಳ ಜಾಡನ್ನು ಕಂಡುಹಿಡಿಯುವುದು ಹೇಗೆ? ಅವನ ತಲೆ ಕೆಟ್ಟುಹೋಯಿತು. ಬಿಯರನ್ನು ಗುಟುಕರಿಸುತ್ತಾ ಅವನು ಅಡುಗೆ ಕೋಣೆ ಪ್ರವೇಶಿಸಿದ. ಅಲ್ಲಿ ಅವನಿಗೆ ಯಾವುದೇ ಹೊಲಸು ವಸ್ತು ಕಣ್ಣಿಗೆ ಬೀಳಲಿಲ್ಲ. ಅವನು ಮೂಲೆಮೂಲೆ ಹುಡುಕಾಡಿದ. ಕೆಲವೇ ನಿಮಿಷಗಳಲ್ಲಿ ಗ್ಯಾಸ್ ಸಿಲೆಂಡರ್ ಪಕ್ಕದಲ್ಲಿದ್ದ ಚೀಲದ ಮೇಲೆ ಅವನ ದೃಷ್ಟಿ ಬಿತ್ತು. ಸುಮಾರು ಎರಡು ಕಿಲೋ ಭಾರವಿದ್ದ ಆ ಚೀಲವನ್ನು ತೆರೆದು ಅವನು ನೋಡಿದ.

ಕೆಂಪು ಮೆಣಸಿನಕಾಯಿ!

ಮೆಣಸಿನ ಕಾಯಿಗೆ ಬೂಸುರು ಹಿಡಿದಿತ್ತು. ಬೂಸೂರು ಹಿಡಿದ ಮೆಣಸಿನಕಾಯಿಯಲ್ಲಿ ಹುಳಗಳು ಹುಟ್ಟಿಕೊಂಡಿದ್ದವು. ಸಾವಿರಕ್ಕೂ ಮಿಕ್ಕಿದ ಸಂಖ್ಯೆಯಲ್ಲಿದ್ದ ಸಣ್ಣಸಣ್ಣ ಹುಳುಗಳು. ಅವನು ಚೀಲವನ್ನು ಮುಚ್ಚಿ, ಭದ್ರವಾಗಿ ಕಟ್ಟಿದ. ಮೆಣಸಿನಕಾಯಿಯನ್ನು ಸರಿಯಾಗಿ ಒಣಗಿಸಿಲ್ಲವೆಂದು ಕಾಣುತ್ತದೆ. ಹೀಗಾಗಿ ತೇವಾಂಶದಿಂದಾಗಿ ಹುಳುಗಳು ಹುಟ್ಟಿಕೊಂಡಿರಬೇಕು. ಪೆಲ್ಲಿ ತನ್ನಷ್ಟಕ್ಕೆ ನಕ್ಕ.

ಮರಳಿ ಹೊರಕೋಣೆಗೆ ಬಂದು ಸ್ವಲ್ಪ ಹೊತ್ತು ಟಿವಿ ನೋಡುವುದರಲ್ಲಿ ತಲ್ಲೀನನಾದ. ಬಿಯರ್ ಖಾಲಿ ಮಾಡಿದ. ಟಿವಿಯನ್ನು ಆರಿಸಿ ಹೊರಡಲು ಸಿದ್ಧನಾದ. ದೀಪ ಆರಿಸಿ, ಮನೆಬಾಗಿಲನ್ನು ಭದ್ರವಾಗಿ ಮುಚ್ಚಿದ. ಅಷ್ಟರಲ್ಲಿ ಅವನಿಗೆ ನೆನಪಾಯಿತು. ಹಾಳಾದ ಮೆಣಸಿನಕಾಯಿ ಚೀಲವನ್ನು ಇಲ್ಲೇ ಬಿಟ್ಟು ಹೋದರೆ ಜೆಸ್ಸಿಯ ಬಾಯಿಯಿಂದ ಬರುವುದನ್ನೆಲ್ಲ ಯಾರು ತಾನೇ ಕೇಳಿಸಿಕೊಳ್ಳುವುದು? ಜೆಸ್ಸಿ ಒಳ್ಳೆಯವಳೇನೋ ನಿಜ. ಆದರೆ ಗೊಣಗಾಟದ ಮುದ್ದೆ. ಅನಿಲನೂ ಚಿಲ್ಲರೆ ಏನಲ್ಲ.

ಪೆಲ್ಲಿ ಮತ್ತೆ ಅಡುಗೆ ಕೋಣೆ ಪ್ರವೇಶಿಸಿ ಮೆಣಸಿನಕಾಯಿಯ ಚೀಲವನ್ನು ಎತ್ತಿಕೊಂಡ. ಫ್ಲಾಟಿಗೆ ಬೀಗ ಜಡಿದು, ಮೆಟ್ಟಲಿಳಿದು ಆ ಕಟ್ಟಡದಿಂದ ಹೊರಬಂದ. ಕೆಂಪುಮೆಣಸಿನ ಕಾಯಿಯ ಚೀಲವನ್ನು ಕಸದ ತೊಟ್ಟಿಗೆ ಎಸೆದು ತನ್ನ ದಾರಿ ಹಿಡಿದು ಮುಂದೆ ಸಾಗಿದ.

ಅನುವಾದಕರು: **ಶಕುಂತಲಾ ಆರ್. ಕಿಣಿ**

❖ ❖ ❖❖ ❖

ಭತ್ತದ ಕಣ

✍ ಪುಂಡಲೀಕ ಎನ್. ನಾಯಕ

ಇಂದು ಬೆಳಿಗ್ಗೆ ದುಗೇಬಾಬನಲ್ಲಿ ಭತ್ತ ಬಡಿಯುವ ಕಾರ್ಯ ಪ್ರಾರಂಭವಾಗಿದೆ. ಬೇಡಶಿ ಮರದ ಕೆಳಗೆ ಹಾಕಿದ ನಾಲ್ಕು ಹುಲ್ಲಿನ ಬಣವೆಗಳು, ಅಷ್ಟೇ ಕೂಲಿಗಳಿಗಾಗುವಷ್ಟು ಇತ್ತು. ಸಗಣಿಯಿಂದ ಸಾರಿಸಿದ ಅಂಗಳದಲ್ಲಿ ಕೆಲಸಗಾರರು ಹುಲ್ಲನ್ನು ಹಾಸಿದ್ದರು. ಕತ್ತರಿಸಿ ತಂದ ತೆನೆಗಟ್ಟಿದ ಒಣಪೈರನ್ನು ಓರಣವಾಗಿ ಹರಡಿದ್ದರು. ಗದ್ದೆಯ ಎರಡು ಬದುಗಳಲ್ಲಿ ಹುಲ್ಲಿನ ತಡಿಯನ್ನು ನಿಲ್ಲಿಸಲಾಗಿತ್ತು. ತೆನೆಭರಿತ ಪೈರು ಗಾಳಿಗೆ ಹಾರಬಾರದೆಂದು ಅದರ ಮೇಲೆ ಬಿದಿರನ್ನು ಇಡಲಾಗಿತ್ತು. ಕೆಲಸಗಾರರು ತಮ್ಮ ಅಂಗಿಯನ್ನು ಕಳಚಿ ಗೂಟಕ್ಕೆ ತೂಗು ಹಾಕಿದರು.

"ಪಾಂಗ್ಯಾ ಇನ್ನೂ ಕೆಲಸಕ್ಕೆ ಬರಲಿಲ್ಲವಲ್ಲ" ದುಗೇಬಾಬ ಕೆಲಸಗಾರರಲ್ಲಿ ಕೇಳಿದ.

"ಮನೆಯಲ್ಲಿದ್ದ. ಈಗ ಬರಬಹುದು" ಒಬ್ಬ ಕೆಲಸಗಾರ ಹೇಳಿದ.

ಅಷ್ಟರಲ್ಲಿ ಮೇಲಿಂದ ಪಾಂಗ್ಯಾ ಕೆಳಗಿಳಿದು ಬರುವುದನ್ನು ಕಂಡ ಮತ್ತೊಬ್ಬ ಕೆಲಸಗಾರ ಕೈ ತಿರುವುತ್ತಾ ಹೇಳಿದ,

"ಅಲ್ಲಿ ನೋಡಿ, ನಾವು ಹೀಗೆ ಹೇಳುತ್ತೇವೆ ಎಂಬ ವಾಸನೆ ಅವನಿಗೆ ಬಡಿದಿರಬೇಕು."

ಪಾಂಗ್ಯಾ ದಾಪುಗಾಲು ಹಾಕುತ್ತಾ ಕಣಕ್ಕೆ ಬಂದನು.

"ದುಗೇಬಾಬ ಹೇಳಿದ್ದನ್ನು ಪಾಂಗ್ಯಾ ಅಲ್ಲಗಳೆದರೆ ಎಲ್ಲವೂ ಮುಗಿದಂತೆ" ಪಾಂಗ್ಯಾನ ಮುಖದ ಮೇಲೆ ಕೈಯಾಡಿಸುತ್ತಾ ಹೇಳಿದ ಇನ್ನೊಬ್ಬ.

"ಬಾರೋ ಪಾಂಗ್ಯಾ, ನಿನಗೆ ನೂರು ವರ್ಷ ಆಯಸ್ಸು" ಕಟ್ಟಿದ ಗಳಕ್ಕೆ ಖಣಶಿಯನ್ನು ಕಟ್ಟುತ್ತಾ ದುಗೇಬಾಬಾ ಹೇಳಿದ.

"ಒಂದು ದಿನ ಕಳೆಯುವುದೇ ಕಷ್ಟ. ಇನ್ನು ನೂರು ವರ್ಷ ಇದ್ದು ಮಾಡುವುದೇನು?" ಸೇದುತ್ತಿದ್ದ ಮೋಟು ಬೀಡಿಯನ್ನು ಆರಿಸಿ ಕಿವಿಗೆ ಸಿಕ್ಕಿಸಿಕೊಳ್ಳುತ್ತಾ ಪಾಂಗ್ಯಾ ಹೇಳಿದ. ಅವನ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡಿದವು. ಅವನ ಮುಖದ ಮೇಲೆ ಬೇಡಶಿ ಮರದ ಎಲೆಗಳ ಸಂದಿನಿಂದ ಸೂರ್ಯಕಿರಣಗಳು ಬಿದ್ದರೂ ಆ ಗೆರೆಗಳು ಬದಲಾಗಲಿಲ್ಲ. ಅವನು ತನ್ನ ಎರಡೂ ತುಟಿಗಳನ್ನು ಹಲ್ಲಿನ ನಡುವೆ ಇಟ್ಟು ತಾನು ಸೇದಿದ ಬೀಡಿಯ ಕಹಿಯನ್ನು ಆಸ್ವಾದಿಸಿದ. ರಾಶಿಯಾಗಿ ಬಿದ್ದ ತೆನೆಹುಲ್ಲನ್ನು ಎತ್ತಿ ತಂದು ಕಾಲಿನಿಂದ ತುಳಿಯತೊಡಗಿದ.

"ಇತ್ತೀಚಿಗೆ ಪಾಂಗ್ಯಾನಿಗೆ ಯಾಕೆ ಬೇಗ ಸೆಕೆ ಆಗುತ್ತದೆ?" ಎಂದು ಕೇಳಿದನೊಬ್ಬ.

"ಹಗಲು ರಾತ್ರಿ ಯಾಕೆ ಹೇಗೆ ಬೇಯುತ್ತಿದೆ ಎನ್ನುವುದೇ ತಿಳಿಯದು" ಏನಾದರೂ ಹೇಳಬೇಕಲ್ಲ ಎಂದು ಪಾಂಗ್ಯಾ ಹೇಳಿದ.

"ಬಟ್ಟೆ ಹಾಕಲಾದರೂ ಆಗುತ್ತದಲ್ಲವೇ ಪಾಂಗ್ಯಾ?" ಇನ್ನೊಬ್ಬ ಮಾತು ಸೇರಿಸಿದ.

ಆ ಮಾತಿಗೆ "ಶ್ಯೀ.." ಎಂದು ಮುಖ ತಿರುಚಿ ಪ್ರತಿಕ್ರಿಯೆ ವ್ಯಕ್ತಪಡಿಸಿದ ಪಾಂಗ್ಯಾ.

ಹಾಗಾದರೆ ಪಾಂಗ್ಯಾ, ನೀನು ರಾತ್ರಿ ಬಟ್ಟೆಯಿಲ್ಲದೆ ಮಲಗುತ್ತೀಯಾ?

ಭತ್ತ ಬಡಿಯುತ್ತಿರುವ ಪಾಂಗ್ಯಾನ ಮುಖದ ಮೇಲೆ ಯಾವ ಬದಲಾವಣೆಯೂ ಆಗಲಿಲ್ಲ. ಒಣಗಿದ ಬಿಲದಿಂದ ಏಡಿ ಗುಡಗುಡಿಸುವಂತೆ ದುಗೇಬಾಬ ಕುಹಕನಗೆ ಬೀರಿದ.

ಇವತ್ತು ಪಾಂಗ್ಯಾನಿಗೆ ಏನೋ ತೊಂದರೆಯಾಗಿದೆ ಎಂದು ಕೆಲಸಗಾರರಿಗೆ ಅನಿಸಿತು. ಹೆಂಗಸರ ವಿಷಯ ಮಾತನಾಡಿದರೆ ಅವನು ಏನೂ ಸುಳಿವು ನೀಡುವುದಿಲ್ಲ ಎನ್ನುವ ಅರಿವೂ ಇತ್ತು. ಹಾಗಾಗಿ ಅವರು ಪಾಂಗ್ಯಾನ ಭಾನಗಡಿಗೆ ಬೀಳಲಿಲ್ಲ.

ಹೀಗೆ ಅವರು ಮಾತನಾಡಿಕೊಳ್ಳುತ್ತಾ ಗದ್ದೆಗೆ ನೀರು ತುಂಬುವ ಹಾಗೆ ಅರ್ಧ ದಿನ ಕಳೆದರು.

"ಪಾಂಗ್ಯಾ ನೀನು ತುಳಿಯುವಾಗ ಭತ್ತದ ಕಾಳುಗಳು ಹಾಗೇ ಇರುತ್ತವೆ" ದುಗೇಬಾಬ ಅವನಿಗೆ ಮನವರಿಕೆ ಮಾಡಿದ. ಪಾಂಗ್ಯಾ ಎಚ್ಚರವಾಗಿ ಕಾಲಿನ ಬುಡಕ್ಕೆ ಸಿಕ್ಕಿರುವುದನ್ನೆಲ್ಲ ತಿರುವು–ಮುರುವು ಮಾಡಿ ತುಳಿಯತೊಡಗಿದ. ಮನಸ್ಸಿನಲ್ಲಿರುವ ವಿಚಾರಗಳನ್ನು ತುಳಿದು ಹಾಕುವಂತೆ ತುಳಿಯತೊಡಗಿದ. ಆದರೂ ಅವನ ಮನಸ್ಸಿನ ಗಡಿಯನ್ನು ಮುಟ್ಟುವುದು ಸಾಧ್ಯವಾಗಲಿಲ್ಲ.

"ಪಾಂಗ್ಯಾ, ನಿನ್ನ ಹೆಂಡತಿ ಎಲ್ಲಿಗೆ ಹೋಗಿದ್ದಾಳೆ?" ಯಾರೋ ಕೇಳಿದಾಗ ಅವನು ಅತ್ತ ಇತ್ತ ನೋಡತೊಡಗಿದ. ಎಲ್ಲ ಕೆಲಸಗಾರರ ಹೆಂಡಂದಿರು ತಮ್ಮ ತಮ್ಮ ಗಂಡಂದಿರಿಗೆ ಗಂಜಿಯನ್ನು ತಂದು ಆಲದ ಮರದ ಕೆಳಗೆ ಸೇರಿದ್ದಾರೆ.

"ಸ್ವಲ್ಪ ಗಂಜಿ ತಿಳಿ ಕುಡಿಯೋಣ ಬಾ" ಕೆಲಸಗಾರನೊಬ್ಬ ಕರೆದ. ಎಲ್ಲರೂ ತಮ್ಮ ತಮ್ಮ ಉಪಕರಣಗಳನ್ನು ಕೆಳಗಿಟ್ಟು ಬೇಡಶಿ ಮರದ ಕೆಳಗೆ ಹೋದರು. ಪಾಂಗ್ಯಾನ ಗಂಟಲು ಬರಗಾಲದಲ್ಲಿ ಭೂಮಿ ಬಿರುಕು ಬಿಟ್ಟಂತೆ ಒಣಗಿಹೋಗಿತ್ತು. ಬೆಳಿಗ್ಗೆ ಒಂದು ಹನಿ ನೀರನ್ನೂ ಕುಡಿಯದೆ ಅವನು ಮನೆಯಿಂದ ಹೊರಟಿದ್ದನು. ಅವನ ಹೆಂಡತಿ ಮಕ್ಕಳ ಪರಿಸ್ಥಿತಿಯೂ ಅದೇ ಆಗಿತ್ತು. ಇವತ್ತಿನ ಗಂಜಿಗೆ ಬೇಕಾದ ಅಕ್ಕಿಯನ್ನು ಇವತ್ತೇ ಒರಳಲ್ಲಿ ಕುಟ್ಟಿ ತಯಾರಿಸಬೇಕಾದ ಸ್ಥಿತಿ ಅವನದು. ದೇವರ ದಯೆಯಿಂದ ದುಗೇಬಾಬನ ಕರೆಯಿಂದಾಗಿ ಅವನು ಇಲ್ಲಿಗೆ ಬಂದು ತಲುಪಿದ್ದ. 'ಇವತ್ತಿನ ಕೆಲಸವೂ ಸಿಗದೇ ಇದ್ದಿದ್ದರೆ?'

ಅವನು ಮರದ ನೆರಳಿನಲ್ಲಿ ನಿಂತು ಸುತ್ತಲೂ ದೃಷ್ಟಿ ಬೀರಿದ. ಬಿಸಿಲಿನ ತಾಪ ವಿಪರೀತವಿತ್ತು.

"ನಿನ್ನ ಹೆಂಡತಿಗೆ ನೆನಪಿಲ್ಲವೆಂದು ಕಾಣುತ್ತದೆ, ಬಾ ನೀನು" ಅವರು ಅವನನ್ನು ಮತ್ತೆ ಕರೆದರು.

"ಇಲ್ಲ, ಇಲ್ಲ. ಅವಳು ಬರುತ್ತಾಳೆ" ಪಾಂಗ್ಯಾ ತೊದಲುತ್ತಾ ಹೇಳಿದ. ಅವನ ಕಣ್ಣ ಮುಂದೆ ಮನೆಯಲ್ಲಿರುವ ಖಾಲಿ ಗಡಿಗೆ ಹಾದುಹೋಯಿತು. 'ನಾನು ಇಲ್ಲಿ ಗಂಜಿ ಕುಡಿಯಲೇ? ಅದೂ ಒಬ್ಬನೇ?' ಎಂದು ಯೋಚಿಸಿ ದುಗೇಬಾಬ ಬಿಂದಿಗೆಯಲ್ಲಿ ತಂದಿಟ್ಟ ನೀರನ್ನು ಗಟಗಟನೆ ಕುಡಿದ. ಹಾಗೆಯೇ ಕಿವಿಯ ಮೇಲಿದ್ದ ಮೋಟುಬೀಡಿಯಿಂದ ದಮ್ಮು ಎಳೆದ. ಮತ್ತೆ ಹುಲ್ಲನ್ನು ತುಳಿಯಲಾರಂಭಿಸಿದ.

ಸಂಜೆಯ ಹೊತ್ತು ಬಿಸಿಲು ಗದ್ದೆಯಿಂದ ದೂರವಾಯಿತು. ಭತ್ತ ಬಡಿಯುವ ಕೆಲಸ ನಿಂತಿತು. ಎಂದಿನಂತೆ ಬೇಡಶಿ ಮರದ ಕೆಳಗೆ ತಂಪಾದ ಗಾಳಿ ಬೀಸಲಾರಂಭಿಸಿತು. ಭತ್ತವನ್ನು ಹೊಟ್ಟಿನಿಂದ ಬೇರ್ಪಡಿಸುವುದಕ್ಕಾಗಿ ಗಾಳಿ ಬೀಸುವಂತೆ ದುಗೇಬಾಬ ತನ್ನ ಆಳುಗಳಿಗೆ ಹೇಳಿದ. ಎರಡೂ ಕೈಗಳಿಗೆ ನೋವಿದ್ದರೂ ಪಾಂಗ್ಯಾ ಮೊರವನ್ನು ಕೈಯಲ್ಲಿ ಹಿಡಿದುಕೊಂಡು ಗಾಳಿ ಬೀಸತೊಡಗಿದ. ಭತ್ತದ ಕಾಳುಗಳು ಅವನ ಕಾಲಿನ ಮೇಲೆ ನೀರಹನಿಯಂತೆ ಬೀಳತೊಡಗಿದವು. ಅವನು ಅಂಗಳದಲ್ಲಿದ್ದ ಭತ್ತದ ರಾಶಿಯನ್ನೊಮ್ಮೆ ನೋಡಿದ. ಅದು ಸಣ್ಣಸಣ್ಣ ಗುಡ್ಡಗಳಂತೆ ಗೋಚರಿಸಿದವು.

'ಇದರಲ್ಲಿ ಒಂದು ಕೊಳಗ ಭತ್ತಕ್ಕೆ ನಾನು ಒಡೆಯ. ಉಳಿದದ್ದೆಲ್ಲ ದುಗೇಬಾಬನದು" ದಿನಗೂಲಿ ನೆನಪು ಮಾಡಿಕೊಂಡು ಅವನು ಪುಳಕಿತನಾದ. ಭತ್ತ ತೂರಿ ಮುಗಿಯಿತು. ಅವನು ಭತ್ತದ ರಾಶಿಯ ಮೇಲೆ ಮೊರವನ್ನು ಮೊಗಚಿ ಹಾಕಿದ. ಜೊಳ್ಳುಕಾಳುಗಳು ಹಾರಿಹೋದವು. ಹಣೆಯ ಮೇಲಿನ ಬೆವರನ್ನು ಒರಸಿಕೊಳ್ಳುತ್ತ, ಮೈಮೇಲಿನ ಧೂಳನ್ನು ಕೈವಸ್ತ್ರದಿಂದ ಝಾಡಿಸಿದ. ಭತ್ತ ಅಳೆಯಲು ದುಗೇಬಾಬ ಪಾಂಗ್ಯಾನನ್ನು ನೇಮಿಸಿದ. ಪಾಂಗ್ಯಾ ಕುಕ್ಕರಗಾಲಿನಲ್ಲಿ ಕುಳಿತು ಭತ್ತ ಅಳೆಯತೊಡಗಿದ. ದುಗೇಬಾಬ ಲಾಭಾ ಒಂದು, ಲಾಭಾ ಎರಡು ಎಂದು ಅಂಕೆಗಳನ್ನು ಹೇಳುತ್ತಾ ಎಣಿಸಿದ. ಉಳಿದ ಕೆಲಸಗಾರರು ಭತ್ತವನ್ನು ಚೀಲದಲ್ಲಿ ತುಂಬಲಾರಂಭಿಸಿದರು.

"ಪಾಂಗ್ಯಾ, ನಿನ್ನ ಪಾಲಿನ ದಿನಗೂಲಿ ಭತ್ತವನ್ನು ನಾಳೆ ತೆಗೆದುಕೊಂಡು ಹೋಗು. ನಾಳೆ ಹೇಗೂ ಭತ್ತದ ಕಣ ಮಾಡಲು ಬರಬೇಕಲ್ಲ?" ಬೆತ್ತಗಳಿಗೆ ಬಳ್ಳಿ ಸುತ್ತುತ್ತಾ ದುಗೇಬಾಬ ಹೇಳಿದ. ಪಾಂಗ್ಯಾನಿಗೆ ದುಃಖವಾಯಿತು. ದುಗೇಬಾಬ ತನ್ನ ಕೊರಳಿಗೆ ಉರುಳು ಹಾಕಿ ಎಳೆಯುತ್ತಿರುವಂತೆ ಅವನಿಗೆ ಭಾಸವಾಯಿತು. ಮೊರದ ಸಿಗಿರು ಹೊರಬಂದು ಬೆರಳಿಗೆ ಚುಚ್ಚಿ ಗಲಿಬಿಲಿ ಉಂಟಾಯಿತು. ಜೋಡಿ ಬಾಳೆದಾರದಿಂದ ಚಾಟಿಯಂತೆ ಮೈಮೇಲೆ ಹೊಡೆದಂತಾಯಿತು. ಮನೆಯ ಚಿಂತೆಯಿಂದ ಅವನ ಅಂತರಾತ್ಮ ಕೊರಗಿತು.

ಭತ್ತದ ಚೀಲಗಳನ್ನು ಕಣದಲ್ಲಿ ತುಂಬಿದ ದುಗೇಬಾಬ ಬಣದ ಮೇಲೆ ಹುಲ್ಲು ಹಾಸಿದ.

"ಬನ್ನಿ, ಹೋಗೋಣ" ಅವನು ಎಲ್ಲಾ ಕೆಲಸಗಾರರನ್ನು ಕರೆದುಕೊಂಡು ಸಾರಾಯಿ ಅಂಗಡಿಯ ಕಡೆಗೆ ಹೋದ. ಪಾಂಗ್ಯಾ ಮಾತ್ರ ದಾರಿಯುದ್ದಕ್ಕೂ ಮೌನವಾಗಿ ಹೆಜ್ಜೆ ಹಾಕುತ್ತಿದ್ದ.

"ಪಾಂಗ್ಯಾ, ಇಂದು ನಿನಗೆ ಏನಾಗಿದೆ?"

"ಒಂದು ಗುಟುಕು ಹಾಕಿದ ಮೇಲೆ ಸರಿ ಹೋಗುತ್ತಾನೆ"

ಪಾಂಗ್ಯಾನಿಗೆ ಮಾತ್ರ ಯಾರ ಮಾತಿನ ಕಡೆಗೂ ಗಮನವೇ ಇರಲಿಲ್ಲ. ಅವನು ತನ್ನ ನಿತ್ಯದ ಅಂಗಡಿಯಿಂದ ಒಂದಿಷ್ಟು ಸಾರಾಯಿ ಗಟಗಟನೆ ಕುಡಿದು ತಕ್ಷಣ ಅಲ್ಲಿಂದ ಹೊರನಡೆದ. ಬೆಳಕಿರುವಾಗಲೇ ಮನೆ ದಾರಿ ಹಿಡಿದ. ನಡೆಯುತ್ತ ನಡೆಯುತ್ತ ತನ್ನ ಕಾಲುಗಳು ಹಗುರವಾದಂತೆ ಭಾಸವಾಯಿತು. ದಿನದ ಎಲ್ಲಾ ಕಷ್ಟಗಳು ಮೈಯಿಂದ ಇಳಿದು ಹೋದಂತಾಯಿತು. ಅವನು ಪಾಗಾರದ ಮೇಲಿಂದ ತನ್ನ ಗುಡಿಸಿಲಿನೆಡೆಗೆ ದೃಷ್ಟಿ ಹಾಯಿಸಿದ. ಗುಡಿಸಿಲಿನ ದೀಪದಂತೆ ಅವನ ಮನಸ್ಸು ಮುದುಡಿತು. ಅವನು ತಲೆತಗ್ಗಿಸಿ ಮನೆಯೊಳಗೆ ಹೊಕ್ಕನು. ಅವನ ಹೆಂಡತಿ ಕಿರಿಯ ಮಗನನ್ನು ತೊಡೆಯ ಮೇಲೆ ಮಲಗಿಸಿ ಮೈದಡವುತ್ತಿದ್ದಳು ಮೂರು ನಾಲ್ಕು ವರ್ಷದ ದೊಡ್ಡ ಮಗ ಕೌದಿಯ ಮೇಲೆ ಬೋರಲು ಮಲಗಿದ್ದನು. ಪಾಂಗ್ಯಾ ತನ್ನ ಕೈವಸ್ತ್ರವನ್ನು ಗೂಟದ ಮೇಲೆ ಹಾಕಿದ. ಹೆಂಡತಿಗೆ ವಿಷಯ ಹೇಗೆ ಹೇಳುವುದೆಂದು ತಿಳಿಯದೆ ಸ್ತಬ್ಧನಾಗಿ ನಿಂತುಕೊಂಡ. ಸ್ವಲ್ಪ ಹೊತ್ತಿನ ಬಳಿಕ ಬಾಯಿ ಬಿಟ್ಟು ಕೇಳಿದ, "ಇವತ್ತು ಅಡಿಗೆ ಮಾಡಿಲ್ಲವೇ?"

"ನಿನಗೆ ಬೆಳಿಗ್ಗೆ ಹೇಳಿದ್ದೇನಲ್ಲ?"

"ಆದ್ರೆ ನಾನು ಯಾರ ಬಳಿ ಕೈಗಡ...ಅಕ್ಕಿ.."

"ಕೈಗಡ ಯಾರೂ ಕೊಡುವುದಿಲ್ಲವೇ?"

"ಅಂದರೆ.."

"ಎಲ್ಲರ ಬೆಳೆಗಳು ಫಸಲುಗೊಂಡಿವೆ ಎನ್ನುತ್ತಿದ್ದರಲ್ಲ."

"ನಮಗೆ ಹೊಲ-ಬೆಳೆ ಎಲ್ಲಿದೆ?"

ಆದರೂ ನೀನು ದಿನಗೂಲಿಯಾಗಿ ಕೆಲಸ ಮಾಡುತ್ತಿರುವೆಯಲ್ಲ? ಮನೆಯೊಡತಿಯ ಮಾತಿಗೆ ಪಾಂಗ್ಯಾ ನಿರುತ್ತರನಾದ.

"ಮಧ್ಯಾಹ್ನ ಮಕ್ಕಳನ್ನು ಉಪವಾಸವಿಟ್ಟೆಯಾ?" ಅವನು ಕೇಳಿದ.

"ಸಣ್ಣವನಿಗೆ ನೀರಿನಲ್ಲಿ ಬಿಸ್ಕಿಟ್ ಅದ್ದಿಕೊಟ್ಟೆ"

"ಮತ್ತೆ, ದೊಡ್ಡವನಿಗೆ?"

"ಅವನು ದಿನವಿಡೀ ಮಾವಿನ ಮರದ ಬುಡದಲ್ಲಿದ್ದ"

"ಮಾವಿನ ಮರದ ಬುಡದಲ್ಲಿ ಹೊಟ್ಟೆ ತುಂಬುತ್ತದೆಯೇನು?"

"ಮಾವಿನ ಗೊರಟು–ಗಿರಟು ಚೀಪಿರಬಹುದು"

ಬೋರಲು ಮಲಗಿದ ಮಗನನ್ನು ನೋಡಿ ಪಾಂಗ್ಯಾ ನಿಟ್ಟುಸಿರಿಟ್ಟ. ಮನಸ್ಸಿನಲ್ಲಿದ್ದ ವ್ಯಥೆ ಮಂಜಿನ ಹೊಗೆಯಂತೆ ಕಾಣಲಾರಂಭಿಸಿತು.

"ಇವತ್ತು ಎಲ್ಲಿ ಕೆಲಸಕ್ಕೆ ಹೋಗಿದ್ದೆ?"

"ದುಗೇಬಾಬಾನ ಮನೆಗೆ ಒಕ್ಕಲು ಹೋಗಿದ್ದೆ"

"ಭತ್ತದ ಅಕ್ಕಿಯಾಗಲಿಲ್ಲವೇ?"

"ಆಯಿತು."

"ಹಾಗಾದರೆ ದಿನಗೂಲಿ ಎಲ್ಲಿ?"

"ನಾಳೆ"

"ನಾಳೆ?"

"ಕಣ ಪೂರ್ಣವಾಗಲಿಲ್ಲ"

"ಕರ್ಮದ ಕಣ!" ಪಾಂಗ್ಯಾನ ಹೆಂಡತಿ ಮನಸ್ಸಿಲ್ಲದ ಮನಸ್ಸಿನಿಂದ ಸಿಡುಕಿದಳು.

ಪಾಂಗ್ಯಾನಿಗೆ ತನ್ನ ಮೇಲೆ ಸಿಟ್ಟು ಬಂತು. ಅವನ ಕಣ್ಣೆದುರಿಗೆ ರಾಶಿ ರಾಶಿ ಭತ್ತದ ಬಣವೆಗಳು ಕಾಣಲಾರಂಭಿಸಿದವು. ಅವರ ಮಾತುಗಳು, ಚದುರಿದ ಭತ್ತದ ತೆನೆಗಳು, ಪೇರಿಸಿಟ್ಟ ಭತ್ತದ ರಾಶಿ. ಕಣ್ಣಂಚಿನಲ್ಲಿ ಹಳದಿ ಬಣ್ಣದ ಭತ್ತದ ರಾಶಿ ಮೂಡಲಾರಂಭಿಸಿತು. ಅವನು ಮೊರ ಕೈಗೆತ್ತಿಕೊಂಡದ್ದು, ಭರಭರನೆ ಗಾಳಿ ಬೀಸಿದ್ದು... ಆದರೂ ಕೈಯಲ್ಲಿ ಒಂದು ಭತ್ತದ ಕಾಳು ಕೂಡಾ ಇಲ್ಲ. ಎಲ್ಲವೂ ಹಾರಿಹೋಯಿತು. ಅಷ್ಟರಲ್ಲಿ ಪಾಂಗ್ಯಾ ಎಚ್ಚರಗೊಂಡ. ಅವನಿಗೆ ಎಲ್ಲವೂ ಕನಸಿನಂತೆ ಭಾಸವಾಯಿತು.

"ನಡೆ, ಚಿಂತೆ ಯಾಕೆ ಮಾಡ್ತೀಯಾ? ದಣಿವಾಗಿರಬೇಕು, ಮಲಗು ಬೇಗ" ಅವನ ಹೆಂಡತಿ ಕಸಗುಡಿಸತೊಡಗಿದಳು.

'ಒಳ್ಳೆಯ ಬೆಳೆಯಾದರೂ ಉಪವಾಸವೇ ಗತಿಯೇ? ದಿನವಿಡೀ ದುಡಿದರೂ ಮಕ್ಕಳು ಮಾತ್ರ ತಮ್ಮ ಹೊಟ್ಟೆಯನ್ನು ನೆಲದ ಆಸರೆಗೆ ಇಟ್ಟು ಮಲಗುವುದೇ?' ಯೋಚಿಸಿ, ಯೋಚಿಸಿ ಪಾಂಗ್ಯಾ ತಟ್ಟನೆ ಎದ್ದು ನಿಂತ.

"ಎಲ್ಲಿಗೆ ಹೋಗ್ತೀಯಾ?"

"ಈಗ ಬಂದು ಬಿಡ್ತೀನಿ" ಪಾಂಗ್ಯಾ ಕತ್ತಲೆಯಲ್ಲಿ ನಡೆಯಲಾರಂಭಿಸಿದ.

ಸುಮಾರು ಅರ್ಧ ಗಂಟೆ ಕಳೆದು ಪಾಂಗ್ಯಾ ಬಗ್ಗಿ ಮನೆಯೊಳಗೆ ಪ್ರವೇಶಿಸಿದ. ತನ್ನ ಬೆನ್ನ ಮೇಲಿದ್ದ ಮೂಟೆಯನ್ನು ಮೂಲೆಗೆಸೆದ. ಹೆಂಡತಿ ಬಿಟ್ಟ ಕಣ್ಣುಗಳಿಂದ ನೋಡಿದಳು. ಭಯಭೀತಳಾಗಿ ಬಾಯಿಯ ಮೇಲೆ ಕೈ ಇಟ್ಟಳು.

"ಇದೇನು?"

"ಭತ್ತ"

"ಯಾರದು?"

"ಅದರ ಸುದ್ದಿ ನಿನಗೆ ಬೇಡ"

"ಅಧರ್ಮದ್ದೇ..?"

"ಮೊದಲು ಹೊಟ್ಟೆ, ಆಮೇಲೆ ಧರ್ಮ"

"ಆದರೆ ಇಷ್ಟೊಂದು ಭತ್ತವೇ?"

"ಎಲ್ಲರ ಬೆಳೆಯೂ ಫಸಲಿಗೆ ಬಂದಿದೆ"

"ಯಾರಿಗಾದರೂ ತಿಳಿದರೆ..!"

"ಗೊತ್ತಾಗುವುದಿಲ್ಲ. ಮೊದಲು ಒಂದಿಷ್ಟು ಭತ್ತವನ್ನು ಒರಳಿಗೆ ಹಾಕಿ ಕುಟ್ಟು."

"ಈ ರಾತ್ರಿ ಹೊತ್ತಲ್ಲಿ?"

"ಹೌದು. ಈಗ ನೀನು ಒಲೆಗೆ ಬೆಂಕಿ ಹೊತ್ತಿಸಬೇಕು. ಈ ಸುಗ್ಗಿಕಾಲದಲ್ಲಿ ಮಕ್ಕಳನ್ನು ಹೀಗೆ ಉಪವಾಸ ಮಲಗಲು ಬಿಡಬಾರದು" ಪಾಂಗ್ಯಾ ಭತ್ತದ ಚೀಲವನ್ನು ಬಿಡಿಸಿ, ಭತ್ತವನ್ನು ಮೊರದಲ್ಲಿ ತೆಗೆದು ಒರಳಿಗೆ ಹಾಕಿದನು. ಭತ್ತವನ್ನು ಒರಳಲ್ಲಿ ಹಾಕಿ ಕುಟ್ಟಿದ ಸದ್ದು ಕತ್ತಲನ್ನು ಸೀಳಲಾರಂಭಿಸಿತು.

ಮರುದಿನ ದುಗೇಬಾಬಾನ ಕಣದಲ್ಲಿ ಭಟ್ಟರು ಊಟ ಮಾಡಿ ಹೋದರು. ಸಂಜೆ ವಡೆ ಕರಿದು, ಕಣವನ್ನು ಸ್ವಚ್ಛ ಮಾಡುವುದಿತ್ತು. ದುಗೇಬಾಬಾ ಗೋಡೆಯ ಬಳಿ ನಿಂತು ಪಾಂಗ್ಯಾನನ್ನು ಕೂಗಿ ಕರೆದನು.

"ಪಾಂಗ್ಯಾ, ಕಣ ಸ್ವಚ್ಛಗೊಳಿಸಲು ಬಾ"

ಪಾಂಗ್ಯಾ ಗಾಬರಿಗೊಂಡನು. ಅವನಿಗೆ ಕಣಕ್ಕೆ ಹೋಗಲು ಮನಸ್ಸಿರಲಿಲ್ಲ. ಆದರೂ ಭಾರವಾದ ಹೆಜ್ಜೆಯನ್ನಿಡಲು ಪ್ರಾರಂಭಿಸಿದ. ದಾರಿಯಲ್ಲಿ ಬರುತ್ತಿರುವಾಗ ದುಗೇಬಾಬ ಹೇಳಿದ,

"ಪಾಂಗ್ಯಾ ನಿನಗೆ ತಿಳಿದಿದೆಯಾ?"

"ಏನು?" ಮೈಮೇಲೆ ಜಿರಲೆ ಹರಿದಾಡಿದಂತೆ ಅವನ ಇಡೀ ಮೈ ಕಂಪಿಸಿತು.

"ಕಣದಲ್ಲಿರುವ ಮೂಟೆ ಕದ್ದವರು ಯಾರು?"

"ಯಾವಾಗ?"

"ರಾತ್ರಿ"

ಮುಂದೇನು ಕೇಳಬಹುದೆಂದು ಪಾಂಗ್ಯಾನಿಗೆ ತಿಳಿಯಲಿಲ್ಲ. ದುಗೇಬಾಬ ಹೇಳಿದ, "ಆ ಕಳ್ಳನಿಗೆ ಆ ಮೂಟೆ ದಕ್ಕುತ್ತದೆಯೇ?"

"ದಕ್ಕುವುದಿಲ್ಲ"

"ಕಣಕ್ಕೆ ಪೂಜೆ ಮಾಡಿದ ಹೊರತು ಭತ್ತವನ್ನು ಮುಟ್ಟಲಾಗುವುದೇ?"

"ಇಲ್ಲ"

"ರಾಮನ ಬಗ್ಗೆ ನಿನಗೆ ಗೊತ್ತಲ್ಲವೇ?"

"ಹೌದು"

"ಕಣದಲ್ಲಿನ ಭತ್ತವನ್ನು ಕದ್ದು ಅವನು ಹುಚ್ಚನಾದ, ಅಲ್ಲವೇ?"

"........." ಪಾಂಗ್ಯಾ ಮಾತನಾಡಲಿಲ್ಲ.

"ಕಣದ ಮೇಲಿನ ದೇವತಾಚರಣೆ ನಿಜವಾಗುತ್ತದೆ"

ಅವರಿಬ್ಬರೂ ಮಾತನಾಡುತ್ತಾ, ಮಾತನಾಡುತ್ತ ಬೇಡಶಿ ಮರದ ಕೆಳಗಿನ ಕಣದ ಹತ್ತಿರ ತಲುಪಿದರು. ಮೊದಲೇ ವಡೆಯನ್ನು ಕರಿದು ಮೊರದಲ್ಲಿ ಇಡಲಾಗಿತ್ತು. ಎಲ್ಲವೂ ಕ್ರಮಾನುಸಾರ ನಡೆಯುತ್ತಿತ್ತು. ಜನ ನಿಧಾನವಾಗಿ ಸೇರಲಾರಂಭಿಸಿದರು. ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಿಕೊಳ್ಳುತ್ತಿದ್ದರು.

"ಕಣದಲ್ಲಿನ ಭತ್ತವನ್ನು ಕದ್ದವರ್‍ಯಾರಿಗೂ ಒಳಿತಾಗುವುದಿಲ್ಲ"

ಕಣದ ಬಳಿಯ ಪೂಜೆಯ ತಯಾರಿ ಎಲ್ಲಾ ಮುಗಿಯಿತು. ವಡೆಯನ್ನು ಹಂಚುವುದು ಮತ್ತು ದೇವರಿಗೆ ಹೆಂಡವನ್ನು ಅರ್ಪಿಸುವುದು ಒಟ್ಟೊಟ್ಟಿಗೆ ನಡೆಯಿತು.

"ಪಾಂಗ್ಯಾ ಬಾ, ನಾವೀಗ ದೇವರ ಬಳಿ ಒಳ್ಳೆಯ ಪ್ರಾರ್ಥನೆ ಮಾಡೋಣ"

ಹುಲ್ಲಿನ ಬಣವೆಯ ಮರೆಯಲ್ಲಿ ಕುಕ್ಕರುಗಾಲಿನಲ್ಲಿ ಕುಳಿತಿದ್ದ ಪಾಂಗ್ಯಾ ಎದ್ದು ದೇವರ ಸನಿಹಕ್ಕೆ ಹೋದನು.

ಬೇಡಶಿ ಮರದ ಕೆಳಗೆ ದುಗೇಬಾಬ ಹಣತೆಯನ್ನು ಹಚ್ಚಿದ. ತನ್ನ ಒಳಿತಿಗಾಗಿ ಬಾಳೆಲೆಯ ನಾಲ್ಕು ದೊನ್ನೆಗಳನ್ನಿಟ್ಟು, ತುದಿಯಲ್ಲಿ ಬೆಲ್ಲದ ತುಂಡನ್ನಿಟ್ಟು ಮತ್ತೊಂದು ತುದಿಯಲ್ಲಿ ಗಂಧ–ಹೂವು ಇಟ್ಟು ಕಾಡಿಗೆ ಹಚ್ಚಿದನು. ವಡೆಯನ್ನು ಮುರಿದು ಆ ತುಂಡನ್ನು ದೊನ್ನೆಯಲ್ಲಿ ಹಾಕಿ ಅದರ ಮೇಲೆ ಹೆಂಡವನ್ನು ಸುರಿದ. ಎಲ್ಲರೂ ಕೈಜೋಡಿಸಿದರು. ದುಗೇಬಾಬ ಪ್ರಾರ್ಥನೆ ಮಾಡಿದ,

"ಬೇಡಶಿ ಮರದಲ್ಲಿನ ದೇವರೇ ಕಾಪಾಡು. ಪ್ರತಿವರ್ಷದಂತೆ ಈ ವರ್ಷವೂ ಭತ್ತ ಬಡಿದು ಕಣ ಮಾಡಿ ನಿನಗರ್ಪಿಸಿದ ಪೂಜೆಯನ್ನು ಸ್ವೀಕರಿಸಿ, ತಪ್ಪುಗಳಿದ್ದಲ್ಲಿ ಮನ್ನಿಸು. ದನಕರುಗಳಿಗೆ ರಕ್ಷಣೆ ನೀಡಿ, ಹೆಚ್ಚೆಚ್ಚು ಫಸಲನ್ನು ಅನುಗ್ರಹಿಸು. ಮತ್ತೆ ದೇವರೇ,

ನಿನ್ನ ಪೂಜೆ ಮಾಡುವ ಮೊದಲೇ ಈ ಕಣದಲ್ಲಿ ಕಳುವಾಗಿದೆ. ನಿನ್ನ ಪರಾಕ್ರಮವಿದ್ದರೆ, ಇಪ್ಪತ್ನಾಲ್ಕು ಘಂಟೆಯೊಳಗೆ ಈ ಕಳ್ಳನಿಗೆ ಬುದ್ದಿ ಕಲಿಸು"

ದುಗೇಬಾಬಾನ ಕೊನೆಯ ಮಾತು ಎಲ್ಲರನ್ನೂ ದೃಷ್ಟಿಯಲ್ಲಿಟ್ಟು ಹೇಳಿದಂತಿತ್ತು.

ದುಗೇಬಾಬ ವಡೆಯಿದ್ದ ಮೊರವನ್ನು ಪಾಂಗ್ಯಾನಿಗೆ ನೀಡಿದ. ಪಾಂಗ್ಯಾನು ಎಲ್ಲರಿಗೂ ವಡೆಯನ್ನು ಹಂಚಿದ. ಕೊನೆಗೆ ತನಗೂ ವಡೆಯನ್ನು ಇಟ್ಟುಕೊಳ್ಳಬೇಕೆನ್ನುವಷ್ಟು ಅರಿವು ಆತನಲ್ಲಿ ಇರಲಿಲ್ಲ. ನಂತರ ದುಗೇಬಾಬನು ಕೆಲಸಗಾರರೆಲ್ಲರಿಗೂ ದಿನಗೂಲಿಯನ್ನು ಭತ್ತದ ರೂಪದಲ್ಲಿ ಹಂಚಿದ. ಲಾಟೀನಿನ ಬೆಳಕಿನ ನೆರವಿನಿಂದ ಎಲ್ಲರೂ ಕಣದ ಗದ್ದೆಯಿಂದ ಮೇಲೆ ಬಂದರು.

"ಹೋಯ್ ಪಾಂಗ್ಯಾ, ಇತ್ತ ಕಡೆ ಬಾ" ದುಗೇಬಾಬಾ ಪಾಂಗ್ಯಾನನ್ನು ಎಚ್ಚರಿಸಿದ. ತಾನು ಮನೆಯ ದಾರಿ ತಪ್ಪಿ ನಡೆಯುತ್ತಿರುವುದು ಆತನಿಗೆ ಅರಿವಾಯಿತು. ಅವನು ಮೌನದಿಂದ ಎಡಗಡೆಗೆ ದಾರಿ ಬದಲಿಸಿ, ಕೊನೆಗೆ ಗುಡಿಸಿಲಿನ ಕಡೆಗೆ ಹೆಜ್ಜೆ ಇಡಲಾರಂಭಿಸಿದ. ಒಂದು ಕೊಳಗ ಭತ್ತದ ಮೂಟೆಯೊಂದಿಗೆ ಮನೆಗೆ ಬಂದ. ಆಗ ಅವನ ಮಗ ಕಂಚಿನ ತಟ್ಟೆಯ ತುಂಬಾ ಗಂಜಿಯನ್ನು ಹಾಕಿಕೊಂಡು ಉಣ್ಣುತ್ತಿದ್ದ.

"ವಡೆ ಎಲ್ಲಿ?" ಮಗ ಪಾಂಗ್ಯಾನನ್ನು ಕೇಳಿ ಕೈಚಾಚಿದ.

"ಮಕ್ಕಳಿಗೆ ವಡೆಯನ್ನು ತರಲಿಲ್ಲವೇ?" ಮತ್ತದೇ ಪ್ರಶ್ನೆಯನ್ನು ಹೆಂಡತಿಯೂ ಕೇಳಿದಳು. ಪಾಂಗ್ಯಾ ಮನೆಯೊಡತಿಯ ಮುಖವನ್ನು ನೋಡುತ್ತಾ ನಿಂತನು.

"ಯಾಕೆ ಹೀಗೆ ನೋಡುತ್ತಾ ನಿಂತಿದ್ದಿಯಾ?"

ಪಾಂಗ್ಯಾ ನಕ್ಕ. ಅವನ ಹೆಂಡತಿಗೆ ಕಸಿವಿಸಿಯಾಯಿತು.

"ನಗುವಂತಹದು ಏನಾಗಿದೆ?"

"ಹ್ಹ..ಹ್ಹ.. ಹ್ಹಾ..ಹ್ಹಾ..." ಪಾಂಗ್ಯಾ ನಗುತ್ತಾ ನಿಂತುಕೊಂಡನು.

ಗುಡಿಸಿಲಿನ ಬಾಗಿಲು ಕಂಪಿಸಿದಂತಾಯಿತು. ಮೈಯಲ್ಲಿ ಗಾಳಿ ಹೊಕ್ಕಂತಾಗಿ ಗರಬಡಿದವನಂತೆ ಅವನು ಅಲ್ಲಲ್ಲಿ ಹುಡುಕಾಡಲು ಆರಂಭಿಸಿದ. ಹರಿದ ಚಿಕ್ಕ ಚಾಪೆಯೊಂದನ್ನು ಭತ್ತದ ಮೂಟೆಯ ಮೇಲೆ ಹಾಕಿ, ಮೂಟೆ ಅಡಗಿಸಿದಂತೆ ಮಾಡಿದ. ಹೆಂಡತಿಗೆ ಸುಮ್ಮನಿರುವಂತೆ ಸನ್ನೆ ಮಾಡಿದ. ದೀಪ ಆರಿಸಿದ. ಗುಡಿಸಿಲಿನ ತುಂಬಾ ಕತ್ತಲಾವರಿಸಿತು. ಪಾಂಗ್ಯಾ ಓಡುತ್ತಾ ಹೊರಗೆ ಬಂದ. ಅಂಗಳದಲ್ಲಿ ನಿಂತು ದುಗೇಬಾಬಾನನ್ನು ಹುಡುಕಾಡಲು ಪ್ರಾರಂಭಿಸಿದ.

"ದುಗೇಬಾಬಾ.. ದುಗೇಬಾಬಾ.. ನಾನು ಭತ್ತದ ಚೀಲ ಕದ್ದಿಲ್ಲ. ನನ್ನ ಗುಡಿಸಲಿಗೆ ಬಂದು ನೋಡು. ನಾನು ಹುಚ್ಚನಾಗುವುದಿಲ್ಲ.. ನಾನು ಹುಚ್ಚನಾಗುವುದಿಲ್ಲ.."

ಅನುವಾದಕರು: **ವಿಶ್ವನಾಥ ಭಟ್ಟ**

❖ ❖ ❖❖ ❖

ರೊಂಟಸ್

✍ ಪ್ರೊ. ಕೆ.ಆರ್. ವಸಂತ ಮೊನಿ

"ರೀ, ಅಂಜಲಿ ಕೊಟ್ಟಿರುವ ಸ್ವಲ್ಪ ಬೆಳ್ತಿಗೆ ಅಕ್ಕಿ ಇದೆ. ಅದನ್ನು ನೆನೆ ಹಾಕಿ ರಾತ್ರಿ ರೊಂಟಸ್ ಮತ್ತು ತೊವ್ವೆ ಮಾಡುತ್ತೇನೆ" ಪತ್ನಿ ಹೇಳಿದಳು.

ರೊಂಟಸ್ ಮತ್ತು ತೊಗರಿಬೇಳೆ ತೋವೆ ಕೇಳಿಂಯೇ ಬಾಂಯಲ್ಲಿ ನೀರೂರಲಾರಂಭಿಸಿತು. ರೊಂಟಸ್ ತಿನ್ನದೆ ಎಷ್ಟು ಸಮಯವಾಯಿತು! ಮನಸ್ಸಿಗೆ ಖುಷಿಯಾಗಿ ನಾನು ಪತ್ನಿಯ ಮುಖ ನೋಡಿದೆ.

"ಬೇಡ, ಬೇಡ. ನೀವು ಪ್ರೀತಿಯಿಂದ ನೋಡುವುದೇನೂ ಬೇಡ. ಏನೂ ಹೇಳದೆ ಸುಮ್ಮನೆ ತಿಂದರೆ ಸಾಕು" ಅವಳು ಹುಸಿಮುನಿಸಿನಿಂದ ಹೇಳಿದಳು.

ನಾನು ನಸುನಗುತ್ತಾ, "ಅಲ್ವೇ, ನೀನು ಏನು ಮಾಡಿದರೂ ನಾನು ತಿನ್ನುವುದಿಲ್ಲವೇ? ನಿನ್ನ ಕೈರುಚಿ ನನಗೆ ಗೊತ್ತಿದೆಯಲ್ಲ"

"ನೀವು ನಗುವುದು ಬೇಡ. ಸಾಕು, ಹೊರಡಿ ಇನ್ನು. ಸಂಜೆ ಆಫೀಸಿನಿಂದ ಬೇಗ ಬಂದು ಬಿಡಿ" ನಾನು ಆಫೀಸಿಗೆ ಹೋಗಬೇಕಾಗಿರುವುದನ್ನು ನೆನಪಿಸಿದಳು.

ಸಂಜೆ ಐದು ಗಂಟೆಗೆ ಮನೆಗೆ ಬಂದಾಗ ಪತ್ನಿ ಒರಳಿನಲ್ಲಿ ಅಕ್ಕಿ ಕುಟ್ಟುತ್ತಿರುವ ಸದ್ದು ಕೇಳಿಬಂತು. ನನ್ನನ್ನು ಕಾಣುತ್ತಲೇ, "ನೋಡಿ ಮಧ್ಯಾಹ್ನ ಎರಡು ಗಂಟೆಗೆ ಹೋದ ಕರೆಂಟ್ ಇನ್ನೂ ಬಂದಿಲ್ಲ. ಎಲ್ಲಾ ನನ್ನ ಹಣೆಬರೆಹ. ಅಳಿಸಿದರೆ ಹೋಗುವುದೇ?" ಎಂದು ಗೊಣಗಿದಳು. ಅವಳು ಒರಳಿನಲ್ಲಿ ಕುಟ್ಟುತ್ತಿರುವುದನ್ನು ನೋಡಿ ನನಗೆ ಮರುಕವೆನಿಸಿತು. ಮನೆಯಲ್ಲಿ ಮಿಕ್ಸಿ ಇದೆ. ಆದರೂ ಈ ಕರೆಂಟ್ ಹೋಗಿಬಿಟ್ಟರೆ ಮರಳಿ ಯಾವಾಗ ಬರುವುದೋ ಖಚಿತವಿಲ್ಲ. ಅಣೆಕಟ್ಟಿನಲ್ಲಿ ಬೇರೆ ನೀರು ಇಲ್ಲವಂತೆ. ಕಳೆದ ಐದಾರು ತಿಂಗಳಿಂದ ಕರೆಂಟ್ ಇರುವುದೇ ಕಡಿಮೆ. ಮಧ್ಯಾಹ್ನದ ಹೊತ್ತು ಅವಳು ಉತ್ಸಾಹದಿಂದ ನೋಡುತ್ತಿದ್ದ ಫರ್ಜ್, ಸ್ವಾಭಿಮಾನ್, ಯುಗ್ ಮೊದಲಾದ ಧಾರಾವಾಹಿಗಳನ್ನು ಅವಳಿಗೆ ನೋಡಲಾಗುತ್ತಿಲ್ಲ. ಈಗ ಅಕ್ಕಿಯನ್ನು ಕುಟ್ಟುತ್ತಾ ಬೆವರಿನಿಂದ ತೊಯ್ದು ಹೋಗಿದ್ದಾಳೆ. "ನಾನು ಕುಟ್ಟಿಕೊಡಲೇ?" ಕೇಳಿದೆ.

"ಏನೂ ಬೇಡ...... ಕುಡಿಯಿರಿ". ಆಮೇಲೆ ರೊಂಟಸ್ ನಾನೇ ಮಾಡಿದ್ದು ಎಂದು ಹೇಳುವುದು ಬೇಡ. ಫ್ಲಾಸ್ಕಿನಲ್ಲಿ ಚಹ ಇಟ್ಟಿದ್ದೇನೆ. ಕುಡಿಯಿರಿ

ಅವಳು ಬೇಡ ಎಂದು ಹೇಳಿದ ಮೇಲೆ ಇನ್ನೇನು ಎಂದುಕೊಂಡು ಚಹಾ ಬಗ್ಗಿಸಿ ಕುಡಿಯುತ್ತಾ ಪೇಪರ್ ಓದತೊಡಗಿದೆ. ನಂತರ ಅಡುಗೆ ಮನೆಯಿಂದ ಯಾವ ಸದ್ದೂ ಕೇಳಿಬರಲಿಲ್ಲ. ಅವಳು ಹೊರಗೆ ಬರಲೂ ಇಲ್ಲ. ನನ್ನನ್ನು ಕರೆಯಬಹುದು ಎಂದುಕೊಂಡು

ಕಾದು ಕುಳಿತೆ. ಕರೆಯದೆ ಒಳಗೆ ಹೋದರೆ ಏನಾದರೂ ಹೇಳಿದರೆ ಎಂದುಕೊಂಡು ಸುಮ್ಮನೆ ಕುಳಿತೆ. ಗಂಟೆ ಎಂಟಾಯಿತು. ಮತ್ತೆ ಪವರಕಟ್! ಇನ್ನು ಕರೆಂಟ್ ಬರುವುದು ಒಂಭತ್ತಕ್ಕೆ. ಸಧ್ಯಕ್ಕೆ ನನಗೆ ರೊಂಟಸ್ ತಿನ್ನಲು ಕರೆಬರುವುದು ಕಷ್ಟ. ಕೈಗೆ ಎಟಕದ ದ್ರಾಕ್ಷಿ ಹುಳಿ!

"ಕತ್ತಲೆಯಲ್ಲಿ ಏನೂ ಕಾಣಿಸುತ್ತಿಲ್ಲ. ಒಂದು ಮೇಣದಬತ್ತಿ ಹಚ್ಚಿ ತನ್ನಿ" ಹೆಂಡತಿ ಹೇಳಿದಳು.

ನಾನು ಮೇಣದಬತ್ತಿ ಹಚ್ಚುತ್ತಿದ್ದಂತೆ ಅವಳು ಹೊರಗೆ ಬಂದಳು. ರೊಂಟಸ್ ತಿನ್ನಲು ಕರೆಯಬಹುದೆಂದುಕೊಂಡು, "ಆಯಿತಾ?" ಎಂದು ಕೇಳಿದೆ.

"ಏನು ಆಗುವುದು? ನಾನೇನು ಯಂತ್ರ ಅಂದುಕೊಂಡಿರಾ? ಅಷ್ಟು ಹೊತ್ತು ಸುಮ್ಮನೆ ಕೂತಿರುವ ಬದಲು ಸ್ವಲ್ಪ ತಟ್ಟಿಕೊಟ್ಟಿದ್ದರೆ ಕೈ ಸವೆಯುತ್ತಿತ್ತೇ? ಈಗ ಕತ್ತಲೆಯಲ್ಲಿ ಏನೂ ಕಾಣಿಸುವುದಿಲ್ಲ. ಕರೆಂಟ್ ಬರಲಿ" ಎಂದು ಹೇಳುತ್ತಾ ಅಲ್ಲಿಯೇ ನೆಲದ ಮೇಲೆ ಕಾಲು ಚಾಚಿ ಕುಳಿತುಕೊಂಡಳು. ಅತ್ತೆಯ ಮೇಲಿನ ಕೋಪ ಕೊತ್ತಿಯ ಹಾಗೆ ಎನ್ನುವಂತೆ ಇಷ್ಟು ಹೊತ್ತು ಸುಮ್ಮನಿದ್ದು ಈಗ ನಾನೇನಾದರೂ ಮಾತನಾಡಿದರೆ ಕೋಪದಿಂದ ವಿಶ್ವರೂಪ ತೋರಿಸಬಹುದೆಂದು ಸುಮ್ಮನೆ ಕುಳಿತೆ. ಮಾತನಾಡಲಿಲ್ಲ.

ಮೌನವಾಗಿ ಕುಳಿತ ನನಗೆ ಐವತ್ತು ವರ್ಷಗಳ ಹಿಂದಿನ ಘಟನೆ ನೆನಪಾಗಿ ನಗು ಬಂತು. ನಾನು ನಗುವುದನ್ನು ನೋಡಿ ಅವಳನ್ನು ಹಾಸ್ಯ ಮಾಡುತ್ತಿದ್ದೇನೆ ಎಂಬ ಭಾವನೆಯಿಂದ ಅವಳಿಗೆ ಸಿಟ್ಟು ಬಂತು.

"ಈಗೇನಾಯಿತು ಅಷ್ಟೊಂದು ನಗುವುದಕ್ಕೆ? ಪ್ರಾಯವಾದಂತೆ ಮರುಳು ಹೆಚ್ಚುತ್ತಿದೆ ನಿಮಗೆ" ಅವಳು ಕೋಪದಿಂದ ಹೇಳಿದಳು.

"ಇಲ್ಲ ಕಣೆ. ನಿನ್ನನ್ನು ನೋಡಿ ನಕ್ಕದ್ದಲ್ಲ. ಪುತ್ತುಮಾಮನ ರೊಂಟಸ್ ನೆನಪಾಗಿ ನಗು ಬಂತು ಅಷ್ಟೇ" ಎಂದೆ.

"ಯಾವ ಪುತ್ತು ಮಾಮು? ಸುಮ್ಮನೆ ಏನೇನೋ ಹೇಳಬೇಡಿ"

"ಅದೇ ಕಣೆ, ಊರಿನಲ್ಲಿ ಭಗವತಿ ದೇವಸ್ಥಾನದ ಬಡಗು ದಿಕ್ಕಿನಲ್ಲಿ ಅವರ ಮನೆ ಇತ್ತಲ್ಲ. ದೇವಸ್ಥಾನದ ಉತ್ಸವದ ಸಮಯದಲ್ಲಿ ಯಾರೇ ಬಂದರೂ ಅವರು ರೊಂಟಸ್ ತಿನ್ನಿಸದೆ ಬಿಡುತ್ತಿರಲಿಲ್ಲ. ಆ ಕಾಲದಲ್ಲಿ ಅವರು ಆಗರ್ಭ ಶ್ರೀಮಂತರು. ಮನೆಗೆ ಬಂದವರಿಗೆಲ್ಲಾ ಹೊಟ್ಟೆ ತುಂಬಾ ತಿನ್ನಿಸುತ್ತಿದ್ದವರು. ಅವರ ಮನೆಯಲ್ಲಿ ರೊಂಟಸ್ ಎಂದರೆ ಅಕ್ಷಯಪಾತ್ರೆಯಂತೆ. ನನಗೆ ನೆನಪಿರುವ ಮಟ್ಟಿಗೆ ಆಮೇಲೆ ಅವರ ಶ್ರೀಮಂತಿಕೆ ಹೋಯಿತು. ಆದರೆ ಆಡಂಬರಕ್ಕೆ ಮಾತ್ರ ಯಾವ ಕೊರತೆಯೂ ಇರಲಿಲ್ಲ. ಜನರನ್ನು ಕರೆದು ರೊಂಟಸ್ ತಿನ್ನಿಸುತ್ತಿದ್ದರು. ಒಮ್ಮೆ ಹೀಗಾಯಿತು. ನಾನು ವಾಸುದೇವನೊಟ್ಟಿಗೆ

ಅವರ ಮನೆಗೆ ಹೋಗಿದ್ದೆ. ಅವರ ಮನೆಯಂಗಳದಲ್ಲಿ ಸುಮಾರು ಮೂವತ್ತು-ನಲ್ವತ್ತು ಮಂದಿ ಕುಳಿತು ಹರಟೆ ಹೊಡೆಯುತ್ತಿದ್ದರು. ಪುತ್ತುಮಾಮನ ಹೆಂಡತಿ ಅನ್ನಪೂರ್ಣಕ್ಕ ಚಿಕ್ಕ ಉರುವಳಿಯಲ್ಲಿ ಹಿಟ್ಟು ಕಲೆಸುತ್ತಾ ಕುಳಿತಿದ್ದರು. ಅದು ನೋಡಿದರೆ ನಾಲ್ಕೈದು ಜನರಿಗೆ ಸಾಕಾಗುವಷ್ಟು ಮಾತ್ರವೇ ಇತ್ತು. ಒಲೆಯ ಮೇಲೆ ಒಂದು ಸಣ್ಣಬಾಣಲಿ. ಸ್ವಲ್ಪ ಹೊತ್ತು ಕಳೆದು ಪುತ್ತುಮಾಮ ಇಬ್ಬಿಬ್ಬರು ಮಕ್ಕಳಿಗೆ ಒಳಗೆ ಹೋಗಿ ತಿಂದು ಬರಲು ಹೇಳಿದರು. ಅವರು ರೊಂಟಸ್ ತಿಂದು ತೇಗುತ್ತಾ ಹೊರಗೆ ಬರುವುದನ್ನು ನೋಡಿ ನಾನು ಮತ್ತು ವಾಸುದೇವ ಅಡುಗೆ ಮನೆಗೆ ಹೋದೆವು. 'ಕುಳಿತುಕೊಳ್ಳಿ' ಎಂದು ಹೇಳುತ್ತಾ ಅನ್ನಪೂರ್ಣಕ್ಕ ನಮ್ಮ ಮುಂದೆ ಬಾಳೆ ಎಲೆ ತುಂಡನ್ನಿಟ್ಟರು. 'ನಿಧಾನವಾಗಿ ತಿನ್ನಿ. ನಾಲಗೆ ಸುಟ್ಟುಹೋದೀತು' ಎಂದು ಹೇಳುತ್ತಾ ವಾಸುದೇವನ ಮುಂದಿದ್ದ ಎಲೆಯ ಮೇಲೆ ಎರಡು ರೊಂಟಸ್ ಮತ್ತು ತೋವೆ ಬಡಿಸಿದಳು. ನಾನು ನೋಡುತ್ತಿದ್ದಂತೆ ವಾಸುದೇವ ಒಂದೇ ತುತ್ತಿನಲ್ಲಿ ಎರಡೂ ರೊಂಟಸನ್ನು ಖಾಲಿ ಮಾಡಿದ. ಅವನ ಎಲೆಗೆ ಮತ್ತೆರಡು ರೊಂಟಸ್ ಬಿದ್ದವು. ಅದೂ ಖಾಲಿ! "ತಾಳು ನಿನಗೂ ಕೊಡುತ್ತೇನೆ. ಅವನ ಹೊಟ್ಟೇ ತುಂಬಲಿ" ಎಂದಳು ಅನ್ನಪೂರ್ಣಕ್ಕ. ವಾಸುದೇವ ತಿನ್ನುತ್ತಲೇ ಇದ್ದ. ನಾನು ಆಸೆಯಿಂದ ನೋಡುತ್ತಾ ಇದ್ದೆ. ಕೊನೆಗೂ ನನ್ನ ಎಲೆಯ ಮೇಲೆ ಒಂದು ರೊಂಟಸ್ ಬಿತ್ತು. ಅದರ ಜೊತೆಯಲ್ಲಿ ವಾಸುದೇವನಿಗೆ ಎರಡು ರೊಂಟಸ್. "ನಿನಗೆ ಬೇಡ ಅಲ್ವಾ?" ಎಂದು ನನ್ನನ್ನು ಕೇಳುತ್ತಾ, ಅನ್ನುಪೂರ್ಣಕ್ಕ ಅವನಿಗೆ ತಿನ್ನಿಸುತ್ತಾ ಇದ್ದಳು. ಅವನು ರೊಂಟಸ್ ನುಂಗಿದರೆ ನಾನು ಜೊಲ್ಲು ನುಂಗುತ್ತಾ ಕುಳಿದೆ. "ಹೊಟ್ಟೆ ತುಂಬಿತು. ಇನ್ನು ಏಳುವ" ವಾಸುದೇವ ಕೈತೊಳೆಯಲು ಎದ್ದುನಿಂತ. ಉಪಾಯವಿಲ್ಲದೆ ನಾನೂ ಎದ್ದು ನಿಂತೆ. "ಹೊಟ್ಟೆ ತುಂಬಿತೇನೋ" ಪುತ್ತುಮಾಮ ಕೇಳಿದರು. ವಾಸುದೇವ ತುಂಬಿದ ಹೊಟ್ಟೆಯಿಂದ ತೇಗಿದರೆ ನಾನು ಬರೀ ಪರಿಮಳವನ್ನು ಆಸ್ವಾದಿಸಿ ತೇಗಿದೆ. ಅದಕ್ಕೇ ಕಣೆ ನನಗೆ ನಗು ಬಂದದ್ದು"

"ಹೌದು, ಹೌದು. ನನಗೆ ಗೊತ್ತಿಲ್ಲವೇ ನಿಮ್ಮ ಸ್ವಭಾವ? ಜೀವ ಹೋದರೂ ಸುಳ್ಳು ಹೇಳುವವರಲ್ಲ ನೀವು!"

"ನಿನ್ನಾಣೆಗೂ ಇದು ಸುಳ್ಳಲ್ಲ ಕಣೆ. ಪುತ್ತುಮಾಮ ಯಾರಂತ ಗೊತ್ತಾಯಿತಾ ನಿನಗೆ?"

"ಇಲ್ಲ ಹೇಳಿ. ಕರೆಂಟ್ ಬರುವ ತನಕ ಕೇಳುತ್ತೇನೆ"

"ಪುತ್ತುಮಾಮ ಹೆಸರಾಂತ ಮನೆತನವೊಂದರ ಜ್ಯೇಷ್ಠಪುತ್ರ. ಅವನ ತಂದೆ ಅವನನ್ನು ತುಂಬಾ ಪ್ರೀತಿಯಿಂದ ಬೆಳೆಸಿದರು. ಅವನು ಏನು ಹೇಳಿದರೂ ಇಲ್ಲವೆನ್ನದೆ ಕೊಡುತ್ತಿದ್ದರು. ಕೊಡದಿದ್ದರೆ ಅದನ್ನು ಪಡೆಯುವುದು ಹೇಗೆ ಎನ್ನುವುದೂ ಅವನಿಗೆ ಗೊತ್ತಿತ್ತು. ಗಂಡಸರು ಜುಟ್ಟು ಬಿಟ್ಟು ಶರ್ಟ್ ಧರಿಸದ ಕಾಲದಲ್ಲಿ, ಜುಟ್ಟು ಕತ್ತರಿಸಿ

ಪ್ಯಾಂಟ್ ಶರ್ಟ್ ಧರಿಸಿ ತಂದೆಯ ಎದುರು ನಿಂತುಕೊಂಡ! ಮನೆಯಲ್ಲಿ ರಾದ್ಧಾಂತವಾಯಿತು. ತಂದೆ ಅವನನ್ನು ಮನೆಯಿಂದ ಹೊರಗೆ ಹಾಕಿ ಬಾಗಿಲು ಮುಚ್ಚಿಬಿಟ್ಟರು. ಅವನು ತಂದೆಯ ಹೆಸರಿನಲ್ಲಿ ಸಾಲ ಮಾಡಿ, ಅಕ್ಕಿ ವ್ಯಾಪಾರ ನಡೆಸಿ ಬಹಳ ದೊಡ್ಡ ವ್ಯಾಪಾರಿ ಎನಿಸಿಕೊಂಡ. ಮಹಡಿ ಮನೆ ಕಟ್ಟಿಸಿ ರಾಜವೈಭವದಿಂದ ಬಾಳತೊಡಗಿದ. ಯಾರಾದರೂ ನೆಂಟಸ್ತಿಕೆ ತೆಗೆದುಕೊಂಡು ಬಂದರೆ 'ನನಗೆ ಮದುವೆ ಬೇಡ, ಬ್ರಹ್ಮಚಾರಿಯಾಗಿ ಇರುತ್ತೇನೆ' ಎಂದು ಹೇಳುತ್ತಿದ್ದ. ಕೊನೆಗೆ ನೆಂಟಸ್ತಿಕೆ ಬರುವುದು ನಿಂತುಹೋಯಿತು. ಆದರೆ ಅವನಿಂದ ಏನಾದರೂ ಪಡೆಯುವ ಆಸೆಯಿಂದ ಅವನಲ್ಲಿ ಬರುವವರಿಗೆ ಏನೂ ಕಡಿಮೆ ಇರಲಿಲ್ಲ. ಅವನು ನೀಡುತ್ತಿದ್ದ ಬಹುಮಾನಕ್ಕೆ ಯಾವ ಕೆಲಸ ಮಾಡುವುದಕ್ಕೂ ಅವರು ತಯಾರಿರುತ್ತಿದ್ದರು.

ಒಮ್ಮೆ ಜಾತ್ರೆಯಲ್ಲಿ ಪುತ್ತುಮಾಮ ಒಬ್ಬ ಹುಡುಗಿಯನ್ನು ನೋಡಿದ. ಮೊದಲ ನೋಟಕ್ಕೇ ಅವನಿಗೆ ಅವಳಲ್ಲಿ ಪ್ರೀತಿ ಹುಟ್ಟಿತು. ಅವನು ಅವಳ ಸೋದರಮಾವನಲ್ಲಿ ಹೋಗಿ ಹೆಣ್ಣು ಕೇಳಿದ. ಅವರು ಪುತ್ತುಮಾಮನಿಗೆ ಹೆಣ್ಣು ಕೊಡಲು ಒಪ್ಪಲಿಲ್ಲ. ಅವನು ಅವಳೇ ಬೇಕೆಂದು ಹಠ ಮಾಡಿದ. ಅವರು ಅವಳಿಗೆ ಬೇರೆ ವರನನ್ನು ನೋಡಿ ಮದುವೆ ಮಾಡಿದರು. ಹೊಡೆದಾಟ ಬಡಿದಾಟ ಆಗಬಹುದೆಂದುಕೊಂಡು ಜನ ಹೆದರಿದರು. ಆದರೆ ಪುತ್ತುಮಾಮ ಜಗಳಕ್ಕೆ ಹೋಗಲೇ ಇಲ್ಲ. ರಾತ್ರೋರಾತ್ರಿ ಮದುಮಗಳನ್ನು ಎತ್ತಿಕೊಂಡು ಮನೆಗೆ ಬಂದ. ಬೆಳಿಗ್ಗೆ ಎದ್ದು ನೋಡಿದರೆ ವಧು ಪುತ್ತುಮಾಮನ ಮನೆಯಲ್ಲಿ ಇದ್ದಾಳೆ! ಅಂದುಕೊಂಡಿದ್ದನ್ನು ಪುತ್ತುಮಾಮ ಸಾಧಿಸಿಯೇ ಬಿಟ್ಟಿದ್ದ! ಅವನ ಜೊತೆ ಜಗಳ ಕಾಯುವವರು ಯಾರು? ಹೀಗೆ ಅಪಹರಿಸಿ ತಂದ ವಧುವೇ ಅನ್ನಪೂರ್ಣಕ್ಕ. ಅವಳನ್ನು ಹೆಂಡತಿಯಾಗಿಸಿದ ನಂತರ ಅವನ ಮದ ಹೆಚ್ಚಿತು. ಅವಳನ್ನು ಸರ್ವಾಲಂಕಾರ ಭೂಷಿತೆಯನ್ನಾಗಿ ಮಾಡಿ ಕಣ್ಣರೆಪ್ಪೆಯಂತೆ ನೋಡಿಕೊಂಡ. ಹೀಗೆ ಬಹಳ ವರ್ಷಗಳು ಕಳೆದವು. ವ್ಯಾಪಾರದ ಮೇಲಿನ ಶ್ರದ್ಧೆ ಕಡಿಮೆಯಾಯಿತು. ಸಾಲ ಹೆಚ್ಚಿತು. ಒಡವೆ, ಬಂಗ್ಲೆ ಕೈಬಿಟ್ಟು ಹೋದವು. ಸಾಲ ತೀರಿಸಿ ಅವರು ಚಿಕ್ಕದೊಂದು ಮನೆಯಲ್ಲಿ ವಾಸಮಾಡತೊಡಗಿದರು. ಅನ್ನಪೂರ್ಣಕ್ಕ ಹೋಲಿಗೆ, ಹಪ್ಪಳದ ಕೆಲಸ ಮಾಡಿ ಗಂಡನಿಗೆ ಬೆಂಬಲ ನೀಡಿದರು. ಅವರಿಗೆ ಮಕ್ಕಳಿರಲಿಲ್ಲ. ನೆಂಟರಲ್ಲಿ ನಾಲ್ಕೈದು ಮಕ್ಕಳಿದ್ದರು. ಅವರಲ್ಲಿ ಈ ವಾಸುದೇವನೂ ಒಬ್ಬ. ಅದಕ್ಕಾಗಿಯೇ ಅನ್ನಪೂರ್ಣಕ್ಕ ಅವನಿಗೆ ಹೊಟ್ಟೆತುಂಬಾ ರೊಂಟಸ್ ತಿನ್ನಿಸಿದ್ದು."

"ಸಾಕು, ನಿಲ್ಲಿಸಿ. ನೀವೋ ನಿಮ್ಮ ಆ ವಾಸುದೇವನೋ? ಅಂದ ಹಾಗೆ ಘಂಟೆ ಎಷ್ಟಾಯಿತು?" ಎಂದಳು ಹೆಂಡತಿ.

"ಇನ್ನೂ ಹತ್ತು ನಿಮಿಷ ಇದೆ ಕಣೆ. ಅಂದ ಹಾಗೆ ಪರಕಾಡೆಯ ಬಾಲಕೃಷ್ಣ ರೊಂಟಸ್ ತಿಂದದ್ದು ಗೊತ್ತಾ ನಿನಗೆ?" ನಾನು ಕೇಳಿದೆ.

"ಪುತ್ತುಮಾಮನನ್ನು ಬಿಟ್ಟು ಈಗ ದೇವರನ್ನು ಹಿಡಕೊಂಡ್ರಾ?"

"ಒಮ್ಮೆ ರಾತ್ರಿ ಹೊತ್ತು ಪೂಜೆ ಮುಗಿಸಿದ ಅರ್ಚಕರು ಬಾಗಿಲು ಹಾಕಿ ಹೋದರು. ರೊಂಟಸ್ ಪರಿಮಳ ಬಾಲಕೃಷ್ಣನ್ನು ಆಕರ್ಷಿಸಿತು. ಅವನು ಮೆಲ್ಲಗೆ ಚಿಲಕ ಹಾಕದ ಬಾಗಿಲನ್ನು ತೆರೆದು ವಾಸನೆಯ ಜಾಡನ್ನು ಹಿಡಿದು ಮಿನ್ನಮಾಮನ ಮನೆ ತಲುಪಿದ. ಅಲ್ಲಿ ಅಡುಗೆಮನೆಯಲ್ಲಿ ಮಕ್ಕಳು ಕುಳಿತು ರೊಂಟಸ್ ತಿನ್ನುತ್ತಿದ್ದಾರೆ. ತಾನು ಒಳಗೆ ಹೋದರೆ ಗುಟ್ಟು ಬಯಲಾಗುತ್ತದೆ. ಅಲ್ಲದೆ ಕೃಷ್ಣ ರಾತ್ರಿ ಹೊತ್ತು ರೊಂಟಸ್ ತಿನ್ನಲು ಅಲೆದಾಡುತ್ತಾನೆ ಎಂಬ ಮಾತು ಕೇಳಿಬಂದರೆ ನನ್ನ ಮಾನಕ್ಕೆ ಕುಂದಲ್ಲವೇ? ಮಿನ್ನಮಾಮನ ಪತ್ನಿ ಕಿಟಕಿ ಹತ್ತಿರವೇ ಕುಳಿತು ರೊಂಟಸ್ ಕರಿಯುತ್ತಿದ್ದಾಳೆ. ಕೃಷ್ಣ ಕಿಟಕಿಯಿಂದ ಕೈ ತೂರಿಸಿದ. ತನ್ನ ಮಕ್ಕಳಲ್ಲಿಯೇ ಯಾರೋ ಇರಬಹುದೆಂದುಕೊಂಡ ಮಿನ್ನ ಮಾಮನ ಹೆಂಡತಿ ಅವನ ಕೈಗೆ ರೊಂಟಸ್ ನೀಡಿದಳು. ಕೃಷ್ಣ ಅದನ್ನು ತಿಂದು ಮುಗಿಸಿದ. ಮತ್ತೆ ಕೈ ನೀಡಿದ. ಅವಳು ಕೊಟ್ಟಳು. ಹೀಗೆ ಹಲವು ಬಾರಿ ನಡೆಯಿತು. ಪಾತ್ರೆ ಖಾಲಿಯಾಯಿತು. ಆಗ ಅವಳಿಗೆ ತನ್ನ ಮಕ್ಕಳೆಲ್ಲಾ ಅಡುಗೆ ಮನೆಯಲ್ಲಿಯೇ ಇರುವುದು ಗಮನಕ್ಕೆ ಬಂತು. ಹೊರಗಿನವರು ಯಾರೋ ತನಗೆ ಮೋಸ ಮಾಡುತ್ತಿದ್ದಾರೆ ಎಂದು ಗೊತ್ತಾಯಿತು. ಈ ಘಟಿಂಗನನ್ನು ಹಿಡಿಯಬೇಕೆಂದು ಆಗ ತಾನೇ ಎಣ್ಣೆಯಿಂದ ತೆಗೆದ ಬಿಸಿಬಿಸಿ ರೊಂಟಸನ್ನು ತನ್ನ ಮುಂದೆ ಚಾಚಿದ ಕೈಯ ಮೇಲೆ ಇಟ್ಟಳು. ಕೃಷ್ಣನ ಕೈ ಸುಟ್ಟಿತು. ಅವನು ರೊಂಟಸನ್ನು ಅಲ್ಲಿಯೇ ಕೆಳಗೆ ಹಾಕಿ ಓಡಿಹೋದ. ಮರುದಿನ ಬೆಳಿಗ್ಗೆ ಅರ್ಚಕರು ಅಭಿಷೇಕ ಮಾಡುವಾಗ ಕೃಷ್ಣನ ಕೈಯಲ್ಲಿ ಸುಟ್ಟಗುಳ್ಳೆಗಳನ್ನು ಗಮನಿಸಿದರು! ಇವತ್ತಿಗೂ ಆ ಗುಳ್ಳೆಗಳು ಹಾಗೆಯೇ ಇವೆ ಎಂದು ಹೇಳುತ್ತಾರೆ. ಆದರೆ ಮಿನ್ನ ಮಾಮನ ಕುಟುಂಬ ಮಾತ್ರ ಸರ್ವನಾಶವಾಯಿತು. ಪಾಪ ಕೃಷ್ಣ ರೊಂಟಸ್ ತಿನ್ನುವ ಆಸೆಯಿಂದ ಕೈಸುಟ್ಟುಕೊಂಡ!"

ನಾನು ಇಷ್ಟು ಹೇಳಿ ಮುಗಿಸುವ ಹೊತ್ತಿಗೆ ಕರೆಂಟ್ ಬಂತು. "ನೋಡು ನಾನು ಹೇಳಿದ್ದು ನಿಜ ಎನ್ನುವುದಕ್ಕೆ ಸಾಕ್ಷಿ ಇದೇ. ಕರೆಂಟ್ ಬಂದು ಬೆಳಕಾಯಿತು!"

"ನೋಡಿ ನಿಮಗೆ ರೊಂಟಸ್ ಬೇಗ ತಿನ್ನಬೇಕೆಂದಿದ್ದರೆ ತಟ್ಟಿಕೊಡಿ. ಇಲ್ಲದಿದ್ದರೆ ತಡವಾದೀತು" ಎಂದು ಹೇಳುತ್ತಾ ಮಡದಿ ಒಳಗೆ ಹೋದಳು. ಇನ್ನು ಇಲ್ಲೇ ಕುಳಿತರೆ ಇವತ್ತು ನನಗೆ ರೊಂಟಸ್ ಸಿಗಲಾರದು ಎಂದುಕೊಳ್ಳುತ್ತಾ ನಾನು ಅವಳನ್ನು ಹಿಂಬಾಲಿಸಿದೆ.

(ರೊಂಟಸ್–ಅಕ್ಕಿಯ ತಿನಿಸು)

ಅನುವಾದಕರು: **ಚಂದ್ರಿಕಾ ಮಲ್ಯ**

❖ ❖ ❖❖ ❖

ಜುಜೆಯ ಪೇರಳೆ ಕಥೆ

✍ **ಮೆಲ್ವಿನ್ ರೊಡ್ರಿಗಸ್**

ಜುಜೆ, ಕಟ್ಟುಮಸ್ತಾದ ಹೃದಯವಂತ ಮನುಷ್ಯ. ಅವನು ಹೆಚ್ಚು ಕಡಿಮೆ ನಲವತ್ತು ಮಳೆಗಾಲಗಳನ್ನು ಕಂಡಿರಬಹುದು. ಇದರಲ್ಲಿ ಹದಿಮೂರು ವರ್ಷಗಳು ಅವನ ದಾಂಪತ್ಯ ಜೀವನದು. ಎಸ್ತೆಲ್ ಅವನಿಗೆ ಸರಿಯಾದ ಜೋಡಿ. ಆಕೆ ಜುಜೆಗೆ ಜೀವಕ್ಕೆ ಜೀವ ಕೊಡುವ ಮಡದಿ. ಅವರಿಗೆ ಬೀಜಕ್ಕಾಗಲೀ, ಪೈರಿಗಾಗಲೀ ಇದುವರೆಗೆ ಮಕ್ಕಳು ಹುಟ್ಟಿಲ್ಲ.

ದಾಂಪತ್ಯದ ಮೊದಲು ಮೂರು ವರ್ಷಗಳನ್ನು ಬಿಟ್ಟರೆ, ಉಳಿದ ಹತ್ತು ವರ್ಷಗಳಲ್ಲಿ ಅವನು ಹೊತ್ತ ಹರಕೆ ಯಾವುದೇ ದೇವರಿಗೆ ತಲುಪಿಲ್ಲ. ಹೊತ್ತಿಸಿದ ದೀಪ ಕವಿದ ಕತ್ತಲೆಯನ್ನು ಓಡಿಸಲು ಶಕ್ತವಾಗಲಿಲ್ಲ. ವೈದ್ಯರಿಗೆ ಕೂಡಾ ಅವರ ಅಸ್ವಸ್ಥತೆಯ ನಾಡಿ ಅಳೆಯಲು ತಿಳಿಯಲಿಲ್ಲ.

ಈ ಹತ್ತುವರ್ಷಗಳಲ್ಲಿ ಜುಜೆ ನರನಾಡಿಗಳಲ್ಲಿ ತಳಮಳಿಸಿದ. ಎಸ್ತೆಲ್ ದುಃಖಿಸಿದಳು. ಜುಜೆ ತತ್ತರಿಸಿದ. ಎಸ್ತೆಲ್ ಚಿಂದಿಯಾದಳು. ಅವರ ಪ್ರಾರ್ಥನೆಯ ಧಾರೆ ಸ್ವರ್ಗದ ಬಾಗಿಲು ತೆರೆಯುವುದರಲ್ಲಿ ಸಫಲವಾಗಲಿಲ್ಲ. ಗಳಿಸಿದ ಹಣ ವೈದ್ಯರಿಗೆ ಖರ್ಚಾಯಿತು. ವೈದ್ಯರು ಹೇಳುತ್ತಿದ್ದರು, 'ಎಸ್ತೆಲಳಲ್ಲಿ ಕೊರತೆ ಇಲ್ಲ.' ವೈದ್ಯರು ಹೇಳುತ್ತಿದ್ದರು, 'ಜುಜೆಯಲ್ಲಿ ಕೊರತೆ ಇಲ್ಲ'. ಆದರೆ ಸಮಸ್ಯೆ ಮಾತ್ರ ಬೆಳೆಯುತ್ತ ಹೋಯಿತು. ಕಳಕಳಿ ತೋರಿಸುವವರ ಸಂಖ್ಯೆಯೂ ಬೆಳೆಯಿತು! ತಲೆಚಿಟ್ಟು ಹಿಡಿಯಿತು. ರಕ್ತ ಬಿಟ್ಟುಕೊಟ್ಟರೂ ಮಕ್ಕಳು ಮಾತ್ರ ಹುಟ್ಟಲೇ ಇಲ್ಲ.

ಜುಜೆ ದಯಾಳು ಮನುಷ್ಯ. ಜುಜೆ ಕರುಣಾಳು ಮನುಷ್ಯ. ಜುಜೆ ಪ್ರೀತಿಯ ಮನುಷ್ಯ. ಆತ ನನ್ನ ನೆರೆಮನೆಯವನು. ನೆರೆಯವರ ಆಪ್ತ. ಹಟ್ಟಿಯಲ್ಲಿ ಕೋಣ, ಹಸುಗಳು, ಅಡುಗೆ ಮನೆಯಲ್ಲಿ ಬೆಕ್ಕುಗಳು, ಬಾಗಿಲಲ್ಲಿ ನಾಯಿ, ಅಂಗಳದಲ್ಲಿ ತೆಂಗು, ಬೇಲಿಯಲ್ಲಿ ಹೂಗಳು, ತೊಂಡೆ ಚಪ್ಪರ, ಭತ್ತದ ಗದ್ದೆ, ಪೇರಳೆ ಮರ ಇಷ್ಟೆಲ್ಲ ಇದ್ದೂ ಆತ ಮಾತ್ರ ದುಃಖಿ.

ಜುಜೆಯ ಬಾಯಿಗೆ ಯಾರೂ ಸಾಟಿ ಇಲ್ಲ. ಆತನ ಧ್ವನಿ ಎಷ್ಟೊಂದು ಪ್ರಸಿದ್ಧವೆಂದರೆ, ಬಚ್ಚಲಲ್ಲಿ ಸ್ನಾನ ಮಾಡುವಾಗ ಜುಜೆ ತನ್ನ ಹೆಂಡತಿಯೊಂದಿಗೆ ಹೇಳುವ ಸುದ್ದಿಯನ್ನು ನಾನು ನಮ್ಮ ಬಚ್ಚಲಲ್ಲಿ ಸ್ನಾನ ಮಾಡುವಾಗ ಕೇಳಬಹುದಿತ್ತು. ಆತನ ಬಾಯಲ್ಲಿ ಗುಟ್ಟು ಗುಟ್ಟಾಗಿ ಉಳಿಯುವುದಿಲ್ಲ. ನಡುರಾತ್ರಿಯೊಂದು ಬಿಟ್ಟು ಹಗಲು ಹೊತ್ತು ಊರಿನಲ್ಲಿ ಗುಸುಗುಸು ಇಲ್ಲವೆಂದರೆ ಒಂದೋ ಜುಜೆ ಮಲಗಿದ್ದಾನೆ ಅಥವಾ ಊರು ಬಿಟ್ಟು ಹೊರಗೆ ಹೋಗಿದ್ದಾನೆ ಎಂದು ತಿಳಿಯಬೇಕು.

ಸಾಮಾನ್ಯ ನೆರೆಮನೆಯವನಂತೆ ನಾನೊಮ್ಮೆ ಆತನ ಅಂಗಳಕ್ಕೆ ಕಾಲಿಟ್ಟಾಗ, ಪಡಸಾಲೆಯಲ್ಲಿ ಕುಳಿತು ಪೇರಳೆ ಹಣ್ಣನ್ನು ತಿನ್ನುತ್ತಿದ್ದ ಜುಜೆ ಬಾಯಲ್ಲಿದ್ದ ಪೇರಳೆ

ತುಂಡನ್ನು ಗುಳಕ್ಕನೆ ನುಂಗಿ, 'ಪೇರಳೆ ತಿಂತಿಯಾ ಆಬೆಲಾ?' ಎಂದು ಹೇಳಿದಾಗ ಬಾಯಲ್ಲಿ ನೀರೂರಿದ್ದರಿಂದ 'ಬೇಡ' ವೆನ್ನಲು ಸಾಧ್ಯವಾಗದೆ ಕೈ ಮುಂದೆ ಮಾಡಿದೆ. ಹಳದಿ ಹಳದಿ ಬಣ್ಣದ ಉಬ್ಬಿಕೊಂಡಿದ್ದ ಪೇರಳೆ ಹಣ್ಣುಗಳು ಕಣ್ಣು ಮಿಟುಕಿಸಿ ನನ್ನನ್ನೇ ನೋಡುತ್ತಿದ್ದವು. ಎಸ್ತೆಲ್ ಅಡುಗೆಮನೆಯಲ್ಲಿ ಇದ್ದಳೋ ಅಥವಾ ಗದ್ದೆಯಲ್ಲಿ ಇದ್ದಳೋ ನನಗೆ ಗೊತ್ತಿಲ್ಲ. ನನಗೆ ನೀಡಿದ ಪೇರಳೆಯನ್ನು ಅಂಗಿಗೆ ಒರಸಿಕೊಂಡು ಕಚ್ಚಿ ತಿಂದಾಗ ಅದರ ರುಚಿಯಿಂದ ನಾಲಗೆ ಮಾತ್ರವಲ್ಲ ಇಡೀ ಜೀವವೇ ಕುಣಿಯಿತು.

"ಇಲ್ಲೇ ಕುತ್ಕೋ ಆಬೆಲಾ, ನಿಮ್ಮ ಮನೆಯವರು ಸರಿಪಳ್ಳಕ್ಕೆ ಬಂದು ಹತ್ತು ವರ್ಷ ಆಗಿರಬೇಕು. ನಿಮಗೆ ಈ ಪೇರಳೆ ಕಥೆ ಗೊತ್ತಿರಲಿಕ್ಕಿಲ್ಲ" ಎಂದು ಜುಜೆ ಹೇಳಿದಾಗ ಅದನ್ನು ಕೇಳುವ ಮನಸ್ಸಾಯಿತು.

ಒಂದು ಕಾಲದಲ್ಲಿ ನಾವು ನೀರ್‌ಮಾರ್ಗದಲ್ಲಿ ಬಾಡಿಗೆಮನೆಯಲ್ಲಿ ಇದ್ದೆವು. ನನ್ನ ತಂದೆಯವರು ನಾನು ಕೆಲಸಕ್ಕೆ ಸೇರಿ ಎಂಟು ವರ್ಷಗಳಾದ ಬಳಿಕ ಜುಜೆಯ ಆಸ್ತಿಯ ಹತ್ತಿರ ಚಿಕ್ಕ ಜಾಗವನ್ನು ಕೊಂಡು ಮನೆ ಕಟ್ಟಿಸಿದರು. ಕಳೆದ ಹತ್ತು ವರ್ಷಗಳಲ್ಲಿ ಜುಜೆ ಸರಿಪಳ್ಳದ ಪ್ರತಿಯೊಂದು ವಿಷಯವನ್ನು ನನ್ನ ಮುಂದೆ ಬಿಡಿಸಿ ಹೇಳಿದ್ದಾನೆ. ಹಾಗೆಂದು ಈ ಪೇರಳೆಯ ಕಥೆ ಯಾಕೆ ಗುಟ್ಟಾಗಿ ಉಳಿಯಿತು ಎಂದು ನನಗೆ ತಿಳಿಯಲಿಲ್ಲ. ಹಾಗಾಗಿ ಅದನ್ನು ಕೇಳಲು ನನ್ನ ಆಸೆ ಗರಿಗೆದರಿತು.

"ಆಗ ನನಗೆ ಹದಿಮೂರು ವರ್ಷವಾಗಿರಬಹುದು. ನಾನೊಬ್ಬ ಉಂಡಾಡಿ ಹುಡುಗ." ಜುಜೆ ಹೇಳಲು ಪ್ರಾರಂಭಿಸಿದ. "ಎಂಟನೆಯ ಕ್ಲಾಸಿನಲ್ಲಿದ್ದೆ. ಇಗರ್ಜಿಯದ್ದಲ್ಲ, ಮಾದ್ರಿಗಳ ಸೇಕ್ರೆಡ್ ಹಾರ್ಟ್ ಶಾಲೆಗೆ ಹೋಗುತ್ತಿದ್ದೆ. ಆಗ ಈಗಿನ ಸಿಸ್ಟರ್ ಯಾರೂ ಇರಲಿಲ್ಲ. ಮುದುಕಿ ಸಿಸ್ಟರ್ ಜುವಾಂವ್ ಕೂಡಾ ಇರಲಿಲ್ಲ. ಸಿಸ್ಟರ್ ಜೆನೆವೀವ್, ಸಿಸ್ಟರ್ ಮೀರಿಯಮ್, ಸಿಸ್ಟರ್ ತೊಮಾಸ್– ಈ ಮೂವರು ಕಲಿಸುತ್ತಿದ್ದರು ಮತ್ತು ಸಿಸ್ಟರ್ ಮೇರಿ ಜೋನ್ ನಮ್ಮ ಹೆಡ್‌ಸಿಸ್ಟರ್. ಈ ನಾಲ್ಕೂ ಸಿಸ್ಟರುಗಳು ಇಗರ್ಜಿ ಶಾಲೆಯಲ್ಲಿ ಕಲಿಸುತ್ತಿದ್ದ ಸಿಸ್ಟರ್‌ಗಳ ಜೊತೆಯಲ್ಲಿ ಕಾನ್ವೆಂಟಿನಲ್ಲಿ ಇರುತ್ತಿದ್ದರು.

ನಾವು ಸಿಸ್ಟರ್ ಮೇರಿ ಜೋನ್‌ರನ್ನು 'ಹೆಗ್ಗಣ' ವೆಂದು ಕರೆಯುತ್ತಿದ್ದೆವು. ಒಮ್ಮೆ ಒಬ್ಬ ಹುಡುಗನ ಕಳ್ಳತನವನ್ನು ಹಿಡಿಯಲು ಅವರು ತಮ್ಮ ಭಾರೀ ದೇಹವನ್ನು ಮೇಜಿನ ಕೆಳಗೆ ಅಡಗಿಸಿ ಕುಳಿತಿದ್ದರಂತೆ. ಹೀಗಾಗಿ ಅವರಿಗೆ ಈ ಅಡ್ಡಹೆಸರು ಬಂತು.

ಸಿಸ್ಟರ್ ಮೇರಿ ಜೋನ್‌ಗೆ ನಾನೆಂದರೆ ಪಂಚಪ್ರಾಣ. ಅಪರೂಪಕ್ಕೊಮ್ಮೆ ಅವರು ನನಗೆ ಪೆಪರ್‌ಮಿಂಟ್ ಕೊಡುತ್ತಿದ್ದರು. ಕಾನ್ವೆಂಟಿನಲ್ಲಿ ರಾತ್ರಿ ಬಿಟ್ಟರೆ ಹಗಲು ಹೊತ್ತು ನನಗೆ ಯಾವುದೇ ಕಟ್ಟುಪಾಡು ಇರಲಿಲ್ಲ. ನಾನು ಮಾದ್ರಿಗಳ ಎಷ್ಟೋ ಬಿಟ್ಟಿಚಾಕ್ರಿಗಳನ್ನು ಮಾಡುತ್ತಿದ್ದೆ. ಆದುದರಿಂದ ನನಗೆ ಪಪ್ಪಾಯಿ ಸೀಳು, ಮಾವಿನ ಹೋಳು, ಕಿತ್ತಳೆ ಬೀಜ, ಹಲಸಿನ ಸೋಳೆ, ಮಾತ್ರವಲ್ಲ ಹಬ್ಬಹರಿದಿನಗಳಲ್ಲಿ ಮಾದ್ರಿಗಳ ಔತಣ ಮುಗಿದ ನಂತರ ಊಟವೂ ಸಿಗುತ್ತಿತ್ತು. ಹಾಗೆಂದು ನಮ್ಮ ಮನೆಯಲ್ಲಿ ಊಟಕ್ಕೆ ಗತಿ ಇರಲಿಲ್ಲವೆಂದಲ್ಲ. ಆದರೆ ಮಾದ್ರಿಗಳ ತಿನಿಸಿನಲ್ಲಿ ಏನೋ ಒಂದು ಮಜಾ ಮತ್ತು ಖುಷಿ ದೊರೆಯುತ್ತಿತ್ತು.

ಆಗ ಕಾನ್ವೆಂಟಿನ ಹಿತ್ತಲಲ್ಲಿ ತುಂಬಾ ಮರಗಳಿದ್ದವು. ಈಗ ಸಾಕಷ್ಟು ಮರಗಳನ್ನು ಕಡಿದು ಹಾಕಲಾಗಿದೆ. ಕೆಲವು ಸಾವಿನಂಚಿನಲ್ಲಿ ಇವೆ. ಮಾದ್ರಿಗಳ ಟಾಯ್ಲೆಟ್‌ನ ಹಿಂದೆ ಎರಡು ಪೇರಳೆ ಮರಗಳಿದ್ದವು. ಮರದ ಕೊಂಬೆಗಳು ಟಾಯ್ಲೆಟಿನ ಮಾಡಿನ ಮೇಲೆ ಬಾಗಿಕೊಂಡಿದ್ದವು. ಅದರಲ್ಲಿ ರುಚಿಯಾದ ಪೇರಳೆ ಹಣ್ಣುಗಳು. ಈಗ ನೀನು ತಿನ್ನುತ್ತಿರುವ ಪೇರಳೆಯದೇ ರುಚಿ. ಅದನ್ನು ಹೋಳು ಮಾಡಿ ಉಪ್ಪು ಹಚ್ಚಿ ತಿಂದರೆ ಭಾರೀ ಮಜ. ಇಷ್ಟಿಷ್ಟು ದೊಡ್ಡ ಪೇರಳೆಹಣ್ಣುಗಳು. ಒಳಗೆ ಬೀಜ ತೀರಾ ಚಿಕ್ಕದು. ತಿನ್ನುವಾಗ ಹಲ್ಲಿಗೆ ಸಿಕ್ಕಿಕೊಳ್ಳುತ್ತಿರಲಿಲ್ಲ.

ರಾಶಿ ರಾಶಿ ಪೇರಳೆಯಾಗುತ್ತಿತ್ತು. ನಮಗೆ, ಮಾದ್ರಿಗಳ ಮಕ್ಕಳಿಗೆ ಮಾತ್ರ ಆ ಪೇರಳೆ ಹಣ್ಣುಗಳನ್ನು ತಿಂದಷ್ಟು ಸಾಕಾಗುತ್ತಿರಲಿಲ್ಲ. ಆದುದರಿಂದ ಮೊದಲು ಮರವನ್ನು ಅಲುಗಾಡಿಸಲು ಪ್ರಾರಂಭಿಸಿದೆವು. ಆಮೇಲೆ ಮೆಲ್ಲಗೆ ಮರವನ್ನೇರಲು ಶುರು ಮಾಡಿದೆವು. ಧೈರ್ಯ ಹೆಚ್ಚಿದಂತೆ ಕಿತ್ತ ಹಣ್ಣುಗಳನ್ನು ಟಾಯ್ಲೆಟಿನ ಮಾಡಿನ ಮೇಲೆ ಕುಳಿತು ತಿನ್ನತೊಡಗಿದೆವು.

"ಒಂದು ದಿನ ಪಿಲ್‌ಚ್ಯಾಣ–ನಿನಗೆ ಅವನ ಪರಿಚಯವಿಲ್ಲ–ಬೆಟ್ಟುಗದ್ದೆಯವನು, ಮರಹತ್ತಿದ. ಪೇರಳೆ ಕಿತ್ತು ಹೆಂಚಿನ ಮೇಲೆ ಕಾಲೂರಿದಾಗ ಹೆಂಚು ಒಡೆಯಿತು. ಒಳಗೆ ಏನೋ ಮಾಡುತ್ತಿದ್ದ ಯಾವುದೋ ಮಾದ್ರಿಯೊಬ್ಬರ ತಲೆಯ ಮೇಲೆ ಒಡೆದ ಹೆಂಚು ಬಿದ್ದು ಗಾಯವಾಯಿತು. ಬೊಬ್ಬೆ ಕೇಳಿದ ಫಿಲ್‌ಚ್ಯಾಣ ಹಾರಿ ಓಡುವಾಗ ಇನ್ನೂ ನಾಲ್ಕೈದು ಹೆಂಚುಗಳು ಪುಡಿಯಾದವು.

ಮಾದ್ರಿಯವರು ಮಾತ್ರ ಲೆಕ್ಕ ಮಾಡಿ ಐದು ದಿನಗಳಲ್ಲಿ ಟಾಯಲೆಟಿನ ಹಿಂದೆ ಇದ್ದ ಪೇರಳೆ ಮರವನ್ನು ಕತ್ತರಿಸಿಬಿಟ್ಟರು. ನನಗೆ ಬೇಜಾರಾಯಿತು. ಹೊಟ್ಟೆ ಉರಿಯಿತು. ನಾಲಗೆ ಚುರ್ರೆಂದಿತು. ಇನ್ನು ಪೇರಳೆಗೆ ಎಲ್ಲಿ ಹೋಗುವುದು ಎಂಬ ಚಿಂತೆಯಾಯಿತು.

ಹಾಗೆಂದು ಮಾದ್ರಿಯವರ ಹಿತ್ತಲಲ್ಲಿ ಬೇರೆ ಪೇರಳೆ ಮರಗಳು ಇರಲಿಲ್ಲವೆಂದಲ್ಲ. ಇದ್ದವು. ಪೇರಳೆಯೂ ಧಾರಾಳವಾಗಿ ಆಗುತ್ತಿದ್ದವು. ಆದರೆ ಅದನ್ನು ಹತ್ತಿ ಪೇರಳೆ ಕೀಳಲು ಧೈರ್ಯ ಸಾಲುತ್ತಿರಲಿಲ್ಲ. ಯಾಕೆಂದರೆ ಆ ಮರಗಳು ಮಾದ್ರಿಗಳ ಮನೆಯ ಮುಂಭಾಗದಲ್ಲಿದ್ದವು.

ಒಂದು ದಿನ, ಇಗರ್ಜಿಯ ಹಬ್ಬದ ಸಮಯ, ಬಲಿಪೂಜೆ ಮುಗಿಸಿ ಮನೆಗೆ ಹೋಗುವ ದಾರಿಯಲ್ಲಿ ಕಾನ್ವೆಂಟಿಗೆ ಭೇಟಿ ನೀಡಿದ ಊರಿನ ಮಹನೀಯರಿಗೆ ಸಿಸ್ಟರ್ ಮೇರಿ ಜೋನ್ ಅವರು ಊರಿನಲ್ಲಿ ಈಗಾಗಲೇ ಹೆಸರುವಾಸಿಯಾಗಿದ್ದ ಪೇರಳೆ ಗಿಡಗಳನ್ನು ಕೊಡುತ್ತಿದ್ದರು. ಸುಮಾರು ಏಳೆಂಟು ಮಹನೀಯರು ಮತ್ತು ಅವರ ಹೆಂಡತಿ, ಮಕ್ಕಳು ಅಲ್ಲಿದ್ದರು. ನಾನು ಕೂಡಾ ದೂರದಿಂದಲೇ ನನಗೂ ಒಂದು ಗಿಡ ಸಿಗಬಹುದೆಂದು ಉಗುಳು ನುಂಗುತ್ತಾ ಹಿಂದೆ ಮುಂದೆ ಅಲೆದಾಡಿದೆ. ಯಾರೂ ನನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇ ಇಲ್ಲ.

ಬಂದ ಮಹನೀಯರೆಲ್ಲಾ ನಗುತ್ತಾ, ಕೈ ಹಿಡಿದು, ಕೈಬೀಸಿ ಹೋದರು. ಹೋಗುವಾಗ ಗಿಡಗಳನ್ನು ತೆಗೆದುಕೊಂಡು ಹೋದರು. ಅವರು ಹೋದ ಬಳಿಕ ಸಿಸ್ಟರ್

ಮೇರಿ ಜೋನ್ ಕೈ ತೊಳೆಯಲು ನೀರಿನ ಟ್ಯಾಂಕಿಯ ಹತ್ತಿರ ಹೋದರು. ನಾನು ಅವರನ್ನು ಹಿಂಬಾಲಿಸಿ ಹೋಗಿ ಕೇಳಿದೆ,

"ನನಗೂ ಒಂದು ಗಿಡ ಕೊಡಿ ಸಿಸ್ಟರ್."

"ಏನು ಹೇಳ್ತಿಯೊ ಹುಡುಗ? ಪೇರಳೆ ಕದ್ದು ತಿಂದದ್ದು ಸಾಕಾಗದೆ ಗಿಡ ಬೇರೆ ಬೇಕಾ ನಿಂಗೆ? ಇನ್ನು ಮುಂದೆ ಮಿಡಿ ಕೂಡಾ ಸಿಗಲಿಕ್ಕಿಲ್ಲ" ಸಿಸ್ಟರ್ ನನ್ನ ಕಡೆಗೆ ನೋಡದೆ ಸೀದಾ ಕಾನ್ವೆಂಟಿನ ಒಳಗೆ ಹೋದರು.

ಆ ಕ್ಷಣ ನನಗೆ ದುಃಖವಾಯಿತು. ಟಾಯ್ಲೆಟಿನ ಹೆಂಚನ್ನು ಒಡೆದದ್ದು ನಾನು ಎಂದು ಸಿಸ್ಟರ್ ತಿಳಿದುಕೊಂಡಿರಬೇಕು ಎಂದುಕೊಂಡೆ. ಒಂದು ಗಿಡ ಕೊಟ್ಟರೆ ಅವರ ಗಂಟೇನು ಹೋಗುತ್ತೆ? ಸಿಟ್ಟು ಬಂತು. ಬಾಲ್ಯದ ಸಿಟ್ಟು. ಸಿಸ್ಟರ್ ಮೇರಿ ಜೋನಾಳನ್ನು ಹದಿನೈದು ಸಲ 'ಹೆಗ್ಗಣ' ಎಂದೆ. ಇಪ್ಪತ್ತು ಸಲ 'ದೊಡ್ಡ ಹೆಗ್ಗಣ' ಎಂದೆ. ಇಪ್ಪತ್ತೈದು ಸಲ 'ಥೇಟ್ ಹೆಗ್ಗಣ' ಎಂದೆ. 'ಟಾಯಲೆಟಿನ ಎಲ್ಲಾ ಹೆಂಚುಗಳು ಒಡೆದು ತಲೆಯ ಮೇಲೆ ಬೀಳಬೇಕಿತ್ತು' ಎಂದುಕೊಂಡೆ.

ಮನೆಗೆ ಹಿಂದಿರುಗುವಾಗಲೂ ತಳಮಳ. ಹಬ್ಬದ ಊಟ ಮಾಡುವಾಗಲೂ ಅದೇ ತಳಮಳ. ಊಟ ಮಾಡಿ ಹೊಟ್ಟೆ ಭಾರವಾಗಿ ಮನೆಯವರೆಲ್ಲರೂ ಮಲಗಿ ಗೊರಕೆ ಹೊಡೆಯುತ್ತಿದ್ದರೆ ನನಗೆ ಮಾತ್ರ ಚಿಂತೆ. ಸಿಟ್ಟನ್ನು ತೀರಿಸಿಕೊಳ್ಳುವ ಚಿಂತೆ. ಒಂದು ಆಲೋಚನೆ ಹೊಳೆಯಿತು.

ಪ್ರತಿದಿನ ಬೆಳಿಗ್ಗೆ ಆರೂವರೆ ಗಂಟೆಗೆ ಮಾದ್ರಿಗಳೆಲ್ಲ ಪೂಜೆಗಾಗಿ ಇಗರ್ಜಿಗೆ ಹೋಗುತ್ತಾರೆ. ನಾನೂ ಹೋಗುತ್ತೇನೆ. ಮರುದಿನ ಬೆಳಿಗ್ಗೆ ಮಾತ್ರ ನಾನು ಇಗರ್ಜಿಗೆ ಹೋಗಲಿಲ್ಲ. ಸೀದಾ ಮಾದ್ರಿಯವರ ಹಿತ್ತಲು ಹೊಕ್ಕೆ. ಹಿತ್ತಲಲ್ಲಿ ಅಲ್ಲಿ ಇಲ್ಲಿ ಚಿಗುರಿದ್ದ ಪೇರಳೆ ಗಿಡಗಳನ್ನೆಲ್ಲಾ ಒಂದೂ ಬಿಡದೆ ಬೇರುಸಹಿತ ಕಿತ್ತುಕೊಂಡೆ. ಸುಮಾರು ಹನ್ನೆರಡು ಹದಿಮೂರು ಇದ್ದುವೋ ಏನೋ, ಯಾರಿಗೊತ್ತು. ಪೂಜೆ ಮುಗಿಯುವವರೆಗೆ ಕಾದು ನಿಂತು ಮನೆ ತಲುಪಿದೆ. ಮನೆಯ ಹಿಂದೆ ಮೆತ್ತಗಿರುವ ಜಾಗ ನೋಡಿ ಹಾರೆಯಿಂದ ಮಣ್ಣನ್ನು ಅಗೆದು ಒಂದು ಗಿಡವನ್ನು ನೆಟ್ಟೆ. ಅದರ ಬುಡಕ್ಕೆ ಬಚ್ಚಲೊಲೆಯ ಒಂದಿಷ್ಟು ಬೂದಿ ಮತ್ತು ನೀರು ಹಾಕಲು ಮರೆಯಲಿಲ್ಲ. ಸಂಜೆ ಶಾಲೆಯಿಂದ ಮರಳಿ ಬಂದವನೇ, ಹಿರಿಯರಿಗೆ ತಿಳಿಯದಂತೆ ಫಿಲ್‌ಚ್ಯಾಣನಿಂದ ಹಿಡಿದು ನೆರೆಕರೆಯ ನನ್ನ ಎಲ್ಲಾ ಮಿತ್ರರಿಗೂ 'ಮಾದ್ರಿಯ ಗಿಡ'ವೆಂದು ಹೇಳಿ ಒಂದೊಂದು ಕೊಟ್ಟೆ. ಮಾದ್ರಿಗಳಿಗೆ ತಿಳಿಯಬಾರದು ಎಂದು ತಾಕೀತು ಮಾಡಿದೆ.

ಗಿಡವನ್ನು ಚೆನ್ನಾಗಿ ಬೆಳೆಸಿದೆ. ಪ್ರತಿನಿತ್ಯ ನೀರು ಹಾಕಿದೆ. ಅಪರೂಪಕ್ಕೊಮ್ಮೆ ಗೊಬ್ಬರ ಹಾಕಿದೆ. ಗಿಡ ಬೆಳೆದು ದೊಡ್ಡದಾಯಿತು. ದೊಡ್ಡದಾಗಿ ಮರವಾಯಿತು.

ನಂತರ ನನ್ನ ಎಸೆಸ್ಸೆಲ್ಸಿ ಮುಗಿಯಿತು. ನಾನು ಕಾಲೇಜು ಸೇರಿದೆ. ಎರಡೂವರೆ ಮೂರು ವರ್ಷಗಳಲ್ಲಿ ಪೇರಳೆ ಮರದಲ್ಲಿ ಹೂ ಬಿಟ್ಟಿತು. ಹೂ ಮಿಡಿಯಾಯಿತು. ಮಿಡಿ ಕಾಯಿಯಾಯಿತು. ಕಾಯಿ ಹಣ್ಣಾಗಿ ತಿನ್ನುವಂತಾಯಿತು. ಫಿಲ್‌ಚ್ಯಾಣ ಮಾತವಲ್ಲ, ಗೋಸಾಲಾ, ಗಸ್ಪಾರಿನ್ ಕೂಡಾ ಮೊದಲ ಪೇರಳೆಯನ್ನು ನನ್ನೊಂದಿಗೆ ಹಂಚಿ ತಿಂದರು.

ಅದೇ ಬಣ್ಣ.. ಅದೇ ಪರಿಮಳ..ಅದೇ ಹಿಂದಿನ ರುಚಿ..ನಾಲಗೆ ರುಚಿಯನ್ನು ಸವಿಯುವಾಗ ಮನಸ್ಸಿನಲ್ಲಿ ಮಾದ್ರಿಗಳ ಪೇರಳೆಮರ ಏರಿದ ನೆನಪು. ಮಾಡಿನ ಮೇಲೆ ಏರಿ ಪೇರಳೆ ತಿಂದ ನೆನಪು. ಹೆಂಚು ಒಡೆದುಹೋದದ್ದು. ಒಡೆದು ಮಾದ್ರಿಯ ತಲೆಯ ಮೇಲೆ ಬಿದ್ದ ನೆನಪು. ಮಾದ್ರಿ ಪೇರಳೆ ಮರವನ್ನು ಕಡಿದ ನೆನಪು. ಪೇರಳೆ ಗಿಡಗಳನ್ನು ಕದ್ದು ತಂದ ನೆನಪು...

ಈ ಎಲ್ಲ ನೆನಪುಗಳ ನಡುವೆ ನೆರೆಯವರು ಪೇರಳೆ ತಿನ್ನತೊಡಗಿದರು. ಕೆಲವೊಮ್ಮೆ ನನಗೂ ಪೇರಳೆ ಕೊಡುತ್ತಿದ್ದರು. ಪ್ರತಿಸಲ ಅವರು ಕೊಟ್ಟ ಪೇರಳೆ ತಿನ್ನುವಾಗ ನಾನು ಮಾತ್ರ ಒಳಗಿಂದೊಳಗೆ ಕಸಿವಿಸಿಗೊಳ್ಳುತ್ತಿದ್ದೆ. ನನ್ನ ಪೇರಳೆ ಮರದಲ್ಲಿ ಪೇರಳೆ ಯಾಕೆ ಆಗಲಿಲ್ಲ ಎಂದು ಯೋಚಿಸುತ್ತಿದ್ದೆ. ಮಾದ್ರಿಯವರ ಶಾಪ ಇರಬಹುದೇನೋ ಎಂದು ಯೋಚಿಸಿದೆ. ಹೀಗೆ ಯೋಚಿಸುತ್ತಿದ್ದಂತೆ ಮತ್ತೆ ಮಾದ್ರಿಗಳ ಮೇಲೆ ಸಿಟ್ಟು ಬಂದು ಮೈಯೆಲ್ಲಾ ಉರಿಯಿತು. ನೆರೆಯ ಎಲ್ಲಾ ಪೇರಳೆ ಮರಗಳಲ್ಲಿ ನನ್ನ ಮರ ಹೆಚ್ಚು ಸೊಕ್ಕಿತ್ತು. ಅದರ ಕೊಂಬೆ ನಮ್ಮ ಟಾಯ್ಲೆಟಿನ ಮಾಡಿನ ಮೇಲೆಯೂ ಹರಡಿತ್ತು. ಮರಕ್ಕೆ ಹುಳ ಹಿಡಿದಿರಬಹುದೇ ಎಂದು ಚಿಂತಿಸಿ ಚಿಂತಿಸಿ ನಾನು ಬಡವಾದೆ. ಹಾಗೆಂದು ನನ್ನ ನೋವನ್ನು ನನ್ನ ನೆರೆಯವರ ಮುಂದೆ ತೋರ್ಪಡಿಸಲಿಲ್ಲ. ದಿನಗಳು ಓಡಿದವು. ತಿಂಗಳು ಉರುಳಿದವು. ವರ್ಷಗಳೇ ಕಳೆದವು. ನನ್ನ ಮತ್ತು ಎಸ್ತೆಲಾಳ ಮದುವೆಯೂ ಆಯಿತು. ನೆರೆಯವರು ಪೇರಳೆ ಹಲ್ವಾ ಮಾಡಲು ಪ್ರಾರಂಭಿಸಿದರು. ಹಾಗೆಂದು ನನ್ನ ಪೇರಳೆ ಮರ ಹೂವನ್ನು ಕೂಡಾ ಬಿಡಲಿಲ್ಲ.

ಒಂದು ದಿನ 'ಬೆಲ್ಲ ನೀರಿನ ಶಿಲಾ' ಬಂದ. ಶಿಲಾನ ಪರಿಚಯ ನಿನಗಿರಲಿಕ್ಕಿಲ್ಲ. ನೀವು ಇಲ್ಲಿಗೆ ಬರುವ ಮೊದಲೇ ಅವನು ಗತಿಸಿದ್ದಾನೆ. ನಮ್ಮ ವಠಾರದಲ್ಲಿ ತೆಂಗಿನಕಾಯಿ ತೆಗೆಯುವುದರಲ್ಲಿ ಶಿಲಾ ತುಂಬಾ ಹೆಸರುವಾಸಿಯಾಗಿದ್ದ ಮನುಷ್ಯ. ತೆಂಗಿನಮರದ ಬುಡ ಬಿಡಿಸಲು, ಅದಕ್ಕೆ ಸೊಪ್ಪು, ಉಪ್ಪು, ಗೊಬ್ಬರ ಹಾಕಲು, ಅಂಗಳದಲ್ಲಿ ಭತ್ತದ ತಿರಿ ಕಟ್ಟಲು, ಮಣ್ಣು ಅಗೆಯಲು, ಸಾಲು ಮಾಡಿ ಅಗತ್ಯವಿದ್ದರೆ ನೀರು ಹರಿಸಲು– ಈ ಎಲ್ಲಾ ಕಾರ್ಯಗಳಿಗೆ ನೆರೆಮನೆಯವರು ಶಿಲಾನನ್ನೇ ಕರೆಯುತ್ತಿದ್ದರು. ಕೆಲಸ ಮಾಡಿ ಸುಸ್ತಾದಾಗ ಅವನು ಎಲ್ಲಾ ಮನೆಯವರಲ್ಲಿ ನೀರಿನೊಂದಿಗೆ ಬೆಲ್ಲ ಕೇಳಿ ತಿನ್ನುತ್ತಿದ್ದರಿಂದ ಅವನಿಗೆ 'ಬೆಲ್ಲ ನೀರಿನ ಶಿಲಾ' ಎಂಬ ಹೆಸರು ಬಂತು. ಶಿಲಾಗೆ ನನ್ನ ಪೇರಳೆ ಮರದ ಕಥೆ ಹೇಳಿದೆ. ಈಗಲೂ ಈ ಮರ ಯಾಕೆ ಫಲ ಕೊಡುತ್ತಿಲ್ಲ ಎಂದು ವಿಚಾರಿಸಿದೆ. ಇಂತಹ ಮರಗಳಿಗೆ ಹಿಂದಿನವರು ಮಾಡುತ್ತಿದ್ದ ಒಂದು ಪದ್ಧತಿಯನ್ನು ಆತ ನನಗೆ ವಿವರಿಸಿದ. ಅಂತೆಯೇ ನಾನು ಆ ರಾತ್ರಿ ಎದ್ದುಬಂದೆ. ಗಂಟೆ ಸುಮಾರು ಒಂದೂವರೆ ಆಗಿರಬಹುದು. ಮನೆಯವರೆಲ್ಲ ಮಲಗಿದ್ದರು. ನಾನು ಉಟ್ಟಬಟ್ಟೆಗಳನ್ನು ಕಳಚಿದೆ. ಅಡುಗೆಮನೆಯಲ್ಲಿದ್ದ ಕತ್ತಿಯನ್ನು ಕೈಗೆತ್ತಿಕೊಂಡೆ. ಸದ್ದು ಮಾಡದೆ, ಬಾಗಿಲು ತೆರೆದು ಇದ್ದ ಸ್ಥಿತಿಯಲ್ಲಿಯೇ ಮನೆಯ ಹಿಂಭಾಗಕ್ಕೆ ಹೋಗಿ ಪೇರಳೆ ಮರದ ಮುಂದೆ ಕತ್ತಿಯನ್ನು ಎತ್ತಿಹಿಡಿದು ನಿಂತುಕೊಂಡೆ.

'ಏನಂತ ತಿಳ್ಕೊಂಡಿದ್ದಿಯಾ ಪಡಪೋಶಿ? ನಿನ್ನ ಬುಡಕ್ಕೆ ಹಾಕಿದ್ದು ಹೆಚ್ಚಾಯಿತು. ನಿನಗೆ ಪೇರಳೆ ಕೊಡಲು ಆಗುವುದಿಲ್ಲವೇನು! ನನ್ನನ್ನು ಗುರಾಯಿಸುತ್ತಾ ಬದುಕಬಹುದು

ಎಂದು ತಿಳಿಯಬೇಡ. ನಿನ್ನನ್ನು ಬೆಂಡೆಬ್ಬಿಸಿ ಕಡಿದು ಬಿಸಾಡುತ್ತೇನೆ, ನೋಡು. ಇನ್ನು ಮೂರೇ ತಿಂಗಳು ಅವಧಿ ನಿನಗೆ' ಎನ್ನುತ್ತಾ ಕತ್ತಿಯನ್ನು ಬೀಸಿ ಮರವನ್ನು ಬೈದೆ. ಪೇರಳೆ ಮರ ನನ್ನನ್ನೇ ದಿಟ್ಟಿಸಿ ನೋಡುತ್ತಿರುವಂತೆ ನಾನು ಆ ಕತ್ತಲೆಯಲ್ಲಿ ಕಣ್ಣರಳಿಸಿದೆ. ಎಡಗೈಯಿಂದ ಮರವನ್ನು ಅಲುಗಾಡಿಸುವಾಗ ನನ್ನ ಕೈಸ್ಪರ್ಶಕ್ಕೆ ಮರ ಕಂಪಿಸಿದಂತೆ ಭಾಸವಾಯಿತು.

ಶಿಲಾನ ಹೇಳಿಕೆಯಲ್ಲಿ ಸತ್ಯವಿತ್ತು. ಪೇರಳೆಮರವನ್ನು ಬೈದು ಎರಡೂವರೆ ತಿಂಗಳು ಕಳೆಯುವಷ್ಟರಲ್ಲಿ ಅದು ಹೂ ಬಿಟ್ಟಿತು. ಮತ್ತೆ ಕೆಲವು ದಿನಗಳಲ್ಲಿ ಮರದ ತುಂಬಾ ಹೂ. ಹೂ ಕಾಯಿಯಾದಾಗ ನನ್ನ ಜೀವ ಸಂತೋಷದಿಂದ ಗಿಳಿಯಾಗಿ ಪೇರಳೆಗೆ ಮುತ್ತಿಕೊಂಡಿತು.

ಈಗೇನು ಹದಿಮೂರು ವರ್ಷಗಳಾಗಿರಬಹುದು ಅಬೆಲಾ, ಈ ಒಂದು ಮರ ನೀಡಿದ ಪೇರಳೆ ಹಣ್ಣುಗಳಿಗೆ ಲೆಕ್ಕವೇ ಇಲ್ಲ. ಇನ್ನೊಂದು ತಿನ್ನು" ಎಂದು ಹೇಳಿದ ಜುಜೆ ನನ್ನ ಕೈಗೆ ಇನ್ನೊಂದು ಹಣ್ಣು ನೀಡಿದ.

ಮರ ಸೊಕ್ಕಿದರೆ ಅದಕ್ಕೆ ಫಲ ಸಿಗುವುದಿಲ್ಲ. ಆದ್ದರಿಂದ ಅದನ್ನು ಬೈಯಬೇಕಾಗುತ್ತದೆ. ಹಿರಿಯರ ಮಾತು ಸುಳ್ಳಲ್ಲ ಎಂದು ಜುಜೆ ನನಗೆ ಪೇರಳೆ ಕತೆ ಹೇಳಿದ. ಕಥೆ ನನಗೆ ವಿಶೇಷವೆಂದು ಕಂಡಿತು. ಪ್ರಕೃತಿಯ ಅನೇಕ ರಹಸ್ಯಗಳ ಬಗ್ಗೆ ಮನುಷ್ಯ ಇನ್ನೂ ಶೋಧನೆ ಮಾಡಿಲ್ಲ. ಅವು ನಿಗೂಢವಾಗಿಯೇ ಉಳಿದಿವೆ. ಮನುಷ್ಯ ವೃತ್ತಿಯಲ್ಲಾಗಲೀ, ಮನೆಯಲ್ಲಾಗಲೀ ಹಿರಿಯರಿಗೆ ಹೆದರಿ ತನ್ನ ಕೆಲಸ ಮಾಡುತ್ತಾನೆ. ಮರವೂ ಹೀಗೇ ಇರಬಹುದು ಎಂದು ನಾನು ತಿಳಿದುಕೊಂಡೆ. ಪೇರಳೆ ತಿಂದು ಜುಜೆಯ ಹಿತ್ತಲಿನ ಬೇಲಿಯನ್ನು ತಲುಪಿದಾಗ ದೂರದ ಹೊಲದಲ್ಲಿದ್ದ ಎಸ್ತೆಲ್ ಕಾಣಿಸಿದಳು. ನನ್ನನ್ನು ಕಳುಹಿಸುವ ಸಲುವಾಗಿ ಜುಜೆ ಮಾತನಾಡುತ್ತಾ ಬೇಲಿಯ ಸಮೀಪ ಬಂದಿದ್ದ.

"ಜುಜೆ, ನಿನಗೊಂದು ಮಾತು ಹೇಳಲಾ?" ಮೆಲುಧ್ವನಿಯಲ್ಲಿ ನಾನು ಕೇಳಿದೆ.

"ಏನು?"

"ಹೇಳಿದ್ರೆ ಬೇಜಾರು ಮಾಡಬಾರದು"

"ನಾನು ಇಜಾರು ಹಾಕಿದ್ದೇನೆ"

"ಆ ಇಜಾರು ಕಳಚಿ, ಕೈಯಲ್ಲಿ ಬೆತ್ತ ಹಿಡಿದು ನೀನು ಎಸ್ತೆಲ್‌ಳಿಗೆ ಒಮ್ಮೆ ಬೈಯ್ಯಬಾರದು ಯಾಕೆ? ನಿನಗೆ ಮಕ್ಕಳಾಗಬಹುದು."

ನಾನು ಹೇಳಿದ್ದು ಇಷ್ಟೇ. ಜುಜೆಯ ತಲೆಯ ಮೇಲೆ ಸಿಡಿಲು ಬಡಿದಂತಾಯಿತು. ಅವನು ಉಸಿರೆತ್ತಲಿಲ್ಲ. ಅವನಿಗೆ ಸಿಟ್ಟು ಬಂದಿರಬಹುದೆಂದು ನನಗೆ ತಿಳಿಯಲಿಲ್ಲ. ಆತ ಗಲಿಬಿಲಿಗೊಂಡ. ನನ್ನನ್ನು ಮೇಲಿನಿಂದ ಕೆಳಗಿನವರೆಗೆ ನೋಡಿದ ಅವನ ಮುಖದಲ್ಲಿ ಭಯದ ಛಾಯೆ ಗೋಚರಿಸಿತು. ಮುಖದಲ್ಲಿ ಮೂಡಿದ ಬೆವರನ್ನು ಒರೆಸಿಕೊಳ್ಳುತ್ತಾ, ಭಾರವಾದ ಹೃದಯವನ್ನು ಹೊತ್ತು ಅವನು ತನ್ನ ಮನೆಯ ಬಾಗಿಲಿನ ಕಡೆಗೆ ಹೆಜ್ಜೆಹಾಕಿದ.

ಅನುವಾದಕರು: **ಬಿ. ಮಧುಕರ ಮಲ್ಯ**

❖ ❖ ❖❖ ❖

ಕರ್ಮ ಬಂಧನ

✍ ಸುಶೀಲಾ ಟಿ. ಭಟ್

ಮದುವೆ ಸಮಾರಂಭದಲ್ಲಿ ಸೇರಿದವರೆಲ್ಲರೂ ಬೀಳ್ಕೊಂಡು ಅವರವರ ಮನೆಗೆ ಹೋಗಲು ಅಣಿಯಾದರು. ಹಿಂದೆ ಉಳಿದವರೆಂದರೆ ಮದುಮಗನ ತಂಗಿ, ಅಣ್ಣ, ಚಿಕ್ಕಪ್ಪ, ಚಿಕ್ಕಮ್ಮ ಹೀಗೆ ಮನೆಯವರು ಮಾತ್ರ. ಮದುಮಗಳ ಗೃಹಪ್ರವೇಶದ ಊಟ ಮುಗಿಯುತ್ತಿದ್ದಂತೆ ಮದುಮಗನ ಮಿತ್ರರೆಲ್ಲರೂ 'ಶುಭರಾತ್ರಿ ಮತ್ತು ಸಂತುಷ್ಟ ಜೀವನ' ವನ್ನು ಹಾರೈಸಿ ಹೋದರು.

ಇದು ಮದುವೆಯ ಎರಡನೇ ದಿನ. ಮದುಮಗಳು ದೂರದ ಊರಿನವಳಾಗಿದ್ದರಿಂದ ಮದುವೆಯ ದಿನವೇ ಗೃಹಪ್ರವೇಶದ ಕಾರ್ಯಕ್ರಮ ನೆರವೇರಿಸುವುದು ಸಾಧ್ಯವಾಗಿರಲಿಲ್ಲ. ಆದ್ದರಿಂದಲೇ ಈ ಕಾರ್ಯಕ್ರಮವನ್ನು ಮರುದಿನ ರಾತ್ರಿಗೆ ಇಡಲಾಗಿದೆ. ಮಂತ್ರೋಚ್ಚಾರ, ಅಡುಗೆ, ಊಟದ ಗದ್ದಲಗಳು ಮುಗಿದವು. ಮದುಮಗನ ತಂಗಿ ಮದುಮಗಳನ್ನು ಕರೆದುಕೊಂಡು ದಂಪತಿಗಳಿಗಾಗಿ ಸಿದ್ಧಪಡಿಸಿದ ಶಯ್ಯಾಗೃಹಕ್ಕೆ ಕರೆದುಕೊಂಡು ಬಂದಳು. ಹೂವಿನ ಮಾಲೆ, ಸುಗಂಧದ್ರವ್ಯಗಳು, ವಿವಿಧ ರೀತಿಯ ಕೌತುಕ ವಸ್ತುಗಳಿಂದ ಸಜ್ಜುಗೊಳಿಸಿದ ಕೋಣೆಯನ್ನು ನೋಡಿ ಮದುಮಗಳ ಮನಸ್ಸಿಗೆ ತುಂಬಾ ಸಂತೋಷವಾಯಿತು. ಅವಳು ಮನಸ್ಸಿನಲ್ಲಿಯೇ ನಕ್ಕಳು. ಮದುಮಗನ ತಂಗಿ ಆವಳನ್ನು ಕೇಳಿದಳು, "ಅತ್ತಿಗೆ, ಹೇಗಿದೆ ನನ್ನ ಸಿದ್ಧತೆ? ನಿನಗೆ ಇಷ್ಟವಾಯಿತೆ?"

ಮದುಮಗಳು ನಕ್ಕಳು ಮಾತ್ರ. ನಂತರ ನಾದಿನಿ ಅವಳಿಗೆ ಬಚ್ಚಲುಮನೆ, ವರಾಂಡ, ವಿದ್ಯುತ್ ಗುಂಡಿ ಎಲ್ಲವನ್ನೂ ತೋರಿಸಿಕೊಟ್ಟಳು. "ನೋಡಿ, ಆ ಸ್ಟೀಲ್ ಪಾತ್ರೆಯಲ್ಲಿ ಹಾಲು ಇದೆ. ಅಣ್ಣ ಕೋಣೆಗೆ ಬಂದ ನಂತರ ಅವನಿಗೆ ಕೊಟ್ಟು, ನೀವೂ ಕುಡಿಯಿರಿ. ಇದು ಕರೆಗಂಟೆ. ಅಗತ್ಯವಿದ್ದರೆ ಗುಂಡಿಯೊತ್ತಿ, ಕೆಳಗಿನಿಂದ ಯಾರಾದರೂ ಕೆಲಸದವರು ಬರುವರು."

ಅತ್ತಿಗೆಗೆ ಇನ್ನೊಮ್ಮೆ ಶುಭರಾತ್ರಿ ಹಾರೈಸಿ, ತಮಾಷೆ ಮಾತುಗಳನ್ನು ಆಡಿ ನಗುತ್ತಾ ನಾದಿನಿ ಕೆಳಗಿಳಿದು ಹೋದಳು. ಮದುವಣಗಿತ್ತಿ ಮದುವೆ ಸೀರೆ, ರವಿಕೆ ಬದಲಾಯಿಸುವಷ್ಟರಲ್ಲಿ ಮದುಮಗ ಹಸನ್ಮುಖದಿಂದ ಮೆಟ್ಟಲೇರಿ ಬಂದನು.

ಮದುಮಕ್ಕಳು ಪ್ರಥಮರಾತ್ರಿಯ ಮೊದಲು ಎರಡು ಗಂಟೆಗಳನ್ನು ಬಹಳ ಆಹ್ಲಾದಕರವಾಗಿ ಕಳೆದರು. ದೂರದಲ್ಲೆಲ್ಲೋ ಕೋಳಿ ಕೂಗಿದ ಸದ್ದು ಅವರಿಗೆ ಕೇಳಿಸಿತು. "ಸತ್ಯಾ, ನಾವಿನ್ನು ನಿದ್ದೆ ಮಾಡೋಣ. ರಾತ್ರಿ ಬಹಳವಾಗಿದೆ. ನಾಳೆ ನಾವು ಅಣೆಕಟ್ಟು ನೋಡಲು ಹೋಗುವುದಿದೆಯಲ್ಲವೇ" ಇಬ್ಬರೂ ದೀಪವನ್ನಾರಿಸಿ ಮಲಗಿದರು.

ಮರುದಿನ ಏಳುಗಂಟೆಗೆ ಅಲಾರಂ ಆದಾಗ ಇಬ್ಬರೂ ಗಡಿಬಿಡಿಯಿಂದ ಎದ್ದರು. ಕೆಳಗಿಳಿದು ಹೋದರು. ಮನೆಯವರ ಸಿಹಿ ಟೀಕೆಗಳನ್ನು ಕೇಳಿದರು. ಸ್ನಾನ, ತಿಂಡಿ ಮುಗಿಸಿ ಹತ್ತು ಗಂಟೆಗೆ ಡ್ಯಾಂ ನೋಡಲು ಹೊರಟು ನಿಂತರು. ಹತ್ತೂಕಾಲು ಗಂಟೆಗೆ ಟೆಂಪೊ ಬಂತು. ಮನೆಮಂದಿ ಎಲ್ಲರೂ ಸೇರಿ ಹೋಗುವ ಕಾರ್ಯಕ್ರಮ. ಅದಕ್ಕೆ ನಿರ್ದೇಶನ ತಂಗಿಯದೇ. ಕಾರಣವೇನೆಂದರೆ ವಿದೇಶದಲ್ಲಿ ಗಂಡನೊಟ್ಟಿಗೆ ಜೀವನ ಸಾಗಿಸುವ ಅವಳು ಊರಿಗೆ ಬರುವುದು ಎರಡೋ ಮೂರೋ ವರ್ಷಗಳಿಗೊಮ್ಮೆ. ಹೀಗಿರುವಾಗ, ಅವಳ ಇಷ್ಟಕ್ಕೆ ಸರಿಯಾಗಿ ನಡೆದುಕೊಳ್ಳದಿದ್ದರೆ ಅವಳ ಮನಸ್ಸಿಗೆ ದುಃಖವಾಗುತ್ತದೆ. ಅಣ್ಣತಮ್ಮಂದಿರಿಗೆ ಅವಳೊಬ್ಬಳೇ ತಂಗಿ. ತಂದೆತಾಯಿಗೆ ಪ್ರೀತಿಪಾತ್ರಳು. ಮೂರುದಿನಗಳ ನಂತರ ಅವಳು ಗಂಡನೊಟ್ಟಿಗೆ ಅವನು ಕೆಲಸಮಾಡುವ ಊರಿಗೆ ಹೋಗಲಿದ್ದಾಳೆ. ಅಣ್ಣನ ಮದುವೆಗಾಗಿ ಕೆಲವೇ ದಿನಗಳ ರಜೆಯಲ್ಲಿ ಊರಿಗೆ ಬಂದಿದ್ದಾಳೆ.

ಟೆಂಪೊ ಬಂತು. ಎಲ್ಲರೂ ಹತ್ತಿ ಕುಳಿತರು. ಮದುಮಗ ಪ್ರದೀಪನ ಇಬ್ಬರು ಗೆಳೆಯರು ಕೂಡಾ ಇದ್ದಾರೆ. ಪ್ರದೀಪನ ತಂದೆಗೆ ಸ್ವಲ್ಪ ದೇಹಾಲಸ್ಯವಿದ್ದುದರಿಂದ ಅವರು ಈ ವಿನೋದ ಯಾತ್ರೆಯಲ್ಲಿ ಭಾಗವಹಿಸುತ್ತಿಲ್ಲ. ಟೆಂಪೊ ಹೊರಡುವ ಮೊದಲೇ ಅವರು ಹೆಂಡತಿಯೊಂದಿಗೆ, ಮಕ್ಕಳೊಂದಿಗೆ ಹೇಳಿದ್ದರು, "ರಾತ್ರಿ ಏಳು ಗಂಟೆಗೆ ಮೊದಲೇ ನೀವಿಲ್ಲಿ ವಾಪಾಸು ಬಂದು ತಲುಪಬೇಕು. ದೇವಸ್ಥಾನದಲ್ಲಿ ಪಲ್ಲಕಿ ಪೂಜೆಗೆ ಹಣ ಕಟ್ಟಿರುವುದು ನೆನಪಿದೆ ತಾನೇ?"

"ಹೌದಪ್ಪಾ, ನಾವು ಆರು ಗಂಟೆಯೊಳಗೆ ತಲುಪುತ್ತೇವೆ" ಪ್ರದೀಪ ಮತ್ತು ಅವನ ತಂಗಿ ಹೇಳಿದರು.

ಡ್ಯಾಂ ಎಲ್ಲಾ ತಿರುಗಾಡಿ, ಊಟ ಮುಗಿಸುವಷ್ಟರಲ್ಲಿ ಸಂಜೆ ನಾಲ್ಕಾಯಿತು. ತಂಗಿಯ ಮಕ್ಕಳಿಗೆ ದೋಣಿವಿಹಾರ ಮಾಡಬೇಕೆಂದು ದೊಡ್ಡ ಆಸೆ. ಪ್ರದೀಪನ ಗೆಳೆಯರು ಕೂಡಾ ಸಮ್ಮತಿಸಿದರು. ಎಲ್ಲರೂ ಸೇರಿ ದೋಣಿಯ ಬಳಿ ತಲುಪಿದರು. ಆದರೆ ಮದುಮಗಳು ಸತ್ಯ ಮಾತ್ರ ದೋಣಿ ಹತ್ತಲು ಒಪ್ಪಲೇ ಇಲ್ಲ. ಅವಳಿಗೆ ಹೆದರಿಕೆಯಂತೆ. ಕೇಳಿದಾಗ ಆವಳ ಮುಖ ಕಪ್ಪಿಟ್ಟಿದೆ. ಶರೀರವಿಡಿ ನಡುಗುತ್ತಿದೆ. ಇದನ್ನು ನೋಡಿ ಉಳಿದವರೆಲ್ಲರೂ ಅವಳಿಗೆ ತಮಾಷೆ ಮಾಡಿದರು. "ಇಷ್ಟು ವಯಸ್ಸಾದರೂ ಮಕ್ಕಳ ಹಾಗೆ ನಿನಗೆ ನೀರಿನ ಭಯವೇ? ಪ್ರದೀಪ ಅವಳನ್ನು ಎಳೆದು ದೋಣಿ ಹತ್ತಿಸಲು ಪ್ರಯತ್ನಿಸಿದ. ಆದರೆ ಆವಳು ದೊಡ್ಡದಾಗಿ ಕಿರಿಚಿ ಅವನ ಕೈಯನ್ನು ಜಾಡಿಸಿ ಮೇಲೆ ಓಡಿಹೋದಳು.

"ಅವಳು ಬರದಿದ್ದರೆ ಅವಳಿಗೆ ಒತ್ತಾಯ ಮಾಡಬೇಡಿ" ಪ್ರದೀಪನ ತಾಯಿ ಹೇಳಿದರು. ಪ್ರದೀಪ ಕೂಡಾ ದೋಣಿಯಿಂದ ಕೆಳಗಿಳಿದ. ಉಳಿದವರು ದೋಣಿ ವಿಹಾರ ನಡೆಸಿದರು. ಇದನ್ನು ನೋಡಿದ ಪ್ರದೀಪನ ಗೆಳೆಯ ಏನೋ ಯೋಚಿಸತೊಡಗಿದ. ಆರೂವರೆ ಗಂಟೆಗೆ ಅವರು ಮನೆ ತಲುಪಿದರು. ಕೈಕಾಲು ತೊಳೆದು, ಸ್ನಾನ ಬೇಕೆಂದವರು

ಸ್ನಾನ ಮುಗಿಸಿ, ತಿಂಡಿತಿಂದು, ನೀರು ಕುಡಿದು ದೇವಸ್ಥಾನಕ್ಕೆ ಹೊರಟು ನಿಂತರು. ಪಟ್ಟೆಸೀರೆ, ವಿವಿಧ ಆಭರಣಗಳನ್ನು ತೊಡಿಸಿ, ಹೂದಂಡೆ ಮುಡಿಸಿ ಸತ್ಯಾಳನ್ನು ಅಲಂಕರಿಸಲಾಯಿತು. ಅತ್ತಿಗೆ, ನೀವು ಆ ನವರತ್ನದ ಉಂಗುರವನ್ನು ಯಾಕೆ ಹಾಕಿಲ್ಲ? ನಿಮ್ಮ ಎಲ್ಲಾ ಒಡವೆಗಳನ್ನು ಧರಿಸಿ. ನಮ್ಮ ಊರಿನವರೆಲ್ಲರೂ ಕಣ್ಣು ಅರಳಿಸಿ ನೋಡಲಿ ನಿಮ್ಮನ್ನು! ಈ ಊರಿನಲ್ಲಿ ನಿಮಗೆ ಕೊಟ್ಟಷ್ಟು ಒಡವೆ ಮತ್ತು ಸ್ತ್ರೀಧನ ಇದುವರೆಗೆ ಯಾರಿಗೂ ದೊರೆತಿಲ್ಲ. ಹೀಗಾಗಿ ಕೆಲವರಿಗೆ ಹೊಟ್ಟೆಯುರಿ ಇದೆ. ಇವತ್ತು ಪಲ್ಲಕಿ ಪೂಜೆಯಲ್ಲಿ ಹೊಸ ಮದುಮಗಳನ್ನು ನೋಡಲು ಊರಿನವರೆಲ್ಲರೂ ಬರಲಿದ್ದಾರೆ. ಸರಿಯಾಗಿ ನೋಡಲಿ."

ಮದುಮಗಳು ಯಾವ ಉತ್ತರವನ್ನೂ ನೀಡಲಿಲ್ಲ.

"ಯಾಕೆ ಅತ್ತಿಗೆ ನೀವು ಬೇಸರದಿಂದ ಇರುವ ಹಾಗಿದೆ? ನಮ್ಮ ಮನೆ ನಿಮಗೆ ತೃಪ್ತಿಯಾಗಲಿಲ್ಲವೇ? ನಿಮ್ಮ ತಂದೆಯ ವ್ಯವಹಾರಕ್ಕೆ ಹೋಲಿಸಿದರೆ ನಮ್ಮ ತಂದೆ ಚಿಕ್ಕವ್ಯಾಪಾರಿ. ಆದರೂ ಈ ಊರಿನಲ್ಲಿ ನಾವು ದೊಡ್ಡ ಮನುಷ್ಯರು, ತಿಳಿಯಿತೇ?" ನಾದಿನಿಯ ಈ ಅಹಂಕಾರ ತುಂಬಿದ ಮಾತುಗಳನ್ನು ಕೇಳಿ ಸತ್ಯ ಮನಸ್ಸಿನಲ್ಲಿಯೇ ನಕ್ಕಳು.

ಮಂಗಳಾರತಿಗಿಂತ ಮೊದಲೇ ಹೊಸ ಮದುಮಕ್ಕಳು ದೇವಸ್ಥಾನ ತಲುಪಿದರು. ಅಲ್ಲಿ ಸೇರಿದವರೆಲ್ಲರ ದೃಷ್ಟಿ ಮದುಮಗಳ ಮೇಲೆ ನೆಟ್ಟಿತು. ಹೆಂಗಸರ ನಡುವೆ ಪಿಸುಪಿಸು ಮಾತುಗಳು ನಡೆದವು. ಕೆಲವರು ಅವಳ ಹುಟ್ಟೂರಿನ ಕುರಿತು ಮಾತನಾಡಿದರೆ, ಇನ್ನು ಕೆಲವರು ಅವಳ ಸೀರೆಯ ಕುರಿತು ಮಾತನಾಡಿಕೊಂಡರು. ಮೂರನೇ ಗುಂಪು ಅವಳಿಗೆ ನೀಡಿದ ವರದಕ್ಷಿಣೆಯ ಕುರಿತು ಹೇಳಿದರೆ, ನಾಲ್ಕನೇ ಗುಂಪಿನವರು ಅವಳ ಸೌಂದರ್ಯವನ್ನು ಸುಜಾತಳ ಸೌಂದರ್ಯಕ್ಕೆ ಹೋಲಿಸುತ್ತಿದ್ದರು. ಪ್ರದೀಪ ಸುಜಾತಾಳಿಗೆ ಮಾಡಿದ ಅನ್ಯಾಯವನ್ನು ಐದನೇ ಗುಂಪಿನವರು ಚರ್ಚಿಸುತ್ತಿದ್ದರು. ದೇವಸ್ಥಾನದಲ್ಲಿ ಸೇರಿದ್ದ ಜನಸ್ತೋಮ ಒಂದಲ್ಲ ಒಂದು ಕಾರಣಕ್ಕಾಗಿ ತುಲನೆಯನ್ನು ಮಾಡಲಾರಂಭಿಸಿದರು. ಇದ್ಯಾವುದನ್ನೂ ತಿಳಿಯದ ಮದುಮಗಳು ದೇವರ ಎದುರು ಕೈ ಮುಗಿದು ನಿಂತಿದ್ದಾಳೆ.

ಮಂಗಳಾರತಿಯ ಗಂಟೆ ಬಾರಿಸುವುದು ಪ್ರಾರಂಭವಾಯಿತು. ಗರ್ಭಗುಡಿಯ ಬಾಗಿಲು ತೆರೆಯಿತು. ಢಂ... ಢಂ.. ಢಂ.. ದೊಡ್ಡ ಗಂಟೆ ಮೊಳಗಲಾರಂಭಿಸಿತು. ಒಳಗಿನಿಂದ ಸಣ್ಣಗಂಟೆಯ ಸದ್ದು. ಹೊರಗೆ ನಾದಸ್ವರ, ಡೋಲು ಬಾರಿಸುತ್ತಿದ್ದಾರೆ. ಆ ಭಕ್ತಿಪರಿಸರದಲ್ಲಿ ಜನರು ಎಲ್ಲವನ್ನೂ ಮರೆತು ದೇವರಿಗೆ ಕೈ ಮುಗಿಯುತ್ತಿದ್ದಾರೆ, ಭಗವತ್ ಸ್ಮರಣೆ ಮಾಡುತ್ತಿದ್ದಾರೆ.

"ಹೂಂ...ಯ..." ಅತೀ ಭಯಂಕರವಾದ ಶಬ್ದ ಮದುಮಗಳ ಬಾಯಿಯಿಂದ ಹೊರಟದ್ದು ಮತ್ತು ಅವಳು ಥರಥರನೆ ನಡುಗುತ್ತಾ ಭೂಮಿಯ ಮೇಲೆ ಕುಸಿದು ಬಿದ್ದದ್ದು ಎರಡೂ ಒಟ್ಟಿಗೆ ನಡೆದವು. ಏನು ನಡೆಯಿತೆಂದು ಕೈಮುಗಿದು ನಿಂತಿದ್ದ ಜನರ ಮನಸ್ಸಿಗೆ

ಹೊಳೆಯುವ ಮೊದಲೇ ಅವಳು ನೆಲದ ಮೇಲೆ ಬಲವಾಗಿ ಕೈಕಾಲು ಬಡಿಯಲಾರಂಭಿಸಿದಳು. ಅಷ್ಟು ಮಾತ್ರವಲ್ಲ, ಅವಳ ಬಾಯಿಯಿಂದ ರಕ್ತಮಿಶ್ರಿತ ನೊರೆ ಹೊರಬರಲಾರಂಭಿಸಿತು. ಅವಳು ತಲೆಯನ್ನು ಎರಡೂ ದಿಕ್ಕಿಗೆ ಭಯಂಕರವಾಗಿ ಅಲುಗಾಡಿಸುವುದನ್ನು ನೋಡಿ ಅಲ್ಲಿ ಕೈಮುಗಿದು ನಿಂತುಕೊಂಡಿದ್ದ ಮಕ್ಕಳು ಭಯಭೀತರಾಗಿ ಹೊರಗೆ ಓಡಿಹೋದರು. ನಿಮಿಷ ಮಾತ್ರದಲ್ಲಿ ದೇವರ ಸನ್ನಿದಾನದಲ್ಲಿ ನಿಂತುಕೊಂಡಿರುವ ಪ್ರದೀಪ ಮತ್ತು ನೆಲದ ಮೇಲೆ ಅಂಗಾತ ಬಿದ್ದಿರುವ ಸತ್ಯ ಮಾತ್ರ ಅಲ್ಲಿ ಉಳಿದರು. ಉಳಿದವರೆಲ್ಲರೂ ಮೂಕಸಾಕ್ಷಿಗಳಾಗಿ ದೂರವೇ ನಿಂತುಕೊಂಡಿದ್ದಾರೆ.

"ನೋಡಿದೆಯಾ, ದೇವರ ಆಟ? ಆ ಸುಜಾತಾಳ ಶಾಪ ಇವನಿಗೆ ತಟ್ಟದೆ ಎಲ್ಲಿಗೆ ಹೋಗುತ್ತದೆ?" ಒಬ್ಬ ಹೆಂಗಸು ಪಕ್ಕದಲ್ಲಿ ಇರುವವಳ ಬಳಿ ಹೇಳಿದಳು. ಜನರ ನಡುವೆ ಇನ್ನಷ್ಟು ಗುಸುಗುಸು ಹೆಚ್ಚುತ್ತಲೇ ಹೋಯಿತು.

ಕಾಡಿಗೆ ಬೆಂಕಿ ಹಿಡಿಯುವಂತೆ ಈ ಸುದ್ದಿ ಊರೆಲ್ಲಾ ತುಂಬಿತು. ಸುಜಾತಾಳ ಶಾಪದಿಂದ ಪ್ರದೀಪನಿಗೆ ಹೀಗಾಯಿತೆಂದು ಹೆಚ್ಚಿನ ಜನರು ತೀರ್ಮಾನಕ್ಕೆ ಬಂದರು. ಇಲ್ಲದಿದ್ದರೆ ಅವನಿಗೆ ಇಂತಹ ಪೆಟ್ಟು ಬೀಳುವುದು ಸಾಧ್ಯವಿತ್ತೆ? ಓರ್ವ ಅಪಸ್ಮಾರ ರೋಗಿಯಾಗಿರುವ ಹೆಂಡತಿ! ಒಡವೆ, ಹಣ ಸಾಕಷ್ಟು ಸಿಕ್ಕಿರಬಹುದು; ಆಢ್ಯ ಶ್ರೀಮಂತನ ಏಕಮಾತ್ರ ಪ್ರೀತಿಯ ಮಗಳಾಗಿರಬಹುದು; ಅಪೂರ್ವ ಸೌಂದರ್ಯವತಿಯಾಗಿರಬಹುದು; ಬಹಳ ಕಲಿತಿರಬಹುದು, ಹಾಗಿದ್ದರೂ ಎಷ್ಟೇ ಔಷಧಿ ಸೇವಿಸಿದರೂ ವಾಸಿಯಾಗದ, ಶಾಶ್ವತವಾಗಿ ಶಾಂತಿ ದೊರೆಯದ ಅಪಸ್ಮಾರ ರೋಗವಿದು!

ಆಸ್ಪತ್ರೆಯಲ್ಲಿ ಮಡದಿಯ ಮಂಚದ ಬಳಿ ಕುಳಿತಿರುವ ಪ್ರದೀಪನ ಮನದಲ್ಲಿ ಶೋಕ, ತಾಪ, ದುಃಖ, ಆತ್ಮನಿಂದನೆ ಎಲ್ಲವೂ ಸಮ್ಮಿಶ್ರಗೊಂಡ ಭಾವನೆ ಒಂದೊಂದಾಗಿ ಕಾಡುತ್ತಿತ್ತು. ಪಕ್ಕದ ಬೆಡ್ ಮೇಲೆ ಸತ್ಯಳ ತಾಯಿ ಮತ್ತು ಅವಳ ತಂದೆ, ಕೋಣೆಯ ಹೊರಗೆ ಅವಳ ಅಣ್ಣ, ಉಳಿದ ಬಂಧುಗಳು ಎಲ್ಲರೂ ಯೋಚನೆಯಲ್ಲಿ ಮಗ್ನರಾಗಿದ್ದಾರೆ. ಸತ್ಯಾಳನ್ನು ಆಸ್ಪತ್ರೆಗೆ ತಂದು ಮಲಗಿಸಿದ ನಂತರವೇ ಪ್ರದೀಪನ ತಂದೆ ಅವಳ ತಂದೆಗೆ ಟೆಲಿಗ್ರಾಮ್ ಕಳುಹಿಸಿದ್ದರು. ಮಧ್ಯಾಹ್ನ ಹನ್ನೆರಡು ಗಂಟೆಗೆ ಮೊದಲೇ ಸತ್ಯಾಳ ತಾಯಿ, ತಂದೆ, ಬಂಧುಗಳು ಎಲ್ಲರೂ ತಲುಪಿದ್ದರು. ಎಲ್ಲರ ಮುಖಗಳು ಕಳಾಹೀನವಾಗಿದ್ದವು. ಇಷ್ಟು ಬೇಗ ಗುಟ್ಟು ಹೊರಬೀಳಬಹುದೆಂದು ಅವರು ತಿಳಿದಿರಲಿಕ್ಕಿಲ್ಲ. ಮಗಳು ರಾತ್ರಿಯ ಔಷಧಿ ಸೇವಿಸಲು ಮರೆತಳೆಂದು ಆವರಿಗೆ ಗೊತ್ತಾಯಿತು. ಇಲ್ಲದಿದ್ದರೆ ರೋಗ ಇಷ್ಟು ಪ್ರಬಲವಾಗಿ ಉಲ್ಬಣಗೊಳ್ಳುತ್ತಿರಲಿಲ್ಲ. ತಿರುಗಾಡಲು ಹೋಗಿದ್ದು, ಬೋಟಿಂಗಿಗೆ ನೀರಲ್ಲಿ ಇಳಿದದ್ದು, ದೇವಸ್ಥಾನದಲ್ಲಿ ಜನರ ಗದ್ದಲ, ಗಂಟೆ ಬಾರಿಸುವ ಸದ್ದು, ನಾದಸ್ವರ-ಡೋಲು, ಇವೆಲ್ಲದರಿಂದ ರೋಗ ಉಲ್ಬಣಗೊಂಡಿತೆಂದು ಅವರು ಮನಸ್ಸಿನಲ್ಲಿ ಅಂದುಕೊಂಡರು. ದೇವರೇ, ಇನ್ನು ಮುಂದೆ ಇವಳ ಅವಸ್ಥೆ ಏನಾಗಬಹುದೆಂಬ ವಿಚಾರ ಅವರ ಮನಸ್ಸಿನಲ್ಲಿ ಸುಳಿಯಿತು.

ಇತ್ತ ಪ್ರದೀಪನಿಗೆ ಡಾಕ್ಟರ್ ಅವನಲ್ಲಿ ಹೇಳಿದ ಮಾತು ಅನುರಣಿಸುತ್ತಿತ್ತು.

ಮೂರು ಮಂದಿ ವೈದ್ಯರು ಸೇರಿ ಸತ್ಯಾಳ ತಪಾಸಣೆಯನ್ನು ಚೆನ್ನಾಗಿ ಮಾಡಿದ ನಂತರ, ಡಾಕ್ಟರ್ ಪ್ರಭು ಅವರು ಪ್ರದೀಪನಲ್ಲಿ ಗುಟ್ಟಾಗಿ ಹೇಳಿದರು, ಮಿಸ್ಟರ್ ಪ್ರದೀಪ್, ನಿಮಗೆ ತಿಳಿಸಲು ಬಹಳ ದುಃಖವಾಗುತ್ತಿದೆ. ಸತ್ಯಾಳ ಮನೆಯವರು ನಿಮಗೆ ಯಾವುದೇ ಸುಳಿವು ನೀಡಿರಲಿಲ್ಲವೇ

ಪ್ರದೀಪ 'ಇಲ್ಲ' ವೆಂದು ಉತ್ತರಿಸಿದ. "ಹಾಗಿದ್ದರೆ ನಿಮಗೆ ದೊಡ್ಡ ಮೋಸವಾಗಿದೆ. ಕಡಿಮೆಯೆಂದರೂ ಇಪ್ಪತ್ತು ವರ್ಷಗಳಿಂದ ಇವಳಿಗೆ ಈ ರೋಗವಿದೆ. ಬಹಳ ಶಕ್ತಿಯುತ ಔಷಧಿಯಿಂದ ರೋಗವನ್ನು ನಿಯಂತ್ರಿಸಿ ಇಟ್ಟಿದ್ದರು. ಎರಡು ದಿನ ನಿದ್ದೆಗೆಟ್ಟ ಕಾರಣವಿರಬಹುದು, ಏನೇ ಆದರೂ ಇವಳು ಸಾಯುವವರೆಗೆ ಔಷಧಿಯೊಂದಿಗೆ ಜೀವನ ನಡೆಸಬೇಕಾಗುತ್ತದೆ. ಬೇರೆ ದಾರಿಯೇ ಇಲ್ಲ. ಇನ್ನೊಮ್ಮೆ ಚೆನ್ನಾಗಿ ಯೋಚಿಸಿ ನೋಡಿ."

ಪ್ರದೀಪನ ಮನಸ್ಸಿನಲ್ಲಿ ಧರ್ಮಸಂಕಟ ಪ್ರಾರಂಭವಾಯಿತು.

ನಾಲ್ಕನೆಯ ದಿನ ಸತ್ಯಾಳನ್ನು ಆಸ್ಪತ್ರೆಯಿಂದ ಪ್ರದೀಪನ ಮನೆಗೆ ಕರೆದೊಯ್ಯಲಾಯಿತು. ಅದರ ಮರುದಿನವೇ ಅವಳ ತಂದೆ ತಾಯಿ ಅವಳನ್ನು ಕೆಲವು ದಿನ ತಮ್ಮಲ್ಲಿ ಇರಿಸಿಕೊಳ್ಳಲು ಕರೆದುಕೊಂಡು ಹೋದರು.

ಊರೆಲ್ಲಾ ಇದೇ ಸುದ್ದಿ. ಹಣದ ಮೋಹಕ್ಕೆ ಬಲಿಬಿದ್ದು ಶೇಷಗಿರಿ ರಾಯರು ಕಷ್ಟದಲ್ಲಿ ಸಿಲುಕಿಕೊಂಡದ್ದು; ಅವರು ಮಗನ ಭವಿಷ್ಯವನ್ನು ಶೂನ್ಯಗೊಳಿಸಿದ್ದು; ಇವೆಲ್ಲವೂ ಸುಜಾತಾಳ ಶಾಪದಿಂದಲೇ ನಡೆದದ್ದು; ಸತ್ಯ ತಿಳಿದ ನಂತರವೂ ಪ್ರದೀಪ ಸತ್ಯಾಳನ್ನು ಸ್ವೀಕರಿಸುವುದು ಸರಿಯಲ್ಲ; ಅವನು ಸುಜಾತಳನ್ನು ಮದುವೆಯಾಗಿ ಸುಖವಾಗಿರಲಿ; ತಂದೆಯ ಆಸೆ ಪೂರ್ಣಗೊಂಡಿತ್ತಲ್ಲ? ಹೀಗೆ ಸಾಕಷ್ಟು ರೀತಿಯಲ್ಲಿ ಜನರು ಆಡಿಕೊಳ್ಳಲಾರಂಭಿಸಿದರು. ಗಿರಿಮಾಮ ನಾಲ್ಕೈದು ದಿನ ವ್ಯಾಪಾರಕ್ಕೆ ಹೋಗಲಿಲ್ಲ. ಅಂಗಡಿ ಮುಚ್ಚಿದರು. ಪ್ರದೀಪ ಹೊರಗೆ ಬರಲೇ ಇಲ್ಲ. ಅವನ ತಂಗಿ ಯಾರಿಗೂ ಕಾಯದೆ ತನ್ನ ಪತಿಯೊಂದಿಗೆ ವಿದೇಶಕ್ಕೆ ಹೋದಳು.

ಪ್ರದೀಪನ ಅಂತಃಕರಣ ಅವನಲ್ಲಿ ಹೇಳಿತು : "ಅರೆ, ದುಷ್ಟ, ಪಾಪಿ..ನಿನಗೆ ಈಗ ಸಿಕ್ಕಿದ ಶಿಕ್ಷೆ ಸಾಲದು. ನಿನಗೆ ಆ ನಿಷ್ಕಳಂಕ ಹುಡುಗಿ ಸುಜಾತಾಳ ಶಾಪ ತಟ್ಟಿದೆ. ಏಳು ವರ್ಷ ಪರಸ್ಪರ ಪ್ರೀತಿಸಿ ಒಂದು ದಿನ ನಿನ್ನ ತಂದೆಯ ಮಾತು ಕೇಳಿ ಅವಳ ಕೈಬಿಟ್ಟೆ. ಅವಳನ್ನು ಬಿಟ್ಟು ಬೇರೆ ಯಾರೊಂದಿಗೆ ಮದುವೆಯಾಗುವುದಿಲ್ಲ ಎಂದು ಹೇಳಿದ ನಿನ್ನ ಮಾತನ್ನು ನಂಬಿ ಅವಳು ತನ್ನ ಸ್ವರ್ವಸ್ವವನ್ನೂ ನಿನಗೆ ಅರ್ಪಣೆ ಮಾಡಿದ್ದಾಳೆ. ನಿನ್ನ ಮನೆಯವರು ಕೂಡಾ ಅವಳ ಮನಸ್ಸಿಗೆ ಆಸೆ ತೋರಿಸಿದರು. ಆದರೆ ಹೆಚ್ಚು ವರದಕ್ಷಿಣೆ ಸಿಗುವ ಸೆಂಟಸ್ಸಿಕೆ ಬಂದ ಕೂಡಲೇ ನಿನ್ನ ತಂದೆ ಅವಳಿಗೆ ಅನ್ಯಾಯ ಮಾಡಿದರು. ಅವಳು ಅತ್ತು, ನಿನ್ನ, ನಿನ್ನ ತಂದೆಯ ಕಾಲು ಹಿಡಿದಳು. ಆದರೂ ನೀವು ಅವಳನ್ನು

ತಿರಸ್ಕರಿಸಿದಿರಿ. ಜಾತಕ ಕೂಡಿ ಬರುವುದಿಲ್ಲವೆಂಬ ಕಾರಣವನ್ನು ಕೂಡ ಹೇಳಿದಿರಿ. ಏಳು ವರ್ಷಗಳ ಅವಳ ಆತ್ಮಸಮರ್ಪಣೆಗೆ ನೀನು ಕಿಂಚಿತ್ತೂ ಬೆಲೆ ಕೊಡಲಿಲ್ಲ. ಅವಳ ಬದುಕನ್ನು ಕೈಗೆತ್ತಿಕೊಂಡು ಏಳು ವರ್ಷಗಳ ಕಾಲ ಆಟವಾಡಿದೆ ನೀನು. ಅವಳ ಪಶ್ಚಾತ್ತಾಪದ ಶಾಪ ನಿನಗೆ ತಟ್ಟದೇ ಇರುವುದೇ? ಅವಳ ಚರಿತ್ರೆ ತಿಳಿದ ಯಾರಾದರೂ ಅವಳನ್ನು ಮದುವೆಯಾಗಲು ಮುಂದೆ ಬರುವರೇ? ನಿನ್ನನ್ನು ಅವಳು ಎಷ್ಟು ಪ್ರೀತಿಸುತ್ತಿದ್ದಳು! ನೀನು ದುಷ್ಟನಲ್ಲದೆ ಇನ್ನೇನು?'

ಒಂದು ತಿಂಗಳು ಕಳೆಯಿತು. ಸತ್ಯಾಳ ವಿಚಾರದಲ್ಲಿ ಯಾವುದೇ ನಿರ್ಣಯವಾಗಲಿಲ್ಲ. ಕೊಟ್ಟ ವರದಕ್ಷಿಣೆಯನ್ನು ಹಿಂತಿರುಗಿಸಿ ಅವಳ ಸಂಬಂಧವನ್ನು ಬಿಟ್ಟು ಕೊಡಲು ಪ್ರದೀಪನ ತಾಯಿ, ತಂದೆ, ಮತ್ತು ಎಲ್ಲಾ ಬಂಧುಗಳು ಅವನಿಗೆ ಪ್ರೇರಣೆ ನೀಡುತ್ತಿದ್ದಾರೆ. ಸಾಯುವವರೆಗೆ ಈ ಹೊರೆಯನ್ನು ಯಾಕೆ ಹೊತ್ತುಕೊಳ್ಳಬೇಕು ಎಂದು ಅವರು ಕೇಳುತ್ತಿದ್ದಾರೆ. ತಂದೆ ಅವನಿಗೆ ಸುಜಾತಾಳನ್ನು ಮದುವೆಯಾಗಲು ಅನುಮೋದನೆಯನ್ನು ಕೂಡಾ ನೀಡಿದ್ದಾರೆ. ಆದರೆ ಪ್ರದೀಪ ಮಾತ್ರ ಯಾವುದೇ ಉತ್ತರ ನೀಡುತ್ತಿಲ್ಲ. ಏನೂ ತಿನ್ನದೆ, ಕುಡಿಯದೆ, ಗಡ್ಡ ಬೆಳೆಸಿ ಹುಚ್ಚನಂತೆ ಅಲೆದಾಡುತ್ತಾನೆ. ಇನ್ನೊಂದೆಡೆ ಸತ್ಯಾಳಿಂದ ಕ್ಷಮೆ ಯಾಚನೆಯ ಪತ್ರಗಳು ಮತ್ತೆಮತ್ತೆ ಬರುತ್ತಿವೆ. ಅವಳಿಗೆ ಗಂಡನ ಮನೆಯಲ್ಲಿ ಬಂದು ಇರಬೇಕಾಗಿದೆ.

ಒಂದು ದಿನ ಪ್ರದೀಪ ಬಹಳ ಸಂಕೋಚದಿಂದಲೇ ಸುಜಾತಾಳ ಮನೆ ತಲುಪಿದ. ಮುಂಭಾಗದಲ್ಲಿ ಯಾರೂ ಇರಲಿಲ್ಲ. ಅವನು ಕರೆಗಂಟೆ ಒತ್ತಿದ. ಕೆಲಸದವನು ಬಂದು ಬಾಗಿಲು ತೆರೆದ.

"ನನಗೆ ಸುಜಾತಾಳನ್ನು ಕಾಣಬೇಕಾಗಿದೆ" ಅವನು ತಡವರಿಸುತ್ತಾ ಹೇಳಿದ.

"ಅಯ್ಯೋ ಮಗಾ, ನಾಲ್ಕು ದಿನಗಳಾದವು, ಅವಳು ಆಸ್ಪತ್ರೆಯಲ್ಲಿದ್ದಾಳೆ. ಅವಳ ತಂದೆ ತಾಯಿ ಕೂಡಾ ಅಲ್ಲೇ ಇದ್ದಾರೆ."

ನಂತರ ಹೆಚ್ಚೇನೂ ಕೇಳಿಸಿಕೊಳ್ಳಲು ಅವನು ನಿಲ್ಲಲಿಲ್ಲ. ಅಲ್ಲಿಂದ ಬಸ್ ಹತ್ತಿ ಅವನು ಆಸ್ಪತ್ರೆ ತಲುಪಿದ. ಹುಡುಕಿ ಹುಡುಕಿ ಸುಜಾತಾಳ ಕೋಣೆ ತಲುಪಿದ. ಸುಜಾತಾ ಕಣ್ಣುಮುಚ್ಚಿ ಮಲಗಿದ್ದಾಳೆ. ತಂದೆ ತಾಯಿ ಮಂಚದ ಮೇಲೆ ಕುಳಿತಿದ್ದಾರೆ. ಅಷ್ಟರೊಳಗೆ ಅದುವರೆಗೆ ಅದುಮಿಟ್ಟ ದುಃಖ ಪ್ರದೀಪನ ಬಾಯಿಯಿಂದ ದೊಡ್ಡ ಸದ್ದಿನೊಂದಿಗೆ ಬಿರಿಯಿತು.

ಸದ್ದು ಕೇಳಿ ಸುಜಾತಾ ಕಣ್ಣು ಅರಳಿಸಿದಳು. ಮೊದಲು ಅವಳಿಗೆ ಪ್ರದೀಪ ಯಾರೆಂದು ಮನಸ್ಸಿಗೆ ಹೊಳೆಯಲಿಲ್ಲ. ತಾಯಿ ಹೇಳಿದ ನಂತರ ಅವಳಿಗೆ ತಿಳಿಯಿತು. ಅವಳು ಏಳುವ ಪ್ರಯತ್ನ ನಡೆಸಿದಳು. ಆದರೆ ಅವಳ ತಂದೆ ಅವಳಿಗೆ ಏಳಲು ಬಿಡಲಿಲ್ಲ.

ಪ್ರದೀಪ ನಿಧಾನವಾಗಿ ಅವಳ ಅನಾರೋಗ್ಯದ ಕುರಿತು ವಿಚಾರಿಸಿದ. "ಅಯ್ಯೋ, ಪ್ರದೀಪ, ದೇವರ ದಯೆಯಿಂದ ಅವಳಿಗೆ ಯಾವ ರೋಗವೂ ಇಲ್ಲ. ಅವಳು ತನ್ನ ಒಂದು ಮೂತ್ರಪಿಂಡವನ್ನು ನಮ್ಮ ಭಜನೆ ಶೆಣೈಮಾಮನ ಮೊಮ್ಮಗನಿಗೆ ದಾನ ಮಾಡಿದ್ದಾಳೆ. ಎರಡು ದಿನಗಳ ಮೊದಲು ಕಿಡ್ನಿಕಸಿ ಮಾಡಲಾಯಿತು. ಇನ್ನು ಎರಡು ಮೂರು ದಿನಗಳಲ್ಲಿ ನಾವು ಮನೆಗೆ ಹೋಗಬಹುದು."

ಇದನ್ನು ಕೇಳಿ ಪ್ರದೀಪ ಸ್ತಬ್ಧನಾದ. ಕಿಡ್ನಿ ದಾನ ಮಾಡಿದಳೇ?

"ಹೌದು." ಸುಜಾತಾಳೇ ಉತ್ತರಿಸಿದಳು. "ಪಾಪ. ಅವರು ಬಹಳ ಬಡವರು. ಅವರಿಗೆ ಇರುವುದು ಒಂದೇ ಗಂಡುಮಗು. ಸಾವಿರಗಟ್ಟಳೆ ಖರ್ಚು ಮಾಡಲು ಅವರಿಗೆ ಎಲ್ಲಿಂದ ಹಣ ಬರಬೇಕು? ಆ ಕುಟುಂಬಕ್ಕೆ ನನ್ನಿಂದ ಸಾಧ್ಯವಾದಷ್ಟು ಸಹಾಯ ಮಾಡಿದ್ದೇನೆ."

"ಪೈ ಮಾಮ್, ಈ ಕಾರ್ಯ ನಡೆಸಲು ಸುಜಾತಾಳಿಗೆ ಹೇಗೆ ಒಪ್ಪಿಗೆ ನೀಡಿದಿರಿ?" ಹೀಗೆ ಪ್ರದೀಪ ಕೇಳಿದಾಗ ಸುಜಾತಾಳೇ ಉತ್ತರ ಕೊಟ್ಟಳು.

"ನನ್ನಿಂದಾಗಿ ಈ ಪ್ರಪಂಚದ ಯಾರಿಗಾದರೂ ಒಂದು ಉಪಕಾರವಾಗಲಿ. ಒಬ್ಬ ರೋಗಿನಿಯ ಬದುಕಿಗೆ ಎರಡು ಕಿಡ್ನಿಗಳು ಹೆಚ್ಚೇ"

ಇದೇ ವೇಳೆ, ಅವಳ ಮಾತಿನ ಅರ್ಥವನ್ನು ತಿಳಿದುಕೊಳ್ಳದವನಂತೆ ಪ್ರದೀಪ ಸುಜಾತಾಳ ಬಳಿ ನಾಚಿಕೆ ಇಲ್ಲದೆ ತನ್ನ ತಂದೆತಾಯಿಯ ಈಗಿನ ಅಭಿಪ್ರಾಯವನ್ನು ತಿಳಿಸಿದ. ಅದನ್ನು ಕೇಳಿದ ಸುಜಾತಾ ನಕ್ಕುಬಿಟ್ಟಳು.

"ಪ್ರದೀಪ ನನ್ನ ನಿರ್ಧಾರ ನಿನಗೆ ತಿಳಿಯಲಿಲ್ಲವೇ? ಇನ್ನುಳಿದ ನನ್ನ ಜೀವನವನ್ನು ಅನಾಥಾಶ್ರಮಕ್ಕಾಗಿ ಮೀಸಲಿಡಲು ನಿರ್ಣಯಿಸಿದ್ದೇನೆ. ಇನ್ನು ಮುಂದೆ ಅಲ್ಲಿಯ ಮಕ್ಕಳಿಗೆ ನಾನೇ ತಾಯಿ. ನನಗೆ ಅವರೇ ಮಕ್ಕಳು. ಅದಕ್ಕೆ ಅಗತ್ಯವಿರುವ ಬರೆವಣಿಗೆ, ಎಲ್ಲವನ್ನೂ ನಡೆಸಿಯಾಗಿದೆ. ನನ್ನ ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ" ಸುಜಾತಾ ಹೇಳಿದಳು.

ತಲೆತಗ್ಗಿಸಿ ನಿಂತಿದ್ದ ಪ್ರದೀಪ ನಿಧಾನವಾಗಿ ಆ ಕೋಣೆಯಿಂದ ಹೊರಬಿದ್ದನು. ಸುಜಾತಾ ಹಲ್ಲುಕಚ್ಚಿ ಹಿಡಿದು ಹೇಳಿದಳು,

"ನಾಚಿಕೆಗೆಟ್ಟವನು!"

ಅನುವಾದಕರು: **ಕೂಡ್ಲ ಆನಂದು ಶಾನಭಾಗ**

❖ ❖ ❖❖ ❖

ಕೆಂಬೆರಳ್ಳಿ

✍ **ಎಡ್ವಿನ್ ಜೆ.ಎಫ್.ಡಿಸೋಜಾ**

ಕೆಲವು ಕನಸುಗಳು ನಿಜವಾಗುತ್ತವೆ ಎಂದು ಹೇಳುತ್ತಾರೆ. ಆದರೆ ಕೆಲವು ಕಥಾವಸ್ತುಗಳು ಭ್ರಮೆಯ ರೂಪದಲ್ಲಿ ಮಿದುಳನ್ನು ಪ್ರವೇಶಿಸುತ್ತವೆ ಎನ್ನುವುದು ನನ್ನ ಅನಿಸಿಕೆ ಮಾತ್ರ. ನಾನು ಕೆಂಬರಳ್ಳಿ ಯನ್ನು ಪ್ರವೇಶಿಸುವವರೆಗಿನ ಮತ್ತು ನನ್ನ ಕಣ್ಣುಗಳು ಆ ಎಲೆಗಳ ಮೇಲೆ ಬೀಳುವ ತನಕದ ಕತೆ ನಿಜವಾದುದು. ಅದರ ನಂತರದ್ದು ಒಂದು ಭ್ರಮೆ ಮಾತ್ರ. ಇದು ಕುಡಿತದ ಅಮಲಿನದು ಅಲ್ಲ.

ನಾವು ರಜೆಯಲ್ಲಿ ಬೆಂಗಳೂರಿಗೆ ಹೋಗಿ ಬಂದ ಮರುದಿನ ವಾಲೆನ್ಸಿಯಾದ ನಮ್ಮ ಮನೆಯಲ್ಲಿ ಮಧ್ಯಾಹ್ನದ ಊಟ ಮುಗಿಸಿ ಈಸಿಚೇರಿನಲ್ಲಿ ಕುಳಿತಿದ್ದೆ. ನನ್ನ ಕಣ್ಣಿಗೆ ನಿದ್ದೆಯ ಮಂಪರು ಹತ್ತಿತು. ಕೆಂಬರಳ್ಳಿ ಕಥೆಯ ದೃಶ್ಯಾವಳಿ ಗೋಚರಿಸಲಾರಂಭಿಸಿತು. ನಾನು ಬೆಚ್ಚಿಬಿದ್ದು ಬೆವರಿನ ಮುದ್ದೆಯಾದೆ. ನನ್ನ ಈ ಅವಸ್ಥೆಯನ್ನು ನೋಡಿದ ಚಿಕ್ಕಮ್ಮ, "ಏನಾಯಿತು?" ಎಂದು ಕೇಳಿದರು. ನಾನು ಈ ಕಥೆಯನ್ನು ಹೇಳಿದೆ. ಆದರೆ ಇದು ನಿಜವೆಂದು ಸಾಬೀತು ಮಾಡಲು ಅವರೀಗ ಈ ಜಗತ್ತಿನಲ್ಲೇ ಇಲ್ಲ. ಆದರೆ ಇದು ಸತ್ಯ. ನನ್ನ ಬದುಕಿನಲ್ಲಿ ಇದುವರೆಗೆ ಹೀಗೆ ನಡೆದಿಲ್ಲ.

ನಿನ್ನ ಈ ಕಥೆ ನಿನ್ನ ಮಣ್ಣಿನ ವಾಸನೆಯನ್ನು ಸೂಚಿಸುತ್ತದೆ ಎಂದು ಕೆಲವು ಓದುಗರು ನನಗೆ ಹೇಳಿದರು. ಕೆಲವರು ಇದನ್ನು ಕನ್ನಡದಲ್ಲಿ ಅನುವಾದಿಸಲು ಮುಂದೆ ಬಂದಿದ್ದರು. ನಂತರ ಏನೂ ಆಗಲಿಲ್ಲ. ನನ್ನ ಮಟ್ಟಿಗೆ ಈ ಕಥೆ ಪವಿತ್ರವಾಗಿದೆ. ಇದನ್ನು ನನ್ನ ಕಿವಿಯಲ್ಲಿ ಹೇಳಿದ್ದು ಯಾವುದೋ ಒಂದು ಅದೃಶ್ಯ ಶಕ್ತಿ. ಈ ಕಥೆಯನ್ನು ಓದಿದಾಗಲೆಲ್ಲಾ ಮೈ ರೋಮಾಂಚನಗೊಳ್ಳುತ್ತಿತ್ತು. ಈಗ ಕಂಪ್ಯೂಟರ್ ಮುಂದೆ ಕುಳಿತು ಕತೆಯನ್ನು ಟೈಪ್ ಮಾಡುವಾಗಲೂ ಅದೇ ಅನುಭವ.

೧೯೮೦ರಲ್ಲಿ ಕೆಂಬೆರಳ್ಳಿಯಲ್ಲಿ ಭೇಟಿಯಾದ 'ಕೆಂಚಿ' ಮತ್ತು 'ಗೋಪು'.

ವಿದೇಶದಿಂದ ಸ್ವದೇಶಕ್ಕೆ ಬಂದಾಗ ಕೆಲವೊಮ್ಮೆ ಸ್ವದೇಶವೂ ಅಪರಿಚಿತವಾಗುವುದು ಸಹಜವೇ ಆಗಿದೆ. ಹೀಗಾಗಿ ನೋಡಿದ ಸ್ಥಳಗಳನ್ನೇ ಮತ್ತೆ ನೋಡುವುದು, ತಿರುಗಾಡಿದ ರಸ್ತೆಗಳಲ್ಲಿಯೇ ಮತ್ತೆ ತಿರುಗಾಡುವುದು, ಬಸ್ಸುಗಳಿಗಾಗಿ ಕಾಯುವುದು ಎಲ್ಲವೂ ಸಹಜ ವೆಂದೇ ನನಗೆ ಅನಿಸುತ್ತಿದೆ.

ಹೀಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ಮಂಗಳೂರನ್ನು ತಲುಪಿದ ನಾನು ಮತ್ತು ನನ್ನ ಕುಟುಂಬ ಬಲಗೈಯ ಅಂಗೈಯಂತಿರುವ ಬೆಂಗಳೂರಿಗೆ ಹೋಗಲು ಆಲೋಚಿಸಿದ್ದರಲ್ಲಿ ನನಗೆ ಯಾವ ವಿಶೇಷವೂ ಕಾಣಲಿಲ್ಲ. ಆದರೆ ಅಲ್ಲಿಗೆ ತಲುಪಿದ ಎರಡೇ ದಿನಗಳಲ್ಲಿ ನಮ್ಮ 'ಬೆಂಗಳೂರು ಉತ್ಸಾಹ' ತಣ್ಣಗಾಯಿತು. ನನ್ನ ಮಗಳು

ಲಾಲ್‌ಬಾಗಿನ ಮಂಗಗಳನ್ನು ನೋಡಿದ್ದಾಯಿತು. ನನ್ನ ಮಡದಿ ಕಮರ್ಶಿಯಲ್ ಸ್ಟ್ರೀಟ್‌ನ ಶಾಪಿಂಗ್ ಮಾಡಿದ್ದೂ ಆಯ್ತು. ನಾನು ಬ್ರಿಗೇಡ್ ರೋಡಿನಲ್ಲಿ ಅಲೆದಾಡಿದ್ದೂ ಆಯಿತು.

ಮುಂದೆ ಏನು?

ಇಲ್ಲಿ ನೋಡುವಂತಹ ಸ್ಥಳಗಳೇನಾದರೂ ಇರಬಹುದು ಎಂದಳು ನನ್ನ ಹೆಂಡತಿ. ಅವಳಿಗೆ ಒಂದೇ ಜಾಗದಲ್ಲಿ ಇರುವುದೆಂದರೆ ಅಲರ್ಜಿ. ತುಂಬಾ ದುಬಾರಿ ಹವ್ಯಾಸವಿದು. ಇರಲಿ.

"ಹೊಟೇಲ್ ಟ್ರಾವೆಲ್ ಡೆಸ್ಕಿನಲ್ಲಿ ಯಾಕೆ ವಿಚಾರಿಸುವುದಿಲ್ಲ? ಸುಮ್ಮನೆ ಕುಳಿತು ಬಿಯರ್ ಕುಡಿದರೆ ಸಾಕೇ?"

ಹೀಗೆ ಒತ್ತಿಹೇಳುವುದು ಬೇಡವಿತ್ತು ಅನ್ನೋಣ. ನಾನು ನಿಟ್ಟುಸಿರು ಬಿಟ್ಟು ಟ್ರಾವೆಲ್ ಡೆಸ್ಕ್ ಹತ್ತಿರ ಹೋಗಿ 'ನೋಡುವಂತಹ ಇಂಟರೆಸ್ಟಿಂಗ್ ಸ್ಥಳಗಳು ಇವೆಯಾ?' ಎಂದು ವಿಚಾರಿಸಿದೆ, ಅವನು 'ಇಲ್ಲ' ವೆಂದು ಹೇಳುವ ಭರವಸೆಯಿಂದ. ಆದರೆ ಅವನು ಹೇಳಿದ,

"ನೀವು ಬೆಂಗಳೂರಿಗೆ ಬಂದವರು ಬನ್ನೇರುಘಟ್ಟ ನೋಡದೆ ಹಿಂತಿರುಗಬಾರದು. ಅಲ್ಲಿ ವಿವಿಧ ಪ್ರಾಣಿಗಳು, ಉರಗಗಳು, ಪಕ್ಷಿಗಳು ಇರುವ ಪಾರ್ಕ್ ಇದೆ. ಇದರ ನಿರ್ಮಾಣಕ್ಕಾಗಿ ನಮ್ಮ ಕರ್ನಾಟಕ ಸರಕಾರ ಹಣ ಹಾಗೂ ಶ್ರಮ ಎರಡನ್ನೂ ವ್ಯಯ ಮಾಡಿದೆ"

ಇವನು ನಿಜವಾಗಿಯೂ ಅಪ್ಪಟ ಕನ್ನಡಿಗ. ನಾನು ಭುಜ ಹಾರಿಸಿದೆ.

"ಬನ್ನೇರುಘಟ್ಟಕ್ಕೆ ಹೊಗಲು ಬಸ್ಸುಗಳಿವೆ. ಬೇಕಿದ್ದರೆ ನಾನು ಟ್ಯಾಕ್ಸಿ ಅರೆಂಜ್ ಮಾಡ್ತೀನಿ." ಟ್ರಾವೆಲ್ ಏಜೆಂಟ್ ಹೇಳಿದ. ನನ್ನ ಮಡದಿಯ ಶಾಪಿಂಗ್ ನಂತರ ಟ್ಯಾಕ್ಸಿಗೆ ಬಾಡಿಗೆ ಕೊಡುವ ಶಕ್ತಿ ನನ್ನಲ್ಲಿ ಇರಲಿಲ್ಲ. ನಾನು 'ಬೇಡ'ವೆಂದು ತಲೆಯಲ್ಲಾಡಿಸಿದೆ.

ಮರುದಿನ ಬೆಳಿಗ್ಗೆ ನಾವು ರಿಕ್ಷಾ ಗೊತ್ತು ಮಾಡಿದೆವು. ಒಂದೂವರೆ ಪಟ್ಟು ಬಾಡಿಗೆ ಕೊಡಬೇಕೆಂದು ರಿಕ್ಷಾದವ ಹೇಳಿದ. ನಾನು ಒಪ್ಪಿಕೊಂಡೆ. ನಾವು ಮೂರು ಮಂದಿ ರಿಕ್ಷಾ ಹತ್ತಿ ಕುಳಿತೆವು. ರಿಕ್ಷಾ ನಗರವಲಯವನ್ನು ಬಿಟ್ಟು ನಿರ್ಜನ ರಸ್ತೆ ಹಿಡಿದಾಗ ನನ್ನ ಪತ್ನಿಗೆ ಸಂದೇಹ ಉಂಟಾಯಿತು. "ಇವನು ನಮ್ಮನ್ನೆಲ್ಲಾ ಎಲ್ಲಿಗೆ ಕೊಂಡುಹೋಗುತ್ತಿದ್ದಾನೆ? ಇಷ್ಟು ಬಾಡಿಗೆ ಆಗುವುದಾದರೆ ಬೇಡವಿತ್ತು" ಎಂದು ಹೇಳಿದಳು. ನಾನು ಬಂದ ಕೋಪವನ್ನು ತಡೆಹಿಡಿದೆ. ಯಾರಿಗೆ ಬೇಕಿತ್ತು ಈ ಪ್ರಯಾಣ? ಮಗಳಂತೂ ಬೀಸುವ ತಂಗಾಳಿಗೆ ತೂಕಡಿಸುತ್ತಾ, ಅಮ್ಮನ ತೊಡೆಯ ಮೇಲೆ ಹಾಯಾಗಿ ಮಲಗಿದಳು. ಸುಮಾರು ೧೦–೧೨ ಕಿಲೋಮೀಟರ್ ಚಲಿಸಿದ ನಂತರ ರಿಕ್ಷಾ ಇಂಜಿನ್ ಸದ್ದುಮಾಡತೊಡಗಿತು. ಸ್ವಲ್ಪ ಹೊತ್ತಿನಲ್ಲಿ ನಿಂತೇ ಬಿಟ್ಟಿತು. "ಏನಾಯಿತು?" ಎಂದು

ಆತಂಕದಿಂದ ವಿಚಾರಿಸಿದೆ, "ಪೆಟ್ರೋಲ್ ಖಾಲಿಯಾಯಿತೆ?" ಆತ ಮುಗುಳ್ನಕ್ಕ. 'ಇಂಜಿನ್ ಬಿಸಿಯಾಗಿದೆ ಇನ್ನು ಅರ್ಧ, ಮುಕ್ಕಾಲು ಗಂಟೆ ಇಲ್ಲಿ ನಿಲ್ಲಬೇಕಾಗಬಹುದು' ಎಂದು ಹೇಳಿದ.

"ಇದು ನಿನಗೆ ಮೊದಲೇ ತಿಳಿಯಬೇಕಿತ್ತಲ್ಲವೇ?" ನಾನು ಕೋಪಗೊಂಡೆ. ನಾವು ಯಾವ ಕಾಡಿನಲ್ಲಿದ್ದೇವೆ?

"ನನಗೆ ಹೇಗೆ ಗೊತ್ತಾಗಬೇಕು ಸರ್? ನಿನ್ನೆ ಇಂಜಿನ್ ರಿಪೇರಿ ಮಾಡಿಸಿದ್ದೆ. ಮರುದಿನವೇ ಇಷ್ಟು ದೂರದ ಸವಾರಿ ಸಿಗುತ್ತದೆ ಎಂದು ನನಗೇ ಗೊತ್ತಿರಲಿಲ್ಲ. ಇಂಜಿನ್ ಬಿಸಿಯಾಗದೆ ಇನ್ನೇನಾಗುತ್ತದೆ?" ಅವನು ತನ್ನದೇ ತಮ್ಮಟೆ ಬಾರಿಸತೊಡಗಿದ. "ನಿಮಗೆ ಇಷ್ಟವಿಲ್ಲದಿದ್ದರೆ ಇಲ್ಲಿವರೆಗಿನ ಬಾಡಿಗೆ ಕೊಡಿ, ಮುಂದೆ 'ಕೆಂಬರಳ್ಳಿ' ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣವಿದೆ. ಅಲ್ಲಿಂದ ಬನ್ನೇರುಘಟ್ಟಕ್ಕೆ ಬೇಕಾದಷ್ಟು ಬಸ್ಸುಗಳು ಇವೆ ಎಂದು ಹೇಳಿದ. ನನ್ನ ಮಡದಿ ನಡುವೆಯೇ, "ಬೇಡ, ಬೇಡ. ಒಂದು ಗಂಟೆ ಕಾದರೂ ಅಡ್ಡಿ ಇಲ್ಲ. ನಾವು ರಿಕ್ಷಾದಲ್ಲೇ ಹೋಗೋಣ" ಎಂದಳು. ರಿಕ್ಷಾ ಡ್ರೈವರ್ ನಕ್ಕ. "ಹಾಗಾದರೆ ಒಳ್ಳೆಯದು. ಹತ್ತಿರದಲ್ಲಿಯೇ ಒಂದು ಚಿಕ್ಕ ಅಂಗಡಿ ಇದೆ. ಅಲ್ಲಿ ನೆರಳು ಇದೆ. ಕುಡಿಯಲು ಏನಾದರೂ ಸಿಗಬಹುದು. ನಾನು ರಿಕ್ಷಾವನ್ನು ಅಲ್ಲಿಗೇ ತರುತ್ತೇನೆ" ಎಂದು ಹೇಳಿದ. ನಾವು ಕೆಳಗಿಳಿದೆವು.

ಸುಮಾರು ಐವತ್ತು, ನೂರು ಹೆಜ್ಜೆ ಮುಂದೆ ಹೋದೊಡನೆ ನಮಗೆ ಕೆಂಬರಳ್ಳಿ ಬಸ್‌ನಿಲ್ದಾಣ ಸಿಕ್ಕಿತು. ದೊಡ್ಡದೊಂದು ಆಲದ ಮರ. ಅದರ ಕಟ್ಟೆಯ ಮುಂದೆ ಏಳೆಂಟು ಮಂದಿ ಬಸ್ಸಿಗಾಗಿ ಕಾದು ಹರಟೆ ಹೊಡೆಯುತ್ತಿದ್ದಾರೆ. ಆಲದ ಮರದ ಬಲಬದಿಯಲ್ಲಿ ಪುಟ್ಟದೊಂದು ಅಂಗಡಿ. ಅದರ ಗೋಡೆಯ ಮೇಲೆ ನಟಸಾರ್ವಭೌಮ ರಾಜಕುಮಾರರ ದೊಡ್ಡದೊಂದು ಪೋಸ್ಟರ್. ಅದಕ್ಕೆ ತಾಗಿಕೊಂಡು ಅಮಿತಾಬ್ ಬಚ್ಚನ್ ಚಿತ್ರ. ಕೆಳಭಾಗದಲ್ಲಿ ಸಿಲ್ಕ್‌ಸ್ಮಿತಾಳ ಚಿತ್ರ. ಎಂತಹ ಕಾಂಬಿನೇಶನ್ ಎಂದುಕೊಂಡು ನಾನು ಹಲ್ಲುಕಚ್ಚಿದೆ. ಅಂಗಡಿಯಿಂದ ಮೂರು ಫಾಂಟಾ ಖರೀದಿಸಿದೆ. 'ನಿನಗೆ ಪೆಗ್ ಸಿಗಲಿಕ್ಕಿಲ್ಲವೇನೋ' ನನ್ನ ಮಡದಿ ಚುಡಾಯಿಸಿದಳು. ನಾನು ಉತ್ತರಿಸಲು ಹೋಗಲಿಲ್ಲ. ತಂಪಾದ ಪಾನೀಯವನ್ನು ಹೀರುತ್ತಾ ಸುತ್ತಲಿನ ಸೌಂದರ್ಯವನ್ನು ಸವಿಯತೊಡಗಿದೆ.

ಸುಂದರ, ಪ್ರಶಾಂತವಾದ ಊರು. ಸ್ವರ್ಗದಂತಹ ಸೊಬಗು. ನಿರ್ಮಲವಾದ ಗಾಳಿ. ನಾನು ದೀರ್ಘವಾಗಿ ಉಸಿರೆಳೆದುಕೊಂಡೆ. ರಿಕ್ಷಾ ಬಿಸಿಯಾದರೆ ಏನಂತೆ? ಇದು ಒಂದು ರೋಚಕ ಅನುಭವವೇ. 'ನಿತ್ಯದ ಯಾಂತ್ರಿಕ ಬದುಕಿನಿಂದ ದೂರವಾಗಿ ಬನ್ನೇರು ಘಟ್ಟಾ, ಬರುತ್ತೇವೆ ನಾವು ನಿನ್ನ ಹತ್ತಿರ'–

ನಾನು ಫಾಂಟಾ ಖಾಲಿ ಮಾಡಿದೆ. ದೊಡ್ಡ ತೇಗು ಬಂತು. ಹೊಟ್ಟೆ ಭಾರವೆನಿಸಿತು. 'ಈಗ ಬಂದೆ' ಎಂದು ಹೇಳುತ್ತಾ ಮರೆಯ ಜಾಗವನ್ನು ಹುಡುಕಿ ಹೆಜ್ಜೆ ಹಾಕತೊಡಗಿದೆ.

ಸುತ್ತಮುತ್ತ ಎಲ್ಲಿಯೂ ಅಂತಹ ಜಾಗ ಕಣ್ಣಿಗೆ ಬೀಳಲಿಲ್ಲ. ಸುಮಾರು ದೂರ ಕ್ರಮಿಸಿದ ನಂತರ ಪೊದೆಗಳಿರುವ ಜಾಗ ಕಂಡುಬಂತು. ಅಲ್ಲೊಂದು ಪಾಳುಬಿದ್ದ ಕಟ್ಟಡವೂ ಇತ್ತು. ಕಲ್ಲುಗಳು..ಗೋಡೆಗಳು..ನೋಡಿದರೆ ಈ ಶತಮಾನದ್ದು ಅಲ್ಲವೆಂಬ ಭಾವನೆ. ನಾನು ನನ್ನ ಕೆಲಸ ಮುಗಿಸಿದೆ. ಅಷ್ಟರಲ್ಲಿ ನನ್ನ ದೃಷ್ಟಿ ಅಲ್ಲಿರುವ ಎಲೆಗಳ ಕಡೆಗೆ ಹರಿಯಿತು. ವಿಚಿತ್ರವೆನಿಸುವ ಅತ್ಯಂತ ಶೋಭೆಯಿಂದ ಕೂಡಿದ ಎಲೆಗಳು. ನೆಲದಿಂದ ಸುಮಾರು ಒಂದೂವರೆ ಅಡಿಯಷ್ಟು ಎತ್ತರಕ್ಕೆ ಬೆಳೆದ ಗಿಡ. ಪ್ರತಿಯೊಂದು ಗಿಡದಲ್ಲಿ ಎರಡೇ ಎಲೆಗಳು. ನೋಡಲು ಕೆಸುವಿನ ಎಲೆಗಳಂತೆ. ಆದರೆ ಬಣ್ಣಮಾತ್ರ ಪೂರ್ತಿ ಹಸಿರಲ್ಲ. ಎಲೆಯ ಹಸಿರುಬಣ್ಣದ ಮೇಲೆ ೪-೫ ಕೆಂಪು ಗೆರೆಗಳು. ರಕ್ತದ ಬೆರಳುಗಳಂತೆ.

ನಾನು ಮೂಕನಾಗಿ ಆ ಎಲೆಗಳನ್ನು ನೋಡುತ್ತಾ ನಿಂತುಕೊಂಡೆ. ಸುತ್ತಮುತ್ತ ಅಂತಹ ಎಲೆಗಳ ಅನೇಕ ಗಿಡಗಳು ಇದ್ದವು. ಈ ಎಲೆಗಳನ್ನು ನೋಡಿದರೆ ನನ್ನ ಮಗಳು ಖುಷಿ ಪಡುತ್ತಾಳೆಂದುಕೊಂಡು ನಾನು ಅದನ್ನು ಕೀಳಲು ಕೈಚಾಚಿದೆ.

"ದಯವಿಟ್ಟು ಆ ಎಲೆಗಳನ್ನು ಕೀಳಬೇಡಿ" ಸ್ಪಷ್ಟವಾದ ಗಂಭೀರ ಧ್ವನಿ ಕೇಳಿ ನಾನು ಅತ್ತ ನೋಡಿದೆ.

ಜೀರ್ಣವಾದ ಆ ಕಟ್ಟಡದ ಕಪ್ಪು ಕಲ್ಲೊಂದರ ಮೇಲೆ ಅವನು ಕುಳಿತಿದ್ದಾನೆ. ಅಲ್ಲಿಯವರೆಗೆ ಅವನು ನನ್ನ ಕಣ್ಣಿಗೆ ಕಾಣಿಸಿರಲೇ ಇಲ್ಲ. ಇದ್ದಕ್ಕಿದ್ದಂತೆ ಉದ್ಭವಿಸಿದಂತೆ ಕಂಡ. ನನ್ನ ಕೈ ತನ್ನಷ್ಟಕ್ಕೆ ಹಿಂದೆ ಸರಿಯಿತು. ನಾನು ನೆಟ್ಟಗೆ ನಿಂತುಕೊಂಡೆ. ಎಲೆಗಳನ್ನು ಕೀಳಿದರೆ ಇವನಿಗಾಗುವ ನಷ್ಟವೇನು? ಅವನ ಆಕ್ಷೇಪದಲ್ಲಿ ನನಗೆ ಒಂದು ವಿಧದ ಖಚಿತತೆ ಭಾಸವಾಯಿತು. ಮಾನಸಿಕವಾಗಿ ನಾನು ಖಿನ್ನನಾದೆ. ನನ್ನಲ್ಲಿ ಹೇಳಲಾಗದ ಚಡಪಡಿಕೆ ಉಂಟಾಯಿತು. ನಾನು ಅವನತ್ತ ಹೆಜ್ಜೆ ಹಾಕಿದೆ.

"ನೀನು ಈ ಗಿಡಗಳ ಮಾಲಿಕನೋ, ಪಾಲಕನೋ?" ಅವನನ್ನು ಸಮೀಪಿಸುತ್ತಿದ್ದಂತೆ ಕೇಳಿದೆ. ಆತ ನನ್ನನ್ನು ಶೂನ್ಯದೃಷ್ಟಿಯಿಂದ ನೋಡಿದ.

"ಇರಬಹುದು" ಅವನ ಉತ್ತರ ಸ್ಪಷ್ಟವಾಗಿತ್ತು. ಇದೀಗ ಅವನ ಧ್ವನಿಯನ್ನು ಎರಡನೇ ಬಾರಿ ಕೇಳಿದೆ. ಆದರೂ ನಾನು ನಿನ್ನಲ್ಲಿ ವಿನಂತಿಸಿಕೊಳ್ಳುತ್ತೇನೆ.

ಹೌದು, ಅವನು ಹೇಳಿದುದರಲ್ಲಿ ಯಾವುದೋ ಆಜ್ಞೆ ಇತ್ತು. ವಿನಂತಿಯಂತೂ ಅಲ್ಲ. ನಾನು ಕಿಸೆಯಿಂದ ಸಿಗರೇಟ್ ಪ್ಯಾಕ್ ತೆಗೆದು, ಸಿಗರೇಟ್ ಹಚ್ಚುವ ನೆವದಲ್ಲಿ ಆ ವಿಚಿತ್ರ ಮತ್ತು ಅಸ್ಪಷ್ಟ ವ್ಯಕ್ತಿಯನ್ನು ಪರೀಕ್ಷಿಸಿದೆ. ಅವನ ವಯಸ್ಸನ್ನು ಅಂದಾಜಿಸಲು ನನಗೆ ಸಾಧ್ಯವಾಗಲಿಲ್ಲ. ದಪ್ಪ ಕೂದಲು, ಮಿಂಚುವ ತೀಕ್ಷ್ಣ ಕಣ್ಣುಗಳು. ಹಣೆಯಲ್ಲಿ, ಕೂದಲಿನಲ್ಲಿ ವಯಸ್ಸಿನ ಕುರುಹು ಯಾವುದೂ ಇಲ್ಲ. ಅವನ ಕಣ್ಣುಗಳ ತೀಕ್ಷ್ಣತೆಯಿಂದಾಗಿ ಅವನನ್ನು ಹೆಚ್ಚು ಹೊತ್ತು ನೋಡಲಾರದಾದೆ. ಸಿಗರೇಟಿನ ಹೊಗೆಯನ್ನು ಮೂಗು, ಬಾಯಿಂದ ಹೊರಬಿಡುತ್ತಾ ವಿಚಾರಿಸಿದೆ,

"ಹಾಗಾದರೆ ಈ ಎಲೆಗಳನ್ನು ನಾನು ಕೀಳಬಾರದೇ?" ಅವನ ಮುಖವನ್ನು ದಿಟ್ಟಿಸಿ ನೋಡತೊಡಗಿದೆ. ಅದು ನಿರ್ಮಲ, ನಿಷ್ಕಳಂಕವಾಗಿತ್ತು. ಈ ಕಾಲದಂತೂ ಅಲ್ಲವೇ ಅಲ್ಲ. "ಯಾಕೆ ಎಂದು ಕೇಳಬಹುದೇ?"

"ಈ ಎಲೆಗಳ ಹಿಂದೆ ಒಂದು ಘಟನೆ ಇದೆ ಬಾಬೂ"

"ಘಟನೆ!" ನಾನು ನಕ್ಕೆ. ಅಂದರೆ ಒಂದು ಕಥೆ. ನಾನು ಗಡಿಯಾರ ನೋಡಿಕೊಂಡೆ. ರಿಕ್ಷಾ ಸರಿಯಾಗಲು ಇನ್ನೂ ಅರ್ಧ ಗಂಟೆ ಇದೆ.

"ಪ್ರಶ್ನೆ ಕೇಳಲು ಎಲ್ಲರಿಗೂ ಸಮಯವಿದೆ. ಆದರೆ ಸತ್ಯವನ್ನು ತಿಳಿದುಕೊಳ್ಳಲು ಯಾರೂ ಸಿದ್ಧರಿಲ್ಲ" ಅವನು ಹೇಳಿದ.

"ಈಗಲೂ ಕಥೆ ಕೇಳಿ ಹೊಟ್ಟೆ ತುಂಬುವ ಮನುಷ್ಯರು ಇದ್ದಾರೆ"ನಾನು ಉತ್ತರಿಸಿದೆ.

"ಕಥೆ ಕೇಳಿ ಅಪೂರ್ಣವಾಗಿದ್ದ ಹೃದಯಕ್ಕೆ ತಂಪು ಸಿಗುವ ಹಾಗೆ ಮಾಡುವವರು ತುಂಬಾ ವಿರಳ"

"ಆಗಲಿ" ನಾನು ನಗುವನ್ನು ಬೆರೆಸುತ್ತಾ ಉತ್ತರಿಸಿದೆ, "ಹೇಳು ನಿನ್ನ ಕಥೆ.... ನನ್ನ ಸಮಯ ಸ್ವಲ್ಪವಾದರೂ ಕಳೆಯಲಿ"

ಅವನು ಒಮ್ಮೆಲೇ ಕಣ್ಣೆತ್ತಿ ನನ್ನನ್ನು ನೋಡತೊಡಗಿದ. "ಸಮಯ ಕಳೆಯಲಿಕ್ಕೋ? ಸಮಯದ ಮಹತ್ವ ನಿಮಗೇನು ಗೊತ್ತು? ಈ ಪುರುಸೊತ್ತಿಲ್ಲದ ವೇಳೆಯಲ್ಲಿಯೂ ನೀವು ಸಮಯ ಕಳೆಯಲು ಎಂದು ಅಳುತ್ತಿದ್ದೀರಿ. ಸಮಯವನ್ನು ಕಳೆಯಲು ವಿವಿಧ ಮನರಂಜನೆಯನ್ನು ಹುಡುಕುತ್ತೀರಿ. ಮದ್ಯದ ಅಮಲಿನಲ್ಲಿ ಹೊರಳಾಡುತ್ತೀರಿ"

"ನಿನ್ನ ತತ್ವಶಾಸ್ತ್ರದ ಅಗತ್ಯ ನನಗಿಲ್ಲ ನಾನು ಸುಧಾರಿಸಿಕೊಳ್ಳುತ್ತಾ ಹೇಳಿದೆ, ನನ್ನ ಹತ್ತಿರ ಸಮಯ ಕಡಿಮೆ ಇದೆ. ನಾನೊಬ್ಬ ಲೇಖಕ. ನಿನ್ನ ಈ ಕಥೆಯಲ್ಲಿ, ಈ ಘಟನೆಯಲ್ಲಿ ನನಗೆ ಏನಾದರೂ ಸಿಗಬಹುದು"

ಅವನು ಏನನ್ನೋ ಹುಡುಕಾಡುವವನಂತೆ ಸುತ್ತಲೂ ದೃಷ್ಟಿ ಹರಿಸಿದ.

"ಹಲವು ವರ್ಷಗಳ ಹಿಂದೆ...ಇದೇ ಜಾಗದಲ್ಲಿ ತರುಣ ಪ್ರೇಮಿಗಳ ಜೋಡಿಯೊಂದು ಇದೇ ಮೆಟ್ಟಿಲ ಮೇಲೆ ನಿಂತುಕೊಂಡಿತ್ತು. ಶ್ಯಾಮಲವರ್ಣದ 'ಕೆಂಬಿ' ಅಪೂರ್ವ ಸುಂದರ ಹೆಣ್ಣು. ಸೊಂಪಾದ ತಲೆಕೂದಲು. ಮಿನುಗುವ ಕಣ್ಣುಗಳು. ತುಂಬಿದ ಎದೆ. ಸಣ್ಣನಡು. ಸುಂದರವಾದ ಕೈಗಳು. ಗುಲಾಬಿ ಬಣ್ಣದ ಅಂಗೈ ಮೃದುವಾಗಿ ಕೋಮಲವಾಗಿ ಇದ್ದವು. ಹೂವಿನಂತಿದ್ದ ಅವಳ ಅಂಗೈಯ ಬಿಸಿ ಅವಳ ಪ್ರೇಮಿಗೆ ಮಾತ್ರ ಮೀಸಲಾಗಿತ್ತು. ಅವನೇ 'ಗೋಪು'. ಕೆಂಬಿಯ ತಂದೆ ಈ ಪಾಳೇಗಾರನ ಬಳಿ ಕೆಲಸವನ್ನು ಮಾಡುತ್ತಿದ್ದ ಮತ್ತು ತನ್ನ ಕುಟುಂಬವನ್ನು ಸಾಕುತ್ತಿದ್ದ. ಗೋಪು ಕೂಡಾ ಇಲ್ಲಿಯೇ ತನ್ನ ಸ್ವಂತ ತುಂಡುನೆಲದಲ್ಲಿ ಸಾಗುವಳಿ ಮಾಡಿಕೊಂಡಿದ್ದವನು. ಅವನಿಗೆ

ತನ್ನವರೆನ್ನುವವರು ಯಾರೂ ಇರಲಿಲ್ಲ. ಹೀಗಾಗಿ ಕೆಂಬಿಯ ಪ್ರೀತಿ ಅವನಿಗೆ ಸರ್ವಸ್ವವಾಗಿತ್ತು. ಅವರ ಜೀವನದಲ್ಲಿ ಎಲ್ಲವೂ ಸುಂದರವಾಗಿತ್ತು. ಅಲ್ಲಿ ಕಷ್ಟವೆಂಬ ಮೋಡ ಒಂದೂ ಇರಲಿಲ್ಲ.

ಹೀಗಿರುವಾಗ ಕೆಂಬಿಯ ತಂದೆ ಅನಾರೋಗ್ಯದಿಂದ ಹಾಸಿಗೆ ಹಿಡಿದನು. ಕೆಂಬಿಯ ಆಧಾರ ನೆಲಸಮವಾಯಿತು. ಸಾಲದುದಕ್ಕೆ ಗೋಪುವಿನ ಭೂಮಿಯಲ್ಲಿ ಬೆಳೆ ಸರಿಯಾಗಿ ಬೆಳೆಯಲಿಲ್ಲ. ತಂದೆಯ ಸಂರಕ್ಷಣೆ ಮತ್ತು ತನ್ನ ಮದುವೆಯ ಆಸೆ ಕೆಂಬಿಗೆ ಕೆಲಸ ಮಾಡಲು ಪ್ರೇರಣೆಯಾದವು. ಹಳ್ಳಿಯ ಪಾಳೇಗಾರ ತುಂಬಾ ದಯಾಳುವಾಗಿದ್ದ. ತನ್ನ ನಂಬಿಗಸ್ಥ ಆಳಿಗೆ ಮಗಳು ಇರುವ ಸಂಗತಿ ತಿಳಿದು ಅವನಲ್ಲಿ ದಯೆ ಹುಟ್ಟಿತು. ಅವನು ತನ್ನ ಅರಮನೆಯಲ್ಲಿ ಕೆಂಬಿಗೆ ಕೆಲಸ ಕೊಡಿಸಿದ. ಕಷ್ಟದ ಕೆಲಸವೇನೂ ಅಲ್ಲ. ಊಟದ ಮನೆಯ ಶುಚಿತ್ವ ಮತ್ತು ಊಟಕ್ಕೆ ಕುಳಿತುಕೊಳ್ಳುವವರ ಸೇವೆ ಮಾಡುವುದು ಇತ್ಯಾದಿ. ಆಮೇಲೆ ಈ ಪ್ರೇಮಿಗಳ ಜೀವನ ಸುಗಮ ಹಾದಿಯಲ್ಲಿ ಮುಂದುವರಿಯಿತು. ಆದರೂ ವಿಘ್ನಗಳು ನಾವು ಕರೆಯದೇ ಬರುತ್ತವೆ.

ಉಚ್ಚ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗಿದ್ದ ಪಾಳೇಗಾರನ ಮಗ ಶಿವ ಹಿಂತಿರುಗಿ ಬಂದ. ತಂದೆಯ ಶ್ರೀಮಂತಿಕೆಯಿಂದ ಮೊದಲೇ ವಿಲಾಸಿಯಾಗಿದ್ದವನು ವಿದೇಶದಲ್ಲಿ ಕಾಮ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದನು. ಸ್ತ್ರೀಸಂಗವಿಲ್ಲದೆ ಅವನು ರಾತ್ರಿಯನ್ನು ಕಳೆಯುತ್ತಿರಲಿಲ್ಲ. ಅವನು ಹೆಣ್ಣನ್ನು ಐಶ್ವರ್ಯದಿಂದ ಒಲಿಸಿಕೊಂಡು ತೃಪ್ತಿ ಪಡಿಸುತ್ತಿದ್ದ. ಆದರೆ ಅವನ ಕೈಗೆ ಸಧ್ಯಕ್ಕೆ ಸಿಗದವಳೆಂದರೆ 'ಕೆಂಬಿ' ಒಬ್ಬಳೇ. ಆಕೆಯದು ಸರಳ ಸ್ವಭಾವ, ಸಾದಾಸೀದ ನಡವಳಿಕೆ. ದುರ್ನಡತೆಗೆ ಇಂಬುಕೊಡುತ್ತಿರಲಿಲ್ಲ. ಕೆಂಬಿಗೊಬ್ಬ ಪ್ರೇಮಿ ಇರುವ ಸುದ್ದಿಯನ್ನು ಅವನ ಆಪ್ತರು ಅವನಿಗೆ ತಿಳಿಸಿದ್ದರು.

ಶಿವ ಎಷ್ಟು ಪುಸಲಾಯಿಸಿದರೂ ಕೆಂಬಿ ಅವನ ಬಲೆಗೆ ಬೀಳಲಿಲ್ಲ. ಕೆಂಬಿಗೆ ಅವನ ಕೆಟ್ಟ ನಡತೆಯ ಕುರಿತು ತಿಳಿದಿತ್ತು. ಆದರೂ ಅವಳಿಗೆ ತನ್ನ ಮತ್ತು ಗೋಪುವಿನ ಮೇಲೆ ನಂಬಿಕೆ ಇದ್ದುದರಿಂದ ಅವಳು ಅಧೀರಳಾಗಲಿಲ್ಲ. ಸ್ವಲ್ಪ ವರ್ಷ ಕೆಲಸ ಮಾಡಿ, ಹಣ ಸಂಪಾದಿಸಿ, ನಂತರ ಕೆಲಸ ಬಿಟ್ಟು ಗೋಪುವಿನ ತೋಳಿನಲ್ಲಿ ಬಂಧಿಯಾಗುವ ಕನಸನ್ನು ಅವಳು ಕಾಣುತ್ತಿದ್ದಳು. ಗೋಪು ಅವಳನ್ನು ಆಗಾಗ ಎಚ್ಚರಿಸುತ್ತಿದ್ದ. ಗೋಪುವಿಗೆ ಶಿವನ ದುರ್ಗುಣಗಳೆಲ್ಲಾ ತಿಳಿದಿದ್ದವು. ಆದರೂ ಕೆಂಬಿ ಅದನ್ನು ನಿರ್ಲಕ್ಷಿಸುತ್ತಾ ಬಂದಳು.

ಆ ರಾತ್ರಿ ಪಾಳೇಗಾರನ ಭೋಜನಶಾಲೆಯಲ್ಲಿ ಪಕ್ವಾನ್ನಗಳ ಔತಣ ನಡೆಯುತ್ತಿತ್ತು. ಉದ್ದವಾದ ಮೇಜಿನ ಒಂದು ಬದಿಯಲ್ಲಿ ಶಿವ ಶರಾಬು ಹಿಡಿದು ಕುಳಿತಿದ್ದ. ಅವನ ಸುತ್ತಲೂ ಅವನ ಲಫಂಗ ಸ್ನೇಹಿತರು ಕುಳಿತು ಕೆಟ್ಟದಾಗಿ ಮಾತನಾಡಿಕೊಳ್ಳುತ್ತಾ ತಮಾಷೆ ಮಾಡುತ್ತಿದ್ದರು. ಶಿವನ ತಂದೆ ತಮ್ಮ ಸಂಗಡಿಗರೊಂದಿಗೆ ಹತ್ತಿರದ ಹಳ್ಳಿಗೆ ಹೋಗಿದ್ದರು.

"ಊಟ ಬಡಿಸಿ" ಶಿವನ ಆಜ್ಞೆಯನ್ನು ಕೇಳಿ ಕೆಂಬಿ ಮತ್ತು ಇತರರು ಹೆದರಿ ತಟ್ಟೆ, ಪಾತ್ರೆಗಳನ್ನು ತೆಗೆದುಕೊಂಡು ಮೇಜಿನ ಬಳಿ ಬಂದರು. ಕೆಂಬಿಯ ಕೈಯಲ್ಲಿ

ದೊಡ್ಡ ಬೆಳ್ಳಿಪಾತ್ರೆ ಇತ್ತು. ಅದರಲ್ಲಿ ಸುವಾಸನೆಯುಕ್ತ ರುಚಿಕರವಾದ ಬಿಸಿಸಾರು ಇತ್ತು. ಅವಳು ಮೇಜಿನ ಮೇಲೆ ಬಗ್ಗಿ ಬಡಿಸುತ್ತಿರುವಾಗ ಎಲ್ಲರ ದೃಷ್ಟಿ ಅವಳ ಸುಪುಷ್ಟ ಎದೆಯತ್ತ ಚಲಿಸುತಿತ್ತು. ಶಿವ ಮಾತ್ರ ಗಂಭೀರವಾಗಿದ್ದ. ಅವನ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎನ್ನುವುದು ಆತನಿಗೇ ಗೊತ್ತಿರಲಿಲ್ಲ. ಆದರೆ ಒಂದು ವಿಚಾರವನ್ನು ಮಾತ್ರ ಅವನು ನಿಶ್ಚಯಿಸಿದ್ದ- "ಈ ಕೆಂಬಿ ಇಂದು ರಾತ್ರಿ ನನಗೆ ಬೇಕು"

ಸಾರನ್ನು ಬಡಿಸುತ್ತಾ ಕೆಂಬಿ ಶಿವನ ಬಳಿ ಬಂದಳು. ಗಂಭೀರವಾದ ಆಲೋಚನೆಯಲ್ಲಿ ಮುಳುಗಿದ್ದ ಶಿವ ಅವಳತ್ತ ದೃಷ್ಟಿ ಹಾಯಿಸಲಿಲ್ಲ. ಊಟದ ಸಾಲಿನಲ್ಲಿ ಅಸಹನೀಯ ಮೌನ ಕವಿದಿತ್ತು. ಬೆಳ್ಳಿಯ ಸಟ್ಟುಗದಲ್ಲಿ ಸಾರನ್ನು ತುಂಬಿಕೊಂಡ ಕೆಂಬಿ ಅವನಿಗೆ ಬಡಿಸಲೆಂದು ಬಗ್ಗಿಕೊಂಡಳು. ಅಷ್ಟರಲ್ಲಿ ಶಿವ ತನ್ನ ಆಟವನ್ನು ಪ್ರಾರಂಭಿಸಿದ. ಆತ ಒಮ್ಮೆಲೇ ತನ್ನ ಬಲಗೈಯನ್ನು ಚಾಚಿ, 'ನನಗೆ ಸಾರು ಬೇಡ' ಎಂಬಂತೆ ಕೈಯಾಡಿಸಿದ. ಇದನ್ನು ನಿರೀಕ್ಷಿಸದ ಕೆಂಬಿಯ ಸಮತೋಲನ ತಪ್ಪಿತು. ಅವಳ ಕೈಯಲ್ಲಿದ್ದ ಸಟ್ಟುಗ ಮೇಜಿನ ಮೇಲೆ ಬಿತ್ತು. ಪಾತ್ರೆಯಲ್ಲಿದ್ದ ಬಿಸಿ ಸಾರು ಶಿವನ ಮೈಮೇಲೆ ಚೆಲ್ಲಿಕೊಂಡಿತು. ಅನಿರೀಕ್ಷಿತವಾಗಿ ಶಿವ ಕಿರಿಚಿಕೊಂಡ. ಕೆಂಬಿಯ ಬಾಯಿಯಿಂದ ಸ್ವರ ಹೊರಡಲಿಲ್ಲ. ಶಿವ ಎದ್ದುನಿಂತು ಸಿಟ್ಟಿನಿಂದ ಹೂಂಕಾರ ಮಾಡಿ ಸೀದಾ ತನ್ನ ಕೋಣೆಗೆ ತೆರಳಿದ. ಹೆದರಿ ನಡುಗಿದ ಕೆಂಬಿ ದುಃಖದಿಂದ ಅಡುಗೆ ಮನೆ ಸೇರಿಕೊಂಡಳು.

ವೇಳೆ ಎಷ್ಟು ಕಳೆಯಿತೋ ಅವಳಿಗೆ ಗೊತ್ತಾಗಲೇ ಇಲ್ಲ. ಮುಖ್ಯ ಅಡುಗೆಯವಳು ಬಂದು ಅವಳ ಭುಜ ಹಿಡಿದು ಅಲುಗಾಡಿಸಿದಾಗಲೇ ಅವಳಿಗೆ ಎಚ್ಚರ. "ದರಿದ್ರ ಹುಡುಗಿ!" ಅವಳು ಕೋಪದಿಂದ ಅರಚಿಕೊಂಡಳು. ನೀನು ನಮ್ಮ ಮರ್ಯಾದೆ ತೆಗೆದೆ. ಚಿಕ್ಕ ಅರಸರ ಕೈಗೆ ನೋವು ಉಂಟುಮಾಡಿದೆ. ಅವರ ಕ್ಷಮೆ ಕೇಳುವುದನ್ನು ಬಿಟ್ಟು ಇಲ್ಲಿ ಕುಳಿತು ಅಳುತ್ತಿರುವೆಯಲ್ಲಾ?

"ನನ್ನದು ತಪ್ಪಾಯಿತು." ಕೆಂಬಿ ನಡುಗುವ ಸ್ವರದಿಂದ ಹೇಳಿದಳು.

"ನನ್ನ ಬಳಿ ಯಾಕೆ ಹೇಳುತ್ತಿ?" ಅವಳು ಹೇಳಿದಳು. "ಚಿಕ್ಕ ಧಣಿಯ ಕೋಣೆಗೆ ಹೋಗಿ ಅವರ ಕ್ಷಮೆಯನ್ನು ಕೇಳು. ಅವರ ಕೈಯಲ್ಲಿ ಎಷ್ಟು ಗುಳ್ಳೆಗಳು ಬಂದಿವೆ ಎಂದು ನಿನಗೆ ಗೊತ್ತೇನು?"

"ನನಗೆ ಹೆದರಿಕೆಯಾಗುತ್ತದೆ" ಕೆಂಬಿ ಭಯದಿಂದ ಉತ್ತರಿಸಿದಳು.

"ಎಂತಹ ಹೆದರಿಕೆ.... ಚಿಕ್ಕಧಣಿಗಳಲ್ಲಿ ಕ್ಷಮೆ ಕೇಳುವುದರಿಂದ ಗೋಪ್ಯವಿಗಾಗಿ ಕಾದಿರಿಸಿದ ನಿನ್ನ ಶೀಲವೇನೂ ಹಾಳಾಗುವುದಿಲ್ಲ. ನಮ್ಮ ಚಿಕ್ಕ ಧಣಿ ಮನಸ್ಸು ಮಾಡಿದರೆ ನಿನ್ನ ಗೋಪುವನ್ನು ಒಂದೇ ಕ್ಷಣದಲ್ಲಿ ನೆಲಸಮ ಮಾಡಬಹುದು. ನಾಳೆ ನಾನು ಎಚ್ಚರಿಸಲಿಲ್ಲ ಎಂದು ನನ್ನನ್ನು ದೂರಬೇಡ. ಚಿಕ್ಕಧಣಿ ಊಟವನ್ನೂ ಮಾಡಲಿಲ್ಲ. ಹೋಗು ತಡಮಾಡಬೇಡ"

ಕೆಂಬಿ ಕಣ್ಣೊರಸಿಕೊಂಡಳು. ಕೂದಲನ್ನು ಸರಿಪಡಿಸಿದಳು. ಅಡುಗೆ ಕೋಣೆಯಿಂದ ಹೊರಗೆ ಬಂದಳು. ಊಟದ ಕೋಣೆಯಲ್ಲಿ ಮೌನ ಕವಿದಿತ್ತು. ಅವಳು ಅದನ್ನು ದಾಟಿ ಮಹಡಿ ಮೆಟ್ಟಲೇರಿದಳು. ಹಾಸಿದ ರತ್ನಗಂಬಳಿಯನ್ನು ದಾಟಿ ಶಿವನ ಕೋಣೆಯ ಬಾಗಿಲನ್ನು ತಲುಪಿದಳು. ಗೋಪುವನ್ನು ಸ್ಮರಿಸಿಕೊಳ್ಳುತ್ತಾ ಇದ್ದ ಎಲ್ಲಾ ಧೈರ್ಯವನ್ನು ಒಟ್ಟುಗೂಡಿಸಿ ಬಾಗಿಲು ಬಡಿದಳು. ಸ್ವಲ್ಪ ಹೊತ್ತು ಕಳೆದ ಬಳಿಕ, "ಒಳಗೆ ಬರಬಹುದು" ಎಂಬ ಮಾತು ಕೇಳಿಬಂತು. ಅವಳು ಆ ದಪ್ಪ ಬಾಗಿಲನ್ನು ದೂಡಿ ಒಳಗೆ ಕಾಲಿಟ್ಟಳು. ಕೋಣೆಯ ನಡುಭಾಗದಲ್ಲಿರುವ ಮೆತ್ತನೆಯ ಹಾಸಿಗೆಯ ಮೇಲೆ ಶಿವ ಕುಳಿತಿದ್ದ. ಅವನ ಕೈಯಲ್ಲಿ ಮದಿರೆಯ ಪಾತ್ರೆ ಇತ್ತು. ಮುಖಭಾವ ಗಂಭೀರವಾಗಿತ್ತು. ಕೆಂಬಿಯನ್ನು ನೋಡಿ ಅವನು ಕೈಯಲ್ಲಿದ್ದ ಪಾತ್ರೆಯನ್ನು ಕೆಳಗಿಟ್ಟ.

"ಯಾಕೆ ಬಂದೆ?" ಅವನು ಕೇಳಿದ.

ಕೆಂಬಿ ಎರಡು ಹೆಜ್ಜೆ ಮುಂದೆ ಬಂದಳು. "ಕ್ಷಮೆ ಕೇಳಲು ಬಂದೆ ಧಣೀ" ಅವಳು ದೀನವಾಗಿ ನುಡಿದಳು, "ನಾನು ನಿಮ್ಮ ಕೈಗೆ ನೋವು ಮಾಡಿದೆ"

"ನೋವು," ಅವನು ತನ್ನ ಕೈಯನ್ನು ಮುಂದೆ ಚಾಚಿದ. "ನೀನು ತುಂಬಾ ನೋಯಿಸಿದೆ. ನೋಡು ನನ್ನ ಕೈಯಲ್ಲಿ ಎಷ್ಟು ಗುಳ್ಳೆಗಳು ಎದ್ದಿವೆ"

ಕೆಂಬಿ ನಡುಗಿದಳು.

"ಹೆದರಬೇಡ. ಹತ್ತಿರ ಬಾ. ನೀನು ಆ ಗೋಪುವಿನ ಆಸ್ತಿಯೆಂದು ನನಗೆ ಗೊತ್ತಿದೆ" ಅವನು ಹೇಳಿದ.

ಕೆಂಬಿಗೆ ಈಗ ಧೈರ್ಯ ಬಂತು. ಚಿಕ್ಕಧಣಿ ನಾನು ತಿಳಿದುಕೊಂಡಷ್ಟು ಕ್ರೂರಿಯಲ್ಲ, ಒಳ್ಳೆಯವನು. ಅವಳು ಹತ್ತಿರ ಹೋಗಿ ಬಗ್ಗಿ ಅವನು ಎತ್ತಿಹಿಡಿದ ಕೈಯನ್ನು ನೋಡಿದಳು. ಅಲ್ಲಿ ಒಂದೇ ಒಂದು ಗುಳ್ಳೆಯೂ ಇರಲಿಲ್ಲ. ಚರ್ಮ ಮಾತ್ರ ಸ್ವಲ್ಪ ಕೆಂಪಾಗಿದೆ, ಅಷ್ಟೇ. "ನೀವು ಒಪ್ಪಿದರೆ ಯಾವುದಾದರೂ ಮುಲಾಮು ಹಚ್ಚಲೇ ಧಣಿ?" ಅವಳು ಹೊಸ ಧೈರ್ಯದಿಂದ ಆದರೆ ನಮ್ರತೆಯಿಂದ ಕೇಳಿದಳು.

ಶಿವ ಕಿಸಕ್ಕನೆ ನಕ್ಕ. "ಎಷ್ಟೋ ಮುಲಾಮುಗಳು ನಿನ್ನ ಹತ್ತಿರವೇ ಇವೆ ಕೆಂಬೀ," ಅವನು ಹೇಳತೊಡಗಿದ. "ಆದರೂ ಈ ಬಡಕೈಗಳಿಗೆ ನಿನ್ನ ಸೊಂಪಾದ ಕೂದಲಿನ ತಂಪನ್ನು, ಚಿನ್ನದ ಎದೆಯ ಉಷ್ಣತೆಯನ್ನು ಅನುಭವಿಸುವ, ನಿನ್ನ ಈ ಸುಪುಷ್ಟ ದೇಹದ ಮೇಲೆ ಕೈಯಾಡಿಸುವ ಸ್ವಾತಂತ್ರ ದೊರೆತರೆ..."

ಧಣಿಗಳೇ.. ಕೆಂಬಿ ಕಿರಿಚಿ ಹಿಂದೆ ಸರಿದಳು. ಆದರೆ ಸಮಯ ಮೀರಿ ಹೋಗಿತ್ತು. ಅವನು ತನ್ನ ವಜ್ರಮುಷ್ಟಿಯಲ್ಲಿ ಅವಳನ್ನು ಹಿಡಿದುಕೊಂಡ. ನನ್ನ ಕೈಬಿಡಿ ಧಣಿಗಳೇ ಆಕೆ ಕಿರಿಚಿದಳು.

"ನಿನ್ನ ಇಡೀ ದೇಹ ನನ್ನ ಕೈವಶವಾಗುವವರೆಗೆ ನಾನು ಈ ಕೈಗಳನ್ನು ಬಿಡಲಾರೆ ಎಂದ ಶಿವ. ನೀನು ನನ್ನನ್ನು ಮತ್ತು ನನ್ನ ಸ್ನೇಹಿತರನ್ನು ತುಂಬಾ ಸತಾಯಿಸಿದೆ ಕೆಂಬಿ"

ಈ ಮಾತು ಕೇಳಿದ ಕೆಂಬಿ ಸುತ್ತಲೂ ನೋಡಿದಾಗ ಕೋಣೆಯಲ್ಲಿದ್ದ ಅವನ ಸ್ನೇಹಿತರು ಅವಳ ಕಣ್ಣಿಗೆ ಬಿದ್ದರು. ಅವಳ ತೀಕ್ಷ್ಣವಾದ ನೋಟಕ್ಕೆ ಆವರು ಬೆದರಿದರು.

"ನನ್ನ ಸ್ನೇಹಿತರು ತಾಳ್ಮೆಯನ್ನು ಕಳೆದುಕೊಂಡಿದ್ದಾರೆ ಕೆಂಬಿ, ಈಗ ಯಾವ ಗೋಪುವೂ ನಿನ್ನನ್ನು ಬಿಡಿಸಲು ಬರಲಾರ" ಎಂದು ಹೇಳಿ ಶಿವ ಅವಳನ್ನು ಹತ್ತಿರಕ್ಕೆ ಎಳೆದುಕೊಂಡ.

ಇದರಿಂದ ತಾನು ಬಚಾವಾಗಲಾರೆ ಎನ್ನುವುದು ಕೆಂಬಿಗೆ ಖಾತ್ರಿಯಾಯಿತು. ಆದರೆ ವಿಚಿತ್ರವೆಂದರೆ ಅವಳಲ್ಲಿ ಈಗ ಭಯವೇ ಇರಲಿಲ್ಲ. ಅವಳ ಕಣ್ಣುಗಳು ತೀಕ್ಷ್ಣವಾದವು. ಪಲ್ಲಂಗದ ಬಲಬದಿಯಲ್ಲಿ ಬೆಳ್ಳಿಯ ಹರಿವಾಣದಲ್ಲಿದ್ದ ತಲವಾರನ್ನು ಅವಳು ನೋಡಿದಳು. ಥಟ್ಟನೆ ಜಿಗಿದು ತನ್ನ ಇನ್ನೊಂದು ಕೈಯಿಂದ ಅದನ್ನು ಎತ್ತಿ ಶಿವನ ಹಿಡಿತದಲ್ಲಿದ್ದ ತನ್ನ ಕೈಯ ಮಣಿಗಂಟನ್ನು ಕತ್ತರಿಸಿದಳು.

ಇದು ಕ್ಷಣಮಾತ್ರದಲ್ಲಿ ಸಂಭವಿಸಿತು.

ಶಿವನ ಕೈಯಲ್ಲಿದ್ದ ಕೆಂಬಿಯ ಕೈ ಮಣಿಗಂಟಿನ ಹತ್ತಿರ ತುಂಡಾಗಿ ಪ್ರತ್ಯೇಕವಾಯಿತು. ಶಿವನ ಮೈ ಮತ್ತು ಮುಖದ ಮೇಲೆ ರಕ್ತ ಚಿಮ್ಮಿತು. ಭೀತಿಯಿಂದ ಕಿರುಚುತ್ತಾ ಶಿವ ಹಿಂದೆ ಸರಿದ. ತಾನು ಹಿಡಿದುಕೊಂಡಿದ್ದ ಕೆಂಬಿಯ ರಕ್ತಭರಿತ ನಿಸ್ತೇಜ ನಿರ್ಜೀವ ಕೈಯನ್ನು ಅವನು ಕಿಟಕಿಯಿಂದ ಹೊರಗೆಸೆದ. ಕೆಂಬಿ ತನ್ನದೇ ರಕ್ತದ ಮಡುವಿನಲ್ಲಿ ಕುಸಿದುಬಿದ್ದಳು.

ಇವೆಲ್ಲದರ ಸಾಕ್ಷಿಯಂತೆ ಕೆಂಬಿಯ ಕೈಯಲ್ಲಿದ್ದ ತಲವಾರು ಸದ್ದು ಮಾಡುತ್ತ ನೆಲದ ಮೇಲೆ ಬಿತ್ತು. ಅಂತ್ಯದ ಪ್ರಾರಂಭವಾಗಿತ್ತು.

ಪ್ರತಿರಾತ್ರಿ ಬಂಗಲೆಯಲ್ಲಿನ ಕೆಲಸ ಮುಗಿದ ಬಳಿಕ ಕೆಂಬಿಯನ್ನು ಮನೆಗೆ ಕರೆದೊಯ್ಯಲು ಗೋಪು ಅಲ್ಲಿಗೆ ಬರುವುದು ವಾಡಿಕೆಯಾಗಿತ್ತು. ಆದರೆ ಆ ರಾತ್ರಿ ಎಷ್ಟು ಹೊತ್ತಾದರೂ ಕೆಂಬಿ ಹೊರಗೆ ಬರದಿರುವುದನ್ನು ನೋಡಿದ ಗೋಪು ಅರಮನೆಯೊಳಗೆ ನುಗ್ಗಿದ. ಊಟದ ಮನೆಯಲ್ಲಿ ಅಳಿದುಳಿದುದನ್ನು ತಿಂದು ಅಮಲಿನಲ್ಲಿದ್ದ ಕಾವಲುಗಾರನನ್ನು ಅವನು ತಡೆದು ಕೇಳಿದ,

"ನಾನು ನನ್ನ ಕೆಂಬಿಯನ್ನು ಹುಡುಕಿ ಬಂದಿದ್ದೇನೆ. ಅವಳು ಎಲ್ಲಿದ್ದಾಳೆ?"

"ನಿನ್ನ ಕೆಂಬಿ" ಕಾವಲುಗಾರ ನಕ್ಕ. ನೀನು ನಾಳೆ ಬೆಳಿಗ್ಗೆ ಬಾ ಭಾವಯ್ಯ. ಬೆಳಗಿನ ತನಕ ಸಣ್ಣಧಣಿ ಮತ್ತು ಅವನ ಸಂಗಡಿಗರು ನಿನ್ನ ಕೆಂಬಿಯನ್ನು ಬಿಡಲಾರರು.

ಮುಂದಿನದನ್ನು ಕೇಳಲು ಗೋಪು ಅಲ್ಲಿ ಇರಲೇ ಇಲ್ಲ. "ಕೆಂಬೀ.." ಎಂದು ಅರಚುತ್ತಾ ಮಾಳಿಗೆ ಮೆಟ್ಟಲುಗಳನ್ನು ಏರತೊಡಗಿದ. ಆಮೇಲೆ ಸುಂಟರಗಾಳಿಯಂತೆ ಶಿವನ ಕೋಣೆ ಪ್ರವೇಶಿಸಿದ. ಅಲ್ಲಿ ಅವನು ಭಯಂಕರ ದೃಶ್ಯವನ್ನು ನೋಡಿದ. ರಕ್ತದ

ಮಡುವಿನಲ್ಲಿ ಬಿದ್ದಿರುವ ಕೆಂಬಿ. ನಡೆದ ಘಟನೆಯಿಂದ ತಲೆತಗ್ಗಿಸಿ ಕುಳಿತ ಶಿವ ಮತ್ತು ಅವನ ಸ್ನೇಹಿತರು. ಗೋಪು ತನ್ನ ಎರಡೂ ಕೈಗಳಿಂದ ಕೆಂಬಿಯನ್ನು ಬಳಸಿ ಎತ್ತಿದ. ರಕ್ತಸ್ರಾವದಿಂದ ಬಳಲಿದ್ದ ಕೆಂಬಿ ಗೋಪುವಿನ ಅಪ್ಪುಗೆಯನ್ನು ಗುರುತಿಸಿದಳು.

"ನನ್ನ ಕೈ ಅಪವಿತ್ರವಾಯಿತು ಗೋಪು. ಹಾಗಾಗಿ ನಾನು ಅದನ್ನು ಕಡಿದು ಹಾಕಿದೆ" ಎಂದು ಹೇಳಿ ಅವಳು ಪ್ರಜ್ಞಾಹೀನಳಾದಳು.

ಅವಳನ್ನು ಅಲ್ಲಿಯೇ ಕೆಳಗೆ ಮಲಗಿಸಿದ ಗೋಪು ಎದ್ದು ನಿಂತ. ನೆಲದ ಮೇಲೆ ಬಿದ್ದುಕೊಂಡಿರುವ ತಲವಾರನ್ನು ಕೈಗೆತ್ತಿಕೊಂಡ. ಪಲ್ಲಂಗದ ಮೇಲೆ ಕುಳಿತ ಶಿವನ ತಲೆಯನ್ನು ಅದೇ ತಲವಾರಿನಿಂದ ಕ್ಷಣಮಾತ್ರದಲ್ಲಿ ತುಂಡರಿಸಿದ. ರಕ್ತದ ಹೊಳೆಯೇ ಹರಿಯಿತು. ಅಲ್ಲಿಯವರೆಗೆ ಶಿಲೆಯಂತಿದ್ದ ಶಿವನ ಗೆಳೆಯರು ಎಚ್ಚರಗೊಂಡರು. ಅವರಲ್ಲಿ ಒಬ್ಬಾತ ಗೋಪುವಿನ ಎದೆಗೆ ಭಲ್ಲೆಯಿಂದ ಚುಚ್ಚಿ ಓಡಿಹೋದ. ಗೋಪು ಮಾತಿಲ್ಲದೆ ಧರಾಶಾಹಿಯಾದ. ಆ ಮೂರು ಮಂದಿಯ ರಕ್ತದಿಂದ ಆ ಅರಮನೆಯ ಕಾಮುಕತೆ ತೊಳೆದುಹೋಯಿತು. ಸ್ವಲ್ಪ ಸಮಯದಲ್ಲಿಯೇ ಈ ಹಳ್ಳಿಯಲ್ಲಿ ಪಾಳೇಗಾರನ ಆಳ್ವಿಕೆಯೂ ಮುಗಿದುಹೋಯಿತು. ಆದರೆ ಆ ರಾತ್ರಿ ಬಿದ್ದುಹೋದ ಕೆಂಬಿಯ ಅಂಗೈ ಮಾತ್ರ ಯಾರಿಗೂ ಸಿಗಲಿಲ್ಲ. ಅಮರತ್ಯಾಗದ ಈ ಕಥೆ ಇಲ್ಲಿಗೇ ಮುಗಿಯಬೇಕಿತ್ತು. ಆದರೆ ಅದು ಮುಗಿಯಲಿಲ್ಲ.

ಕೆಂಬಿ ಮತ್ತು ಗೋಪುವಿನ ದೇಹವನ್ನು ಬೆಂಕಿಗೆ ಆಹುತಿ ನೀಡಿದ ಕೆಲವೇ ಸಮಯದಲ್ಲಿ ಇಲ್ಲಿ ಈ ವಿಚಿತ್ರ ಗಿಡಗಳು ಚಿಗುರಲು ಪ್ರಾರಂಭವಾದವು. ನೋಡು ಈ ಎಲೆಯಲ್ಲಿ ಐದು ರಕ್ತಸಿಕ್ತ ಬೆರಳುಗಳ ಮುದ್ರೆ ನಿನಗೆ ಕಾಣಿಸುವುದಿಲ್ಲವೇ? ಇಲ್ಲಿಯ ಜನಗಳ ನಂಬಿಕೆ ಏನೆಂದರೆ ಈ ಎಲೆಗಳು ಕೆಂಬಿಯ ಕೈಗಳ ಗುರುತುಗಳಾಗಿವೆ. ಇವು ಬೆಂಕಿಯಲ್ಲಿ ನಾಶವಾಗಲಾರವು. ಪವಿತ್ರತೆಯ ಕುರುಹಾಗಿ ಈ ಕೈ ಭೂಮಿಯಲ್ಲಿ ಚಿಗುರುತ್ತಿದೆ. ಇಲ್ಲಿಯ ಸ್ತ್ರೀಯರಿಗೆ ಮತ್ತು ಹೆಣ್ಣುಮಕ್ಕಳಿಗೆ ಧೈರ್ಯವನ್ನು ನೀಡುತ್ತಿದೆ ಮತ್ತು ವಿಚಿತ್ರ ರೀತಿಯಲ್ಲಿ ಪುರುಷರ ಕಾಮುಕತೆಯಿಂದ ಅವರಿಗೆ ರಕ್ಷಣೆ ನೀಡುತ್ತದೆ.

ಈ ಎಲೆಗಳಿಂದಾಗಿ ಈ ಹಳ್ಳಿಗೆ ಕೆಂಪು ಬೆರಳಿನ ಹಳ್ಳಿ ಎಂಬ ಹೆಸರು ಬಂತು. ಈಗ ವರ್ಷಗಳು ಕಳೆದ ಬಳಿಕ ಈ ಹೆಸರು ಸಣ್ಣದಾಗುತ್ತಾ ಬಂದಿರುವುದರಿಂದ ಕೆಂಬೆರಳ್ಳಿ ಆಗಿದೆ.

ಆ ಮನುಷ್ಯ ಇದ್ದಕ್ಕಿದ್ದಂತೆ ಮೌನಿಯಾದ.

ನಾನು ಕೂಡಾ ಮೂಕನಾದೆ.

ಬೆರಳಿನ ನಡುವಿದ್ದ ಸಿಗರೇಟ್ ಆರಿಹೋಯಿತು.

ಆ ಮನುಷ್ಯ ಎದ್ದುನಿಂತ. ಅತ್ಯಂತ ಗೌರವ ಮತ್ತು ನಮ್ರಭಾವದಿಂದ ಆ ಗಿಡದ ಮೇಲಿಂದ ರಕ್ತದ ಬೆರಳಿರುವ ಒಂದು ಎಲೆಯನ್ನು ಕಿತ್ತು ನನ್ನ ಎದುರು ಹಿಡಿದ.

"ಚರಿತ್ರೆಯ ಪುಟಗಳ ನಡುವೆ ಈ ಪವಿತ್ರ ಎಲೆ ದಾಖಲಾಗಬೇಕಾಗಿದೆ!" ಅವನು ಹೇಳಿದ, "ನೀನು ಒಬ್ಬ ಲೇಖಕ ಎಂದು ಹೇಳಿದೆ. ಆಯ್ತು. ನಿನ್ನ ನೆನಪಿನ ಗ್ರಂಥದ ನಡುವೆ ಒಂದು ಕುರುಹಾಗಿ ಇದು ಉಳಿಯಲಿ"

ಅವನ ಮಾತಿನಲ್ಲಿದ್ದ ಆರಾಧನಾಭಾವಕ್ಕಾಗಿ ನಾನು ಆ ಎಲೆಯನ್ನು ಸ್ವೀಕರಿಸಿದೆ. ಅದು ನನ್ನ ಕೈಗೆ ಬಂದಾಗ ನನ್ನ ದೇಹದಲ್ಲಿ ಪುಳಕ ಆವರಿಸಿಕೊಂಡಿತು. ನನ್ನ ಎಲ್ಲಾ ಆಲೋಚನೆಗಳು, ಪ್ರಶ್ನೆಗಳು ಸ್ತಬ್ಧಗೊಂಡವು. ನಾನು ಅದು ಹೇಗೆ ಆಲದ ಮರವನ್ನು ತಲುಪಿದೆನೋ ನನಗೇ ತಿಳಿಯಲಿಲ್ಲ.

ರಿಕ್ಷಾ ಸಿದ್ಧವಾಗಿತ್ತು.

"ಹೋದ ಕಡೆಗಳಲೆಲ್ಲಾ ನೀನು ಯಾಕೆ ಹೀಗೆ ಸಿಕ್ಕಿಕೊಳ್ಳುತ್ತಿ? ನನ್ನ ಪತ್ನಿ ಸಿಡುಕಿದಳು, "ಈ ರಿಕ್ಷಾದವನು ಎಷ್ಟು ಹಾರ್ನ್ ಹಾಕಿದ ಗೊತ್ತೇನು?"

ನಾನು ಅವಳಿಗೆ ಆ ಎಲೆಯನ್ನು ತೋರಿಸಿದೆ.

"ಈ ಎಲೆಯ ಹಿಂದೆ ಒಂದು ಸುಂದರವಾದ ಕತೆ ಇದೆ ಗೊತ್ತೇನು?"

"ನೀವೊಬ್ಬ ಲೇಖಕರು," ಅವಳು ರಿಕ್ಷಾ ಹತ್ತಿದಳು. "ನಿಮಗೆ ಪ್ರತಿಯೊಂದರ ಹಿಂದೆಯೂ ಒಂದು ಕತೆ ಕಾಣಿಸುತ್ತದೆ. ಈಗ ಹೊರಡಿ, ರಿಕ್ಷಾ ಹತ್ತಿ"

ಅಷ್ಟರಲ್ಲಿ ನನ್ನ ಹೆಗಲ ಮೇಲೆ ಒಂದು ಕೈ ಬಿತ್ತು.

ನಾನು ಹಿಂತಿರುಗಿ ನೋಡಿದೆ.

ಅಲ್ಲಿ ವಯಸ್ಸಾದ ವ್ಯಕ್ತಿಯೊಬ್ಬನು ನಿಂತಿದ್ದ. ಯಾರೋ ಅಪರಿಚಿತ. ಹಾಂ, ಆ ಕಟ್ಟೆಯಲ್ಲಿ ಕುಳಿತಿದ್ದವರಲ್ಲಿ ಒಬ್ಬನಲ್ಲವೇ? ಹೌದು..ಹೌದು

"ನಿನಗೆ ಗೋಪು ಸಿಕ್ಕಿದನೇ?" ಅವನು ಕೇಳಿದ.

"ಗೋಪು? ನಾನು ಆಶ್ಚರ್ಯದಿಂದ ಕೇಳಿದೆ.

"ಹೌದು, ಗೋಪು! ಅವನ ಅನುಮತಿಯಿಲ್ಲದೆ ಈ ಎಲೆಯನ್ನು ಯಾರೂ ಕಿತ್ತುಕೊಳ್ಳಲಾರರು. ತನ್ನ ಕೆಂಬಿಯ ಕೈಯನ್ನು ಅರಸುತ್ತಾ ಅವನು ಈಗಲೂ ಇಲ್ಲೆಲ್ಲಾ ಸುತ್ತಾಡಿಕೊಂಡು ಇರುತ್ತಾನೆ!"

ನನ್ನ ಧ್ವನಿ ಅಡಗಿಹೋಯಿತು. ಮಾತನಾಡದಾದೆ. ಹೆಂಡತಿ ಮತ್ತೆ ಕರೆದಳು.

ನಾನು ರಿಕ್ಷಾ ಹತ್ತಿ ಕುಳಿತುಕೊಂಡೆ.

ನನಗೆ ಕೆಂಬಿ-ಗೋಪುವಿನ ಕತೆಯನ್ನು ಹೇಳಿ, ಈ ಎಲೆಯನ್ನು ನನಗೆ ನೀಡಿದ, ಜೀರ್ಣವಾದ ಆ ಕಟ್ಟಡದ ಕಪ್ಪು ಕಲ್ಲಿನ ಮೇಲೆ ಕುಳಿತಿದ್ದ ವ್ಯಕ್ತಿಗೆ ಒಂದು ಪ್ರಶ್ನೆಯನ್ನು ಕೇಳಲು ನಾನು ಮರೆತಿದ್ದೆ,

ಆ ಗೋಪು ನೀನಾ?

ಅನುವಾದಕರು: **ವಸುಧಾ ಪ್ರಭು**

❖ ❖ ❖❖ ❖

ಅಪ್ಪನ ಸೈಕಲ್

✍ ಕಿಶೂ ಬಾರ್ಕೂರ

ಮೊದಲಿನಿಂದಲೂ ನಮ್ಮಲ್ಲಿ ತಂದೆಯನ್ನು 'ಪಪ್ಪ'ನೆಂದೇ ಕರೆಯುವುದು. ನಮ್ಮೂರಿನಲ್ಲಿ ಕೆಲವರು 'ಆನಾ' ಅಥವಾ ಅಣ್ಣಾ ಎಂದು ಕರೆದರೆ, ಇನ್ನು ಕೆಲವರಲ್ಲಿ 'ಪಾಯ್' ಅಥವಾ ಅಪ್ಪಯ್ಯ ಎಂದು ಕರೆಯುವ ರೂಢಿ ಇದೆ. ನಮ್ಮಲ್ಲಿ ಈ ಬೇರೆಯದೇ ರೂಢಿ ಹೇಗೆ ಶುರುವಾಯಿತು ಎಂಬ ವಿಚಾರವಾಗಿ ಆಗ ನಾನು ತಲೆಕೆಡಿಸಿಕೊಂಡಿರಲಿಲ್ಲ. ಮನೆಯಲ್ಲಿ ನಾನೇ ಕೊನೆಯವನಾಗಿದ್ದರಿಂದ ಎಲ್ಲರಿಗೂ ಮುದ್ದಿನವನಾಗಿದ್ದೆ. ಪಪ್ಪ ಮದ್ರಾಸಿನಲ್ಲಿ ಕೆಲಸ ಮಾಡುತ್ತಿದ್ದುದರಿಂದ, ನಾನು ಅವರ ಹೆದರಿಕೆಯಿಲ್ಲದೆ ಬೆಳೆದೆ. ಅಲ್ಲಿ ಸುತ್ತುಮುತ್ತ ಇರುವ ಕ್ರಿಶ್ಚಿಯನ್ ಕುಟುಂಬವೆಂದರೆ ನಮ್ಮದು ಮಾತ್ರ. ಆ ವಠಾರದಲ್ಲಿ ಇದ್ದವರೆಲ್ಲಾ ಹಿಂದುಗಳು.

ನಾನು ಏನು ಹೇಳುತ್ತಿದ್ದೆ, ಹಾಂ.. ಮನೆಯಲ್ಲಿ ನಾನೇ ಕೊನೆಯವನಾಗಿದ್ದರಿಂದ ಮತ್ತು ಪಪ್ಪ ಮದ್ರಾಸಿನಲ್ಲಿ ಕೆಲಸ ಮಾಡುತ್ತಿದ್ದುದರಿಂದ , ನಾನು ಎಲ್ಲರಿಗೂ ಮುದ್ದಿನವನಾಗಿ, ಹೆದರಿಕೆಯಿಲ್ಲದೆ ಬೆಳೆದೆ. ನಮ್ಮ ನೆರೆಯ್ದ ಎರಡು ಮನೆಗಳಲ್ಲಿ ನನ್ನ ವಯಸ್ಸಿನವರೇ ಆಗಿದ್ದ ಇಬ್ಬರು ಸ್ನೇಹಿತರು ನನಗಿದ್ದರು. ಶ್ವೇತ ಕುಮಾರ ಮತ್ತು ಯಂಕ್ಟೇಶ(ವೆಂಕಟೇಶ). ಶಾಲೆ ಸಮಯವನ್ನು ಹೊರತುಪಡಿಸಿ, ಉಳಿದೆಲ್ಲಾ ಹೊತ್ತಲ್ಲಿ ನಾವು ಮೂರೂ ಮಂದಿ ಪ್ರತಿಯೊಂದರಲ್ಲಿ ಸಂಗಾತಿಗಳಾಗಿ ಇರುತ್ತಿದ್ದೆವು. ನಾವು ಶಾಲೆಯಲ್ಲಿ ಯಾಕೆ ಜೊತೆಯಾಗಿ ಇರಲಿಲ್ಲವೆಂದರೆ, ಅವರಿಬ್ಬರು ಮನೆಗೆ ಹತ್ತಿರದ ಗುಡ್ಡದ ಮೇಲಿರುವ ಸರ್ಕಾರಿ ಶಾಲೆಗೆ ಹೋಗುತ್ತಿದ್ದರು. ನಾನು ಹೋಗುವುದು ಮೈಲಿ ದೂರದಲ್ಲಿರುವ ಇಗರ್ಜಿ ಶಾಲೆಗೆ. ದಿನಾ ನಡೆದೇ ಹೋಗಬೇಕಿತ್ತು. ಅವರಿಬ್ಬರು ಮಧ್ಯಾಹ್ನದ ಊಟಕ್ಕೆ ಮನೆಗೆ ಬಂದರೆ, ನಾನು ಬುತ್ತಿಯಲ್ಲಿ ತಣ್ಣಗಾಗಿದ್ದ ಗಂಜಿ ಮತ್ತು ಮೆತ್ತಗಾದ ಹಪ್ಪಳವನ್ನು ತಿನ್ನುತ್ತಿದ್ದೆ. ಅವರು ಸಂಜೆ ಹೊತ್ತು ನಾಲ್ಕೂಮುಕ್ಕಾಲಿಗೆ ಮನೆ ಮುಟ್ಟಿದರೆ, ನಾನು ಶಾಲೆ ಮುಗಿದ ನಂತರ ಅರ್ಧಗಂಟೆ ಜಪ ಮುಗಿಸಿ ಐದುಮುಕ್ಕಾಲು ಅಥವಾ ಆರುಗಂಟೆಗೆ ಮನೆ ತಲುಪುತ್ತಿದ್ದೆ. ಶನಿವಾರ, ಭಾನುವಾರ ಮತ್ತು ಇತರ ರಜಾದಿನಗಳಲ್ಲಿ ನಾವು ಯಾವಾಗಲೂ ಜೊತೆಗೇ. ಮೂರೂ ಮಂದಿ ಸೇರಿ ಮನೆಯ ಹತ್ತಿರವಿದ್ದ ಮಠಕ್ಕೆ ಸೇರಿದ ಕಾಡಿಗೆ ಹೋಗಿ ಮಾವಿನ ಹಣ್ಣು ಕೀಳುವುದು, ಪುನರ್ಪುಳಿ ಹಣ್ಣುಗಳನ್ನು ಕೀಳುವುದು ಇಂಥವೇ ಕೆಲಸಗಳು. ತೋಟದ ಯಜಮಾನ ಮಠದ ಭಟ್ಟರ ಮಾಣಿಯ ಜೊತೆ ಜಗಳ ಕಾಯಲು, ಐಸ್‌ಕ್ಯಾಂಡಿ ಮಾರಿ ಬರುವ ಮುದುಕ ನಂದಿಯನ್ನು ಪುಸಲಾಯಿಸಿ ಐಸ್ ಕ್ಯಾಂಡಿ ಹಾರಿಸಲು, ಕತೆ ಕೇಳಲು, ಊರಿನ ಸುದ್ದಿಮಾತನಾಡಲು ಎಲ್ಲದಕ್ಕೂ ನಾವು ಒಟ್ಟೊಟ್ಟಿಗೇ. ನಾನು ದೈವ ಭಕ್ತಿಯ ವಿಚಾರಗಳನ್ನು ಶಾಲೆಯಲ್ಲಿ ಕಲಿಯುತ್ತಿದ್ದರೆ, ಲೌಕಿಕ ಜ್ಞಾನದ ವಿಚಾರಗಳನ್ನು ಇವರು ನನಗೆ ಕಲಿಸುತ್ತಿದ್ದರು. ನಮ್ಮ ನಡುವೆ ಜಾತಿಯ ವ್ಯತ್ಯಾಸ ಬರುತ್ತಿರಲಿಲ್ಲ. ಅವರು ತಮ್ಮ ಕಮಲ ಟೀಚರ್, ಜಯರಾಮ ಮಾಸ್ತರರ ಕತೆ ಹೇಳುವಾಗ, ನಾನು ಅವರಿಗೆ ಸಿರಿಲ್ ಮತ್ತು ಗಾಣಿಗ ಮಾಸ್ತರರ ವಿಷಯ ಹೇಳುತ್ತಿದ್ದೆ. ಬಿಳಿನಿಲುವಂಗಿ, ತಲೆ ಟೋಪಿ ಧರಿಸಿ ಬರುವ ಸಿಸ್ಟರ್‌ನ್ನು

ವರ್ಣಿಸುತ್ತಿದ್ದೆ. ತಮ್ಮ ನಿಲುವಂಗಿಯೊಳಗೆ ಬೆತ್ತ ಬಚ್ಚಿಟ್ಟುಕೊಂಡು ನೀತಿಶಿಕ್ಷಣ ನೀಡಲು ಬರುವ ಪಾದ್ರಿಯ ಕುರಿತು ಹೇಳಿ ಅವರನ್ನು ಗದರಿಸುತ್ತಿದ್ದೆ.

ಅಪರೂಪಕ್ಕೆ ಕೈಯಲ್ಲಿ ಎಪ್ಪತ್ತೈದು ಪೈಸೆ ಜಮೆಯಾದರೆ ನಾವು ಮೂವರೂ ನಾಲ್ಕು ಮೈಲಿ ನಡೆದು 'ನಂದಾ' ಟಾಕೀಸಿನಲ್ಲಿ ಸಿನೆಮಾ ನೋಡಿ ಬರುವುದಿತ್ತು.. ಗುಡ್ಡದ ಮೇಲಿರುವ ಅವರ ಶಾಲೆಯ ಹತ್ತಿರ ಸಿನೆಮಾ ಪೋಸ್ಟರ್‌ಗಳನ್ನು ಹಚ್ಚುತ್ತಿರಲಿಲ್ಲವಾದ್ದರಿಂದ, ಅವರಿಗೆ ಸಿನೆಮಾ ವಿಷಯ ತಿಳಿಸುವುದು ನಾನೇ. ಹೀಗಾಗಿ ಸಿನೆಮಾ ವಿಷಯಗಳು ಹೆಚ್ಚಾಗಿ ನನಗೆ ಮಾತ್ರ ಗೊತ್ತು ಎನ್ನುವುದು ಸರ್ವಾನುಮತದಿಂದ ಒಪ್ಪಿಕೊಂಡುಬಿಟ್ಟ ವಿಷಯವಾಗಿತ್ತು..

ನಂದಾ ಟಾಕೀಸಿನ ಮುಂದಿನ ಆಸನಗಳಲ್ಲಿ ಕುಳಿತುಕೊಳ್ಳಲು ಇಪ್ಪತ್ತೈದು ಪೈಸೆಯ ಟಿಕೇಟ್ ಸಾಕಾಗುತ್ತಿದ್ದುದರಿಂದ ಮತ್ತು ನಾವು ನಾಲ್ಕು ಮೈಲಿ ದೂರ ನಡೆಯುತ್ತಿದ್ದುದರಿಂದ ಬೇರೆ ಯಾವ ಖರ್ಚೂ ನಮಗೆ ಬರುತ್ತಿರಲಿಲ್ಲ. ಆದರೆ ನಮ್ಮ ಮನೆಯಿಂದ ಕಾಲು ಮೈಲಿ ದೂರದಲ್ಲಿ ಹರಿಯುತ್ತಿದ್ದ ನದಿ ಮಾತ್ರ ನಮಗೆ ತೊಂದರೆ ಕೊಡುತ್ತಿತ್ತು. ನದಿಯಲಿ ಇಳಿತವಿದ್ದಾಗ ಮೊಣಕಾಲಿನ ತನಕ ಬರುವ ನೀರಿನಲ್ಲಿ ನಡೆದೇ ಆಚೆಗೆ ಹೋಗಬಹುದಿತ್ತಾದರೂ, ಸುಲಭ. ಆದರೆ ಹುಣ್ಣಿಮೆ, ಅಮವಾಸ್ಯೆ ಹತ್ತಿರವಿದ್ದ ದಿನಗಳಲ್ಲಿ ಕಷ್ಟವಾಗುತ್ತಿತ್ತು. ನಾವು ಹೋಗುವಾಗ ಇಳಿತ ಇದ್ದರೆ, ಬರುವಾಗ ಭರತ ಇರುತ್ತಿತ್ತು. ಹೋಗುವಾಗ ಭರತ ಇದ್ದರೆ, ಬರುವಾಗ ಇಳಿತ. ಹೀಗಾಗಿ ಕನಿಷ್ಟ ಒಂದು ಹೊತ್ತಿಗಾದರೂ ನದಿಯನ್ನು ದಾಟಲು ದೋಣಿಯ ಅಗತ್ಯ ಬೀಳುತ್ತಿತ್ತು. ನದಿ ದಾಟುವವರಿಗಾಗಿ ರುಜಾರ್ ಫುಡ್ತಾಡೊ ದೋಣಿ ನಡೆಸುತ್ತಿದ್ದರು. ಆದರೆ ಒಮ್ಮೆ ಅವರಿಗೆ ಕೊಡಬೇಕಾಗಿದ್ದ ಹತ್ತುಪೈಸೆಯನ್ನು ನೀಡದೆ ಓಡಿ ಬಂದ ಶೇತುವಿನ ತಲೆಗೆ ಅವರು ದೋಣಿ ನಡೆಸುವ ಗಳದಿಂದಲೇ ಹೊಡೆದಿದ್ದರು. ಕೆಲವೊಮ್ಮೆ ಹತ್ತು ಪೈಸೆಯನ್ನು ಕೂಡಾ ಒಟ್ಟುಗೂಡಿಸಲು ನಮಗೆ ಬಹಳ ದಿನ ಹಿಡಿಯುತ್ತಿತ್ತು. ಹೀಗಾಗಿ ನಮ್ಮ ತಂಡವನ್ನು ಬಚಾಯಿಸಲು ನಾನೇ ಬರಬೇಕಾಗಿತ್ತು. ನದಿ ದಡದಲ್ಲಿ ಚಿಕ್ಕಪ್ಪನ ಮನೆ ಇದ್ದು, ಅವರ ಮಗ ದೇವುಗೆ ನಾನು ಸಲಾಮ್ ಹೊಡೆಯುತ್ತಿದ್ದೆ. ಅವನು ನಮ್ಮನ್ನು ದೋಣಿಯಲ್ಲಿ ಆಚೆ ದಡಕ್ಕೆ ತಲುಪಿಸುತ್ತಿದ್ದ.

ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಮೈಲಿಗಳಷ್ಟು ದೂರ ನಡೆದು ಹೋಗುವ ಸಂದರ್ಭಗಳಲ್ಲಿ ನಾನು ಶೇತು ಮತ್ತು ಯಂಕ್ಟೇಶನಿಗೆ ನಾವು ನೋಡಲಿರುವ ಸಿನೆಮಾ. ಕುರಿತು ವಿವರಿಸುತ್ತಿದ್ದೆ. ಸಿನೆಮಾ ಮಂದಿ ಗುಂಡು ತಗಲಿಸಿಕೊಳ್ಳುವಾಗ ಸ್ಪಂಜನ್ನು ಒತ್ತಿಹಿಡಿದು ಹೇಗೆ ರಕ್ತ ಬರುವಂತೆ ಮಾಡುತ್ತಾರೆ, ರಾಜಕುಮಾರ್ ಹದಿನೈದು ಜನರೊಂದಿಗೆ ಕಾದಾಡುವ ಸಲುವಾಗಿ ಯಾವಾಗಲೂ ವ್ಯಾಯಾಮ ಮಾಡಿ ಹೇಗೆಲ್ಲ ಸ್ನಾಯುಗಳನ್ನು ಬೆಳೆಸಿ ಕೊಂಡಿದ್ದಾನೆ, ರಾಜಕುಮಾರ್ ಮತ್ತು ವಿಷ್ಣುವರ್ಧನರ ನಡುವೆ ಬೆಂಕಿ ಹಾಯದಿರುವುದು, ಅವರಿಬ್ಬರೂ ಜೊತೆಗೆ ಸಿನೆಮಾ ಮಾಡಿದರೆ ಫೈಟಿಂಗ್‌ನಲ್ಲಿ ವಿಷ್ಣುವರ್ಧನನೇ ಗೆಲ್ಲುತ್ತಾನಾದ್ದರಿಂದ ರಾಜ್‌ಕುಮಾರ್ ಜೊತೆಗೆ ಸಿನೆಮಾ ಮಾಡಲು ಒಪ್ಪಲ್ಲ.. .. ಇದನ್ನೆಲ್ಲಾ ನಾನು ಉಪ್ಪು ಖಾರ ಹಚ್ಚಿ ಹೇಳುತ್ತಿರಬೇಕಾದರೆ ಅವರು ಆಶ್ಚರ್ಯ ಪಡುತ್ತಿದ್ದರು. ನಿಜವಾಗಿಯೂ ನಾನು ಅವರ ನಾಯಕನೆಂದು ಒಪ್ಪಿಕೊಳ್ಳುತ್ತಿದ್ದರು. ಮನೆಗೆ ಹಿಂತಿರುಗಿದ ಬಳಿಕ ಇನ್ನೊಂದು ಸಿನೆಮಾ ನೋಡುವವರೆಗೆ,

ಅಂದರೆ ಮತ್ತೊಮ್ಮೆ ನಮ್ಮ ಮೂರು ಮಂದಿಯ ಕೈಯಲ್ಲಿ ಎಪ್ಪತ್ತೈದು ಪೈಸೆ ಸೇರುವವರೆಗೆ ನೋಡಿದ ಸಿನೆಮಾವನ್ನೇ ನಾವು ಮನೆಯಲ್ಲಿ ನಟಿಸುತ್ತಿದ್ದೆವು. ಅದನ್ನು ನಾವು ಯಾರ ಮನೆಯಲ್ಲಿ ಆಡುತ್ತಿದ್ದೆವೋ, ಆ ಮನೆಯವ ರಾಜಕುಮಾರ್ ಆಗುತ್ತಿದ್ದ ಉಳಿದವರು ಖಳನಾಯಕರು.

ನಾನು ನಮ್ಮ ಶಾಲೆಯ ವಿದ್ಯಾರ್ಥಿ ನಾಯಕನಾಗಿ 'ಪ್ರಚಂಡ ಬಹುಮತ'ದಿಂದ ಆಯ್ಕೆಯಾಗಿ, ಅಸೆಂಬ್ಲಿಯಲ್ಲಿ ನಿಂತು ಮಕ್ಕಳಿಗೆ 'ಎಟೆನ್ಶನ್ 'ಸ್ಟಾಂಡ್‌ಎಟ್‌ಈಸ್' ಇತ್ಯಾದಿ ಆರ್ಡರ್ ಕೊಡುವುದನ್ನು ನೋಡಲು ನನ್ನ ಸ್ನೇಹಿತರು ಅವರ ಶಾಲೆಗೆ ಚಕ್ಕರ್ ಹಾಕಿ ನಮ್ಮ ಶಾಲೆಯ ಗೋಡೆಯ ಹಿಂದೆ ನಿಲ್ಲುತ್ತಿದ್ದರು ಕೂಡಾ.

ಹೀಗೆ ಬಿಂದಾಸ್ ಆಗಿ ಬೆಳೆಯುತ್ತಿದ್ದ ನನಗೆ ಪಪ್ಪಾ ಮದ್ರಾಸಿನ ಕೆಲಸ ಬಿಟ್ಟು ಮನೆಗೆ ಹಿಂತಿರುಗಿ ಬಂದದ್ದು ಹಿತವಾಗಲಿಲ್ಲ. ದೊಡ್ಡಕ್ಕಂದಿರು ಮದುವೆಯಾಗಿ ಹೋಗಿದ್ದರು. ಅಣ್ಣ ಬೊಂಬಾಯಿಯಲ್ಲಿ ಇದ್ದ. ಅಮ್ಮನೊಂದಿಗೆ ನಾನು ಮಾತ್ರ ಇದ್ದುದರಿಂದ ಪಪ್ಪ ಬಂದದ್ದು ನನಗೆ ರೆಕ್ಕೆ ಮುರಿದಂತಾಯಿತು. ಪಪ್ಪ ಮನೆಗೆ ಬಂದು ಮಾಡಿದ ಮೊದಲ ಕೆಲಸವೆಂದರೆ ನನ್ನ ಅಡ್ಡಾದಿಡ್ಡಿ ತಿರುಗಾಟವನ್ನು ನಿಲ್ಲಿಸಿದ್ದು. ಅವರು ಯಾವತ್ತೂ ನನ್ನನ್ನು ಹೊಡೆದಿದ್ದು ನನಗೆ ನೆನಪಿಲ್ಲವಾದರೂ, ಅವರ ಒಂದು ನೋಟವೇ ನನಗೆ ಸಾಕಾಗುತ್ತಿತ್ತು. ಅವರು ಮನೆಯಲ್ಲಿದ್ದಾಗ ಶೇತು ಅಥವಾ ಎಂಕ್ಟೇಶನ ಮನೆಗೆ ಹೋಗಲು ಬಿಡುತ್ತಿರಲಿಲ್ಲ. ಸಂಜೆ ಹೊತ್ತು ಅವರು ಪೇಟೆಗೆ ಹೋದಾಗ ನಾನು ಸ್ನೇಹಿತರನ್ನು ಕಾಣಲು ಹೋಗುತ್ತಿದ್ದೆ. ಅವರು ನಮ್ಮ ಮನೆಗೆ ಬಂದರೆ ಪಪ್ಪ ಅವರನ್ನು ಬೈಯ್ಯುತ್ತಿದ್ದರಾದ್ದರಿಂದ ಅವರಿಬ್ಬರೂ ಬರುವುದನ್ನೇ ಕಡಿಮೆ ಮಾಡಿದರು.

ಪಪ್ಪನ ಒತ್ತಾಯದಿಂದ ನಾನು, ಇಗರ್ಜಿಯಲ್ಲಿ ಪೂಜೆಯ ವೇಳೆಯಲ್ಲಿ ಸಹಾಯ ಮಾಡುವ 'ಪೀಠಪಾಲಕ ಮಕ್ಕಳ ಮೇಳ'ಕ್ಕೆ ಸೇರಿದ್ದರಿಂದ ಶನಿವಾರ ಇಗರ್ಜಿಯಲ್ಲಿ ಅದರ ಮೀಟಿಂಗ್ ಇರುತ್ತಿತ್ತು. ಹೀಗಾಗಿ ನಾನು ಸಿನೆಮಾ ನೋಡುವ ಕಾರ್ಯಕ್ರಮ ಯಾವ ಗುಡ್ಡೆ ಸೇರಿತೋ ಗೊತ್ತೇ ಆಗಲಿಲ್ಲ. ಶೇತು ಮತ್ತು ಯಂಕ್ಟೇಶ ಹತ್ತು ಪೈಸೆ ನೀಡಿ ದೋಣಿಯಲ್ಲಿ ಹೋಗಿ ಸಿನೆಮಾ ನೋಡಿ ಬರುತ್ತಿದ್ದರು. ಅಪರೂಪಕ್ಕೆ ಭೇಟಿಯಾದಾಗ ಹೊಸ ಹೊಸ ಹಿರೋಗಳ ವಿಚಾರ ನನಗೆ ತಿಳಿಸುತ್ತಿದ್ದರು. 'ಗಂಧದ ಗುಡಿ' ಯಲ್ಲಿ ಚಿಕ್ಕದೊಂದು ಪಾತ್ರ ಮಾಡಿದ್ದ ಪ್ರಭಾಕರ ಹೇಗೆ ಈಗ ಹೀರೋ ಆಗಿ ಹುಡುಗಿಯರ ಜೊತೆ ಕುಣಿಯುತ್ತಾನೆ. ಶಂಕರನಾಗನ ಕರಾಟೆ ಇವೆಲ್ಲವನ್ನೂ ಅವರು ಹೇಳುವಾಗ ನಾನು ಮರುಗುತ್ತಿದ್ದೆ. ಆಗ ಅವರಿಗೆ ನನ್ನ ಮೇಲೆ ಕನಿಕರ ಉಂಟಾಗುತ್ತಿತ್ತು. ಒಂದು ಕಾಲದಲ್ಲಿ ಅವರ ನಾಯಕನಾಗಿದ್ದ ನಾನು, ಪಪ್ಪ ಮನೆಗೆ ಬಂದ ಮೇಲೆ ಒದ್ದೆ ಕಾಗೆಯ ಹಾಗೆ ಮುದುಡಿಕೊಂಡಿದ್ದೆ.

ಪಪ್ಪ ಮದ್ರಾಸಿನಲ್ಲಿದ್ದ ಅವರ ಸೈಕಲ್‌ನ್ನು ರೈಲಿನಲ್ಲಿ ಮಂಗಳೂರಿನ ತನಕ ತಂದು, ನಂತರ ಅಲ್ಲಿಂದ ಎರಡು ದಿನ ರಸ್ತೆಯಲ್ಲಿ ನಡೆಸಿಕೊಂಡು, ಮನೆಗೆ ತಂದರು. ಅವರು ಆ ಸೈಕಲ್ ಕುರಿತು 'ಹರಕ್ಯುಲಿಸ್ ಇಂಗ್ಲೆಂಡ್ ಗಾಡಿ' ಎಂದು ಹೇಳುವುದಿತ್ತು. ಮದ್ರಾಸಿನಲ್ಲಿ ಅರವತ್ತು ರೂಪಾಯಿ ಕೊಟ್ಟು ಖರೀದಿಸಿದ್ದ ಆ ಸೈಕಲ್ ಮೇಲೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಮನೆಯ ಕೋಣೆಯೊಂದರಲ್ಲಿ ಗೋಣಿ ಹಾಸಿ ಅದರ ಮೇಲೆ ಅದನ್ನು

ನಿಲ್ಲಿಸಿದ್ದರು. ನಾನು ಅದನ್ನು ನಿಲ್ಲಿಸಿದಲ್ಲಿಯೇ ಅದರ ಪೆಡಲ್ ತಿರುಗಿಸಿ ದೀಪ ಉರಿಸಿದ್ದನ್ನು ತಿಳಿದ ನಂತರ ಪಪ್ಪ ಅದಕ್ಕೆ ಬೀಗ ಹಾಕಿದರು.

ಪಪ್ಪ ಆ ಸೈಕಲ್ ಹತ್ತಿಕೊಂಡು ಹೆಚ್ಚಾಗಿ ಎಲ್ಲಿಗೂ ಹೋಗುತ್ತಿರಲಿಲ್ಲ. ಆದರೆ ಎರಡು ವಾರಗಳಿಗೊಮ್ಮೆ ಅದನ್ನು ಹೊರಗೆ ತಂದು ಪೂರ್ತಿ ಬಿಚ್ಚಿ, ಎಣ್ಣೆ ಬಿಟ್ಟು, ನಂತರ ಅದನ್ನು ಮತ್ತೆ ಜೋಡಿಸುವುದೆಂದರೆ ಅವರಿಗೆ ಭಾರೀ ಖುಷಿ. ಪ್ರತಿ ಎರಡನೆಯ ಶನಿವಾರದ ದಿನವನ್ನು ಅದಕ್ಕಾಗಿಯೇ ಮೀಸಲಿಡುತ್ತಿದ್ದರು. ಸೈಕಲ್ ದುರಸ್ತಿಗೆ ಬೇಕಾದ ಪ್ರತಿಯೊಂದೂ ವಸ್ತು ಅವರಲ್ಲಿತ್ತು. ಸ್ಪಾನರ್ ಪೆಟ್ಟಿಗೆ, ಗಾಳಿ ಹಾಕುವ ಪಂಪ್, ಎಣ್ಣೆಡಬ್ಬ ಇತ್ಯಾದಿಗಳನ್ನು ಜಾಗ್ರತೆಯಾಗಿ ಇಟ್ಟುಕೊಂಡಿದ್ದರು. ಬೆಳಿಗ್ಗೆ ಗಂಜಿ ಉಂಡು ಆರಂಭವಾಗುವ ಸೈಕಲ್ಲಿನ ಕೆಲಸ ಸಂಜೆ ನಾಲ್ಕು ಗಂಟೆಯವರೆಗೆ ಇರುತ್ತಿತ್ತು. ಶನಿವಾರ ಶಾಲೆ ಮುಗಿಸಿ ಮಧ್ಯಾಹ್ನವೇ ಬರುತ್ತಿದ್ದ ನಾನು ಪಪ್ಪನ ಈ ಕೆಲಸಕ್ಕೆ ಸಹಾಯ ಮಾಡುತ್ತಿದ್ದೆ. ನಂತರ ಅವರು ಆ ಸೈಕಲ್ಲನ್ನು ಹತ್ತಿ ಪೇಟೆಗೆ ತಿರುಗಾಡಲು ಹೋಗುತ್ತಿದ್ದರು. ಮನೆಗೆ ಹಿಂದಿರುಗಿದ ಬಳಿಕ ಅದನ್ನು ಮನೆಯೊಳಗಿಟ್ಟು ಬೀಗ ಹಾಕಿದರೆಂದರೆ, ಆ ಸೈಕಲ್ಲಿಗೆ ಬಿಡುಗಡೆ ಸಿಗುವುದು ಎರಡು ವಾರಗಳು ಕಳೆದ ನಂತರವೇ. ಆಗ ಈ ನಾಟಕ ಮತ್ತೆ ಶುರುವಾಗುತ್ತಿತ್ತು.

ಶೇತು ಮತ್ತು ಯಂಕ್ಟೇಶರಿಗೆ ಮನೆಯಲ್ಲಿ ಯಾರ ಬಂಧನವೂ ಇಲ್ಲದ್ದರಿಂದ ಅವರು ಇಷ್ಟರೊಳಗೇ ಬಾಬುವಿನ ಅಂಗಡಿಯಿಂದ ಬಾಡಿಗೆ ಸೈಕಲ್ಲನ್ನು ತಂದು ಅದರ ಸವಾರಿ ಮಾಡಲು ಕಲಿತಿದ್ದರು. ಕೆಲವೊಮ್ಮೆ ನನ್ನ ಎದುರಿಗೇ ಅವರು ಸೈಕಲ್ ಮೇಲೆ ಸೂಂಯ್ ಅಂತ ಹೋಗುವಾಗ ನನಗೆ ಹೇಗೆಗೋ ಆಗುತ್ತಿತ್ತು. ಸೈಕಲ್ ಕಲಿಯಲು ನನಗೆ ಪಪ್ಪನ ಒಪ್ಪಿಗೆ ಬಿಲ್‌ಕುಲ್ ಇರಲಿಲ್ಲ. ಮನೆಯಲ್ಲಿಯೇ 'ಹರಕ್ಯುಲಿಸ್ ಇಂಗ್ಲೆಂಡ್ ಗಾಡಿ' ಇದ್ದೂ ನನಗೆ ಸೈಕಲ್ ನಡೆಸಲು ಬರುವುದಿಲ್ಲ ಎಂಬ ಸಂಗತಿ ಲಜ್ಜಾಸ್ಪದವಾಗಿತ್ತು. ಈಗ ಸೈಕಲ್ ಕಲಿಯುವ ವಿಚಾರವೇ ನನ್ನಲ್ಲಿ ತುಂಬಿಕೊಂಡದ್ದರಿಂದ, ರಾತ್ರಿ ಹೊತ್ತು, ನಾನು ಕೈಬಿಟ್ಟು ಕಾಲಿನಿಂದ ಸೈಕಲ್ ಓಡಿಸುತ್ತಾ, ವಿವಿಧ ಕಸರತ್ತುಗಳನ್ನು ಮಾಡುತ್ತಿರುವಂತೆ ಕನಸುಗಳು ನನಗೆ ಬೀಳುತ್ತಿದ್ದವು. ಹೇಗಾದರೂ ಮಾಡಿ ಸೈಕಲ್ ನಡೆಸುವುದನ್ನು ಕಲಿಯಲೇಬೇಕೆಂಬ ಹಟ ಹುಟ್ಟಿತು.

ಮನೆಯೊಳಗಿನ ಬಂಧನವನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಾನು ಇಗರ್ಜಿಯ ಆಶ್ರಯ ಪಡೆದೆ. ಶನಿವಾರದ ಸಂಜೆ ನಾಲ್ಕೂವರೆ ಮೀಟಿಂಗಿಗೆ ನಾನು ಎರಡುಗಂಟೆಗೇ ಮನೆಯಿಂದ ಹೊರಬೀಳುತ್ತಿದ್ದೆ. ಕಾರಣ ಕೇಳಿದರೆ ಇಗರ್ಜಿ ಗುಡಿಸಲು, ಪ್ರಸಾದ ತಯಾರಿಸಲು ಇಂಥಾ ನೆವಗಳು ತಯಾರಾಗಿರುತ್ತಿದ್ದವು. ಭಾನುವಾರ ಬೆಳಿಗ್ಗೆ ಪೂಜೆಯಾದರೆ ಮಧ್ಯಾನ್ಹಕ್ಕೆ 'ಪೀಠಸೇವಕರ ಕ್ರಿಕೆಟ್ ಮ್ಯಾಚ್'ನ ನೆವದಲ್ಲಿ ಮತ್ತೆ ಮನೆಯಿಂದ ಹೊರ ಬೀಳುತ್ತಿದ್ದೆ. ಇಗರ್ಜಿಯ ಎಲ್ಲ ಕೆಲಸಗಳು ದೇವರ ಕೃಪೆಯಿಂದ ನಡೆಯುವಂತಹವುಗಳಾದ್ದರಿಂದ ನನಗೆ ಪಪ್ಪನಿಂದ ಯಾವುದೇ ಅಡ್ಡಿ ಇರುತ್ತಿರಲಿಲ್ಲ. ಆ ಸಮಯದಲ್ಲಿ ನಾನು ನನ್ನ ಇಗರ್ಜಿಯ ಮಿತ್ರ ಪೆಟ್ರಿಕನ ನೆರವಿನಿಂದ ಇಗರ್ಜಿ ಮೈದಾನದಲ್ಲಿ ಸೈಕಲ್ ನಡೆಸಲು ಕಲಿತೆ. ನಾಲ್ಕೈದು ವಾರಗಳಲ್ಲಿ, ಶನಿವಾರ ಮತ್ತು ರವಿವಾರ ಎಡೆಬಿಡದೆ ಪ್ರಯತ್ನ ನಡೆಸಿ, ಮೊಣಕಾಲು, ಕೈಗಳಿಗೆ ಗಾಯ ಮಾಡಿಸಿಕೊಂಡ ನಂತರ ಸೈಕಲ್ ಸವಾರಿ ನನಗೆ ಒಲಿಯಿತು. ನಾನೂ ಸಲೀಸಾಗಿ ಸೈಕಲ್ ಬಿಡಲು

ಕಲಿತೆ. ಒಂದೆರಡು ಬಾರಿ ರಸ್ತೆಯಲ್ಲಿ ಕೂಡಾ ಸೈಕಲ್ ನಡೆಸಿದೆನಾದರೂ ಎಲ್ಲಿಯಾದರೂ ಪಪ್ಪ ನೋಡಿಯಾರು ಎಂದು ಭಯವಂತೂ ಇದ್ದೇ ಇತ್ತು. ಈಗ ನನ್ನ ದೃಷ್ಟಿ ಪಪ್ಪನ 'ಹರಕ್ಯುಲಿಸ್ ಇಂಗ್ಲೆಂಡ್ ಗಾಡಿ' ಯ ಮೇಲೆ ಬಿತ್ತು. ಬಾಡಿಗೆಯ ಲಟಾರಿ ಸೈಕಲುಗಳ ಎದುರು ಪಪ್ಪನ ಹರಕ್ಯುಲಿಸ್, ಗುಡಿಸಲಿನ ಮುಂದಿರುವ ತಾಜಮಹಲಿನಂತೆ ಶೋಭಿಸಬಹುದೆಂದು ನನಗನ್ನಿಸುತ್ತಿತ್ತು. ಅದರ ಮಧುರ ಸದ್ದಿನ ಬೆಲ್ಲು, ಪ್ರಜ್ವಲ ಬೆಳಕಿನ ಬಲ್ಬು, ಹ್ಯಾಂಡಲ್ಲಿಗೆ ಹಾಕಿದ ಮೆದುವಾದ ಕೆಂಪು ಸ್ಪಂಜು ಮತ್ತು ನೇತಾಡುವ ರಂಗುರಂಗಿನ ರಿಬ್ಬನ್, ಮೆತ್ತಗಿನ ಹಸಿರು ಸೀಟ್, ಪೆಡಲಿನ ರಿಫ್ಲೆಕ್ಟರ್ ಮತ್ತು ಚೂರೂ ಕಲೆಯಿಲ್ಲದಂತೆ ಒರಸಿ, ಎಣ್ಣೆಬಿಟ್ಟು ಪಪ್ಪ ಜತನವಾಗಿ ಇರಿಸಿದ ಅದರ ಹೊಳಪು, ಇದರ ಎದುರು ಬಾಡಿಗೆ ಸೈಕಲ್ ಏನೂ ಆಗಿರಲಿಲ್ಲ. ಒಮ್ಮೆ ಹೇಗಾದರೂ ಮಾಡಿ 'ಹರಕ್ಯುಲಸ್ ಇಂಗ್ಲೆಂಡ್ ಗಾಡಿ'ಯನ್ನು ರಸ್ತೆಯ ಮೇಲೆ ನಡೆಸಿಕೊಂಡು ಹೋಗಿ, ಶೇತು ಮತ್ತು ಯಂಕ್ಟೇಶರ ಮುಂದೆ ನನ್ನ ದರ್ಪವನ್ನು ತೋರಿಸಬೇಕೆಂದು ನಾನು ಹಗಲೂ ರಾತ್ರಿ ಚಿಂತಿಸುತ್ತಿದ್ದೆ. ಕಳೆದುಕೊಂಡ ನನ್ನ ನಾಯಕತ್ವವನ್ನು ಮರಳಿ ಪಡೆಯಬೇಕೆಂದು ಕನಸು ಕಾಣುತ್ತಿದ್ದೆ. ಆದರೆ ಸೈಕಲನ್ನು ಹೊರತೆಗೆಯುವುದು ಹೇಗೆ? ಅದರ ಬೀಗದ ಕೈ ಎಲ್ಲಿದೆ? ಅಥವಾ ನನಗೆ ಸೈಕಲ್ ಬಿಡಲು ಗೊತ್ತಿದೆ ಎಂದು ಪಪ್ಪನಿಗೆ ಹೇಳುವುದು ಹೇಗೆ? ಇದನ್ನು ತಿಳಿಯದೆ ನಾನು ಬೇಸರಪಡುತ್ತಿದೆ. ಇದಿಷ್ಟೆ ಅಲ್ಲದೆ, ನಾನು ಈ ಬಾರಿ ಒಳ್ಳೇ ಅಂಕಗಳನ್ನು ಪಡೆದು ಪಾಸಾದರೆ ಪಪ್ಪ ನನಗೆ ಶಾಲೆಗೆ ಹೋಗಲು ಸೈಕಲ್ ಕೊಡುತ್ತೇನೆ ಎಂದು ಹೇಳಿದ್ದಾರೆಂದು ನಾನು ಶೇತು ಮತ್ತು ಎಂಕ್ಟೇಶರಲ್ಲಿ ಸುಳ್ಳು ಬೇರೆ ಹೇಳಿದ್ದೆ. ಆದರೆ ಅವರೀಗ ನನ್ನನ್ನು ನಂಬುವುದನ್ನು ಸ್ವಲ್ಪ ಕಡಿಮೆ ಮಾಡಿದ್ದರು. ಎದುರು ಏನೂ ಹೇಳದಿದ್ದರೂ ಸರಿಯಾದ ಸಮಯಕ್ಕೆ ಕಾಯುತ್ತಿದ್ದಾರೆಂದು ನನಗೆ ಕಾಣುತ್ತಿತ್ತು. "ಏನಾದರೂ ಜಾದೂ ಮಾಡು ದೇವರೇ!" ಎಂದು ನಾನು ಪ್ರಾರ್ಥನೆಯ ಸಮಯದಲ್ಲಿ ಬಿಡದೇ ದೇವರಲ್ಲಿ ಬೇಡುತ್ತಿದ್ದೆ.

ಅದು ಶನಿವಾರದ ದಿನ. ಮೀಟಿಂಗಿಗೆಂದು ನಾನು ಬೇಗನೆ ಮನೆಬಿಟ್ಟಿದ್ದೆ. ಬಾಬು ಸಾಬನ ಅಂಗಡಿಯಿಂದ ಲಟಾರಿ ಸೈಕಲ್ ಬಾಡಿಗೆಗೆ ಪಡೆದು ಮೈದಾನಿನಲ್ಲಿ ಸುತ್ತು ಹೊಡೆಯತೊಡಗಿದೆ. ಕೆಲವು ಪೀಠಸೇವಕರ ಸಂಘದ ಹುಡುಗರೂ ಅಲ್ಲಿ ಆಡಿಕೊಳ್ಳುತ್ತಿದ್ದರು. ಅವರಲ್ಲೊಬ್ಬ ಜೆರಿ. ಮೂರನೆಯದೋ ನಾಲ್ಕನೆಯದೋ ತರಗತಿಯಲ್ಲಿ ಓದುತ್ತಿದ್ದ ಚಿಕ್ಕ ಗೆಳೆಯ ಜೆರಿ ಎಂದರೆ ನನಗೆ ತುಂಬಾ ಪ್ರೀತಿ. ಆದರೆ ಅವನೋ ಮಹಾ ತುಂಟ. ಅವನು ನನ್ನ ಬಳಿಬಂದು, "ನಿನಗೆ ಡಬ್ಬಲ್ ರೈಡ್ ಮಾಡಲು ಬರುವುದಿಲ್ಲ" ಎಂದು ಹೇಳಿ ಛೇಡಿಸಲಾರಂಭಿಸಿದ. ಕ್ಯಾರಿಯರ್ ಇಲ್ಲದ್ದರಿಂದ ಆ ಸೈಕಲ್ಲಿನ ರೋಲ್ ಮೇಲೆ ಅವನನ್ನು ಕುಳ್ಳಿರಿಸಿ ನಾನು ಮೈದಾನಿನಲ್ಲಿ ಸುತ್ತು ತೆಗೆಯತೊಡಗಿದೆ. ತನ್ನ ತಂತ್ರ ಸಫಲವಾದದ್ದನ್ನು ನೋಡಿ ಖುಷಿಪಟ್ಟುಕೊಂಡ ಜೆರಿ ಈಗ, "ನಿನಗೆ ರಸ್ತೆಯ ಮೇಲೆ ಡಬಲ್ ರೈಡ್ ಮಾಡುವ ಧೈರ್ಯ ಇಲ್ಲ" ಎಂದು ಬಿಟ್ಟ.

"ರಸ್ತೆಯಲ್ಲಿ ಯಾಕೆ, ಎಲ್ಲಿ ಬೇಕಾದರೂ ನಾನು ಡಬ್ಬಲ್ ರೈಡ್ ಮಾಡಬಲ್ಲೆ. ಬೇಕಾದರೆ ನಿನಗೆ ತೋರಿಸುತ್ತೇನೆ" ಎಂದು ಹೇಳಿದೆ. ನಂತರ ಇಗರ್ಜಿಯ ಗೇಟಿನಿಂದ

ಸೈಕಲ್ಲನ್ನು ಹೊರಗೆ ತೆಗೆದುಕೊಂಡು ಬಂದೆ. ಆಗ ಗಂಟೆ ಬರೀ ನಾಲ್ಕಾಗಿತ್ತು;ಹಾಗಾಗಿ ಪಪ್ಪ ಪೇಟೆಗೆ ಬರಲಿಕ್ಕಿಲ್ಲ ಎಂಬ ಹುಚ್ಚು ಧೈರ್ಯ ನನ್ನದು. ಹೀಗೆ ಜೆರಿ ಮತ್ತು ನಾನು ರಸ್ತೆಯಲ್ಲಿ ಸೈಕಲ್ ಮೇಲೆ ಸುತ್ತಾಡತೊಡಗಿದೆವು. ರಸ್ತೆಯ ತಿರುವೊಂದರಲ್ಲಿ ಬರುತ್ತಿರಬೇಕಾದರೆ ನನ್ನ ಪಪ್ಪ ಎದುರೇ ನಿಂತಿದ್ದರು! ಅಚಾನಕ್ ಅವರನ್ನು ನೋಡಿ ನನ್ನ ಬ್ಯಾಲೆನ್ಸ್ ತಪ್ಪಿತು. ನಾವಿಬ್ಬರೂ ಕೆಳಗೆ ಬೀಳುತ್ತಿರಬೇಕಾದರೆ ಪಪ್ಪ ಸೈಕಲ್ಲನ್ನು ಹಿಡಿದು ನಿಲ್ಲಿಸಿದರು. ನಾನು ಕೆಳಗಿಳಿದೆ. ನನಗೆ ಪಪ್ಪನನ್ನು ತಲೆಯೆತ್ತಿ ನೋಡುವ ಧೈರ್ಯ ಇರಲಿಲ್ಲ. ಕೈಕಾಲು ನಡುಗುತ್ತಿದ್ದವು. ಪಪ್ಪ ನನ್ನಲ್ಲಿ ಏನೂ ಹೇಳಲಿಲ್ಲ. ಆದರೆ ಜೆರಿಯನ್ನು ಹಿಡಿದು, "ಅವನಿಗೆ ಜೀವದ ಮೇಲೆ ಆಶೆ ಇಲ್ಲ. ನಿನಗೆ ವಿಚಾರಿಸುವವರು ಯಾರೂ ಇಲ್ಲವೇನೋ?" ಎಂದು ಹೇಳಿ ಅಲ್ಲಿಂದ ಹೊರಟೇ ಹೋದರು. ನಾನು ಮತ್ತು ಜೆರಿ ಸ್ವಲ್ಪಹೊತ್ತು ಅಲ್ಲೇ ನಿಂತೆವು. ಆನಂತರ ಸೈಕಲ್ ಹತ್ತುವ ಧೈರ್ಯವಿಲ್ಲದೆ, ಅದನ್ನು ತಳ್ಳಿಕೊಂಡೇ ಬಾಬು ಸಾಬನ ಅಂಗಡಿಗೆ ಹೋದೆವು. ಸೈಕಲ್ಲನ್ನು ನಡೆಸದೆ ತಳ್ಳಿ ತಂದಿರುವುದನ್ನು ನೋಡಿದ ಬಾಬು ಸಾಬ 'ಏನಾದರೂ ಹಾಳಾಗಿರಬಹುದೇನೋ' ಎಂಬ ಸಂದೇಹದಿಂದ ಸೈಕಲ್ಲನ್ನು ಇಡಿಯಾಗಿ ತಪಾಸಿಸುವ ವರೆಗೆ ಅವನು ನಮ್ಮನ್ನು ಹೋಗಲು ಬಿಡಲಿಲ್ಲ.

ಸಂಜೆ ಮನೆ ಮುಟ್ಟಿದಾಗ ನನ್ನ ಎದೆ ಢವಗುಟ್ಟುತ್ತಿತ್ತು. ಕೈಕಾಲುಗಳಲ್ಲಿ ನಡುಕ. ಪಪ್ಪನನ್ನು ಎದುರಿಸುವುದು ಹೇಗೆ, ಪಪ್ಪ ನನಗೆ ಏನು ಮಾಡಿಯಾರು ಹೀಗೆ ಪ್ರಶ್ನೆಗಳು. ಮನೆಯೊಳಗೆ ಕಾಲಿಡುತ್ತಿದ್ದಂತೆ ಪಪ್ಪ ನನ್ನನ್ನು ನಿಲ್ಲಿಸಿದರು ಮತ್ತು ದೇವರ ಪಟದ ಮುಂದೆ ಮೊಣಕಾಲೂರಿ ಕೈಗಳನ್ನು ಮೇಲೆತ್ತಲು ಹೇಳಿದರು. ರಾತ್ರಿ ಪ್ರಾರ್ಥನೆಗೆ ಹೋಗುವವರೆಗೆ ನಾನು ಮೊಣಕಾಲೂರಿ ಅದೇ ಭಂಗಿಯಲ್ಲಿ ಇದ್ದೆ. ನಂತರ ನಾವು ಸ್ನಾನ ಮಾಡಿ, ಊಟ ಮಾಡಿ ಮಲಗುವಾಗಲೂ ಪಪ್ಪ ನನ್ನಲ್ಲಿ ಏನೂ ಹೇಳಲಿಲ್ಲ. ಬಹುಶಃ ನಾಳೆಗಾಗಿ ಬಾಕಿ ಉಳಿಸಿರಬಹುದು ಎಂದುಕೊಂಡೆ. ಇನ್ನು ನನ್ನ ಶನಿವಾರದ ಮೀಟಿಂಗ್ ಮುಗಿದಂತೇ ಎಂದು ಯೋಚಿಸುತ್ತಾ ಇದ್ದ ನನಗೆ ನಿದ್ದೆ ಯಾವಾಗ ಬಿತ್ತೋ ತಿಳಿಯಲೇ ಇಲ್ಲ. ಮರುದಿನ ಪಪ್ಪ ಮತ್ತು ಅಮ್ಮ ಭಾನುವಾರದ ಮೊದಲನೆಯ ಪ್ರಾರ್ಥನೆಗೆ ಹೋಗಿ ಹಿಂತಿರುಗುವಾಗ ನಾನು ಎರಡನೆಯ ಪ್ರಾರ್ಥನೆಗೆ ಹೊರಡುವುದರಲ್ಲಿದ್ದೆ. ಬಟ್ಟೆ ತೊಟ್ಟು ಹೊರಗೆ ಬಂದಾಗ, ಪಪ್ಪ "ನಿಲ್ಲೋ ಅಲ್ಲೇ!" ಎಂದರು.

ನಾನು ನಿಂತಲ್ಲೇ ಕಲ್ಲಾದೆ. ಬಹುಶಃ ಪ್ರಾರ್ಥನೆಗೆ ಹೋಗುವುದನ್ನೂ ನಿಲ್ಲಿಸಿಬಿಡುತ್ತಾರೆನೋ ಎಂದು ಯೋಚಿಸಿದೆ. ಪಪ್ಪ ತನ್ನ ಕೈಯಲ್ಲಿದ್ದ ಸೈಕಲ್ ಕೀಯನ್ನು ನನಗೆ ನೀಡಿ, "ಸೈಕಲ್ ತೆಗೆದುಕೊಂಡು ಹೋಗು. ಆದರೆ ಇನ್ನು ಮುಂದೆ ಬಾಡಿಗೆಯ ಸೈಕಲ್ ಮುಟ್ಟಿದರೆ.. .. ಜೋಕೆ!" ಎಂದು ಗರ್ಜಿಸಿದರು. ನಾನು ನನ್ನ ಕೈಯಲ್ಲಿರುವ ಸೈಕಲ್ ಕೀ ಮತ್ತು ಪಪ್ಪನನ್ನು ನೋಡುತ್ತಾ ಎಷ್ಟು ಹೊತ್ತಿನವರೆಗೆ ನಿಂತಿದ್ದೆನೋ ನನಗೀಗ ನೆನಪಿಲ್ಲ.

ಅನುವಾದಕರು: **ಬಸ್ತಿ ಶೋಭಾ ಶೆಣೈ**

❖ ❖ ❖❖ ❖

ಪ್ರೆಶರ್ ಕುಕ್ಕರ್

✍ ಸ್ಟೇನ್ ಅಗೇರಾ

ಭಾನುವಾರದ ಮುಂಜಾನೆ ಐದು ಗಂಟೆಗೆ ಕಣ್ಣು ತೆರೆಯುವಾಗ ಅವಳ ಮನಸ್ಸಿಗೆ ಹೊಳೆದದ್ದು ಮಧ್ಯಾಹ್ನದ ಅಡುಗೆಯ ಯೋಚನೆ. ಫ್ರೀಜರಿನಿಂದ ಬೀಫ್ ಹೊರತೆಗೆದು ಮೇಲಿನ ಸೆಲ್ಫ್‌ನಲ್ಲಿ ಇರುವ ಪ್ರೆಶರ್ ಕುಕ್ಕರನ್ನು ಕೆಳಗೆ ಇಳಿಸಬೇಕಾಗಿದೆ. ಅವರ ಮನೆಯಲ್ಲಿ ಬೀಫ್ ಪಲ್ಯ ಮಾಡುವಾಗ ಮಾತ್ರ ಪ್ರೆಶರ್ ಕುಕ್ಕರಿಗೆ ಕೆಲಸ. ಇಲ್ಲದಿದ್ದರೆ ಅದು ಮೂಲೆ ಸೇರುತ್ತದೆ.

ಲೀನಾ ಇಗರ್ಜಿ ಪೂಜೆಗೆ ಹೋಗುವ ಕಾಯಿದೆಯನ್ನು ಶನಿವಾರವೇ ಮುಗಿಸಿದ್ದಳು. ಭಾನುವಾರ ಬೆಳಿಗ್ಗೆ ಗಂಡ ಮತ್ತು ಮಕ್ಕಳಿಗೆ ರಜಾ ದಿನವಾಗಿರುವುದರಿಂದ ಅವಳಿಗೆ ದುಪ್ಪಟ್ಟು ಕೆಲಸ. ಎಷ್ಟು ಮಾಡಿದರೂ ಮುಗಿಯುವಂತಹದಲ್ಲ. ಅವಳಿಗೂ ಭಾನುವಾರದ ಪೂಜೆಗೆ ಹೋಗುವ ಆಸೆ ಇದೆ.

ಮದುವೆಗೆ ಮುನ್ನ ಲೀನಾ ಇಗರ್ಜಿಯಲ್ಲಿ ಬಹಳ ಚಟುವಟಿಕೆಯಿಂದ ಓಡಾಡಿಕೊಂಡಿದ್ದಳು. ಸಮೂಹ ಸಂಗೀತದಲ್ಲಿ ಹುಡುಗರೊಂದಿಗೆ ಅವಳ ಕೆಲಸ ಎಲ್ಲರಿಗೂ ಮೆಚ್ಚುಗೆಯಾಗಿತ್ತು. ಈಗಲೂ ಭಾನುವಾರದ ಪೂಜೆಗೆ ಹೋಗಿ ಜೋರಾಗಿ ಹಾಡು ಹಾಡ್ಜೋಣ, ಕಾಣಿಕೆ ಬಟ್ಟಲು ಹಿಡಿದು ತಿರುಗಾಡೋಣ, ಪೂಜೆಯ ನಂತರ ಸಂಘ, ಸಂಸ್ಥೆಗಳೊಂದಿಗೆ, ಚರ್ಚಿನ ಪಾದ್ರಿ ಮತ್ತು ಇತರ ಮಹಿಳೆಯರೊಂದಿಗೆ ಹರಟೆ ಹೊಡೆಯೋಣವೆಂದು ಅವಳು ಯಾವಾಗಲೂ ಚಿಂತಿಸುತ್ತಿರುತ್ತಾಳೆ. ಹೆಲೆನ್ ಮತ್ತು ಗ್ರೇಸಿಯೊಂದಿಗೆ ಮಾತುಕತೆ ನಡೆಸುತ್ತಾ, ಹೊಟೇಲಿನಲ್ಲಿ ಅಂಬಡೆ, ಗೋಳಿಬಜೆ ತಿಂದು ಸಂತೋಷದಲ್ಲಿ ಕಾಲಕಳೆಯಬೇಕೆಂದು ಅವಳು ಆಶಿಸುತ್ತಿದ್ದಳು.

ಭಾನುವಾರದ ಇಗರ್ಜಿಯ ಚಟುವಟಿಕೆಗಳನ್ನು ಹೋಲಿಸಿದರೆ ಶನಿವಾರದ ದಿನ ಅವಳಿಗೆ ಸಪ್ಪೆಯಾಗಿ ಕಾಣುತ್ತಿತ್ತು. ಕಾಯಿದೆ ತೀರಿಸಿದ ಸಮಾಧಾನವಿದ್ದರೂ ಅವಳು ಬೇಸರದಿಂದ ಇರುತ್ತಿದ್ದಳು. ಸ್ವಾತಂತ್ರ್ಯವಿಲ್ಲ. ವಿವಾಹವೆಂದರೆ ಹೀಗೆ ಎಂದು ತಿಳಿದಿದ್ದಲ್ಲಿ ಮದುವೆಯೇ ಬೇಡವಿತ್ತು ಎಂದು ಅವಳಿಗೆ ಆಗಾಗ ಅನ್ನಿಸುವುದಿದೆ.

ಕಾಲೇಜಿನಲ್ಲಿ ಕಲಿಯುವಾಗ ಅವಳು ಲಾಂಗ್‌ಜಂಪ್‌ನಲ್ಲಿ ರಾಜ್ಯಮಟ್ಟದ ಚಾಂಪಿಯನ್. ಸಂಗೀತ ಮತ್ತು ನಾಟಕಗಳಲ್ಲಿ ಬಹುಮಾನಗಳನ್ನು ಗಿಟ್ಟಿಸುತ್ತಿದ್ದಳು. ಇಗರ್ಜಿಯರ ಕೊಯೆರ್ ಮತ್ತು ಯುವ ಚಟುವಟಿಕೆಯೆಂದು ಬಹಳ ಜನರ ಟೀಕೆಗೆ ಕೂಡಾ ಗುರಿಯಾಗಿದ್ದಳು. ಅವಳು 'ಚಾಲೂ' ಎಂಬ ಸುದ್ದಿಯೂ ಹರಡಿತ್ತು. ಈ 'ಬಜಾರಿ' ಯನ್ನು ಮದುವೆಯಾದ ಹುಡುಗನ ಗತಿ ಏನೋ. ಆ ದೇವರೇ ಕಾಪಾಡಬೇಕು, ಇತ್ಯಾದಿ ಅಗ್ಗದ ಮಾತುಗಳು ಲೀನಾಳ ಕಿವಿಗೂ ಬಿದ್ದದ್ದಿದೆ. ಇಗರ್ಜಿಯಲ್ಲಿ ಮೊದಲು

ಮ್ಯಾಕ್ಸಿಯೊಂದಿಗೆ, ನಂತರ ಡಾಲ್ಫಿಯೊಂದಿಗೆ ಅವಳ ನಿಕಟ ಸ್ನೇಹವಿತ್ತು ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆದರೆ ಲೀನಾ ಮಾತ್ರ ಅದನ್ನು ಮನಸ್ಸಿಗೆ ಹಚ್ಚಿಕೊಂಡವಳೇ ಅಲ್ಲ. ಅವಳು ಅವರೊಂದಿಗೆ ಫಿಲ್ಮ್, ಐಸ್‌ಕ್ರೀಮ್ ಪಾರ್ಲರ್ ಎಂದು ಹೋದದ್ದು ಇದೆ.

ಈ ಗೆಳೆತನ ಮಾತ್ರ ಹೆಚ್ಚು ಕಾಲ ಉಳಿಯಲಿಲ್ಲ. ಲೀನಾಳ ದಿಟ್ಟ ವರ್ತನೆ ಮ್ಯಾಕ್ಸ್ ಮತ್ತು ಡಾಲ್ಫಿಗೆ ಸಮಯ ಕಳೆಯಲು ಒದಗಿ ಬಂದಿರಬಹುದು. ಆದರೆ ಅವಳನ್ನು ಜೀವನಸಂಗಾತಿಯಾಗಿ ಒಪ್ಪಿಕೊಳ್ಳಲು ಅವರು ಮನಸ್ಸು ಮಾಡಲಿಲ್ಲ. ಅವರು ಅವಳಿಂದ ದೂರ ಸರಿದರೋ ಅಥವಾ ಅವಳೇ ಅವರಿಂದ ದೂರಸರಿದಳೋ ನಿಖರವಾಗಿ ಹೇಳುವುದು ಕಷ್ಟ. ಲೀನಾಳಿಗೆ ವಿಮಾ ಸಂಸ್ಥೆಯಲ್ಲಿ ಉದ್ಯೋಗ ದೊರೆಯಿತು. ವರ್ಷದೊಳಗೆ ಜೆರ್ಮಿಯೊಂದಿಗೆ ಮದುವೆ ನಡೆಯಿತು. ಮಕ್ಕಳಾದರು. ಕೆಲಸ ಬಿಡುವುದು ಇಷ್ಟವಿಲ್ಲದಿದ್ದರೂ, ಜೆರ್ಮಿಯ ಒತ್ತಾಯ ಮತ್ತು ಮಕ್ಕಳ ಲಾಲನೆ ಪಾಲನೆಗಾಗಿ ಕೆಲಸ ಬಿಡಬೇಕಾಯಿತು. ಖಾಸಗಿ ಸಂಸ್ಥೆಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದು ಸಾಕಷ್ಟು ಸಂಬಳವಿದ್ದ ಜೆರ್ಮಿಗೆ ಲೀನಾಳ ಸಂಪಾದನೆಯ ಅಗತ್ಯವಿರಲಿಲ್ಲ.

ಲೀನಾಳಿಗೆ ಮಾತ್ರ ರೆಕ್ಕೆ ಕತ್ತರಿಸಿದಂತಾಯಿತು. ಆದರೆ ಅವಳು ಅದನ್ನು ಯಾವ ಪ್ರಜ್ಞೆಯಿಂದ ಸಹಿಸಿದಳೋ ಅದು ಅವಳೊಬ್ಬಳಿಗೇ ಗೊತ್ತು. ಕ್ರಮೇಣ ಮನೆ, ಗಂಡ, ಮಕ್ಕಳು ಎಂಬ ವರ್ತುಲದಲ್ಲಿ ಅವಳು ಬೆರೆತು ಹೋದಳು. ಮದುವೆಯ ಮೊದಲು ಬಜಾರಿ ಎಂಬ ಬಿರುದು ಪಡೆದ ಲೀನಾ ಜವಾಬ್ದಾರಿಯಲ್ಲಿ ಸಹನೆಯ ಮೂರ್ತಿಯೇ ಆದಳು. ಈ ನೆಗೆತ ಯಾವಾಗ, ಹೇಗೆ ನಡೆಯಿತು ಎಂದು ಕೇಳಿದರೆ ಲೀನಾಳಲ್ಲಿ ಉತ್ತರ ಸಿಗಲಿಕ್ಕಿಲ್ಲ. ಎಲ್ಲವೂ ತನ್ನಿಂದ ತಾನೇ ಘಟಿಸಿತು.

ಹಾಸಿಗೆಯಲ್ಲಿ ಮಗ್ಗುಲು ಬದಲಾಯಿಸುವಾಗಲೇ ತಟ್ಟನೆ ಅವಳು ಎದ್ದು ಕುಳಿತಳು. ಗಂಟೆ ಆಗಲೇ ಆರು. ಇನ್ನು ಅರ್ಧ ಗಂಟೆಯಲ್ಲಿ ಜೆರ್ಮಿ ಏಳುತ್ತಾನೆ. ಬ್ರಶ್ ಮಾಡುವ ಮೊದಲು ಒಂದು ಕಪ್ ಚಾ ಕುಡಿಯದೆ ಅವನು ಬಚ್ಚಲಿಗೆ ಹೋಗುವುದಿಲ್ಲ. ಅವಳು ಕಷ್ಟದಿಂದ ಎದ್ದಳು. ವಾರಕ್ಕೆ ಒಂದು ದಿನವಾದರೂ ಆರಾಮವಾಗಿ ನಿದ್ದೆ ಮಾಡುವ ಹಾಗಿಲ್ಲ.

ಬಚ್ಚಲು ಮನೆಯಲ್ಲಿ ಹದಿನೈದು ನಿಮಿಷಗಳು ಕಳೆದವು. ಅಡುಗೆ ಮನೆ ಪ್ರವೇಶಿಸುವ ಮೊದಲು ಅವಳು ರಾಹುಲ್ ಮತ್ತು ರೆನ್ನಿಯನ್ನು ಎಬ್ಬಿಸಿ ಬಂದಳು. ಅವರು ಒಂಭತ್ತು ಗಂಟೆಯ ಪ್ರಾರ್ಥನೆಗೆ ಹೋಗಬೇಕಾಗಿದೆ. ತಟ್ಟಿ ಎಬ್ಬಿಸದಿದ್ದರೆ ಅವರಿಗೆ ಎಚ್ಚರವಾಗುವುದಿಲ್ಲ.

"ಏನು ಮಮ್ಮೀ, ಭಾನುವಾರವೂ ನನಗೆ ಸರಿಯಾಗಿ ನಿದ್ದೆ ಮಾಡಲು ಬಿಡುವುದಿಲ್ಲ" ರಾಹುಲ್ ಗೊಣಗಿದ.

ಅವಳು ಅಡುಗೆ ಮನೆಗೆ ಬಂದವಳು ಫ್ರೀಜರ್‌ನಿಂದ ಬೀಫನ್ನು ಹೊರತೆಗೆದಳು. ಹಿಂದಿನ ದಿನ ರುಬ್ಬಿಟ್ಟ ಹಿಟ್ಟಿನ ಪಾತ್ರೆಯನ್ನು ತೆಗೆದಿಟ್ಟು ಹಾಲು ಬಿಸಿ ಮಾಡಿದಳು. ಚಹ ತಯಾರಿಸಿ, ಜೆರ್ಮಿಗೆಂದು ಒಂದು ಲೋಟಾ ಚಹಾ ಹಿಡಿದು ಮಲಗುವ ಕೋಣೆಗೆ ಹೋದಳು. ಅವನು ಚಹಾಕ್ಕಾಗಿಯೇ ಕಾದುಕುಳಿತಿದ್ದ. ಅವನ ಕೈಗೆ ಕಪ್ ಕೊಡುವಾಗ ಅವಳಿಗೆ ಪ್ರೆಶರ್ ಕುಕ್ಕರಿನ ನೆನಪು ಬಂತು.

"ಪೂಜೆಗೆ ಹೋಗುವ ಬಟ್ಟೆಗೆ ಇಸ್ತ್ರೀ ಇದೆಯಾ?" ಚಹ ಕಪ್ ಕೈಗೆತ್ತಿಕೊಂಡು ಜೆರ್ಮಿ ಕೇಳಿದ.

'ಇಸ್ತ್ರೀ?' ಲೀನಾ ಗಲಿಬಿಲಿಗೊಂಡಳು. "ನೀನು ನೆನಪು ಮಾಡಿದ್ದು ಒಳ್ಳೆಯದಾಯ್ತು"

ಅಲ್ಲಿಂದ ಹೊರಗೆ ಬಂದಾಗ, "ಮಮ್ಮೀ ತಿಂಡಿ ಏನು ಮಾಡಿದ್ದಿ?" ರೆನ್ನಿ ಕೇಳಿದ. "ನೀರುದೋಸೆ" ಉತ್ತರಿಸಿದ ಅವಳು ಮತ್ತೆ ಅಡುಗೆಮನೆಗೆ ಬಂದಳು. ಬರೀ ನೀರುದೋಸೆ ಮಾಡಿದರೆ ಈ ತಂದೆ, ಮಕ್ಕಳ ಗಂಟಲಲ್ಲಿ ಇಳಿಯುವುದಿಲ್ಲ. ಅದರೊಂದಿಗೆ ಚಟ್ನಿ ಬೇಕು ಅವರಿಗೆ. ಕಾವಲಿಯಲ್ಲಿ ದೋಸೆ ಹೊಯ್ದು ತೆಗೆಯುವಾಗ ಮಿಕ್ಸಿಯಲ್ಲಿ ಪುದೀನಾ ಚಟ್ನಿ ತಯಾರಿಸಿದಳು. ಮೇಜಿನ ಮೇಲೆ ಎಲ್ಲವನ್ನೂ ಅಣಿ ಮಾಡಿಟ್ಟಳು. ಗಂಡ ಮತ್ತು ಮಕ್ಕಳು ಒಟ್ಟಿಗೆ ಕುಳಿತು ತಿಂದರು. ಅವರೊಂದಿಗೆ ಕುಳಿತು ಉದರಸೇವೆ ಮಾಡಿಕೊಳ್ಳಲು ಅವಳಿಗೆ ಬಿಡುವಿರಲಿಲ್ಲ. ಬಟ್ಟೆಗೆ ಇಸ್ತ್ರಿ ಮಾಡಬೇಕಿತ್ತು. ಅವಳು ನೀಡಿದ ಉಡುಪನ್ನು ಧರಿಸುವಾಗ ರೆನ್ನಿ ಗೊಣಗಿಕೊಂಡ, "ಇದೇನು ಮಮ್ಮಿ, ಬಟ್ಟೆಯ ನೆರಿಗೆ ಹೋಗಿಲ್ಲ. ನೀನು ಹೀಗೆ ನೆರಿಗೆ ಬಿದ್ದ ಉಡುಪು ಧರಿಸಿ ಹೊರಗೆ ಹೋಗ್ತಿಯಾ?" ಲೀನಾ ಏನೂ ಹೇಳಲಿಲ್ಲ. ಇಂತಹ ದೂರುಗಳನ್ನು ಕೇಳಿ ಅವಳಿಗೆ ಅಭ್ಯಾಸವಾಗಿದೆ.

"ಮಧ್ಯಾಹ್ನ ಏನು ಅಡುಗೆ ಮಾಡುತ್ತಿ?" ಹೊರಡಲು ತಯಾರಾಗಿ ನಿಂತ ಗಂಡ ಕೇಳಿದ.

"ಬೀಫ್ ಕಡಿ, ಅನ್ನ ಮತ್ತು ಸಲಾಡ. ಸಾಕಲ್ಲವೇ?" ಉತ್ತರದ ನಿರೀಕ್ಷೆಯಲ್ಲಿ ಅವಳು ಹೇಳಿದಳು.

"ನಿನಗೆ ಹೇಳಲು ಮರೆತೆ" ಜೆರ್ಮಿ ಹೇಳತೊಡಗಿದ, "ನನ್ನೊಂದಿಗೆ ಆಫೀಸಿನಲ್ಲಿ ಕೆಲಸ ಮಾಡುವ ಅಗ್ನೆಲ್ ನಿನಗೆ ಗೊತ್ತಿರಬೇಕಲ್ಲ, ಅವನ ಹೆಂಡತಿ ತೌರುಮನೆಗೆ ಹೋಗಿದ್ದಾಳೆ. ಅವನನ್ನು ಮಧ್ಯಾಹ್ನದ ಊಟಕ್ಕೆ ಕರೆದಿದ್ದೇನೆ. ಸಲಾಡಿಗೆ ಬೀಟ್‌ರೂಟ್ ಹಾಕು. ಜೊತೆಗೆ ಕತ್ತರಿಸಿದ ತೊಂಡೆಕಾಯಿ. ಮೀನು ಹುರಿದಿಡು. ಬೀಫ್ ಕಡಿಯೊಂದಿಗೆ ಎಳೆ ತೆಂಗಿನಕಾಯಿ ಹಾಕಿ ಅಕ್ಕಿರೊಟ್ಟಿ ಮಾಡಿದರೆ ಒಳ್ಳೇದು. ವಿಸ್ಕಿ ತಂದಿದ್ದೇನೆ. ಅಲ್ಲೇ ಮೇಜಿನ ಮೇಲಿದೆ. ಭಾನುವಾರ, ಸ್ವಲ್ಪ ಮಜಾ ಉಡಾಯಿಸೋಣ"

'ಯಾರಿಗೆ ಮಜಾ ಯಾರಿಗೆ ಸಜಾ' ಲೀನ ಮನಸ್ಸಿನಲ್ಲಿಯೇ ಗೊಣಗಿದಳು. ಪ್ರೆಶರ್ ಕುಕ್ಕರನ್ನು ಕೆಳಗೆ ಇಳಿಸದಿರುವುದು ಅವಳ ಗಮನಕ್ಕೆ ಬಂತು. ಆ ಕೆಲಸ ತಿಂಡಿ ತಿಂದ ಮೇಲೆ ಮಾಡಿದರಾಯಿತು ಎಂದುಕೊಂಡು ಊಟದ ಮೇಜಿನ ಬಳಿ ಬಂದು ಗಂಡ ಮತ್ತು ಮಕ್ಕಳು ತಿಂದು ಬಿಟ್ಟ ಬಟ್ಟಲು, ಪ್ಲೇಟುಗಳನ್ನು ಎತ್ತಿ ಸಿಂಕ್‌ಗೆ ಹಾಕಿದಳು. ಒಬ್ಬಳೇ ಕುಳಿತು ತಿನ್ನುವಾಗ ಅವಳಿಗೆ ರುಚಿಕೆಟ್ಟು ಹೋಯಿತು. ಅವಳ ಕಾಫಿ ಆರಿತ್ತು. ಕಷ್ಟಪಟ್ಟು ಎರಡು ದೋಸೆಗಳನ್ನು ನುಂಗಿದಳು. ಆನಂತರ ಮೇಜನ್ನು ಒರೆಸಿಟ್ಟಳು.

ಪ್ರೆಶರ್ ಕುಕ್ಕರ್? ಅವಳಿಗೆ ಸುಸ್ತಾಗಿತ್ತು. ಅಷ್ಟರಲ್ಲಿ ಚೆಂದದ ಉಡುಗೆ ತೊಟ್ಟುಬಂದ ರಾಹುಲ್ ಅವಳಲ್ಲಿ ಹೇಳಿದ,

"ಮಮ್ಮೀ, ನಾಳೆ ನನಗೆ ಸ್ಪೋರ್ಟ್ಸ್ ಇದೆ. ಬಿಳಿಶೂ ಶುಚಿ ಮಾಡಿ ಇಡ್ತೀಯಾ?"

"ನೋಡೋಣ, ಸಮಯವಿದ್ದರೆ" ಅವಳು ಆಶ್ವಾಸನೆ ನೀಡಿದಳು.

ಗಂಡ ಮತ್ತು ಮಕ್ಕಳು ಇಗರ್ಜಿಗೆ ಹೋದ ಬಳಿಕ ಅವಳು ಅವರ ಕೋಣೆಗೆ ಸುತ್ತುಬಂದಳು. ಮಲಗುವ ಕೋಣೆಗೆ ಬಂದಾಗ ಅಲ್ಲಿ ಮೇಜಿನ ಮೇಲಿರುವ ವಿಸ್ಕಿ ಬಾಟಲು ಅವಳ ಕಣ್ಣಿಗೆ ಕಂಡಿತು. ಮಧ್ಯಾಹ್ನ ಊಟಕ್ಕೆ ಅಗ್ನೆಲ್ ಬರುತ್ತಾನೆ. ಭಾನುವಾರದ ವಿಶ್ರಾಂತಿಯನ್ನು ಆಚರಿಸಲು ಜೆರ್ಮಿ ನಿರ್ಧರಿಸಿದ್ದಾನೆ. ಆ ಅಗ್ನೇಲನೊಂದಿಗೆ ತನ್ನ ಗಂಡನಿಗೆ ಸ್ನೇಹ ಯಾಕೆಂದು ಲೀನಾಗೆ ಗೊತ್ತಿಲ್ಲ. ಅಗ್ನೆಲಾ ಪುಕ್ಕಟೆ ಶರಾಬು ಮತ್ತು ಊಟಕ್ಕಾಗಿ ಓಡಿಬರುತ್ತಾನೆ. ಅವನಿಗೆ ಮತ್ತು ಅವನ ಹೆಂಡತಿಗೆ ನಮ್ಮನ್ನು ಕರೆದು ಸತ್ಕಾರ ಮಾಡುವ ಆಲೋಚನೆ ಇಲ್ಲ. ಇಬ್ಬರೂ ಒಂದೇ ರೀತಿ.

• ಜೆರ್ಮಿ ಮತ್ತು ಮಕ್ಕಳ ಕೋಣೆಯಲ್ಲಿರುವ ಸಾಮಾನುಗಳನ್ನೆಲ್ಲಾ ಅವಳು ಸರಿಯಾಗಿ ಜೋಡಿಸಿಟ್ಟಳು. ಕೆಳಗೆ ಬಿದ್ದ ಪೇಪರ್ ಮತ್ತು ಬಟ್ಟೆಗಳನ್ನೆತ್ತಿ ಅವುಗಳ ಜಾಗದಲ್ಲಿ ಇಟ್ಟಳು. ಒಗೆಯಲಿರುವ ಬಟ್ಟೆಗಳನ್ನು ಜೋಡಿಸಿ ವಾಶಿಂಗ್ ಮಿಶಿನಿನಲ್ಲಿ ಹಾಕುವಾಗ ಅವಳಿಗೆ ಪ್ರೆಶರ್ ಕುಕ್ಕರಿನ ನೆನಪು ಬಂತು.

ರಾಹುಲ್ ಮತ್ತು ರೆನ್ನಿಯರನ್ನು ನೋಡುವಾಗ ಅವಳಿಗೆ ತನ್ನ ಬಾಲ್ಯದ ನೆನಪುಗಳು ಕಾಡುತ್ತವೆ. ಜವಾಬ್ದಾರಿಯ ಭಾರ ಏನೆಂದು ತಿಳಿಯದೆ ಕಳೆದು ಹೋದ ಸ್ವತಂತ್ರ ದಿನಗಳು. ಅಡುಗೆಮನೆಯತ್ತ ಸುಳಿದ ನೆನಪೇ ಅವಳಿಗಿಲ್ಲ. ವಿಮಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದ ನಂತರ ಅವಳು ತನ್ನ ಹಾರಾಟದ ಅನುಭವವನ್ನು ಮರೆತಿರಲಿಲ್ಲ. ಈಗ ಮದುವೆಯಾಗಿ, ಕೆಲಸ ಬಿಟ್ಟ ನಂತರ ತನ್ನನ್ನೇ ತಾನು ಕಳೆದುಕೊಂಡಂತೆ ಅವಳಿಗೆ ಕಳವಳವಾಗುವುದಿತ್ತು.

ಕೆಲಸ ಮಾಡುವುದರಲ್ಲಿ ಜೆರ್ಮಿಯ ಬೆಂಬಲ ಅವಳಿಗೆ ಇಲ್ಲವೆಂದು ಹೇಳುವ ಹಾಗಿಲ್ಲ ಆದರೆ ಅವಳು ಮನೆಯ ಕೆಲಸಗಳಿಂದ ಕಷ್ಟವನ್ನು ಅನುಭವಿಸುತ್ತಿದ್ದಾಳೆ. ಮಕ್ಕಳು ಚಿಕ್ಕವರಿರುವಾಗ ಅವರ ಆರೈಕೆ, ಶಾಲೆ, ಹೋಮ್‌ವರ್ಕ್, ಮನೆಯನ್ನು ಶುಚಿಯಾಗಿ ಡುವುದು, ಗಂಡನ ಚಾಕರಿ, ಸಂತೋಷ ಕೂಟಗಳು, ಬಟ್ಟೆ ಶುಚಿ ಮಾಡು, ಇಸ್ತ್ರಿ ಹಾಕು

ಇತ್ಯಾದಿ. ಉಸಿರು ಬಿಡಲು ಕೂಡಾ ಪುರುಸೊತ್ತು ಇರುತ್ತಿರಲಿಲ್ಲ. ಈಗ ಮಕ್ಕಳು ದೊಡ್ಡವರಾದಂತೆ ಅವರ ಬಿಟ್ಟಿ ಕೆಲಸಗಳು ಕೂಡಾ ಹೆಚ್ಚಿವೆ.

ಅವಳು ಅಡುಗೆ ಮನೆಗೆ ಬಂದು ಅಕ್ಕಿರೊಟ್ಟಿಗೆ ಅಕ್ಕಿ ನೆನೆ ಹಾಕಿದಳು. ಬೀಫ್, ತೊಂಡೆ, ಟೊಮೆಟೊ, ಈರುಳ್ಳಿ ಹೆಚ್ಚಿಟ್ಟಳು. ತೆಂಗಿನ ಕಾಯಿ ಸುಲಿದು ತುರಿದಿಟ್ಟಳು. ಬೀಫ್ ತೊಳೆದು ಪಾತ್ರೆಗೆ ಹಾಕಿದಾಗ ಸೆಲ್ಫ್ ಮೇಲಿದ್ದ ಕುಕ್ಕರ್‌ನತ್ತ ದೃಷ್ಟಿ ಹರಿಯಿತು. ಅವಳು ಸ್ಟೂಲ್ ಮೇಲೆ ಹತ್ತಿ ಕುಕ್ಕರನ್ನು ಹತ್ತಿರಕ್ಕೆ ಎಳೆದುಕೊಂಡಾಗ ಅದು ಅವಳ ಕೈಯಿಂದ ಜಾರಿ ನೆಲಕ್ಕೆ ಅಪ್ಪಳಿಸಿತು. ಅವಳು ಕೆಳಗೆ ಬಿದ್ದ ಕುಕ್ಕರನ್ನು ಎತ್ತಿದಳು. ಸ್ಟೀಲಿನ ವಸ್ತು ಸಾಮಾನ್ಯವಾಗಿ ಒಡೆದು ಹೋಗುವುದಿಲ್ಲ. ಆದರೆ ಅದು ಸೀಳು ಬಿಡುವ ಸಂಭವ ಇರುತ್ತದೆ ಎಂದು ಎಲ್ಲೋ ಓದಿದ ನೆನಪು.

ಪ್ರೆಶರ್ ಕುಕ್ಕರ್ ಸ್ಫೋಟಗೊಂಡರೆ?

ಅವಳ ಇಡೀ ಶರೀರ ಕಂಪಿಸಿತು. ಆಮೇಲೆ ಏನೋ ಆಲೋಚಿಸಿ ಅವಳು ನಗುತ್ತಾ ಕುಕ್ಕರಿನಲ್ಲಿ ಮಾಂಸ ಮತ್ತು ನೀರನ್ನು ಹಾಕಿ ಬೇಯಲಿಟ್ಟಳು. ಮೊದಲ ಉಗಿ ಹೊರಬಂದ ಕೂಡಲೇ ವೇಟ್ ಹಾಕಿದಳು. ಸ್ವಲ್ಪ ಹೊತ್ತಿನಲ್ಲಿಯೇ ಸೀಟಿ ಬರಲಾರಂಭಿಸಿತು. ಕುಕ್ಕರಿನಲ್ಲಿ ತುಂಬಿಕೊಂಡಿದ್ದ ಉಗಿ ಶಾಖ ಹೊರಗೆ ಬರಲು ಚಡಪಡಿಸುತ್ತಿದೆ. ಕುಕ್ಕರಿನ ಉಸಿರುಗಟ್ಟುವಿಕೆ ಅವಳಿಗೆ ಅರ್ಥವಾಗದ ವಿಚಾರವೇನಲ್ಲ.

ಕುಕ್ಕರಿನ ಶಾಖ ಕ್ಷಣಕ್ಷಣಕ್ಕು ಹೆಚ್ಚುತ್ತಿತ್ತು. ಇಂದು ಕುಕ್ಕರಿನ ಸೀಟಿಯ ಧ್ವನಿಯಲ್ಲಿ ಏನೋ ವ್ಯತ್ಯಾಸವಾದಂತೆ ಲೀನಾಳಿಗೆ ಕಂಡಿತು. ವಾಲ್ವ್‌ನಲ್ಲಿ ಕಸ ಸಿಕ್ಕಿಕೊಂಡು ಶಾಖ ಹೊರಬರಲು ಚಡಪಡಿಸುತ್ತಿರುವಂತೆ ಭಾಸವಾಯಿತು. ಸಾಮಾನ್ಯವಾಗಿ ಕೇಳುವ ಸೀಟಿಗೂ ಇವತ್ತಿನ ಸೀಟಿಗೂ ವ್ಯತ್ಯಾಸವಿರುವುದು ಗಮನಕ್ಕೆ ಬಂತು. ಸೆಲ್ಫ್‌ನಿಂದ ಕೆಳಗೆ ಬಿದ್ದಾಗ ಕುಕ್ಕರಿನ ವಾಲ್ವ್ ಜಜ್ಜಿ ಹೋಗಿರಬಹುದೇ?

ಒತ್ತಡ ಹೆಚ್ಚಿ ಒಂದು ವೇಳೆ ಕುಕ್ಕರ್ ಒಡೆದುಹೋದರೆ? ಆ ಯೋಚನೆಯಿಂದ ಅವಳಿಗೆ ಹೆದರಿಕೆ ಉಂಟಾಯಿತು. ಅದು ನನ್ನ ಕಲ್ಪನೆ ಇರಬಹುದೆಂದು ಅವಳು ತನ್ನನ್ನೇ ಸಮಾಧಾನ ಪಡಿಸಿಕೊಂಡಳು. ನೆನೆದ ಅಕ್ಕಿಯನ್ನು ಗ್ರೈಂಡರಿಗೆ ಹಾಕಿ ಸ್ವಿಚ್ ಆನ್ ಮಾಡಿದಳು. ಕಲ್ಲು ತಿರುಗಲಾರಂಭಿಸಿತು.

ಇಡೀ ದಿನ ಗಂಡ, ಮಕ್ಕಳು, ಅಡುಗೆ ಮನೆಯೆಂದು ಲೀನಾಗೆ ಜೀವನ ಬಂಧನವಾಗಿದೆ. ಅವಳಿಗೆ ಆಯಾಸವಾಗಿದೆ. ಈ ಬಂಧನದಿಂದ ಪಾರಾಗಲು ಅವಳ ಮನಸ್ಸು ಬಯಸುತ್ತಿದೆ. ಆದರೆ ಅದು ಸಾಧ್ಯವಾಗುತ್ತಿಲ್ಲ. 'ನನಗೆ ಮಾತ್ರ ಯಾಕೆ ಸಾಧ್ಯವಾಗಿಲ್ಲ? ಬೇರೆ ಮಹಿಳೆಯರು ಮದುವೆಯ ನಂತರವೂ ಬಿಡುವು ಮಾಡಿಕೊಂಡು ಉದ್ಯೋಗ, ಕಿಟಿಪಾರ್ಟಿ, ಕ್ಲಬ್, ವ್ಯಾಯಾಮ, ವಾಕಿಂಗ್, ಆಟ, ಸಂಘಸಂಸ್ಥೆ, ಕೊಯೆರ್ ಎಂದೆಲ್ಲಾ ತಮ್ಮ ಹವ್ಯಾಸಗಳನ್ನು ಮುಂದುವರಿಸುತ್ತಾರೆ. ನನಗೆ ಮಾತ್ರ ಇದೆಲ್ಲಾ

ಸಾಧ್ಯವಾಗುತ್ತಿಲ್ಲ, ಯಾಕೆ? ಮನೆ, ಪರಿವಾರವೆಂಬ ಚಕ್ರವ್ಯೂಹದಲ್ಲಿ ಬೆರೆತು ನಾನೇಕೆ ಕರಗಿ ಹೋಗಿದ್ದೇನೆ?'

ಕುಕ್ಕರಿನ ಆವಿ ಹೊರಬರುವುದನ್ನು ನೋಡುತ್ತಾ ನಿಂತ ಲೀನಾಳಿಗೆ ಏನು ಮಾಡುವುದೆಂದೇ ತೋಚಲಿಲ್ಲ. ಸ್ಟೌ ನಂದಿಸಿ ಮಾಂಸವನ್ನು ಬೇರೆ ಪಾತ್ರೆಯಲ್ಲಿ ಬೇಯಿಸೋಣವೆಂದರೆ ಅದು ಮೃದುವಾಗುವ ಗ್ಯಾರಂಟಿ ಇಲ್ಲ.

ತನಗೆ ಪ್ರೆಶರ್ ಕುಕ್ಕರಿನ ಚಿಂತೆ ಯಾಕಿಷ್ಟು ಕಾಡುತ್ತಿದೆ? ಶಾಖ ತುಂಬಿಕೊಂಡರೆ ಕುಕ್ಕರ್ ಸ್ಫೋಟವಾಗುವ ಸಾಧ್ಯತೆ ಇದೆ ಎನ್ನುತ್ತಾರೆ. ಆದರೆ ತನ್ನ ವರ್ತುಲದಲ್ಲಿ ಇಂತಹ ಸ್ಫೋಟ ನಡೆದಿರುವುದನ್ನು ಅವಳು ಇದುವರೆಗೆ ಕೇಳಿಲ್ಲ. ಎಲ್ಲವೂ ಸರಿಯಾಗಿಯೇ ಇದೆ ಎಂದು ಅವಳು ತನಗೇ ಭರವಸೆ ನೀಡಿದಳು.

ಪೂಜೆಯಿಂದ ಜೆರ್ಮಿ ಮತ್ತು ಮಕ್ಕಳು ಹಿಂದಿರುಗುವ ವೇಳೆಗೆ ಮನೆ ಶುಚಿ ಮಾಡೋಣವೆಂದು ಅವಳು ಪೊರಕೆ ಹಿಡಿದು ಕೆಲಸದಲ್ಲಿ ತೊಡಗಿದಳು. ಮಲಗುವ ಕೋಣೆಗೆ ಬಂದಾಗ ಅವಳು ಅಲ್ಲಿದ್ದ ವಿಸ್ಕಿ ಬಾಟಲಿನಿಂದ ಆಕರ್ಷಿತಳಾದಳು. ಪೊರಕೆಯನ್ನು ಕೆಳಗೆ ಇಟ್ಟು ಬಾಟಲನ್ನು ಕೈಗೆತ್ತಿಕೊಂಡಳು. ಅವಳಿಗೆ ಅಮಲಿನ ಕುರಿತು ಹೆಚ್ಚು ಅನುಭವವಿರಲಿಲ್ಲ. ಕಾಲೇಜಿನ ಹಾಸ್ಟೇಲ್ ಹುಡುಗಿಯರೊಂದಿಗೆ ಒಂದು ಗುಟುಕು ಬಿಯರ್ ಕುಡಿದು ನಂತರ ಪಟ್ಟ ಪಾಡು ಈ ಜನ್ಮದಲ್ಲಿಯೇ ಮರೆಯುವಂತಿಲ್ಲ.

ಅಪರೂಪಕ್ಕೆ ಜೆರ್ಮಿ ಕುಡಿಯುತ್ತಿದ್ದ. ಕೆಲವೊಮ್ಮೆ ಕುಡಿದ ಅಮಲಿನಲ್ಲಿ ನಾಲಗೆ ತೊದಲುವುದೂ ಇತ್ತು. ಹುಚ್ಚನಂತೆ ಬೈದುಕೊಳ್ಳುವುದೂ ಇತ್ತು. ಆದರೆ ಇದು ಭಾರೀ ಅಪರೂಪ. ಅವನು ಕುಡಿದಾಗ ಮಕ್ಕಳು ತಪ್ಪಿಯೂ ಅವನ ಜೊತೆ ಮಾತನಾಡುತ್ತಿರಲಿಲ್ಲ. ಕುಡಿದ ನಂತರದ ಅವನ ಪಿರಿಪಿರಿ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಕೆಲವೊಮ್ಮೆ ಅವರೊಡನೆ ಚಂದ ಮಾತನಾಡಿ ಗೆಳೆತನ ಮಾಡಲು ಇಚ್ಛಿಸುತ್ತಿದ್ದ.

ಕುಡಿದಾಗ ಅವನ ಸ್ವಭಾವ ಯಾಕೆ ಬದಲಾಗುತ್ತದೆ ಎನ್ನುವ ಪ್ರಶ್ನೆಗೆ ಅವಳ ಬಳಿ ಉತ್ತರವಿದ್ದಿಲ್ಲ. ಪ್ರಾಯಶಃ ಜೆರ್ಮಿಯ ಮನಸ್ಸು ಸ್ವತಂತ್ರವಾಗುತ್ತಿತ್ತೋ ಏನೋ.

ಅವಳಿಗೆ ಏನಾಗುತ್ತಿದೆ ಎಂದು ಅವಳಿಗೆ ಗೊತ್ತಾಗಲಿಲ್ಲ. ಅವಳು ಬಾಟಲಿಯ ಮುಚ್ಚಳ ತೆಗೆದು ದೊಡ್ಡ ಗುಟುಕನ್ನು ಸೇವಿಸಿದಳು. ಅದರ ಘಾಟು ಸಹಿಸಲಾಗದೆ ಅವಳಿಗೆ ಬಲವಾದ ಕೆಮ್ಮು ಬಂತು. ಜೆರ್ಮಿ ಹೀಗೆ ನೇರವಾಗಿ ಕುಡಿಯುತ್ತಿರಲಿಲ್ಲ. ನೀರು ಅಥವಾ ಸೋಡಾ ಬೆರೆಸಿ ಕುಡಿಯುತ್ತಿದ್ದನು.

ಅವಳು ಅಡುಗೆ ಮನೆಗೆ ಬಂದಾಗ ಕುಕ್ಕರಿನ 'ಪಸ್ಸ್.. ಪಸ್ಸ್..' ಶಬ್ದ ಅವಳಿಗೆ ಕಿರಿಕಿರಿಯನ್ನು ಉಂಟು ಮಾಡಿತು. ಶಾಖ ಹೊರಬರಲು ಕಷ್ಟಪಡುತ್ತಿದೆ. ಒಳಗಿನ ಒತ್ತಡ ಹೆಚ್ಚುತ್ತಿದೆ. ಎಲ್ಲಿಯವರೆಗೆ ಈ ಬಂಧನ? ಅವಳು ಚಿಂತಿಸಲಿಲ್ಲ. ಒಂದು ಗ್ಲಾಸನ್ನು ಕೈಗೆತ್ತಿಕೊಂಡು ಮತ್ತೆ ಮಲಗುವ ಕೋಣೆಗೆ ಹೋದಳು. ಮೇಜಿನ ಮೇಲೆ ಗ್ಲಾಸ್

ಇಟ್ಟು ಅದಕ್ಕೆ ವಿಸ್ಕಿ ಸುರಿದಳು. ನಂತರ ಅದಕ್ಕೆ ನೀರು ಬೆರೆಸಿದಳು. ಕಿರಿಕಿರಿ ಮಾಯವಾಯಿತು. ಎಲ್ಲಾ ಆರಾಮ. ಸಂಪೂರ್ಣ ವಿರಾಮ.

ಅವಳು ಅಮಲನ್ನು ಗಂಟಲಿಗೆ ಇಳಿಸಿದಳು. ಈಗ ಅವಳಿಗೆ ಕೆಮ್ಮು ಬರಲಿಲ್ಲ. ಸ್ವಲ್ಪ ಹೊತ್ತು ಕಳೆದು ಇನ್ನೊಂದು ಗುಟುಕು ಸೇವಿಸಿದಳು. ಆಮೇಲೆ ಮೂರನೆಯದು. ಈಗ ಅವಳಿಗೆ ಮನಸ್ಸು ಮತ್ತು ದೇಹದ ಭಾರ ಕಡಿಮೆಯಾದಂತೆ ಭಾಸವಾಯಿತು. ವಿಚಿತ್ರ ರೀತಿಯ ಒಂದು ಸಂತೋಷವನ್ನು ಅನುಭವಿಸಿದಳು. ತೊಟ್ಟಿಲಲ್ಲಿ ತೂಗಿಕೊಂಡ ಹಾಗೆ. ಎಲ್ಲವೂ ಕ್ಷೇಮ. ಸಂಪೂರ್ಣ ವಿಶ್ರಾಂತಿ.

ಗ್ಲಾಸ್ ಖಾಲಿಯಾಗುತ್ತಿದ್ದಂತೆ ಅವಳು ಮತ್ತೊಂದು ಪೆಗ್ ಸುರಿದಳು.

ಗಂಟೆ ಹನ್ನೊಂದೂವರೆ ಆಗುತ್ತಿದ್ದಂತೆ ಪೂಜೆಗೆ ಹೋದ ಜೆರ್ಮಿ ತನ್ನ ಮಕ್ಕಳೊಂದಿಗೆ ಮನೆಗೆ ಬಂದು ತಲುಪಿದ. ರೆಸ್ಟೋರೆಂಟಿನಲ್ಲಿ ಪೂರಿ ಭಾಜಿ ತಿಂದು, ಚಹಾ ಕುಡಿದು, ಮೀನು ಮಾರ್ಕೆಟಿಗೆ ಭೇಟಿ ನೀಡಿ ಅವರು ಈಗ ಮನೆಯೊಳಗೆ ಬಂದರು. ಮನೆಬಾಗಿಲಿಗೆ ಚಿಲಕ ಹಾಕದಿರುವುದನ್ನು ನೋಡಿ ಜೆರ್ಮಿಗೆ ಆಶ್ಚರ್ಯವಾಯಿತು.

"ಲೀನಾ ಅಡುಗೆ ಆಯಿತಾ?" ಜೆರ್ಮಿ ಒಳಬಂದು ಕೇಳಿದ.

ಲೀನಾಳ ಉತ್ತರವಿಲ್ಲ. ಅಡುಗೆ ಕೋಣೆಗೆ ಹೋಗಿ ಇಣುಕಿದ. ಸ್ಟೌ ಮೇಲೆ ಪ್ರೆಶರ್ ಕುಕ್ಕರ್ ಸದ್ದು ಮಾಡುತ್ತಿದೆ. ಅದರ ಸೀಟಿ ತಿರುಗುತ್ತಿದೆ. ಅವನು ತಕ್ಷಣ ಮಲಗುವ ಕೋಣೆಯತ್ತ ಹೆಜ್ಜೆ ಹಾಕಿದ. ಮಕ್ಕಳು ತಂದೆಯನ್ನು ಹಿಂಬಾಲಿಸಿದರು. ಅಲ್ಲಿಯ ದೃಶ್ಯ ಅವರಿಗೆ ಆಘಾತವನ್ನು ಉಂಟುಮಾಡಿತು.

ತೆರೆದಿಟ್ಟ ವಿಸ್ಕಿ ಬಾಟಲ್.. ಮೇಜಿನ ಮೇಲೆ ಅಡ್ಡಬಿದ್ದಿರುವ ಗ್ಲಾಸ್.. ಶರಾಬಿನ ವಾಸನೆ. ಎಲ್ಲಾ ಚಿಂತೆ, ದುಗುಡವನ್ನು ಮರೆತು ಹಾಸಿಗೆ ಮೇಲೆ ಮಲಗಿಕೊಂಡಿರುವ ಲೀನಾ! "ಓ ದೇವರೇ," ಜೆರ್ಮಿಯ ಬಾಯಿಯಿಂದ ಉದ್ಗಾರ ಹೊರಟಿತು. ಲೀನಾ ಏನಾಗಿದೆ ನಿನಗೆ? ಮಕ್ಕಳು ಹೆದರಿಕೊಂಡರು. ಜೆರ್ಮಿ ಮಡದಿಯ ಮೈಮೇಲೆ ಹೊದಿಕೆ ಹೊದಿಸಿದ. "ರೆನ್ನೀ, ಅಡುಗೆ ಮನೆಗೆ ಹೋಗಿ ಸ್ಟೌ ಮತ್ತು ಗ್ರೈಂಡರ್ ಆಫ್ ಮಾಡು" ಎಂದು ಆದೇಶ ನೀಡಿದ.

ತಂದೆಯ ಆಜ್ಞೆ ಕೇಳಿ ರೆನ್ನಿ ತಿರುಗಿಕೊಳ್ಳುವ ಮೊದಲೇ ಅಡುಗೆ ಮನೆಯಿಂದ ಭೂಕಂಪವಾದಷ್ಟು ದೊಡ್ಡ ಸದ್ದಾಯಿತು. ಭೂಮಿ ಅದುರಿತು.

ಹೆದರಿಕೆಯಿಂದ ಜೆರ್ಮಿಯ ಬಾಯಿಯಿಂದ ಮಾತು ಹೊರಡಲಿಲ್ಲ. ಥಕ್ಕನೆ ಅವನ ಮನಸ್ಸಿಗೆ ಹೊಳೆಯಿತು,

ಪ್ರೆಶರ್ ಕುಕ್ಕರ್ ಸ್ಫೋಟವಾಗಿರಬಹುದೇ? ? ?

ಅನುವಾದಕರು: **ಎಸ್. ಜಯಶ್ರೀ ಶೆಣೈ**

❖ ❖ ❖❖ ❖

ಯುದ್ಧ

✍ ಶೀಲಾ ನಾಯಕ್

ಇಂದು ನಾನು ಇಲ್ಲಿ ಒಬ್ಬನೇ ಕುಳಿತಿದ್ದೇನೆ. ಹೌದು ಒಬ್ಬನೇ. ಅಲ್ಲ ಅನ್ನುವುದಕ್ಕೆ ನನ್ನ ಪಕ್ಕದಲ್ಲಿಯೇ ನನ್ನ ಸಂಗಾತಿ ವಿಸ್ಕಿ ಬಾಟಲ್ ಇದೆ. ಅದರ ಜೊತೆಗೊಂದು ಉದ್ದವಾದ ಗ್ಲಾಸ್. ಅದರಲ್ಲಿರುವ ವಿಸ್ಕಿ ನನಗೆ ಹುಚ್ಚು ಹಿಡಿಸುತ್ತಿದೆ. ನಾನು ಒಂದೊಂದೇ ಗುಟುಕನ್ನು ನಿಧಾನವಾಗಿ ಹೀರುತ್ತಿದ್ದೇನೆ. ನನ್ನಲ್ಲಿ ಯಾವ ಯೋಚನೆಯೂ ಇಲ್ಲ. ಯಾವ ಚಿಂತೆಯೂ ಇಲ್ಲ. ಇಲ್ಲ ಅನ್ನುವುದಕ್ಕೆ ನನಗೆ ಸಿನ್ಯೋರ ಪಿರೇರಾನ ನೆನಪು ಕಾಡುತ್ತಿದೆ. ಈಗ ಪಿರೇರಾ ಎಲ್ಲಿರಬಹುದು? ಪೋರ್ಚುಗಲ್‌ನಲ್ಲಿ ಇರಬಹುದೇ? ಅಥವಾ ಇಂಗ್ಲೆಂಡಿಗೆ ಹೋಗಿರಬಹುದೇ? ಅದೂ ಬದುಕಿರುವನೋ ಅಥವಾ ಸತ್ತಿದ್ದಾನೋ? ಮತ್ತೆ, ಮತ್ತೆ ಅವನ ಚಿಕ್ಕಮಗಳು ತೆರೆಜಾ..ನನ್ನ ಹೃದಯ.. ನನ್ನ ಪ್ರೀತಿ. ಅವಳು ಎಲ್ಲಿ ಇರಬಹುದು? ಅವಳ ಮದುವೆಯಾಗಿರಬಹುದೇ? ಹಾಯ್... ಸಿಗಾರ್ ಮುಗಿಯುತ್ತಾ ಬಂತು ಅನ್ನಿಸುತ್ತದೆ. ಇವತ್ತು ಡಿಸೆಂಬರ್ ಹತ್ತೊಂಬತ್ತು! ಇಡೀ ಗೋವಾ ಸಂತೋಷದಿಂದ ಅರಳಿಕೊಂಡಿದೆ. ಆದರೆ ನಾನು? ನಾನು ಮಾತ್ರ ಇಲ್ಲಿ ಒಬ್ಬನೇ ಕುಳಿತಿದ್ದೇನೆ, ದೆವ್ವದಂತೆ! ಹೊರಕೋಣೆಯಲ್ಲಿ ನನ್ನ ಸೋದರ ವಿವರಿಸುತ್ತಿದ್ದಾನೆ: ಗೋವಾ ಹೇಗೆ ಸ್ವತಂತ್ರವಾಯಿತು? ಆ ಯುದ್ಧ ಹೇಗೆ ಆಗಬೇಕಿತ್ತು ಹಾಗೆ ಆಗಲೇ ಇಲ್ಲ. ಇದು ಎಂತಹ ಯುದ್ಧ? ನಿನ್ನೆ ದಿನ ಶುರುವಾಯಿತು, ಮಾರನೆಯ ದಿನ ಮುಗಿದೇ ಹೋಯಿತು, ಸಿನೆಮಾದಲ್ಲಿ ತೋರಿಸುವಂತೆ. ಯುದ್ಧ ನಡೆದೇ ಇಲ್ಲ. ಯುದ್ಧ ಎಲ್ಲಿ ಮುಗಿಯಿತು? ಅದು ಬೇರೆ. ಅರೆ ಪಾಪಿ, ಆವತ್ತು ಯುದ್ಧ ಮುಗಿಯಲೇ ಇಲ್ಲ. ಅದು ಇವತ್ತು ಶುರುವಾಗಿದೆ ಅಷ್ಟೇ..

ನಾನು ಗ್ಲಾಸಿಗೆ ಮತ್ತಷ್ಟು ವಿಸ್ಕಿ ಸುರಿಯುತ್ತೇನೆ. ಅದು ಮೆಲ್ಲಮೆಲ್ಲನೆ ನನ್ನ ಹೊಟ್ಟೆ ಸೇರುತ್ತದೆ. ನನಗೆ ನೆನಪಾಗುತ್ತಿದೆ, ನಾವು ಹೀಗೇ ಕುಳಿತಿರುತ್ತಿದ್ದೆವು. ನಾನು ಮತ್ತು ನೆರೆಮನೆಯ ಪಿರೇರಾ. ಪಿರೇರಾ ಪೊಲೀಸ್ ಇಲಾಖೆಯಲ್ಲಿ ಕೆಲಸಕ್ಕಿದ್ದ. ನಲ್ವತ್ತು-ನಲವತ್ತೆರಡು ವರ್ಷ ಪ್ರಾಯದ ಕಿರಿದಾದ ಕಣ್ಣುಗಳ ಸಿನ್ಯೋರ್ ಪಿರೇರಾನನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅವನು ತುಂಬಾ ತಿಳಿದವನು. ಅವನೆದುರು ನಾನಿನ್ನೂ ಹುಡುಗ. ನನ್ನ ವಯಸ್ಸು ಬರೀ ಇಪ್ಪತ್ತೈದು. ಅವನು ಕ್ರಿಶ್ಚಿಯನ್ ನಾನು ಹಿಂದೂ. ಆದರೆ ನಮ್ಮ ಬಿಗಿ ಗೆಳೆತನಕ್ಕೆ ಸೀಮೆ ಇರಲಿಲ್ಲ. ನಾವು ಪ್ರತಿ ಭಾನುವಾರದಂದು ನಮ್ಮ ಟೇರೇಸಿನ ಮೇಲೆ ಕುಳಿತು ಸಂತಸದ ಕ್ಷಣಗಳನ್ನು ಕಳೆಯುತ್ತಿದ್ದೆವು. ಹೀಗೆಯೇ ಒಂದು ದಿನ ಅವನು ಹೇಳಿದ್ದ,

"ನೋಡು ಬಾಬಾಜೀನ್, ನಮ್ಮ ರೀಟಾ ಆ ಪೋರ್ತುಗೀಸನೊಂದಿಗೆ ಮದುವೆ ಆಗ್ತಾಳಂತೆ. ಎಂತಹ ಹುಡುಗಿ, ಅವಳಿಗೆ ಬೇರೆ ಯಾರೂ ಸಿಗುತ್ತಿರಲಿಲ್ಲವೇ? ಗೋವಾದ ಬ್ರಹ್ಮಚಾರಿಗಳೆಲ್ಲಾ ಸತ್ತು ಹೋಗಿದ್ದಾರಾ? ಆ ಪೋರ್ತುಗೀಸನನ್ನು ಮದುವೆ ಆಗ್ತಾಳಂತೆ. ಆಗಲಿ..ಅವಳಿಗೆ ಇಷ್ಟ ಬಂದಂತೆ ಮಾಡಲಿ.. ಅವಳಿಗೆ ಮತ್ತು ಅವಳ ಅಮ್ಮನಿಗೆ..."

ಅಂದರೆ, ಈ ಮುದಿಯನಿಗೆ ರೀಟಾಳ ಮದುವೆಯನ್ನು ಪೋರ್ತುಗೀಸನೊಂದಿಗೆ ನಡೆಸಲು ಮನಸಿಲ್ಲ. ಅವನು ಮಿಲಿಟರಿಯಲ್ಲಿ ಒಳ್ಳೆಯ ಹುದ್ದೆಯಲ್ಲಿದ್ದಾನೆ. ಆದರೆ ಸಿನ್ಯೊರ ಪಿರೇರಾನಿಗೆ ಅಳಿಯನಾಗಿ ಬರಬೇಕಾದವ ಗೊಂಯ್ಕಾರ, ಪೋರ್ತುಗೀಸನಲ್ಲ! ಆದರೆ ಇದನ್ನು ಮಗಳ ಹತ್ತಿರ ಹೇಳಲು ಅವನಿಗೆ ಸಾಧ್ಯವಾಗುವುದಿಲ್ಲ. ಹೆಂಡತಿಗೆ ತಿಳಿಸುವುದು ಕೂಡಾ ಸಾಧ್ಯವಾಗುತ್ತಿಲ್ಲ. ಅದನ್ನು ಅವನು ನನಗೆ ಹೇಳುತ್ತಿದ್ದಾನೆ. ನನ್ನ ಹೃದಯಲ್ಲಿ ಎಲ್ಲೋ ಒಂದು ಕಡೆ ಒಳ್ಳೆಯದೇ ಆಯ್ತು ಎಂದು ಅನಿಸಿತು. ಇವತ್ತು ನನಗೆ ಪಿರೇರಾ ಹೊಸಬನಾಗಿಯೇ ಕಾಣುತ್ತಿದ್ದ. ಗೋವಾದ ಕಿಡಿ ಒಳಗೆಲ್ಲೋ ಉರಿಯುವುದಾದರೆ, ಅದೂ ಒಬ್ಬ ಕ್ರಿಶ್ಚಿಯನ್‌ನ ಹೃದಯದಲ್ಲಿ! ಇವನೊಬ್ಬ ಕ್ರಿಶ್ಚಿಯನ್. ಪೊಲೀಸ್ ವೃತ್ತಿಯಲ್ಲಿ ಇರುವವನು.

"ಬಾಬಾಜೀನ್, ನಮಗೆ ಈ ಪೋರ್ತುಗೀಸರು ಗೊತ್ತು. ಇವರ ಜಾತಿ ಸರಿ ಇಲ್ಲ! ಇವರ ಚರ್ಮ ಬಿಳಿ ಇರಬಹುದು, ಆದರೆ ಹೃದಯ ಮಾತ್ರ ಕರಿಬಣ್ಣದ್ದು. ನಾನು ತೆರೆಜಾಳಿಗೆ ಹೇಳುತ್ತಿದ್ದೆ ನೀನು ಮಾತ್ರ ಪೋರ್ತುಗೀಸನನ್ನು ಮದುವೆ ಆಗಬಾರದೆಂದು. ನೀನು ಗೊಂಯ್ಕಾರನನ್ನು ಮದುವೆ ಆಗಬೇಕು ಎಂದು ಹೇಳ್ತಿದ್ದೆ ನಾನು. ಅವರು ಗೋವಾಕ್ಕೆ ತಗಲಿದ ಒಂದು ಪೀಡೆ..." ಇಲ್ಲಿ ಪಿರೇರಾ ಪೋರ್ತುಗೀಸ್ ಭಾಷೆಯ ಬೈಗಳೊಂದನ್ನು ಬಳಸಿದ.

ತೆರೆಜಾ ಪಿರೇರಾನ ಎರಡನೆಯ ಮಗಳು. ಅವಳಿಗೆ ಪ್ರಾಯ ಹತ್ತೊಂಬತ್ತು ವರ್ಷ. ನನ್ನ ತಂಗಿ ಜೂಯ್ ಅವಳ ಓರಗೆಯವಳು. ನಾಲ್ಕು ಜನರು ಕಣ್ಣೆತ್ತಿ ನೋಡುವಂತಹ ಸೌಂದರ್ಯ ಅವಳದು. ಅವಳ ಕಣ್ಣುಗಳು ಎಷ್ಟು ಸುಂದರವಾಗಿದ್ದವೆಂದರೆ ನನಗೆ ಅವಳ ಕಣ್ಣುಗಳನ್ನು ನೋಡುತ್ತಾ ಇರೋಣ ಅನ್ನಿಸುತ್ತಿತ್ತು. ನಮ್ಮ ಮನೆಯಲ್ಲಿ ಅರಿಸಿನ–ಕುಂಕುಮದ ಸಂಭ್ರಮ ಇರುವಾಗ ಅವಳು ಕೂಡಾ ನನ್ನ ತಂಗಿಯೊಂದಿಗೆ ಸೀರೆ ಉಡುತ್ತಿದ್ದಳು. ಸೀರೆಯಲ್ಲಿ ಅವಳು ಎಷ್ಟು ಚೆನ್ನಾಗಿ ಕಾಣಿಸುತ್ತಿದ್ದಳೆಂದರೆ.. ಅದನ್ನು ಹೇಳಿ ಏನು ಪ್ರಯೋಜನ? ಅವಳು ಫುಟ್‌ಬಾಲ್ ಪಂದ್ಯ ನೋಡಲು ಹೋಗುತ್ತಿದ್ದಳು. ನನಗೂ ಅವಳಂತೆ ಫುಟ್‌ಬಾಲ್ ಹುಚ್ಚು. ನಾನು ಒಂದೂ ಫುಟ್‌ಬಾಲ್ ಮ್ಯಾಚ್ ತಪ್ಪಿಸಿಕೊಳ್ಳುತ್ತಿರಲಿಲ್ಲ. ನಾವು ಮನೆಮಂದಿಯೊಂದಿಗೆ ಹೋಗುತ್ತಿದ್ದೆವು. ಒಮ್ಮೆ ನಾನು ಅವಳಲ್ಲಿ ಕೇಳಿದೆ–

"ನಿನಗೆ ಮ್ಯಾಚ್ ಪೂರ್ತಿ ಅರ್ಥವಾಗುತ್ತೇನು?"

"ಇಲ್ಲ!"

"ಮತ್ತೆ ನೀನು ಮ್ಯಾಚ್ ನೋಡಲು ತಪ್ಪದೆ ಯಾಕೆ ಹೋಗ್ತೀಯಾ?"

"ಹೇಳಿ ಬಿಡಲಾ?"

"ಹೇಳು"

ಅವಳು ಕೊಂಚ ತಡವರಿಸಿದಳು. ನಂತರ ಮೆದುವಾಗಿ ಹೇಳಿದಳು, "ನಿನಗಾಗಿ ನಾನು ಮ್ಯಾಚ್ ನೋಡುತ್ತೇನೆ. ನನಗೆ ಗೊತ್ತು, ನೀನು ಎಲ್ಲಾ ಮ್ಯಾಚಿಗೆ ಬರ್ತಿಯಾ ಅಂತ!"

ಅಂದರೆ ತೆರೆಜಾಳಿಗೆ ನನ್ನ ಮೇಲೆ ಮನಸ್ಸಿದೆ. ನನಗೆ ಅವಳ ಕಣ್ಣಿನ ಮೇಲೆ ಆಕರ್ಷಣೆ ಇದೆ. ಪ್ರೀತಿ ನಮ್ಮಿಬ್ಬರನ್ನು ಹುಚ್ಚಾಗಿ ಕಾಡಿತು. ಅದು ಅರಳುತ್ತಾ, ಬೆಳೆಯುತ್ತಾ ಹೋಯಿತು. ಆದರೂ ನಮ್ಮಿಬ್ಬರ ಪ್ರೀತಿ ಮೂರನೆಯ ವ್ಯಕ್ತಿಗೆ ತಿಳಿಯದಂತೆ ನಾವು ಜಾಗ್ರತೆ ವಹಿಸಿದೆವು. ನಾನು ತೆರೆಜಾಳೊಡನೆ ಪ್ರೀತಿಯ ಕುರಿತು ಮಾತನಾಡುವಾಗ ನನಗೆ ಸಿನ್ಯೋರಾ ಪಿರೇರಾ ಹೇಳಿದ ಮಾತುಗಳು ನೆನಪಾಗುತ್ತಿದ್ದವು, ನಾನು ತೆರೆಜಾಳಿಗೆ ಹೇಳಿದ್ದೇನೆ ಗೊಂಯ್ಕಾರನನ್ನು ಮದುವೆಯಾಗು ಅಂತ . ನಾನು ಕೂಡಾ ಒಬ್ಬ ಗೊಂಯ್ಕಾರನಲ್ಲವೇ? ನನಗೆ ದೂರದಲ್ಲಿ ಎಲ್ಲೋ ಆಶಾಕಿರಣ ಕಂಡುಬರುತ್ತಿತ್ತು.

ರೀಟಾಳಿಗೆ ಮದುವೆಯಾಗಿ ಗಂಡು ಮಗು ಹುಟ್ಟಿತು. ಮಗುವಿನ ಚರ್ಮ ಬಿಳಿಯಾಗಿತ್ತು. ಕಣ್ಣುಗಳು ನೀಲಿಯಾಗಿದ್ದವು. ಮೊಮ್ಮಗ ಹುಟ್ಟಿದ ನಂತರ ಪಿರೇರಾ ಕೊಂಚ ಬದಲಾದ. ಸ್ವಲ್ಪ ಕಾಲ ಪೋರ್ತುಗೀಸರೊಂದಿಗಿನ ದ್ವೇಷವನ್ನು ಮರೆತುಬಿಟ್ಟ. ಅವನ ಮೊಮ್ಮಗನ ನಾಮಕರಣ ದಿನವನ್ನು ನಾವಿಬ್ಬರೂ ತುಂಬಾ ಸಂತಸದಿಂದ ಕಳೆದೆವು.

ಅಂದು ನಾನು ಕೆಲಸ ಮುಗಿಸಿ ಮನೆಗೆ ಬಂದಾಗ ಅಲ್ಲಿ ಮೌನವಿತ್ತು. ನಾನು ಒಳಗೆ ಪ್ರವೇಶಿಸಿದೆ. ಅಮ್ಮ ಹಾಸಿಗೆಯ ಮೇಲೆ ಹೊದ್ದು ಮಲಗಿಕೊಂಡಿದ್ದಾಳೆ. ಅವಳ ಹತ್ತಿರ ತಂಗಿ ಜೂಯ್ ಕುಳಿತಿದ್ದಾಳೆ. ಅವಳ ಕಣ್ಣುಗಳು ಅತ್ತುಅತ್ತು ಕೆಂಪಾಗಿವೆ.

"ಏನಾಯ್ತು?" ನಾನು ಕೇಳಿದೆ.

"ಪೊಲೀಸ್ ಬಂದು ತಮ್ಮನನ್ನು ಹಿಡಿದುಕೊಂಡು ಹೋಗಿದ್ದಾರೆ. ಅವನು ಸತ್ಯಾಗ್ರಹಿಗಳಿಗೆ ಸಹಾಯ ಮಾಡ್ತಿದ್ದನಂತೆ" ತಂಗಿ ಅಳುತ್ತಾ ಹೇಳಿದಳು. ನನಗೆ ಸಿಟ್ಟು ಬಂತು. ಇವನಿಗೆ ಇದೆಲ್ಲಾ ಯಾಕೆ ಬೇಕಿತ್ತು? ನಾನು ದೇಹವನ್ನು ದಂಡಿಸಿ ದುಡಿದು ಇವನಿಗೆ ವಿದ್ಯೆ ಕಲಿಸುತ್ತಿದ್ದೇನೆ. ಇವನೆಂತಹ ಕೆಲಸ ಮಾಡಿದ. ಇದರಿಂದ ನನ್ನ ಉದ್ಯೋಗಕ್ಕೆ ಏನಾದರೂ ಅಪಾಯ ಬರಬಹುದು ಎಂದು ನಾನು ಹೆದರಿದೆ. ಒಂದು ವೇಳೆ ನನ್ನ ಕೆಲಸ ಹೋಗಿಬಿಟ್ಟರೆ ಏನಾಗಬಹುದು? ನಮಗೆ ಬೇರೆ ಯಾವ ಉತ್ಪತ್ತಿಯೂ ಇಲ್ಲ. ತಂದೆಯ ರಿಫಾರ್ಮ್ ಸ್ವಲ್ಪ ಬರುತ್ತದೆ. ಇನ್ನು ಜೂಯ್‌ಳ ಮದುವೆ, ಮೂರು ಸೋದರರ ಶಿಕ್ಷಣ! ಎಲ್ಲವನ್ನೂ ಸಂಭಾಳಿಸುವುದು ಹೇಗೆ? ನನಗೂ ಮದುವೆಯಾಗಬೇಕಾಗಿದೆ. ಎಲ್ಲವೂ ಶೂನ್ಯವಾದಂತೆ ಭಾಸವಾಯಿತು. ಏನನ್ನೂ ಯೋಚಿಸುವ ಮನಸ್ಥಿತಿಯಲ್ಲಿ ನಾನು ಇರಲಿಲ್ಲ. ಅಷ್ಟರಲ್ಲಿ ನನಗೆ ಪಿರೇರಾನ ನೆನಪು ಬಂತು. ನಾನು ಅವನ ಮನೆಗೆ ಹೋಗಲು ಅಣಿಯಾದೆ. ಅಷ್ಟರಲ್ಲಿ ಅವನೇ ನಮ್ಮ ಮನೆಗೆ ಬಂದ, ಅದೂ ನನ್ನ ತಮ್ಮನನ್ನು ಕರೆದುಕೊಂಡು!

ಅವನು ಹೇಳಿದ, "ತಗೋ ನಿನ್ನ ತಮ್ಮನನ್ನು. ಚೆನ್ನಾಗಿ ನೋಡ್ಕೋ."

"ಸರಿಯಾಗಿ ನೋಡ್ಕೋತೀನಿ ಇವನನ್ನು..ಹೇಗೆ ವಿಚಾರಿಸ್ತೀನಿ ನೋಡಿ. ಏನಾ..?"

"ಇರಲಿಬಿಡು ಬಾಬಾಜೀನ. ಈಗ ಏನೂ ವಿಚಾರಿಸಲು ಹೋಗಬೇಡ. ಅವನಿಗೆ ಅವನ ಗೋವಾವನ್ನು ಸ್ವತಂತ್ರಗೊಳಿಸುವ ಆಸೆ ಅಂತ ಕಾಣುತ್ತೆ. ಅವನ ಆಸೆ ನೆರವೇರಲೆಂದು ನಾನು ಕೂಡಾ ಪ್ರಾರ್ಥನೆ ಮಾಡುತ್ತೇನೆ. ನಾವಿಬ್ಬರು ಅದರ ಬಗ್ಗೆ

ಮಾತನಾಡಿಕೊಂಡೆವು. ಅವನು ಅದನ್ನು ಮಾಡಿ ತೋರಿಸಲು ಮುಂದಾಗಿದ್ದಾನೆ. ನಾನು ಅವನನ್ನು ಅಭಿನಂದಿಸುತ್ತೇನೆ. ಆದರೆ ನಾನೊಬ್ಬ ಸರಕಾರಿ ಉದ್ಯೋಗಿ. ನಾನು ಹೊರಗೆ ಮಾತನಾಡುವ ಹಾಗಿಲ್ಲ ಆದರೆ ನಾನು ನಿನ್ನಲ್ಲಿ ಹೇಳುತ್ತೇನೆ, ಇವನನ್ನು ನಾನು ಬಿಡಿಸದೇ ಹೋಗಿದ್ದರೆ ಆ ದೇವರು ನನ್ನನ್ನು ಕ್ಷಮಿಸಲಾರ. ಗೋವಾಕ್ಕಾಗಿ ಹೋರಾಡಿದ ಹುಡುಗನಿಗೆ ನಾನು ಸಹಾಯ ಮಾಡಿದ್ದೇನೆ ಎಂದು ನನಗೆ ಇವತ್ತು ಖುಷಿಯಾಗುತ್ತದೆ. ದೇವರು ಅವನನ್ನು ಚೆನ್ನಾಗಿ ಇಟ್ಟಿರಲಿ.'' ಇಷ್ಟು ಹೇಳಿ ಅವನು ಹೊರಟುಹೋದ. ನಾವು ಅವನ ಬೆನ್ನು ನೋಡುತ್ತಾ ಕುಳಿತುಕೊಂಡೆವು.

ಆ ದಿನಗಳಲ್ಲಿ ಗೋವೆಯಲ್ಲಿ ಭಯಾನಕ ಶಾಂತಿ ನೆಲೆಸಿತ್ತು. ಜನರು ತಮ್ಮೊಳಗೆ ಮೆಲ್ಲಗೆ ಮಾತನಾಡಿಕೊಳ್ಳುತ್ತಿದ್ದರು. ಜೊತೆಗೆ ಗೋವೆಯ ಸರಹದ್ದಿನಲ್ಲಿ ಭಾರತದ ಸೈನ್ಯ ಬಂದಿದೆ ಎಂಬ ಸುದ್ದಿ ಹರಡುತ್ತಿತ್ತು. ಆಗಸದಲ್ಲಿ ವಿಮಾನಗಳು ಹಾರಾಡುತ್ತಿದ್ದವು. ಜನರ ವ್ಯವಹಾರದಲ್ಲಿ ಒಂದು ವಿಧದ ಅಸ್ವಸ್ಥತೆ ಇತ್ತು. ಏನಾದರೂ ಆಗಬಹುದು ಎಂದು ಎಲ್ಲರಿಗೂ ತಿಳಿದಿತ್ತು. ಆದರೆ ಅದು ಏನು ಎಂಬುದು ಮಾತ್ರ ಯಾರಿಗೂ ತಿಳಿದಿರಲಿಲ್ಲ. ಕೆಲವರು ತಮ್ಮ ಕುಟುಂಬವನ್ನು ಪೋರ್ತುಗಲ್‌ಗೆ ಕಳುಹಿಸುತ್ತಿದ್ದರು.

ಹೀಗೆ ಬಹಳ ದಿನಗಳು ಕಳೆದವು. ನಮ್ಮ ಮನೆಗೆ ಪಿರೇರಾ ಕೂಡಾ ಬಂದಿರಲಿಲ್ಲ. ಒಂದು ದಿನ ಅಚಾನಕ್ ಆಗಿ ಅವನು ಬಂದ. ನಾವು ಮಾತಿಲ್ಲದೆ ೨-೩ ಪೆಗ್ ವಿಸ್ಕಿ ಸೇವಿಸಿದೆವು. ಕೊನೆಗೆ ನಾನೇ ಕೇಳಿದೆ,

''ಸಿನ್ಯೋರ್ ಪಿರೇರಾ, ದೋನಾ ಮಾರಿಯ ಮತ್ತು ತೆರೆಜಾ ಎಲ್ಲಿ? ಕಾಣಿಸ್ತಾನೆ ಇಲ್ವಲ್ಲಾ?''

''ಅವರು ಹೋದ್ರು''

''ಎಲ್ಲಿಗೆ?''

''ಪೋರ್ತುಗಲ್‌ಗೆ'' ಪಿರೇರಾ ಒಂದೇ ಉಸಿರಿಗೆ ಗ್ಲಾಸಿನಲ್ಲಿದ್ದ ವಿಸ್ಕಿ ಖಾಲಿ ಮಾಡಿದ.

''ಅಬ್ಬಾ! ನಮಗೆ ಒಂದೂ ಮಾತು ಹೇಳದೆ?''

ನನಗೆ ನೆನಪಾಯಿತು. ಕೆಲ ದಿನಗಳ ಹಿಂದೆ ರೀಟಾ ತನ್ನ ಗಂಡನೊಂದಿಗೆ ಪೋರ್ತುಗಲಿಗೆ ಹೋಗಿದ್ದಳು. ಆಗ ನನ್ನ ತಾಯಿ ಅವಳಿಗೆ ಇಷ್ಟವಾದ ಉಪ್ಪಿನಕಾಯಿ ಕೊಟ್ಟು ಕಳುಹಿಸಿದ್ದರು. ಅವಳ ಮಗನಿಗೆ ನೆನಪಿನ ಕಾಣಿಕೆಯೆಂದು ಚಿನ್ನದ ಒಡವೆ ಹಾಕಿದ್ದಳು. ರೀಟಾಳನ್ನು ಬೀಳ್ಕೊಡುವಾಗ ನನ್ನ ತಾಯಿ ಅವಳನ್ನು ತಬ್ಬಿಹಿಡಿದು ಅತ್ತಿದ್ದಳು. ಅವರಿಗೂ ನಮಗೂ ಅಷ್ಟು ಒಳ್ಳೆಯ ಸಂಬಂಧ ಇರುವಾಗ ಒಂದು ಮಾತು ಕೂಡಾ ಹೇಳದೆ ಹೋದರಲ್ಲ. ನನಗೆ ಹೇಳದೆ ತೆರೆಜಾ ಹೇಗೆ ಹೋದಳು. ಆನಂತರ ಪಿರೇರಾನ ಮಾತಿನಿಂದ ತಿಳಿದು ಬಂದುದೇನೆಂದರೆ, ತೆರೆಜಾಳಿಗೆ ಪೋರ್ಚುಗಲ್‌ಗೆ ಹೋಗಲು ಮನಸ್ಸಿರಲಿಲ್ಲ. ಅವಳಿಗೆ ಮತ್ತು ಪಿರೇರಾನಿಗೆ ಇಲ್ಲೇ ಇರಲು ಇಷ್ಟವಿತ್ತು.

ಎಲ್ಲಿಯಾದರೇನು, ಮನುಷ್ಯ ಕೊನೆಗೊಮ್ಮೆ ಸಾಯುವುದಂತೂ ಖಂಡಿತ. ಅದು ಇಲ್ಲೇ ತಾಯಿನೆಲದಲ್ಲಿಯೇ ಸತ್ತರೆ ಏನಂತೆ? ಆದರೆ ದೋನಾ ಮಾರಿಯಾ ಯಾವುದಕ್ಕೂ ಕಿವಿಗೊಡಲಿಲ್ಲ. ಅವಳು ಹೋದಳು. ಅಲ್ಲದೆ ರೀಟಾಳನ್ನು ಕರೆದೊಯ್ದಳು. ಇನ್ನು ಪಿರೇರಾನೂ ಹೋಗುವುದರಲ್ಲಿದ್ದಾನೆ.

ಆದರೆ ಅದೇ ದಿನ ಯುದ್ಧವಾಯಿತು. ಭಾರತೀಯ ಸೇನೆ ಒಳನುಗ್ಗಿ ಎರಡೇ ದಿನಗಳಲ್ಲಿ ಗೋವೆಯನ್ನು ಸ್ವಾಧೀನಪಡಿಸಿಕೊಂಡಿತು. ಸಿನ್ಯೊರ್ ಪಿರೇರಾ ಇಲ್ಲಿಯೇ ಉಳಿದ. ಅವನಿಗೆ ಪೋರ್ತುಗಲ್‌ಗೆ ಹೋಗಲಿದೆಯೆಂದು ನಾನು ಅವನನ್ನು ದಿನಾ ಭೇಟಿಯಾಗುತ್ತಿದ್ದೆ. ಕೆಲವೊಮ್ಮೆ ಸಿಗಾರ್, ಇನ್ನು ಕೆಲವೊಮ್ಮೆ ಸಾರಾಯಿಯೊಂದಿಗೆ. ನಮ್ಮ ನಡುವೆ ಹೆಚ್ಚೇನೂ ಮಾತುಕತೆ ನಡೆಯುತ್ತಿರಲಿಲ್ಲ. ಅವನು ನಿರ್ಲಿಪ್ತನಾಗಿ ನನ್ನನ್ನು ನೋಡುತ್ತಾ ಕುಳಿತಿರುತ್ತಿದ್ದ. ನಾನು ಅವನ ಮುಖವನ್ನೇ ತೀಕ್ಷ್ಣ ದೃಷ್ಟಿಯಿಂದ ಗಮನಿಸುತ್ತಿದ್ದೆ. ನನಗೆ ನಾನು ನಿರೀಕ್ಷಿಸಿದ್ದು ಅವನ ಮುಖದಲ್ಲಿ ಕಾಣಲೇ ಇಲ್ಲ. ಬರೀ ದುಃಖವಷ್ಟೇ ಅಲ್ಲಿ ಕಾಣುತ್ತಿತ್ತು. ಗೋವಾವನ್ನು ಬಿಟ್ಟು ಹೋಗುವ ದುಃಖ. ಕೆಲದಿನ ಬಿಟ್ಟು ಪಿರೇರಾ ಗೋವಾ ಬಿಟ್ಟು ಪೋರ್ತುಗಲ್‌ಗೆ ಹೋದ. ಹೋಗುವ ಹಿಂದಿನ ದಿನ ನಾನು ಅವನಿಗೆ ಭೇಟಿಯಾಗಿದ್ದೆ. ಆಗ ಅವನು ಮಗುವಿನಂತೆ ಅತ್ತಿದ್ದ. ಅಳುತ್ತಲೇ ನನ್ನನ್ನು ಕೇಳಿದ್ದ, ನೀನು ಯಾಕೆ ನನ್ನನ್ನು ಇಷ್ಟೊಂದು ಪ್ರೀತಿಸುತ್ತಿಯಾ? ನೀನು ನನಗೆ ಏನಾಗಬೇಕೂಂತ ನನ್ನ ಮೇಲೆ ಸಿಟ್ಟಾಗ್ತಿಯಾ? ಇಷ್ಟು ದಿನ ನನಗಾಗಿ ಯಾಕೆ ಬರುತ್ತಿದ್ದೆ? ನನಗೆ ನಿನ್ನನ್ನು ಬಿಟ್ಟು ಹೋಗಲು ಆಗುತ್ತಿಲ್ಲ. ಹಾಗೆಯೇ ನನ್ನ ಕುಟುಂಬವಿದ್ದ ಕಡೆಗೆ ಹೋಗದಿರಲೂ ಆಗುತ್ತಿಲ್ಲ. ಕೊನೆಗೆ ನಾನೀಗ ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ. ದೇವರು ನಿನಗೆ ಒಳ್ಳೇದು ಮಾಡಲಿ."

ನನ್ನಿಂದ ಬೀಳ್ಕೊಂಡು ಅವನು ಹೊರಟುಹೋದ. ಅವನು ಕೇಳಿದ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿರಲಿಲ್ಲ. ನಮ್ಮದು ಮನುಷ್ಯ-ಮನುಷ್ಯರ ನಡುವಿನ ಸಂಬಂಧವಾಗಿತ್ತು. ಈಗಲೂ ಅವನ ನೆನಪಾದಾಗ ನಾನು ಭಾವುಕನಾಗುತ್ತೇನೆ. ನನ್ನ ಮೇಲೆ ಅವನಿಗೆ ಎಷ್ಟು ಪ್ರೀತಿ ಇತ್ತು! ಎಷ್ಟೊಂದು ಶ್ರದ್ಧೆ ಇತ್ತು. ಎಷ್ಟು ವಿಶ್ವಾಸವಿತ್ತು. ಆದರೆ ನಾನು.. ನಾನು ಮಾಡಿದ್ದಾದರೂ ಏನು? ಈಗಲೂ ನಾನು ಯೋಚಿಸುತ್ತಿರುತ್ತೇನೆ. ಸಿನ್ಯೊರ್ ಪಿರೇರಾ ಪೋರ್ತುಗಲ್ ತಲುಪುತ್ತಾನೆ. ಮತ್ತೆ ಅವನಿಗೆ ಗೊತ್ತಾಗುತ್ತದೆ. ತೆರೆಜಾ ನನ್ನ ಮಗುವಿನ ತಾಯಿಯಾಗುವುದರಲ್ಲಿ ಇದ್ದಾಳೆ ಎನ್ನುವುದು. ಆಗ ಅವನು ನನ್ನ ಬಗ್ಗೆ ಏನು ಯೋಚಿಸಬಹುದು? ಏನು ಯೋಚಿಸಬಹುದು..

ಅನುವಾದಕರು: **ವಿಲ್ಸನ್ ಕಟೀಲ**

❖ ❖ ❖❖ ❖

ಗೂಳಿ

✍ ಎಚ್ಚೆವ್

ಮಾಟಗಾತಿ ಮಾಚ್ಚುಬಾಯಿ ರಕ್ತಕಾರಿ ಸಾಯುವುದನ್ನು ನೋಡಲು ಊರಿಗೆ ಊರೇ ಕಾದು ಕುಳಿತಿತ್ತು. ಕೊನೆಗೂ ಅವಳು ಸಾವನ್ನಪ್ಪಿದಳು. ಅವಳ ಪ್ರಾಣ ಹೋಗುವುದಕ್ಕೆ ಸರಿಯಾಗಿ ಬೊಸ್ಕ್ಯಾಂಬಾ ಪೇಟೆಯಲ್ಲಿ ಅದುವರೆಗೆ ಶಾಂತರೀತಿಯಿಂದ ಸುತ್ತಾಡಿಕೊಂಡು ಇರುತ್ತಿದ್ದ ಗೂಳಿಗೆ ಮದವೇರಿ ಅದು ಕೆಂಪು ಸೀರೆಯನ್ನುಟ್ಟು ಪೇಟೆಗೆ ಬರುವ ಸುಮಂಗಲಿಯರ ಮೇಲೆ ಎರಗಲು ಪ್ರಾರಂಭಿಸಿತು. ಹೀಗೆ ಮದವೇರಿದ ಗೂಳಿಯ ಕೋಪಕ್ಕೆ ಮೊದಲು ತುತ್ತಾಗಿದ್ದು ಬೇರೆ ಊರಿನಿಂದ ರಜೆಯಲ್ಲಿ ಬಂದಿರುವ ಸುಮತಿ.

ಮಾಚ್ಚುಬಾಯಿಯ ಜನ್ಮತಿಥಿಯನ್ನು ಲೆಕ್ಕಕ್ಕೆ ಹಿಡಿದರೆ ಅವಳದು ಸಾಯುವ ವಯಸ್ಸೇನೂ ಅಲ್ಲ. ಮಾರಿಗುಡಿಯ ಹಿಂದಿರುವ ಹಳೆಯ ಹೆಂಚಿನ ಮನೆಯಲ್ಲಿ ಕಳೆದ ಹಲವು ವರ್ಷಗಳಿಂದ ಮಾಚ್ಚುಬಾಯಿ ಒಂಟಿಯಾಗಿ ವಾಸಿಸುತ್ತಿದ್ದಳು. ಅವಳ ಗಂಡ ಅವಳನ್ನು ಬಿಟ್ಟು ಹೋಗಿ ಯಾವ ಕಾಲವಾಯಿತೋ? ಇದ್ದ ಒಬ್ಬ ಮಗನೂ ಪರದೇಶಕ್ಕೆ ಹೋದವನು ಮರಳಿ ಬರಲೇ ಇಲ್ಲ. ಗಂಡ–ಮಗ ಜೀವಂತ ಇದ್ದಾರೋ ಇಲ್ಲವೋ, ಅವರು ಮರಳಿ ಬರುತ್ತಾರೋ ಇಲ್ಲವೋ ಎಂಬ ಸುದ್ದಿ ಕೂಡಾ ಯಾರಿಗೂ ತಿಳಿದಿಲ್ಲ.

ಹೊಟ್ಟೆಪಾಡಿಗಾಗಿ ಮಾಚ್ಚುಬಾಯಿ ಹಗಲು ಹೊತ್ತು ಪೇಟೆಯ ಸಾರಾಯಿ ಅಂಗಡಿಯ ಮುಂದೆ ಕುರುಕಲು ತಿಂಡಿಯನ್ನು ಮಾರುತ್ತಿದ್ದಳು. ಅವಳ ಕಣ್ಣು ಬೆಕ್ಕಿನ ಹಾಗೆ ಇದೆಯೆಂದೂ, ಅವಳ ನಾಲಗೆ ಮೇಲೆ ಮಚ್ಚೆ ಇದೆಯೆಂದೂ ಯಾರೂ ಅವಳಲ್ಲಿ ಹೆಚ್ಚು ಮಾತನಾಡುತ್ತಿರಲಿಲ್ಲ. ಅವಳು ಏನಾದರೂ ಕೆಟ್ಟದ್ದನ್ನು ಹೇಳಿದರೆ ಅದು ಹಾಗೆಯೇ ನಡೆಯುತ್ತದೆ ಎಂಬ ಭಯ ಅವರಿಗೆ. ಆದರೆ ಊರಿನಲ್ಲಿ ಯಾವುದಾದರೂ ಮಕ್ಕಳು ಬಿಡದೆ ಹಠ ಮಾಡುತ್ತಿದ್ದರೆ ಅಮವಾಸ್ಯೆಯ ದಿನ ಅವಳ ಮನೆಗೆ ಕರೆದುಕೊಂಡು ಹೋಗಿ ದೃಷ್ಟಿ ತೆಗೆಸುತ್ತಿದ್ದರು. ಅವಳಿಗೆ ಸ್ವಲ್ಪ ಹಣ ನೀಡುತ್ತಿದ್ದರು ಮತ್ತು ಮಕ್ಕಳು ಹಠ ಬಿಡುತ್ತಿದ್ದರು. ಆದರೆ ಊರಿಗೆ ಊರೇ ಒಳ್ಳೆಯವಳೆಂದು ಕರೆಯಿಸಿಕೊಳ್ಳುತ್ತಿದ್ದ ಮಾಚ್ಚುಬಾಯಿ ಒಮ್ಮೆಲೇ ಮಾಟಗಾತಿಯಾದ ಘಟನೆ ಮಾತ್ರ ತೀರಾ ಅನಿರೀಕ್ಷಿತ.

ಊರಿನ ಸಾರಾಯಿ ಅಂಗಡಿಯ ಸಾಹುಕಾರ ಊರಿನ ಪಂಚಾಯತ್ ಚುನಾವಣೆಯಲ್ಲಿ ನಿಂತು ಗೆದ್ದು ಬಂದನು. ಗೆಲವು ಸಾಧಿಸಿದ ನಂತರ ಅವನು ಕೈಗೆತ್ತಿಕೊಂಡ ಮೊದಲ ಕೆಲಸವೆಂದರೆ ಮಾರಿಗುಡಿಯನ್ನು ಹೊಸದಾಗಿ ವಿಸ್ತರಿಸಿ ಕಟ್ಟುವುದು. ಆಗ ಅವನಿಗೆ ಮಾಚ್ಚುಬಾಯಿಯ ಜಮೀನು ಬೇಕಾಯ್ತು. ಹೀಗಾಗಿ ಅವನು ಅವಳಿಗೆ ತೊಂದರೆ ಕೊಡಲು ಪ್ರಾರಂಭಿಸಿದ. ಯಾವುದೋ ಸಂದರ್ಭದಲ್ಲಿ ಮಾಚ್ಚುಬಾಯಿ

ಅವನಲ್ಲಿ "ನನಗೆ ತೊಂದರೆ ಕೊಟ್ಟರೆ ನಿನಗೆ ಒಳ್ಳೆಯದಾಗುವುದಿಲ್ಲ" ಎಂದು ಹೇಳಿದ್ದಕ್ಕೂ, ಆ ಸಾಹುಕಾರ ಮಿದುಳು ರಕ್ತಸ್ರಾವದಿಂದ ಸತ್ತು ಹೋಗುವುದಕ್ಕೂ ತಾಳೆಯಾಯಿತು. ಅಂದಿನಿಂದ ಮಾಚ್ಚುಬಾಯಿ ಊರಿನವರ ಬಾಯಿಯಲ್ಲಿ ಮಾಟಗಾತಿಯಾದಳು.

ಪೇಟೆಯ ಕಡೆಯಿಂದ ತನ್ನ ಜೀವ ಕೈಯಲ್ಲಿ ಹಿಡಿದು ಓಡಿ ಬರುತ್ತಿದ್ದ ಸುಮತಿ ತನ್ನ ಕೈಯಲ್ಲಿರುವ ಚೀಲ ಮತ್ತು ಕಾಲಲ್ಲಿರುವ ಚಪ್ಪಲಿಗಳನ್ನು ಎಸೆದು ಮಾರಿಗುಡಿಯ ಹಿಂಭಾಗದಲ್ಲಿ ಇರುವ ಮಾಚ್ಚುಬಾಯಿಯ ಮನೆಯಂಗಳದಲ್ಲಿ ಬಂದು ನಿಂತಳು. ಅವಳ ಹಿಂದೆಯೇ ಗೂಳಿ ಕೂಡಾ ಓಡಿಬಂತು. ಮುಂದೆ ಏನು ಮಾಡಬೇಕೆಂದು ಯೋಚಿಸುವ ಮೊದಲೇ ಅವಳು ತನ್ನ ಮೈಮೇಲಿದ್ದ ಕೆಂಪುಬಣ್ಣದ ದುಪ್ಪಟ್ಟಾ ತೆಗೆದು, ಆಗ ತಾನೇ ಸ್ನಾನ ಮಾಡಿಸಲೆಂದು ತಂದು ಅಂಗಳದಲ್ಲಿ ಮಲಗಿಸಿದ್ದ ಮಾಚ್ಚುಬಾಯಿಯ ಮೃತದೇಹದ ಮೇಲೆ ಎಸೆದಳು. ಮಾಟಗಾತಿ ಮಾಚ್ಚುಬಾಯಿಯ ದೇಹದ ಮೇಲೆ ಕೆಂಪು ವಸ್ತ್ರವನ್ನು ನೋಡಿ ಸಂಕಟಪಟ್ಟು ಗಲಿಬಿಲಿಗೊಂಡ ದೇವರಿಗೆ ಬಿಟ್ಟ ಆ ಗೂಳಿ ತನ್ನ ಜೀವದ ಶಕ್ತಿ ಕಳೆದುಕೊಂಡು ನಿಂತಲ್ಲಿಯೇ ಬಿದ್ದುಬಿಟ್ಟಿತು. ದಡ್!

ಇನ್ನು,

ಈಗ ಬೊಸ್ಕ್ಯಾಂಬಾ ಪೇಟೆಯಲ್ಲಿ ನಾಯಿಗಳು ಇಲ್ಲ.

ಈಗ ಬೊಸ್ಕ್ಯಾಂಬಾ ಪೇಟೆಯಲ್ಲಿ ಗೂಳಿಗಳು ಇಲ್ಲ.

ಆದ್ದರಿಂದ ಮನುಷ್ಯರೇ ಪರಸ್ಪರ ಕಚ್ಚಿಕೊಳ್ಳುತ್ತಾರೆ ಮತ್ತು ಹಾಯುತ್ತಾರೆ.

ಅನುವಾದಕರು: **ವಿಶ್ವನಾಥ ಭಟ್ಟ**

❖ ❖ ❖❖ ❖

ತೆರೆಝಿನಮ್ಮ

✍ ಶಶಾಂಕ ಸೀತಾರಾಮ

ಸಂಧ್ಯಾಕಾಲದ ಕತ್ತಲೆಯು ಹೊಗೆಯಬಲೆ ತೂಗುಬಿಟ್ಟಂತೆ ಕೆಳಗೆ ಇಳಿಯುತ್ತಲಿದೆ. ಅದರಲ್ಲಿ ಮಳೆಯ ಮೋಡಗಳು. ಸಂಜೆಯು ಗರ್ಭವತಿ ಹೆಣ್ಣುಹಂದಿಯ ಹಾಗೆ ಜಡಭರಿತವಾಗಿದೆ.

ತೆರೆಝಿನಮ್ಮ ದಣಪೆಯ ಸರಗೋಲನ್ನು ಸರಿಸಿ ಅಂಗಳ ಪ್ರವೇಶಿಸಿದಳು. ಕಂಬಳಿ ತೆಗೆದು ಗೂಟಕ್ಕೆ ಸಿಕ್ಕಿಸಿದಳು. ಮನೆಯೊಳಗೆ ಯಾರೂ ಇದ್ದ ಹಾಗಿಲ್ಲ. ಅವಳು ಬಾಗಿಲನ್ನು ದೂಡಿ ನೋಡಿದಳು. ಚಿಲಕ ಹಾಕದೆ ಹಾಗೆಯೇ ಅಡ್ಡಮಾಡಲಾಗಿದೆ. ಅವಳು ಅಲ್ಲಿಯೇ ಜಗಲಿಯ ಗೋಡೆಗೆ ಒರಗಿ ಕುಳಿತುಕೊಂಡಳು. ಕಿತ್ತು ತಂದ ಚೊಗಚೆ ಸೊಪ್ಪಿನ ಹಾಗೆ ಅವಳು ಬಾಡಿ ಹೋಗಿದ್ದಳು.

ಅವಳಿಗೆ ಸ್ವಲ್ಪ ಚಹಾ ಬೇಕಾಗಿತ್ತು. ಒಳಗೆ ಹೋಗಿ ಮಾಡುವುದೇ? ಓಲಿಂದ ಮತ್ತೇನಾದರೂ ಹೇಳಬಹುದು! ಚಹಾದ ಆಸೆಯನ್ನು ಹಾಗೆಯೇ ಅದುಮಿಟ್ಟು ಸುಮ್ಮನೆ ಕುಳಿತುಕೊಂಡಳು.

ಪಕ್ಕದ ಮನೆಯಿಂದ ಅವಳ ಸೊಸೆ ಬಂದಳು.

"ಲಿಂಡಾ, ತಂದೆಯವರೆಲ್ಲಿ?"

"ಅಗೋ ಬಂದರು, ನೋಡಿ!"

ತೆರೆಝಿನಮ್ಮನ ಗಂಡ ವಠಾರದಿಂದ ಒಳಗೆ ಪ್ರವೇಶಿಸುತ್ತಿದ್ದರು. ಅವರ ಕಾಲು ಮತ್ತು ಅವರ ಪ್ರಾಯ ಒಟ್ಟೊಟ್ಟಿಗೆ ಸಂಭಾಳಿಸಿಕೊಳ್ಳುತ್ತಾ ನಡೆಯುತ್ತಿದ್ದವು.

"ಅಪ್ಪಾ, ಯಾವ ಮೀನು ಸಿಕ್ಕಿತು?"

"ಅಯ್ಯೋ ಕರ್ಮವೇ, ಸಧ್ಯ ಮೀನಿಗೆ ದುಷ್ಕಾಳ ಬಂದಿದೆಯಮ್ಮಾ."

ಮಾನಸಿಕವಾಗಿ ಅವರಿನ್ನೂ ಮುದುಕರಾಗಿಲ್ಲ. ಸೊಸೆ ಅವರಿಂದ ಮೀನು ತೆಗೆದುಕೊಂಡಳು.

"ಅದು ನಾಲ್ಕು ರೂಪಾಯಿಯ ಮೀನಮ್ಮಾ"

ಆತ ಉಳಿದ ಆರು ರೂಪಾಯಿಗಳನ್ನು ಸೊಸೆಯ ಕೈಯಲ್ಲಿ ಇಟ್ಟರು. ಮತ್ತೆ ಹೊರಗೆ ಹೋಗಲು ತಿರುಗಿಕೊಂಡರು. ಅವರಿನ್ನೂ ಸಂಜೆ ಹೊತ್ತು ಕುಡಿದು ಬಡಬಡಿಸುತ್ತಾ ಕುಳಿತುಕೊಳ್ಳುವ ಅಭ್ಯಾಸವನ್ನು ಬಿಟ್ಟಿಲ್ಲ.

"ಹುಂ, ಹೊರಟರು ನೋಡು!"

ತೆರೆಝಿನಮ್ಮ ತನ್ನಷ್ಟಕ್ಕೆ ಮಾತನಾಡಿಕೊಂಡಳು.

– ಇವರಿಗೆ ಎಂದಾದರೂ ಹೆಂಡತಿಗೆ ಮೀನು ತಂದುಕೊಟ್ಟ ನೆನಪು ಇದೆಯಾ? ಆರೋಗ್ಯ ಸರಿಯಿಲ್ಲದಿದ್ದರೂ ನಾನೇ ಹೋಗಿ ತರಬೇಕಿತ್ತು. ತಂದ ನಂತರ ಇದು ಹೀಗೆ, ಅದು ಹಾಗೆ ಎನ್ನುವುದು. ಯಾವಾಗಲಾದರೂ ನನ್ನ ಹತ್ತಿರ ಒಳ್ಳೆಯದಾಗಿ ಮಾತನಾಡಿದ್ದು ಇದೆಯಾ? ಹೆಂಡತಿಗೆ ಹಣ ಕೊಟ್ಟು ಕಳುಹಿಸುವಾಗ 'ಹತ್ತು ರೂಪಾಯಿಗಳಲ್ಲಿ ನಾಲ್ಕು ರೂಪಾಯಿ ಖರ್ಚಾದರೆ ಆರು ರೂಪಾಯಿಗಳು ಉಳಿಯುತ್ತವೆ' ಎನ್ನುವ ಲೆಕ್ಕಾಚಾರ ಹೇಳಿಕೊಡುತ್ತಿದ್ದರು. ನೆನಪಿಲ್ಲದಿದ್ದಾಗ ನನಗೆ ಹಣವನ್ನೇ ಕಳುಹಿಸುತ್ತಿರಲಿಲ್ಲ. ಇವರು ಹಡಗಿನಲ್ಲಿದ್ದರೂ, ನಾನು ಕಾಡಿಗೆ ಮತ್ತು ಗದ್ದೆಗೆ ಹೋಗಿ ಮಕ್ಕಳನ್ನು ಬೆಳೆಸಬೇಕಾಗಿ ಬಂತು.

ಸೊಸೆ ಮೀನು ತಂದು ಸ್ವಚ್ಛಮಾಡಲು ಕುಳಿತುಕೊಂಡಳು. ತೆರೆಝಿನಮ್ಮ ಎದ್ದು ಬಂದಳು.

"ಇಲ್ಲಿ ತಾ, ನಾನು ಹೆಚ್ಚಿ ಕೊಡುತ್ತೇನೆ,"

"ಬೇಡ ಅಮ್ಮಾ, ನೀವು ಕುಳಿತುಕೊಳ್ಳಿ"

ಆದರೂ ತೆರೆಝಿನಮ್ಮ ಸೊಸೆಯ ಹತ್ತಿರ ಹೋಗಿ ಕುಳಿತಳು. ಶೆಟ್ಲಿಯನ್ನು ಆರಿಸಿ ಬಿಡಿಸಿದಳು. ಹಡಗಿನಲ್ಲಿ ಬರುವಾಗ ಎಷ್ಟೆಲ್ಲಾ ತರುತ್ತಿದ್ದರು. ಎಲ್ಲಿಯದೋ-ರೇಡಿಯೋ, ಯಾವ್ಯಾವುದೋ ಬಟ್ಟೆಗಳು, ಬ್ಯಾಗುಗಳು ಅಷ್ಟಿಷ್ಟಲ್ಲ. ಆದರೆ ಹೆಂಡತಿ ನಾಲ್ಕೈದು ತಿಂಗಳು ಹಣವಿಲ್ಲದೆ ದಿನ ಹೇಗೆ ಕಳೆಯುವಳೆಂಬುದು ಮಾತ್ರ ಇವರಿಗೆ ತಿಳಿಯುತ್ತಲೇ ಇರಲಿಲ್ಲ. ಈಗ ಹಿರಿಯ ಮಗ ಆಂತೋನಿ ಹಣಕಳಿಸಲು ಒಂದು ದಿನ ತಡವಾದರೆ ಫಡಫಡಿಸುತ್ತಾರೆ. ಬೈಯ್ಯುವುದು ಪ್ರಾರಂಭವಾಗುತ್ತದೆ. 'ನೀವು ಇಷ್ಟೆಲ್ಲ ದುಡಿದಿದ್ದೀರಲ್ಲ? ಮುದಿಕಾಲಕ್ಕೆ ಸ್ವಲ್ಪವಾದರೂ ಇಟ್ಟುಕೊಳ್ಳಬೇಕಾಗಿತ್ತು. ಎಲ್ಲವನ್ನೂ ಹಂಚಿ ಕುಳಿತುಬಿಟ್ರಿ.'

ಪಾತ್ರೆಯಲ್ಲಿದ್ದ ಸಿಗಡಿಗಳು ಮುಗಿದವು. ತೆರೆಝಿನಮ್ಮ ನೀರಿನಲ್ಲಿ ಕೈಯಾಡಿಸಿದಳು. ಏನೂ ಉಳಿದಿಲ್ಲ. ಸೊಸೆಯ ಕೆಲಸವೂ ಮುಗಿಯಿತು.

ನೀರು ಕದಡಿದಂತೆ ಕತ್ತಲೆ ಆವರಿಸಿತು. ದೀಪಗಳು ಬೆಳಗಿದವು. ತೆರೆಝಿನಮ್ಮ ಸೊಸೆಯ ಕೆಲಸದಲ್ಲಿ ಅಲ್ಲಲ್ಲಿ ಸಹಾಯ ಮಾಡಿದಳು. ಆಮೇಲೆ ಮೂಲೆಯಲ್ಲಿದ್ದ ತೆಂಗಿನ ಸಿಪ್ಪೆಯನ್ನು ಎತ್ತಿ, ಕುಟ್ಟಿ, ಉರಿಸಿದಳು.

"ಅಮ್ಮಾ, ಎಲ್ಲಿಗೀಗ?"

"ಆಂತೋನಿಯ ಬಳಿ ಹೋಗುತ್ತೇನೆ"

"ಇಷ್ಟು ಬೇಗ? ಊಟ ಮಾಡುವ ಮೊದಲೇ?"

"ಅವನು ಊಟಕ್ಕೆ ಕರೆದಿದ್ದಾನೆ, ಮನಃಪೂರ್ವಕವಾಗಿ. ಇವತ್ತು ಹೋಗೋಣ ಎಂದುಕೊಂಡಿದ್ದೇನೆ. ಹೋಗದಿದ್ದರೆ ಅವನು ಸಿಟ್ಟಿಗೇಳಬಹುದು, ಬರಲಾ?"

ಸೊಸೆ ಸುಮ್ಮನೆ ನಿಂತಳು.

ತೆರೆಝಿನಮ್ಮ ಕತ್ತಲೆಯಲ್ಲಿ ಉರಿಯುತ್ತಿರುವ ತೆಂಗಿನ ಸಿಪ್ಪೆಯನ್ನು ಮೇಲೆ ಕೆಳಗೆ ಬೀಸಿದಳು. ಆ ಬೆಳಕಿನಲ್ಲಿ ವಾಡೆ ಬೆಳಗಿತು. ಅವಳು ಗೇಟು ತೆರೆದು ಹೊರಗೆ ಹೋದಳು. ಉರಿಯುವ ಸಿಪ್ಪೆಯನ್ನು ಮೇಲೆ ಕೆಳಗೆ ಬೀಸುತ್ತಾ.....

ಲಿಂಡಾ ತೆರೆಝಿನಮ್ಮನ ಕಿರಿಯ ಸೊಸೆ. ಅವಳು ತನ್ನ ಗಂಡ ದುಮಿಂಗ ಕಟ್ಟಿಸಿದ ಹೊಸ ಮನೆಗೆ ಬಂದು ಒಂದೂವರೆ ವರ್ಷವಾಗಿದೆ. ಆಗ ಸೊಸೆಗೆ ಮನೆ ಜವಾಬ್ದಾರಿಯನ್ನು ಹೇಳಿಕೊಡುವುದಕ್ಕಾಗಿ ತೆರೆಝಿನಮ್ಮ ಇಲ್ಲಿಗೆ ಬಂದಿದ್ದಳು. ನಂತರ ಅವಳು ಇಲ್ಲಿಯೇ ಉಳಿದುಕೊಂಡಳು. "ಹರಿಯುತ್ತಿರುವ ನೀರಿನಲ್ಲಿರುವ ಹುಲ್ಲು ಹೂವಿನಗಿಡದ ಬೇರುಗಳಿಗೆ ತಾಗಿ ನಿಲ್ಲುವುದು ಸಹಜ. ಆದರೆ ನೀರಿನೊಂದಿಗೆ ಹರಿದು ಹೋಗುತ್ತಿರುವಾಗ ಹುಲ್ಲಿನ ಗರಿಗಳು ಯಾವಾಗಲೂ ಅಲುಗಾಡಿಕೊಂಡಿರುವಂತೆ" ಅವಳು ನಡೆದುಕೊಳ್ಳುತ್ತಿದ್ದಳು. ಪ್ರತಿದಿನ ಒಂದೆರಡು ಬಾರಿಯಾದರೂ ಅವಳು ಸಣ್ಣಸೊಸೆಯ ಬಳಿಯಿಂದ ದೊಡ್ಡಸೊಸೆಯ ಬಳಿ ಹೋಗಿಬರುತ್ತಿದ್ದಳು. ಅವಳ ಊಟತಿಂಡಿ ಎಲ್ಲಾ ಕಿರಿಯ ಸೊಸೆಯ ಹತ್ತಿರ. ರಾತ್ರಿ ಊಟ ಮುಗಿಸಿದ ನಂತರ ಅವಳು ಮಲಗಲು ಮಾತ್ರ ಹಿರಿಯ ಸೊಸೆ ಮತ್ತು ಮೊಮ್ಮಕ್ಕಳ ಹತ್ತಿರ ಹೋಗುತ್ತಾಳೆ. ಹಿರಿಸೊಸೆಯ ಮನೆಯಿರುವುದು ಕಿರಿಸೊಸೆಯ ಮನೆಯಿಂದ ಏಳೆಂಟು ಮನೆಗಳ ಆಚೆಗೆ. ಅದರ ಈಚೆ ಎರಡು ಮೂರು ಮನೆಗಳನ್ನು ಬಿಟ್ಟು ತೆರೆಝಿನಮ್ಮಳ ಗಂಡ ಕಟ್ಟಿಸಿದ ಅವಳ ಸ್ವಂತಮನೆ ಇದೆ. ಈಗ ಗಂಡಹೆಂಡತಿ ಇಬ್ಬರೂ ಕಿರಿಯ ಸೊಸೆಯ ಹತ್ತಿರವಿರುವುದರಿಂದ ಈ ಮನೆ ಮುಚ್ಚಿಯೇ ಇರುತ್ತದೆ.

ತೆರೆಝಿನಮ್ಮ ರಸ್ತೆಗೆ ಬಂದ ಕೂಡಲೇ, "ಮಗಳೇ, ಬರುತ್ತೇನೆ" ಎಂದು ಕಿರಿಯ ಸೊಸೆಗೆ ಹೇಳಿದಳು. ನೀರಿನಲ್ಲಿರುವ ಏಡಿಯಂತೆ ಅವಳ ತಲೆತುಂಬಾ ವಿಚಾರಗಳು ಬಂದು ಹೋಗತೊಡಗಿದವು. ನಾವೆಂದರೆ ತಲೆಯ ಮೇಲೆ ಹೊತ್ತುಕೊಂಡ ಗಂಟುಗಳು. ನಡೆಯುತ್ತ ನಡೆಯುತ್ತಾ ಭಾರವಾಗುತ್ತಾ ಹೋಗುವಂತಹವುಗಳು. ಒಬ್ಬನಿಗಂತೂ ನಿಜವಾಗಿಯೂ ಭಾರ. ಭಾರವಾಗದಿದ್ದರೂ ಜನರು ಭಾರವಾಗಿಸುತ್ತಾರಲ್ಲ? ಇಬ್ಬರು ಮಕ್ಕಳು, ನೀವೇ ಯಾಕೆ ಸಾಕಬೇಕು? ನಿಮಗೆ ಕೊಟ್ಟಷ್ಟೇ ಅವನಿಗೂ ಕೊಟ್ಟಿದ್ದಾರಲ್ಲ. ತೆರೆಝಿನಮ್ಮ ತನ್ನ ಮನೆಯ ಹತ್ತಿರ ಬಂದಳು. ಆದರೆ ಅವಳು ಆ ಮನೆಯ ಮೆಟ್ಟಲು ಹತ್ತಲಿಲ್ಲ. ಹಾಗೆಯೇ ಮುಂದುವರಿದು ಹಿರಿಮಗ ಆಂತೋನಿಯ ಮನೆ ತಲುಪಿದಳು. ಮಗ ಹೊರಗೆ ಕತ್ತಲೆಯಲ್ಲಿ ಕುಳಿತು ಸಿಗರೇಟ್ ಸೇದುತ್ತಿದ್ದಾನೆ. ಒಳಗಿನಿಂದ ಸ್ಟೀರಿಯೋ ಹಾಡು ಕೇಳಿಸುತ್ತಿದೆ.

"ಮಕ್ಕಳೆಲ್ಲಿ?"

"ಮಾವನ ಮನೆಗೆ ಟಿ.ವಿ ನೋಡಲು ಹೋಗಿದ್ದಾರೆ."

"ಮತ್ತು ಮಾರಿ?"

"ಅವಳೂ ಹೋಗಿದ್ದಾಳೆ" ಅವನು ಉಳಿದ ಸಿಗರೇಟ್ ಎಸೆದ. "ನೀನು ಈಗಲೂ ನೆಟ್ಟಿ ಕೊಯ್ಲಿಗೆ ಹೋಗುತ್ತಿರುವೆ ಏನು?"

ಇವನಿಗೆ ಯಾರಾದರೂ ಏನಾದರೂ ಹೇಳಿದ್ದಾರೋ ಹೇಗೆ? ತೆರೆಝಿನಮ್ಮನಿಗೆ ಸಂದೇಹವಾಯಿತು. "ಏನು ಮಾಡುವುದು? ಮೊದಲಿನ ಅಭ್ಯಾಸ ಹೋಗುವುದಿಲ್ಲವಲ್ಲ?"

"ಮೊಮ್ಮಕ್ಕಳಿದ್ದಾರಲ್ಲ. ಅವರನ್ನು ಆಡಿಸು. ಮನೆಯಲ್ಲಿ ಕುಳಿತುಕೋ"

"ಮಗನೇ, ಅದು ಸರಿ. ಆದರೆ ನನಗೆ ಕುಳಿತುಕೊಂಡಿರುವ ಅಭ್ಯಾಸವೇ ಇಲ್ಲ. ನಿನ್ನ ತಂದೆ ಇಷ್ಟೆಲ್ಲ ಗಳಿಸುತ್ತಿದ್ದರು. ಆದರೂ ನಾನು ಮಾತ್ರ ಮೊದಲಿನಿಂದಲೂ ದುಡಿದೇ ತಿನ್ನುತ್ತಿದ್ದೆ. ಈಗ ನಾವು ಮುದುಕರಾಗಿಬಿಟ್ಟಿದ್ದೇವೆ. ಈಗ ನಮಗೂ ಮಕ್ಕಳಿಗೂ ಹೊಂದುವುದು ಕಷ್ಟ"

"ನಿಮಗೆ ಹೊಂದಾಣಿಕೆ ಮಾಡಿಕೊಳ್ಳಲು ಆಗುವುದಿಲ್ಲ"

"ಹಾಗೇ, ಮಗನೇ" ಅವಳಿಗೆ ತಾನು ಮಾತನಾಡಿದ್ದು ತಪ್ಪಾಯಿತೆಂದು ಕಂಡಿತು. 'ಹೊಟ್ಟೆಯಲ್ಲಿ ಇರುವುದು ಬಾಯಲ್ಲಿ ಬಂದೇ ಬರುತ್ತದೆ. ಇವನು ನನ್ನ ಮಗ. ನನಗೆ ಏನು ಹೇಳಲಿಕ್ಕಿದೆ ಎಂಬುದನ್ನು ಗ್ರಹಿಸಿದ್ದಾನೆ. ಇವನ ಹೆಂಡತಿ ಮಾರಿಯ ಜೊತೆ ನಾನು ಉಳಿಯುವುದಿಲ್ಲ. ಕಿರಿಯ ಸೊಸೆಯ ಹತ್ತಿರವೇ ಇರುತ್ತೇನೆ. ಅವನಿಗೆ ಅದು ಒಳ್ಳೆಯದೆಂದು ಅನಿಸುವುದಾದರೂ ಹೇಗೆ? ಆದರೂ ಅವನಿಗೆ ತನ್ನ ಹೆಂಡತಿಯ ಸ್ವಭಾವ ಗೊತ್ತಿದೆ. ಅವಳದು ಅವಳಿಗಾಯಿತು.'

"ನನಗೆ ಭೇದಭಾವ ಇಲ್ಲವೋ ಮಗನೇ. ನಾನು ರಾತ್ರಿ ಇಲ್ಲಿಗೇ ಬರುತ್ತೇನಲ್ಲವೇ? ನಾಟಿ ಮಾಡಿ ಕೊಯ್ದು ತಂದ ಭತ್ತವನ್ನು ಲಿಂಡಾಳಿಗೂ ಕೊಡುತ್ತೇನೆ. ಅಷ್ಟೇ ನಿನ್ನ ಮಕ್ಕಳಿಗೂ ಕೊಡುತ್ತೇನೆ. ಒಳ್ಳೇ ಬಿಸಿಬಿಸಿ ಗಂಜಿ ಉಣ್ಣಲಿ ಎಂದುಕೊಂಡು. ನೀನು ಈಗ ಬಂದಿದ್ದೀಯಾ. ನೀನು ನನ್ನನ್ನು ಕರಿ, ನಾನು ಬಂದು ನಿಲ್ಲುವುದಿಲ್ಲವೇನು? ಇರುವವರೆಗೆ ನೋಡಿಕೋ"

ಅವನು ಸುಮ್ಮನೆ ಕುಳಿತ.

"ಅಪ್ಪನೂ ಇಲ್ಲಿಗೆ ಬರಬಹುದು" ಹರಿಯುತ್ತಿರುವ ನೀರಿನಲ್ಲಿ ಹಗುರವಾದ ಕಾಗದದ ದೋಣಿಯನ್ನು ಬಿಡುವಂತೆ ತೆರೆಝಿನಮ್ಮ ಹೇಳಿದಳು.

"ಅವನು ಇಲ್ಲಿಗೆ ಬರುವನೇ?"

"ನೀನು ಕರೆಯಬೇಕು"

"ಹೋದ ಸಲ ನಾನು ಬಂದಿದ್ದಾಗ ಅವನು ಜಗಳವಾಡಿ ಹೋದನಲ್ಲ? ಸತ್ತರೂ ನಾನು ಈ ಮನೆಯಲ್ಲಿ ಕಾಲು ಇಡಲಾರೆ ಎಂದು ಹೇಳಿಹೋಗಿದ್ದಾನೆ"

"ಮನುಷ್ಯ ಸಿಟ್ಟುಬಂದಾಗ ಏನಾದರೂ ಮಾತನಾಡುತ್ತಾನೆ. ನೀನು ನಾಸು ಬಂದಿದ್ದೇನೆ ಎಂದು ಅವರಿಗೆ ಬರಲು ಹೇಳಬೇಕಾಗಿತ್ತು. ಅವರು ತಕ್ಷಣ ಬರುತ್ತಾರೆ. ಬರುವ ಭಾನುವಾರ ಆಗಸ್ಟ್ ಹದಿನೈದು ಅಲ್ಲವೇ? ಅದು ನಿನ್ನ ಮಗನ ಹುಟ್ಟಿದ ದಿನ. ಆಗ ತಂದೆಯನ್ನು ಕರಿ. ಅವರಿಗೂ ಸಂತೋಷವಾಗುತ್ತದೆ"

"ಅವನು ಬರುತ್ತಾನಲ್ಲವೇ?"

"ನೀನು ಕರೆದು ನೋಡು. ಏಕೆ ಬರುವುದಿಲ್ಲ? ನೀನೇನು ಅವರ ವೈರಿಯೇ?"

ಆಂತೋನಿಗೆ ಏನು ಮಾತನಾಡಬೇಕೆಂದೇ ತಿಳಿಯಲಿಲ್ಲ. ಅವನು ಸುಮ್ಮನಾದ. ತೆರೆಝಿನಮ್ಮನಿಗೆ ಕಳವಳವಾಯಿತು. ಅವಳು ಜೀವಹಿಡಿ ಮಾಡಿಕೊಂಡು ಹೇಳಿದಳು, "ಕರೆಯುತ್ತಿಯಲ್ಲ?"

ಅವನು ಹೌದೆಂದು ಹೇಳಿದ. ಬಾವು ಬಂದ ಜಾಗದಲ್ಲಿ ಬಿಸಿನೀರಿನ ಶಾಖ ಕೊಟ್ಟಂತೆ ತೆರೆಝಿನಮ್ಮನಿಗೆ ಹಾಯೆನಿಸಿತು. ಮಗ ಕುವೈಟ್‌ನಿಂದ ಬಂದಿರುವನೆಂದು ತಂದೆಯೂ ಮಗನ ಸುದ್ದಿಯನ್ನು ಪಡೆದಿರಲಿಲ್ಲ. ಮಗನೂ ತಂದೆಯ ಕ್ಷೇಮ ಸಮಾಚಾರ ವಿಚಾರಿಸಲು ಬಂದಿರಲಿಲ್ಲ.

"ನೀನೇ ಅವರಿಗೆ ಹೇಳು, ಮಗನಿಂದಲೂ ಹೇಳಿಕಳುಹಿಸು." ಮಗನ ಸ್ವಭಾವವನ್ನು ಅರಿತಿದ್ದ ತೆರೆಝಿನಮ್ಮ ಅವನಿಗೆ ತಿಳಿಸಿ ಹೇಳಿದಳು. "ಮಗನೇ, ಹಾಗಲ್ಲ ಅವರು ನಿನ್ನ ತಂದೆಯಲ್ಲವೇ? ಅವರ ಯೋಗಕ್ಷೇಮವನ್ನು ನೀನೇ ನೋಡಿಕೊಳ್ಳಬೇಕು. ತಂದೆ ಏನೇ ಮಾಡಲಿ, ನಮ್ಮನ್ನು ನೋಡಿಕೊಳ್ಳಬೇಕಾದವನು ನೀನೇ. ಹಿರಿಯ ದೀಪ ಹೇಗೋ ಹಾಗೆಯೇ ಕಿರಿಯ ದೀಪ." ಹಿರಿಸೊಸೆ ಅವಳ ತಾಯಿಯ ಮನೆಗೆ ಟಿವಿ ನೋಡಲು ಹೋಗಿರುವುದರಿಂದ ತೆರೆಝಿನಮ್ಮನಿಗೆ ಇವತ್ತು ಮಾತನಾಡುವ ಅವಕಾಶ ಸಿಕ್ಕಿತು. ಮಾರಿಯ ತೌರುಮನೆ ಮೂರು ನಾಲ್ಕು ಫರ್ಲಾಂಗ್ ದೂರ ಇರುವುದರಿಂದ ಅವಳು ಪ್ರತೀ ಶನಿವಾರ, ಭಾನುವಾರ ಅಲ್ಲಿಗೆ ಹೋಗುತ್ತಾಳೆ. ಟಿವಿ ಸಿನೇಮಾ ಎಂಟೂವರೆಗಿಂತ ಮೊದಲು ಮುಗಿಯುವುದಿಲ್ಲ. ಊಟದ ನೆವನ ಮಾಡಿಕೊಂಡು ತೆರೆಝಿನಮ್ಮ ಆಂತೋನಿಯ ಹತ್ತಿರ ಬಂದಿದ್ದಳು. ಹೇಳುವುದನ್ನೆಲ್ಲಾ ಹೇಳಿ ಮುಗಿಸಿದ ಬಳಿಕ ಅವಳು ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡಳು. ಗಂಟೆ ಎಂಟಾಗುವುದರಲ್ಲಿತ್ತು. ಮಗ ಏನಾದರೂ ಹೇಳಬಹುದೆಂದು ಅವಳು ಕಾದಳು. ತಾನು ಇಲ್ಲದಿದ್ದಾಗ ಬಂದು ಮಗನಲ್ಲಿ ಚಾಡಿ ಹೇಳಿದಳೆಂದು ಸೊಸೆ ತಿಳಿದುಕೊಳ್ಳಬಹುದು. ಒಲೆಯ ಮೇಲೆ ಇಟ್ಟಿರುವ ಹಾಲಿನ ನೆನಪಾಗುವಂತೆ ಅವಳು ತಟ್ಟನೆ ಎದ್ದುನಿಂತಳು. "ನಾನು ಹೋಗಿ ಬರುತ್ತೇನೋ." ಮಗ ಏನೂ ಹೇಳಲಿಲ್ಲ. ಅವಳು ತಂದಿದ್ದ ತೆಂಗಿನ ಸಿಪ್ಪೆಗಳೆಲ್ಲಾ ಉರಿದು ಹೋಗಿದ್ದವು. ಬೇರೆ ತೆಂಗಿನ ಸಿಪ್ಪೆಗಳನ್ನು ಹುಡುಕಲಾರಂಭಿಸಿದಾಗ ಮಗ ಅವಳಿಗೆ ಟಾರ್ಚ್ ನೀಡಿದ. ಅರ್ಧ ದಾರಿಯವರೆಗೆ ಜೊತೆಯಲ್ಲಿ ಬಂದವನನ್ನು, "ನೀನು ಹೋಗು, ನಾನು ಬರುತ್ತೇನೆ"

ಎಂದು ಕಳುಹಿಸಿಕೊಟ್ಟಳು. ಅವನು ತನ್ನ ಮನೆ ತಲುಪಿದ್ದನ್ನು ನೋಡಿದ ನಂತರ, ಮತ್ತೆ ತಿರುಗಿ ತನ್ನ ಸ್ವಂತ ಮನೆಗೆ ಬಂದಳು. ಕೀಲಿ ತೆಗೆದು ಮನೆಯೊಳಗೆ ಹೋಗಲು ಅವಳ ಜೀವ ಒದ್ದಾಡಿತು. ಆದರೆ ಎಷ್ಟೋ ಹೊತ್ತು ಜಗಲಿಕಟ್ಟೆಯ ಮೇಲೆ ಸುಮ್ಮನೇ ಕುಳಿತುಕೊಂಡಳು. "ನಾನು ಊಟದ ಸಮಯಕ್ಕೆ ಅವನ ಮನೆಗೆ ಹೋಗಿದ್ದೆ. ಇಲ್ಲಿಯೇ ಊಟ ಮಾಡು, ಅಲ್ಲಿಗೆ ಮತ್ತೆ ಯಾಕೆ ಹೋಗುತ್ತಿ ಎಂದು ಅವನು ಕೇಳಬಾರದಿತ್ತೇ? ಎಲ್ಲಾ ದುರದೃಷ್ಟ!"

ತೆರೆಝಿನಮ್ಮ ಕೀಲಿ ತೆಗೆದು ಮನೆಯೊಳಗೆ ಪ್ರವೇಶಿಸಿದಳು. ದೀಪ ಹಚ್ಚಿದಳು. ಸ್ಟೌ ಹೊತ್ತಿಸಿ ಸಣ್ಣ ಬೋಗುಣಿಯಲ್ಲಿ ನೀರಿಟ್ಟಳು. ನೀರು ಕಾಯತೊಡಗಿತು. ಕೈಕಾಲುಗಳ ಎಲುಬು ಮುರಿದು ಹೋದ ಹಾಗೆ ಅವಳು ಮುದ್ದೆಯಾಗಿ ಕುಳಿತು ನೀರನ್ನೇ ನೋಡತೊಡಗಿದಳು.

– ನೆಟ್ಟಗೆ ಯಾಕೆ ಹೋಗುತ್ತಿ, ಏನು ಹೇಳುತ್ತಿ, ನೀನೇ ನೋಡು, ಇವಳು ಹೀಗೆ ಮಾಡ್ತಾಳೆ. ಬಂದನೆಂದುಕೊಂಡು ನಾಲ್ಕು ದಿನ ನಮ್ಮ ಮನೆಯಲ್ಲಿ ಬಂದು ಇರಮ್ಮಾ ಎಂದು ಹೇಳುವುದಿಲ್ಲ. ಮೊದಲೇ ಪಿರಿಪಿರಿ ಮಾಡುತ್ತಾನೆ. ಇನ್ನು ಲಿಂಡಾಳಿಗೆ ನಮ್ಮ ಈ ಗಂಟುಗಳು ತನ್ನ ಎದೆಯ ಮೇಲೆಯೇ ಬಿದ್ದಂತೆ ಕಾಣುವುದಿಲ್ಲವೇ? ಅವಳಿಗೆ ಹಾಗೆ ಕಾಣಿಸುವುದು ಬೇಡ. ನಾನು ಏನಾದರೂ ದುಡಿದು ತರುತ್ತೇನೆ. ನನಗೆ ಹೊತ್ತೂ ಕಳೆಯುತ್ತದೆ. ಯಾರ ಋಣಕ್ಕೂ ಬೀಳಬಾರದು. ಕೈಲಾದಷ್ಟು ನಾನೇ ಮಾಡುತ್ತೇನೆ. ಒಲೆಯ ಮೇಲಿದ್ದ ನೀರು ಕುದಿಯತೊಡಗಿತು. 'ನಿನ್ನ ತಂದೆ ಹಠವಾದಿ. ತನ್ನದೇ ನಿಜವೆಂದು ನಂಬುವಾತ. ಅವನ ಬೈಗಳನ್ನು ಲಿಂಡಾ ಎಷ್ಟೆಂದು ಸಹಿಸುತ್ತಾಳೆ? ನಿನ್ನ ತಂದೆಯನ್ನು ಗಾಳಿಗೆ ತೂರಿ ನಾನು ಸೊಸೆಯ ಹತ್ತಿರ ಇರಲೇನು ನೀನು ನನ್ನನ್ನು ಕಳುಹಿಸಿಕೊಟ್ಟದ್ದು? ದುಮಿಂಗ ಕೊಟ್ಟ ಹಣವನ್ನು ನಾನು ಹಾಗೆಯೇ ಇಡುತ್ತೇನೆ. ಆಮೇಲೆ ಎಲ್ಲಿಯೂ ಆಗದೇ ಇದ್ದಾಗ ನನ್ನ ಈ ಚಿಕ್ಕಮನೆಯಲ್ಲಿ ಬಂದು ಬೀಳುತ್ತೇನೆ.' ನೀರು ಬಿಸಿಯಾದುದು ಅವಳ ಗಮನಕ್ಕೆ ಬಂತು. ನೀರಿಗೆ ಚಹಾ ಸೊಪ್ಪು, ಸಕ್ಕರೆ ಹಾಕಿದಳು. ನಂತರ ಪಾತ್ರೆಯನ್ನು ಕೆಳಗಿಳಿಸಿ ಸ್ಟೌ ಆರಿಸಿದಳು.

'ನೀನು ನನ್ನದೇ ತಪ್ಪು ಎಂದು ಹೇಳಬಹುದು. ಹಿಂದಿನ ಒಂದೂವರೆ ವರ್ಷದಿಂದ ನಾನು ಲಿಂಡಾಳ ಹತ್ತಿರ ಇದ್ದೇನೆ. ಲಿಂಡಾಳಿಗೆ ಇನ್ನೂ ಮಕ್ಕಳು ಮರಿ ಆಗಿಲ್ಲ. ಮಾರಿಗೆ ಹೆಣ್ಣುಮಕ್ಕಳು ಇದ್ದಾರೆ. ನಾನು ಮಾರಿಯ ಹತ್ತಿರವೇ ಇರಬೇಕಾಗಿತ್ತು. ಅದೆಲ್ಲವೂ ನಿಜ. ಮಾರಿ ಪ್ರೀತಿಪೂರ್ವಕವಾಗಿ ಒತ್ತಾಯದಿಂದ ಕರೆದರೆ ನಾನು ಬರುವುದಿಲ್ಲವೇನು? ಮನೆಯೊಳಗಿನ ಎಲ್ಲವನ್ನು ಮಾಡಿಬಂದಿರುವ ಮನುಷ್ಯಳು ನಾನು. ಏನಾದರೂ ಮಾಡುತ್ತಿ, ಆದರೆ ನನ್ನಲ್ಲಿ ಮಾತ್ರ ಏನನ್ನೂ ವಿಚಾರಿಸುವುದಿಲ್ಲ. ಅಮ್ಮಾ, ಇದನ್ನು ಮಾಡೋಣವೇನು? ಅಮ್ಮಾ ಅದನ್ನು ಮಾಡೋಣವೇನು? ಎಂದು ಕೇಳಿದರೆ ನನಗೆ ಎಷ್ಟು

ಸಂತೋಷವಾಗುತ್ತಿತ್ತು. ನಾನು ವ್ಯರ್ಥವಾಗಿ ಏನೇನೋ ಮಾಡಿ ನಿನ್ನ ಹಣವನ್ನು ಹಾಳು ಮಾಡುವೆನೇನು? ಈ ಮುದಿಕಾಲದಲ್ಲಿ ಯಾರಾದರೂ ಪ್ರೀತಿಯಿಂದ ಚಹಾ ಕುಡಿ, ಊಟ ಮಾಡು, ತಿನ್ನು ಎಂದು ಹೇಳಲೆಂದು ನನ್ನ ಮನಸ್ಸು ಆಶಿಸುತ್ತದೆ. ನಿನ್ನ ಹೆಂಡತಿ ಹಾಳು ಎಂದು ನಾನು ಹೇಳುವುದಿಲ್ಲ. ಈ ಮುದಿಕಾಲವೇ ಹಾಳು.'

ಹಾಲಿಲ್ಲದ ಚಹಾವನ್ನು ಲೋಟಾಗೆ ಬಗ್ಗಿಸಿದಳು ತೆರೆಝಿನಮ್ಮ. ಒಂದೆರಡು ಡಬ್ಬಿಗಳನ್ನು ಅಲುಗಾಡಿಸಿ ನೋಡಿದಳು. ಒಮ್ಮೊಮ್ಮೆ ಮಗ, ಸೊಸೆ ಊಟಕ್ಕೆ ಕರೆದಿದ್ದಾರೆ ಎಂದು ಕಿರಿಸೊಸೆಯ ಬಳಿ ಹೇಳುವ ಪ್ರಸಂಗ ಅವಳಿಗೆ ಬರುತ್ತಿತ್ತು. ಅದಕ್ಕಾಗಿ ಚಹ ಸೊಪ್ಪು, ಸಕ್ಕರೆ, ಬಿಸ್ಕಿಟ್ ತಂದಿಡಬೇಕಾಗುತ್ತಿತ್ತು. ಅವಳ ಕೈಗೆ ಬಿಸ್ಕಿಟ್ ಸಿಕ್ಕಿತು. ಅದನ್ನು ಚಹಾದಲ್ಲಿ ಮುಳುಗಿಸಿ ತಿನ್ನತೊಡಗಿದಳು. ಅವಳ ನೋಟ ಸುತ್ತಲೂ ಹರಿಯಿತು. ಅವಳ ಎರಡು ಗಂಡುಮಕ್ಕಳು, ಆಂತೋನಿ ಮತ್ತು ದುಮಿಂಗಾ ಇಬ್ಬರೂ ಮದುವೆಯಾದ ಕೂಡಲೇ ತಮ್ಮ ತಮ್ಮ ಮನೆಯನ್ನು ಕಟ್ಟಿಸಿಕೊಂಡಿದ್ದಾರೆ. ಹಿರಿಯ ಮಗನ ಮದುವೆಯಾಗಿ ಏಳೆಂಟು ವರ್ಷಗಳು ಕಳೆದಿವೆ. ಕಿರಿಮಗನ ಮದುವೆಯಾಗಿ ಮೂರು ವರ್ಷಗಳಾಗಿವೆ. ಹಿರಿಮಗನ ಮನೆ ಹತ್ತಿರವೇ ಇದೆ. ಕೂಗಿ ಕರೆದರೆ ಹೌದೋ ಅಲ್ಲವೋ ಎಂದು ಕೇಳಿಸುವಷ್ಟು ಹತ್ತಿರ. ಸಣ್ಣಮಗನ ಮನೆ ಸ್ವಲ್ಪ ದೂರ. ಅವಳ ಗಂಡ ಮನೆಯಲ್ಲಿರುವ ಸಾಮಾನುಗಳನ್ನೆಲ್ಲಾ ಇಬ್ಬರೂ ಮಕ್ಕಳಿಗೆ ಹಂಚಿಕೊಟ್ಟಿದ್ದಾನೆ. ಮನೆಯ ಮಾಡೂ ಪಾಲಾಯಿತು. ಆದರೆ, ನಾನು ಇರುವವರೆಗೆ ನನ್ನ ಮನೆ ನನ್ನ ಹತ್ತಿರವೇ ಇರುತ್ತದೆ ಎಂದು ಅವನು ತನ್ನ ಮಕ್ಕಳಿಗೆ ಸ್ಪಷ್ಟವಾಗಿ ಹೇಳಿದ್ದಾನೆ. ಬೇರೆ ಏನೇ ಮಾಡಲಿ, ಇದೊಂದು ಮಾತ್ರ ಒಳ್ಳೆಯದನ್ನೇ ಮಾಡಿದ್ದಾನೆ. ಚಹ ಕುಡಿದು ಎಷ್ಟೋ ಹೊತ್ತಿನವರೆಗೆ ಅವಳು ಹಾಗೆಯೇ ಕುಳಿತಿದ್ದಳು. ನಂತರ ಮನೆಗೆ ಬೀಗ ಹಾಕಿ ಹೊರಟಳು. ಹಿರಿಯ ಮಗ ಮತ್ತು ಸೊಸೆ ಹೊರಗೆ ಕುಳಿತಿದ್ದರು. ತೆರೆಝಿನಮ್ಮ ಟಾರ್ಚ್ ಆರಿಸಿದಳು. ತಾನು ಈಗಾಗಲೇ ಬಂದು ಹೋಗಿರುವುದು ತಿಳಿಯುವುದು ಬೇಡ. ಅವಳು ಹೋಗಿ ಜಗಲಿಯ ಮೇಲೆ ಕುಳಿತಳು.

"ಸಿನೇಮಾ ಒಳ್ಳೆಯದಿತ್ತೇನೇ?" ಮಾತು ಪ್ರಾರಂಭಿಸಲು ಏನಾದರೂ ವಿಷಯ ಬೇಕಿತ್ತು.

"ಹೌದು" ಸೊಸೆ ಒಂದೇ ಶಬ್ದದಲ್ಲಿ ಉತ್ತರಿಸಿದಳು.

ಆಂತೋನಿ ಊಟ ಮಾಡುವುದಿಲ್ಲವೇ?

ಸೊಸೆ ಎದ್ದು ಊಟದ ತಯಾರಿ ನಡೆಸಲು ಒಳಗೆ ಹೋದಳು.

'ಅಮ್ಮ ಬಾರೇ, ನೀನೂ ನಮ್ಮೊಂದಿಗೆ ನಾಲ್ಕು ತುತ್ತು ತಿನ್ನು' ತೆರೆಝಿನಮ್ಮನ ಕಲ್ಪನೆಯ ಆದರ್ಶ ಸೊಸೆ ಅವಳನ್ನು ಛೇಡಿಸಿದಳು. ತೆರೆಝಿನಮ್ಮ ಎಡಮೊಣಕಾಲಿನ ಮೇಲೆ ಗಲ್ಲ ಊರಿ ಸುಮ್ಮನೆ ಕುಳಿತಿದ್ದಳು.

ಊಟಕ್ಕೆ ಏಳುವಾಗ ಆಂತೋನಿ ಕೇಳಿದ, "ಅಮ್ಮಾ, ಊಟ ಆಯಿತೇನು?"

"ಹೌದು ಮಗನೇ"

"ಇಲ್ಲಿ ಸ್ವಲ್ಪ ಊಟ ಮಾಡು"

"ಬೇಡ ಮಗನೇ, ನಿಜವಾಗಿಯೂ ಊಟ ಮಾಡಿದ್ದೇನೆ. ಹೋಗು ನೀನು ಊಟ ಮಾಡು."

ತೆರೆಝಿನಮ್ಮನ ಇವತ್ತಿನ ದಿನ ಬಂಗಾರವಾಯಿತು.

ಅವಳಿಗೆ ತಾನು ತೆಗೆದಿಟ್ಟಿರುವ ಗೇರುಬೀಜಗಳ ನೆನಪು ಬಂತು.

– ನಾಳೆ ಮಗನಿಗೆ ಅದನ್ನು ಹುರಿದು ಕೊಡಬೇಕು.

○ ○ ○

ತೆರೆಝಿನಮ್ಮ ಬಾಗಿಲು ಮುಚ್ಚಿ ಸಣ್ಣಸೊಸೆಯ ಮನೆಗೆ ಹೊರಟು ನಿಂತಳು. ಒಳಗಿದ್ದ ಯಾರಿಗೂ ಎಚ್ಚರವಿಲ್ಲ. ಹೊರಗೆ ಸುಂದರವಾದ ಬೆಳಕು ಇತ್ತು.

ಸಣ್ಣಸೊಸೆ ಕೂಡಾ ಇನ್ನೂ ಎದ್ದಿರಲಿಲ್ಲ. ಬಾಗಿಲು ತೆರೆದಿತ್ತು. ತೆರೆಝಿನಮ್ಮನ ಗಂಡ ಎದ್ದು ಹೊರಗೆ ಬಂದರು.

ಕೆಲಸವಿಲ್ಲದೆ ಅವಳ ಗಂಡ ಅವಳ ಹತ್ತಿರ ಎಂದೂ ಮಾತನಾಡಿದವರಲ್ಲ. ಈಗ ಯಾಕೆ ಮಾತನಾಡುತ್ತಾರೆ?

ನಿನ್ನೆಯ ಉಪವಾಸ ಚಹಾವನ್ನು ಬೇಡಿತು. ಆದರೆ ಮನೆಯೊಳಗೆ ಹೋಗಿ ಚಹಾ ಮಾಡುವ ಧೈರ್ಯವನ್ನು ಅವಳು ತೋರಿಸಲಿಲ್ಲ.

ಅವಳು ಹಾಲಿಸವಳ ಒಳಿಯ ಬಳಿ ಹೋಗಿ ಒಂದೆರಡು ಸಸಿಗಳನ್ನು ನೆಟ್ಟಳು. ಸಂತೋಷದಿಂದ ಬಂದು ಪಕ್ಕದ ಮನೆಯ ಕೊಟ್ಟಿಗೆಯಿಂದ ಸೆಗಣಿಯನ್ನು ತೆಗೆದುಕೊಂಡು ಬಂದಳು. ಒಳಿಯಲ್ಲಿ ಸೆಗಣಿ, ಗೊಬ್ಬರ ಹಾಕಿದಳು.

ಸೊಸೆ ಅವಳನ್ನು ಚಹಾ ಕುಡಿಯಲು ಕರೆಯುವವರೆಗೆ ಅವಳು ಅಂಗಳದಲ್ಲಿ ಸುತ್ತಾಡಿದಳು. ಸೊಸೆ ಹೊರಗೆ ತಂದಿಟ್ಟ ಪಾತ್ರೆಯ ಮೇಲೆ ಕೈಯಾಡಿಸಿದ ಬಳಿಕ, "ನಾನು ಹೋಗಿ ಬರುತ್ತೇನೆ" ಎಂದು ಸೊಸೆಗೆ ತಿಳಿಸಿ, ದಣಪೆಯ ಸರಗೋಲನ್ನು ಸರಿಸಿದಳು ತೆರೆಝಿನಮ್ಮ.

ಅನುವಾದಕರು: **ಅಚಲಾ ಅಜೀತ ಬಿಳಗಿ**

❖ ❖ ❖❖ ❖

ಡ್ರಾವರ್ ತೆರೆಯಲಾಗುತ್ತಿಲ್ಲ

✍ ಅ.ನಾ. ಮ್ಹಾಂಬರೊ

ಭಾನುವಾರ.

ಮಳೆಗಾಲದ ದಿನ. ಮಳೆ ಹನಿಯುತ್ತಿದೆ.

"ಮೀನು ಬೇಕೇ?" ಹೀಗೊಂದು ಸ್ವರ ಕೇಳಿಬಂತು.

ಮೀನು ಮಾರುವ ಮಾರಿಯೋ, ರೋಜಾಳೋ ಇರಬೇಕು. ಒಳಬಂದಳು.

"ಹೇಗೆ?" ನಾನು ಕೇಳಿದೆ.

"ಮೂರು ರೂಪಾಯಿ" ಅವಳು ಉತ್ತರ ನೀಡಿದಳು.

ಪೌಂಡಿಗೆ? ಅಥವಾ ಕಿಲೋಗೆ? ದೇವರಿಗೇ ಗೊತ್ತು!

"ಕೊಡು" ನಾನೆಂದೆ.

"ಎಷ್ಟು?"

"ಒಳಗೆ ವಿಚಾರಿಸು."

ಅವಳು ನನ್ನ ಹೆಂಡತಿಯಲ್ಲಿ ಕೇಳಿದಳು. ಸ್ವಲ್ಪ ಹೊತ್ತು ಚರ್ಚೆ ನಡೆಯಿತು. ಆನಂತರ ನನ್ನಾಕೆ ಮೀನನ್ನು ಖರೀದಿಸಿ ಅವಳಿಗೆ ಹಣ ನೀಡುವಂತೆ ನನಗೆ ಹೇಳಿದಳು.

ನಾನು ಹೊರಗಿನ ಕೋಣೆಗೆ ಹೋದೆ. ಅಲ್ಲಿ ನನ್ನ ಮೇಜು ಇದೆ. ಕೀ ಗುಚ್ಛವನ್ನು ತೆಗೆದುಕೊಂಡು ಡ್ರಾವರಿಗೆ ಕೀಯನ್ನು ತುರುಕಿಸಿದೆ. ಎಳೆದೆ. ತೆರೆಯಲೊಲ್ಲದು. ಶಕ್ತಿ ಹಾಕಿ ಪ್ರಯತ್ನಿಸಿದೆ. ಒಂದು. ಎರಡು. ಮೂರು. ಡ್ರಾವರ್ ತೆರೆಯಲಾಗುತ್ತಿಲ್ಲ. ನಾನು ಹೆಂಡತಿಯಲ್ಲಿ ಹೇಳಿದೆ, "ಹಣ ನೀನೇ ಕೊಡು."

ಅವಳು ಹಣ ನೀಡಿದ ನಂತರ ಮೀನು ಮಾರಲು ಬಂದ ಮಾರಿಯೋ, ರೋಜಾಳೋ ತನ್ನ ದಾರಿ ಹಿಡಿದು ಹೋದಳು.

ನಮಗೆ ಮೀನು ಸಿಕ್ಕಿತು. ಮೀನು ಮಾರುವವಳಿಗೆ ಹಣ ಸಿಕ್ಕಿತು. ಈಗ ಸಮಸ್ಯೆ ಬಂದದ್ದು ನನ್ನ ಡ್ರಾವರಿನದು.

ಅಷ್ಟರಲ್ಲಿ ಶಂಕು ಪರೊಬ ಬಂದ. ಕೆಲಸದ ನಿಮಿತ್ತ ಬಂದನೋ ಅಥವಾ ಸುಮ್ಮನೆ ಹರಟೆಗಾಗಿ ಬಂದನೋ ತಿಳಿಯದು. ನನ್ನನ್ನು ನೋಡಿ ಕೇಳಿದ,

"ಏನಾಯಿತು?"

"ಡ್ರಾವರ್ ಬಿಗಿದುಕೊಂಡಿದೆ." ನಾನೆಂದೆ.

"ತೆರೆಯಲಾಗುತ್ತಿಲ್ಲವೇ?"

"ಇಲ್ಲ"

"ಅದು ಥಂಡಿಯಿಂದ ಹಾಗಾಗಿರಬಹುದು."

ಆನಂತರ ನಾವು ಸುದ್ದಿಸಮಾಚಾರ ಮಾತನಾಡಿಕೊಂಡೆವು. ಗೋವೆಯ ರಾಜಕಾರಣ, ದೇಶದ ರಾಜಕಾರಣ, ಜಗತ್ತಿನ ರಾಜಕಾರಣ, ಇತ್ಯಾದಿ.

ಮಾತಿನಲ್ಲಿ ಎಲ್ಲವನ್ನೂ ಹೇಳಿ ಮುಗಿಸಿದೆವು. ಕೊನೆಯದಾಗಿ "ರಾಜಕಾರಣದಲ್ಲಿ ಅರ್ಥವಿಲ್ಲ" ಎಂದು ಶಂಕು ಪೊರಬ ಹೇಳಿದ. ನಾನು ಹೌದೆಂದು ಉತ್ತರಿಸಿದೆ.

ಮಾತು ಮುಗಿಯಿತು. ಆದರೆ ಡ್ರಾವರ್ ತೆರೆಯಲಾಗಲಿಲ್ಲ. ಹೊರಟು ನಿಂತಾಗ ಶಂಕೂ ಹೇಳಿದ,

"ಅದು ಕೆಲವೊಮ್ಮೆ ಹಾಗೇ ಆಗುತ್ತೆ."

ನಾನೆಂದೆ, "ಹೌದು"

"ಈ ಚಳಿಯನ್ನು ಸಹಿಸಲು ಸಾಧ್ಯವೇ?"

"ಇಲ್ಲಪ್ಪ, ಆಗಲ್ಲ"

ಶಂಕು ಪರಬ ಮನೆಗೆ ಹೋದ. ಕೆಲಸವೇನೂ ಇರಲಿಲ್ಲ. ಸುಮ್ಮನೆ ಹರಟೆ ಹೊಡೆಯಲು ಬಂದದ್ದು. ನನಗೆ ಬೋರಾಗತೊಡಗಿತು. ಹೊರಗಿನ ಬಾಗಿಲಿನ ಬಳಿ ಬಂದು ನಿಂತೆ. ವಿಸೂದಾದ ಬರುವುದು ಕಂಡಿತು. ಅವನ ಕೈಯಲ್ಲೊಂದು ಚೀಲವಿತ್ತು. ಪೇಟೆಗೆ ಹೊರಟಿದ್ದನೆಂದು ಕಾಣುತ್ತೆ. ಬಂದು ನನಗೆ ವಂದಿಸಿದ.

"ಒಳಗೆ ಬರುವುದಿಲ್ಲವೇ?" ನಾನು ಕೇಳಿದೆ.

"ಬರೋಣ" ಅವನು ಹೇಳಿದ.

ಒಳಗೆ ಬಂದು ಬೀಡಿ ಸೇದುತ್ತಾ ಕುರ್ಚಿಯಲ್ಲಿ ಕುಳಿತುಕೊಂಡ.

"ಪಣಜಿಗೆ ಬರಲಿಕ್ಕೆ ಇಲ್ಲವೇ?"

"ಇಲ್ಲ"

"ಯಾಕೆ?"

"ಡ್ರಾವರ್ ತೆರೆಯಲಾಗುತ್ತಿಲ್ಲ" ನಾನು ಹೇಳಿದೆ.

"ನೋಡೋಣ ಹಾಗಾದರೆ"

ಅವನು ಎದ್ದು ಬಂದು ಡ್ರಾವರ್‌ಗೆ ಕೈ ಹಾಕಿ ಬಲವಾಗಿ ಎಳೆದ. ಅವನಿಗೆ ವಯಸ್ಸು ಅರವತ್ತು. ಆ ವಯಸ್ಸಿನ ಶಕ್ತಿ ಅದು. ಡ್ರಾವರಿಗೆ ಅದಕ್ಕಿಂತ ಕಡಿಮೆ ಶಕ್ತಿ ಸಾಕು.

"ಅಬ್ಬಾ"

“ಏನಾಯಿತು?” ನಾನು ಕೇಳಿದೆ.

“ಏನಿಲ್ಲ”

“ಕೈ ನೋವಾಯಿತೇ?”

“ಚ್ಚ್... ”

“ಡ್ರಾವರ್ ತೆರೆಯಿತೇ?”

“ಇಲ್ಲವೋ”

“ಇರಲಿ ಬಿಡು” ನಾನು ಹೇಳಿದೆ.

“ಅದನ್ನು ತೆರೆಯಬಹುದು”

“ಹಾಗಾದರೆ ಹಾಗೇ ಮಾಡು”

“ಮಗನಿಗೆ ಹೇಳೋ. ಮನೆಯಲ್ಲಿ ಇಲ್ಲವೇನು?”

“ಇಲ್ಲ, ಶಾಲೆಗೆ ಹೋಗಿದ್ದಾನೆ”

ನಾವಿಬ್ಬರು ಮಾತುಕತೆ ಪ್ರಾರಂಭಿಸಿದೆವು. ಗೋವೆಯ ವ್ಯಾಪಾರ, ಭಾರತದ ವ್ಯಾಪಾರ, ಜಗತ್ತಿನ ವ್ಯಾಪಾರ ಇತ್ಯಾದಿ. ಕೊನೆಗೆ ಹೇಳುವುದು ಒಂದೇ, “ವ್ಯಾಪಾರದಲ್ಲಿ ಅರ್ಥವಿಲ್ಲ” ನನಗೆ 'ಸರಿ' ಎನಿಸಿತು. ಯಾಕೆಂದರೆ ನನಗೆ ಅದರ ಬಗ್ಗೆ ಹೆಚ್ಚು ತಿಳಿದಿಲ್ಲ.

ವಿಸೂದಾದ ಪೇಟೆಗೆ ಹೋದ. ನಾನು ಡ್ರಾವರ್ ತೆರೆಯಲು ಮತ್ತೆ ಪ್ರಯತ್ನಿಸಿದೆ. ಆಗಲಿಲ್ಲ. ಬಾಗಿಲ ಬಳಿ ಯಾರದೋ ನೆರಳು ಕಂಡಿತು.

“ಯಾರಲ್ಲಿ?” ನಾನು ಕೇಳಿದೆ.

“ನಾನು” ಉತ್ತರ ಬಂತು.

ಶೆರ್ಕುಲೆ, ದಾದೂ ಪೈಯ ಮಗಳು. ವಯಸ್ಸಿಗೆ ಬಂದವಳು. ನೋಡಲು ಸ್ವಲ್ಪ ಗಂಡಸರ ಹಾಗೆ. ಹಾಸ್ಯ ಸ್ವಭಾವ. ನನ್ನಾಕೆಯ ಗೆಳತಿ.

“ಭಿಕುದಾದ ಏನಾಯಿತು?” ಅವಳು ಕೇಳಿದಳು.

“ಡ್ರಾವರ್..”

“ಮಾಡುತ್ತಿದ್ದೀರಾ?”

“ತೆರೆಯಲಾಗುತ್ತಿಲ್ಲ”

“ತೆರೆಯಲು ಆಗುತ್ತಿಲ್ಲವೇ?”

“ಬಿಗಿದುಕೊಂಡಿದೆ”

“ಇರಲಿ ಬಿಡಿ“

“ಇರಲಿ ಬಿಡಿ!”

"ಜಿಗಿದುಕೊಂಡಿದ್ದರೆ ಪಾಪ ನೀವಾದರೂ ಏನು ಮಾಡುತ್ತೀರಿ? ನಿಮಗೇ ಈಗ ವಯಸ್ಸಾಗಿ ಬಿಟ್ಟಿದೆ." ಎಂದು ಹೇಳಿ ಅವಳು ನಕ್ಕಳು. "ನಿಮ್ಮ ದಿನಗಳು ಕಳೆಯುತ್ತಾ ಬಂದಿವೆ.." ಹೀಗೆ ಮುಂದೆ ಏನೋ ಹೇಳಲು ಹೊರಟಿದ್ದಳು. ಅದಕ್ಕಿಂತ ಮೊದಲೇ, "ಅವಳು ಮನೆಯೊಳಗೆ ಇದ್ದಾಳೆ, ಹೋಗು" ಎಂದು ಹೇಳಿಬಿಟ್ಟೆ.

ಶೆರ್ಲಿ ಒಳಗೆ ಹೋದಳು. ನಾನು ಬಚಾವಾದೆ. ಡ್ರಾವರ್ ಕೂಡಾ ಉಳಿಯಿತು. ಅವರ ಮಾತುಕತೆಗೆ ಕಿವಿಗೊಡಲಿಲ್ಲ.

ಅಷ್ಟರಲ್ಲಿ ಪಾಟು ಬಂದ. ನನ್ನ ಮಗ. ನಾನು ಡ್ರಾವರ್ ಜೊತೆ ಕಿತ್ತಾಡುವುದನ್ನು ನೋಡಿ ವಿಚಾರಿಸಿದ,

"ಅಪ್ಪಾ, ಏನಾಯಿತು?"

"ಅದು ಆಮೇಲೆ ಹೇಳುತ್ತೇನೆ, ಈಗ ಮನೆಯೊಳಗೆ ಹೋಗು"

"ಹೋಗಿ?"

"ಸುತ್ತಿಗೆ ತೆಗೆದುಕೊಂಡು ಬಾ"

"ಯಾಕೆ?"

"ಆಮೇಲೆ ಹೇಳ್ತೀನಿ"

ಪಾಟು ಹೋದ. ನಾನು ಮತ್ತೆ ಎರಡು ಬಾರಿ ಪ್ರಯತ್ನಪಟ್ಟೆ. ಡ್ರಾವರ್ ತೆರೆಯಲೇ ಇಲ್ಲ. ಸಿಗಾರ್ ಹಚ್ಚಿದೆ. ಪಾಟು ಸುತ್ತಿಗೆ ತೆಗೆದುಕೊಂಡು ಬಂದ.

"ಅಪ್ಪಾ, ನಾನು ತೆಗೆಯುತ್ತೇನೆ" ಅವನು ಹೇಳಿದ.

"ತೆಗೆ ನೋಡೋಣ"

"ನೀವು ಡ್ರಾವರನ್ನು ಎಳೆದು ಹಿಡಿಯಿರಿ. ನಾನು ಕೆಳಭಾಗಕ್ಕೆ ಸುತ್ತಿಗೆಯಿಂದ ಹೊಡೆಯುತ್ತೇನೆ"

"ಹೊಡಿ ನೊಡೋಣ"

ಥಡ್..ಥಡ್..ಪೆಟ್ಟು ಬೀಳುತ್ತಾ ಹೋಯಿತು. ಡ್ರಾವರ್ ಮಾತ್ರ ತೆರೆಯಲೇ ಇಲ್ಲ.

"ಪಾಟೂ, ವಿಠೂಗೆ ಬರಲು ಹೇಳಿದ್ದೇನೆ ಎಂದು ತಿಳಿಸಿ ಬಾ"

ಪಾಟು ಹೋದ. ವಿಠೂವನ್ನು ಕರೆದುಕೊಂಡು ಬಂದ. ವಿಠೂ ಡ್ರಾವರ್ ನೋಡಿದ. ಕಿಸೆಯಿಂದ ಬೀಡಿ ತೆಗೆದು ಹೊತ್ತಿಸಿ ಹೊಗೆ ಬಿಡತೊಡಗಿದೆ. ಅವನೊಂದು ನಿರ್ಣಯಕ್ಕೆ ಬಂದ.

"ಕೀಲಿಯನ್ನೇ ಮುರಿದು ಬಿಡೋಣ."

"ಬೇಡ ಮಾರಾಯ!"

“ಯಾಕೆ?”

“ಕೀಲಿ ಸರಿಯಾಗಿದೆ”

“ತಿರುಗುತ್ತಾ?”

“ಹೌದು.”

“ಹಾಗಾದರೆ ಅದು ಬಿಗಿದುಕೊಂಡಿದೆ”

“ಹುಂ”

“ಥಂಡಿಯಿಂದ.”

“ಅದೇ ಮತ್ತೆ”

“ಹಾಗಾದ್ರೆ ಗೊಂದಲ ಯಾಕೆ..?”

“ತೆರೆಯಲಾಗುತ್ತಿಲ್ಲ ಎಂದುಕೊಂಡು”

“ಹಾಳಾಗಿ ಹೋಗಲಿ”

“ಯಾರದ್ದು?”

ಸುಮ್ಮನೆ ಹೇಳಿದೆ

ವಿಠೂ ಸುತ್ತಿಗೆಯನ್ನು ಕೈಗೆತ್ತಿಕೊಂಡ. ಡ್ರಾವರಿಗೆ ಹೊಡೆದ. ಪ್ರಯೋಜನವಾಗಲಿಲ್ಲ. ಅದನ್ನು ನೋಡಿ ಮತ್ತೆ ಹೇಳಿದ,

“ಹಾಳಾಗಿ ಹೋಗಲಿ”

“ಈಗ ಮತ್ಯಾರದ್ದು?” ನಾನು ಕೇಳಿದೆ.

“ಡ್ರಾವರಿನದು”

“ತೆರೆಯುವುದಕ್ಕೆ ಆಗುವುದಿಲ್ಲವೇ?”

“ಮನೆಗೆ ಹೋಗಿ ಶಾಣೂನನ್ನು ಕಳುಹಿಸುತ್ತೇನೆ. ಅವನು ರಿಪೇರಿ ಮಾಡ್ತಾನೆ”

“ಮೇಸ್ತ್ರಿಯಲ್ಲವೇ ಅವನು?”

“ಬಹಳ ಜಾಣನಿದ್ದಾನೆ”

ವಿಠೂ ಹೋದ. ಆಮೇಲೆ ಮನೆಯೊಳಗಿನಿಂದ ಮಾತನಾಡಿಕೊಳ್ಳುತ್ತಾ ಶೆರ್ಕುಲೆ ಹೊರಗೆ ಬಂದಳು.

“ಇಷ್ಟು ಹೊತ್ತಿನವರೆಗೂ ಅದು ತೆರೆಯಲಿಲ್ಲವೇ?” ಅವಳು ಕೇಳಿದಳು.

“ಇಲ್ಲ” ನಾನು ಹೇಳಿದೆ.

“ಏನಾಗಿದೆ ಅದಕ್ಕೆ?”

“ಬಿಗಿದುಕೊಂಡಿದೆ”

"ಥಂಡಿಯಿಂದ?"

"ಹೌದು."

"ಹಾಗಾದರೆ ತಮ್ಮನನ್ನು ಕಳುಹಿಸುತ್ತೇನೆ"

"ಯಾಕೆ?"

"ಡ್ರಾವರ್ ತೆರೆಯಲು"

"ತಮ್ಮ ಬಂದು ಅದಕ್ಕೆ ಏನು ಮಾಡಬಲ್ಲ?"

"ಅವನು ಮೆಕ್ಯಾನಿಕಲ್ ಇಂಜಿನಿಯರ್ ಅಲ್ಲವೇ?"

ತಮ್ಮನನ್ನು ಕಳುಹಿಸುವಂತೆ ಹೇಳಿದೆ.

ನನಗೆ ಆಯಾಸವಾಗಿತ್ತು. ಮತ್ತೆ ಸಿಗಾರ್ ಹೊತ್ತಿಸಿ, ಈಸಿಚೇರಿನಲ್ಲಿ ಕುಳಿತು ಪತ್ರಿಕೆಯನ್ನು ಕೈಗೆತ್ತಿ ಓದತೊಡಗಿದೆ. ಮುಂಬೈಯಲ್ಲಿ ಮಳೆಯಿಂದಾಗಿ ಜನ ಕಷ್ಟಪಡುತ್ತಿದ್ದಾರೆ..ಇಲ್ಲಿ ನಮ್ಮ ಕಷ್ಟವನ್ನು ಗಮನಿಸುವವರು ಯಾರಿದ್ದಾರೆ? ಗೋವೆಯಲ್ಲಿ ಉತ್ತಮ ಬೆಳೆಯ ನಿರೀಕ್ಷೆಯಲ್ಲಿ ರೈತರು..ಶನಿ ಹಿಡಿದಿರುವುದು ನಮಗೆ ಮಾತ್ರವೇನೋ. ಇಲ್ಲಿ ನನ್ನ ಡ್ರಾವರ್ ಕೇಳುತ್ತಿದೆ 'ಯುವಕರೇ ರಾಷ್ಟ್ರಕ್ಕಾಗಿ ಮುಂದೆ ಬನ್ನಿ...' ಏನೂ ಆಗದಿದ್ದರೆ ಈ ಡ್ರಾವರನ್ನಾದರೂ ತೆರೆದು ಕೊಡಿ.

ವಿಠೂವಿನ ಶಾಣು ಮತ್ತು ಶೆರ್ಕುಲೆಯ ತಮ್ಮ ಎಲ್ಲಿಗೆ ಬಂದು ಮುಟ್ಟಿದರೋ ಎಂದು ಯೋಚಿಸುತ್ತಾ ಮತ್ತೆ ಬಾಗಿಲಿಗೆ ಬಂದು ನಿಂತುಕೊಂಡೆ. ಅಷ್ಟರಲ್ಲಿ ಒಂದು ಕಾರು ಬಂದು ನಿಂತಿತು. ಕಾರಿನಿಂದ ಪ್ರೊಫೆಸರ್ ಶಿರವೈಕಾರ ಕೆಳಗಿಳಿದರು.

"ಪಣಜಿಗೆ ಹೋಗಿ ಬಂದಿರೋ?" ನಾನು ವಿಚಾರಿಸಿದೆ.

"ಹೌದು, ಕಾಲೇಜಿನಿಂದ ಬಂದೆ" ಅವರು ಉತ್ತರಿಸಿದರು.

"ಇಷ್ಟು ಬೇಗ ಕಾಲೇಜು ಮುಗಿಯಿತೇ?"

"ಹನ್ನೆರಡೂವರೆಯಾಯಿತಲ್ಲ?"

'ಓಹ್ ಸರಿ', ಎಂದು ಹೇಳುತ್ತಾ ನಾನು ಅವರಿಗೆ ಡ್ರಾವರ್ ವಿಷಯ ತಿಳಿಸಿದೆ. ಅವರ ಪ್ರೊಫೆಸರ್‌ಗಿರಿ ಮಾತುಗಳು ನನಗೆ ಹಿಡಿಸುತ್ತಿದ್ದವು.

"ಅದು ಹೀಗಿದೆ ಭಿಕುದಾದ"

"ಹೇಗಿದೆ?"

"ಡ್ರಾವರ್ ಏನೂ ಮನುಷ್ಯ ಅಲ್ಲ"

"ಸರಿ"

"ಅದೊಂದು ಮರದ ವಸ್ತು. ಫಿಸಿಕಲ್ ಮ್ಯಾಟರ್"

"ಓಹ್, ಹೌದು"

“ಅದಕ್ಕೆ ಸೊಲಿಡ್ ಅನ್ನುತ್ತಾರೆ”

“ಹುಂ.”

“ವಾತಾವರಣದಲ್ಲಿ ತಂಪು ಆವರಿಸಿದಾಗ ಈ ಸೊಲಿಡ್‌ಗಳು ಉಬ್ಬುತ್ತವೆ”

“ಹೋಗಲಿ ಬಿಡಿ ಆ ವಿಚಾರ”

“ಹಾಗೆಂದ ಮಾತ್ರಕ್ಕೆ ಡ್ರಾವರ್ ತೆರೆಯದು. ಅದು ಅದರ ಪ್ರಕೃತಿ”

“ಹಾಗಾದರೆ ಅದನ್ನು ತೆರೆಯುವುದು ಹೇಗೆ?”

“ನಾವು ಬೇರೆ ರೀತಿ ಯೋಚಿಸೋಣ”

“ಸರಿ”

“ಡ್ರಾವರ್ ಮುಚ್ಚುವುದಕ್ಕಾಗಿಯೇ ಇರುತ್ತದೆ”

“ಸರಿ”

“ಇಲ್ಲದಿದ್ದರೆ ತೆರೆಯುವುದಾದರೂ ಹೇಗೆ?”

“ಅದೂ ಸರಿ”

“ಡ್ರಾವರಿನ ಕೆಲಸವೇನು?”

“ಏನಾದರೂ ವಸ್ತುಗಳನ್ನು ಇಡಲು ಅದನ್ನು ಬಳಸುತ್ತಾರೆ”

“ಅದರ ಧರ್ಮವೇನು?”

“ಅದಕ್ಕೆ ಧರ್ಮವಿದೆಯೇ?”

“ಅಂದರೆ ಪ್ರಕೃತಿ..”

“ನೀವೇ ಹೇಳಿ”

“ತೆರೆಯುವುದು ಮತ್ತು ಮುಚ್ಚುವುದು”

“ಮುಗಿಯಿತೋ ನಿಮ್ಮ ಮಾತು?” ನಾನು ಕೇಳಿದೆ.

“ಬೇರೊಂದು ರೀತಿಯಲ್ಲಿ ಯೋಚಿಸುವುದಾದರೆ..”

“ಡ್ರಾವರ್ ತೆರೆಯಲಾಗುವುದೇ?”

“ಡ್ರಾವರ್ ಬಿಗಿದುಕೊಳ್ಳುವುದರಲ್ಲಿಯೂ ಒಂದು ಮಜಾ ಇದೆ. ಇಂಗ್ಲಿಷ್ ಲೇಖಕ ಚೆಸ್ಟರ್ಟನ್ ಹೇಳುತ್ತಾನೆ...”

“ಹುಂ, ಹೇಳಿ”

“ಡ್ರಾವರ್ ಬಿಗಿದುಕೊಂಡಿದ್ದರೆ ಬೊಬ್ಬೆ ಹಾಕಿ ಅದನ್ನು ತೆರೆಯಬೇಕು”

“ಮತ್ತೇನಾಗುತ್ತೆ?”

"ಅದು ತೆರೆಯುವಾಗ ಯುದ್ಧದಲ್ಲಿ ಗೆಲುವು ಸಾಧಿಸಿದ ಭಾವ ನಮ್ಮದಾಗುತ್ತದೆ"

"ನೀವು ಸ್ವಲ್ಪ ತೆರೆದುಕೊಡುವಿರೇನು?"

"ಏನನ್ನು?"

"ನನ್ನ ಡ್ರಾವರ್."

"ನಾನೇ ಯಾಕೆ?"

"ನಿಮಗೆ ಯುದ್ಧದಲ್ಲಿ ಜಯಿಸಿದ ಸಂತೋಷ.."

"ಭಿಕುದಾದ ನಾನೊಬ್ಬ ಪ್ರಾಧ್ಯಾಪಕ"

"ಅದು ನನಗೂ ಗೊತ್ತು."

"ನನ್ನ ಕೆಲಸ ಮಕ್ಕಳಿಗೆ ಪಾಠ ಹೇಳುವುದು. ಡ್ರಾವರ್ ತೆರೆಯುವುದಲ್ಲ."

ಪ್ರೊಫೆಸರ್ ಶಿರವೈಕಾರ್ ಹೋದರು. ವಿಠೂವಿನ ಶಾಣು ಬಂದ. ಮೇಸ್ತ್ರಿಯಲ್ಲವೇ ಅವನು? ನೇರವಾಗಿ ಮೇಜಿನ ಡ್ರಾವರ್ ಹತ್ತಿರ ಹೋದ. ಅದರ ತಪಾಸಣೆ ನಡೆಸಿದ. ಅದರ ನಾಡಿ ಹಿಡಿದ. ಅದಕ್ಕೆ ಯಾವ ರೋಗ ಬಡಿದಿದೆ ಎನ್ನುವುದನ್ನು ಹೇಳುವ ಬದಲು ನನ್ನ ಎದುರು ನಿಂತು ಭಾಷಣ ಬಿಗಿದ. ಸಂಕ್ಷಿಪ್ತವಾಗಿ ಅದು ಹೀಗಿದೆ: 'ಡ್ರಾವರ್ ತ್ರಿಕೋನವಾಗಿ ಇರುತ್ತದೆ. ಚೌಕೋನವೂ ಇರುತ್ತದೆ. ಷಟ್‌ಕೋನದವುಗಳು ಕೂಡಾ ಇವೆ. ಈಗ ಅಮೇರಿಕಾ ಮತ್ತು ರಶ್ಯಾಗಳಲ್ಲಿ ಹೊಸರೀತಿಯ ಮೇಜುಗಳು ತಯಾರಾಗುತ್ತಿವೆ. ಅವುಗಳಿಗೆ ಅಪೋಲೊ ಮತ್ತು ಸ್ಪುಟ್ನಿಕ್ ಎಂದು ಹೆಸರು. ಇವುಗಳ ಡ್ರಾವರ್‌ಗಳು ಅಷ್ಟಕೋನದ್ದಾಗಿರುತ್ತವೆ. ನನ್ನ ಡ್ರಾವರ್ ಚೌಕೋನದ್ದಾಗಿರುವುದರಿಂದ ಅದು ಉತ್ತಮವಲ್ಲ. ಆದ್ದರಿಂದ ನಾನು ಅದಕ್ಕೆ ಎರಡು ಕೋನಗಳನ್ನು ಹೆಚ್ಚಿಸಬೇಕು. ಆಗ ಅದು ಷಟ್‌ಕೋನದ್ದಾಗುತ್ತದೆ. ನಂತರ ಮತ್ತೂ ಎರಡು ಕೋನಗಳನ್ನು ಹೆಚ್ಚಿಸಬೇಕು. ಆಗ ಅದು ಅಷ್ಟಕೋನದ್ದಾಗುತ್ತದೆ ಮತ್ತು ಆಮೇಲೆ ಅದು ತೆರೆದುಕೊಳ್ಳುತ್ತದೆ. ಇನ್ನೊಂದು ವಿಷಯವೇನೆಂದರೆ ಮರದಲ್ಲಿ ಹತ್ತು ಹದಿನೆಂಟು ಜಾತಿಯವು ಇರುತ್ತವೆ. ಆದರೆ ಗೋವೆಯಲ್ಲಿ ಸಿಗುವುದು ಹನ್ನೊಂದು ಬಗೆಯ ಮರಗಳು ಮಾತ್ರ. ನನ್ನ ಮೇಜು ಸಾಗುವಾನಿಯದು. ಸಾಗುವಾನಿ ಬಾಳಿಕೆ ಬರುತ್ತದೆ. ಆದರೆ ಅದರ ಡ್ರಾವರ್ ಮಾತ್ರ ಅಷ್ಟೇ ಕೆಟ್ಟದು. ಯಾಕೆಂದು ಹೇಳಿ? ಅದು ತೆರೆಯುವುದಿಲ್ಲ. ಅದರಲ್ಲಿಯೂ ಮಳೆ ಮತ್ತು ಚಳಿಯಲ್ಲಿ. ಒಂದು ವೇಳೆ ಮಳೆಗಾಲದಲ್ಲಿ ಥಂಡಿ ಜಾಸ್ತಿ ಇಲ್ಲದಿದ್ದರೆ ಅದು ತೆರೆಯಬಹುದೇನೋ.'

ಶಾಣೂವಿನ ಈ ಭಾಷಣ ಕೇಳಿ ನನ್ನ ತಲೆ ಸಿಡಿಯತೊಡಗಿತು. ಆದರೆ ಅವನಿಗೆ ನಾನು ಇದನ್ನು ಹೇಳಿದೆನೆಂದರೆ ಅವನು ನನ್ನ ತಲೆಗೂ ಕೋನ ಹಚ್ಚು ಎಂದು ಹೇಳಬಹುದು ಎಂದುಕೊಂಡು ನನಗೆ ಭಯವಾಯಿತು.

ಶಾಣು ಹೋಗಲು ಎದ್ದುನಿಂತ. ನಾನು ಅವನಿಗೆ ಕುಳಿತುಕೊಳ್ಳುವಂತೆ ತಿಳಿಸಿದೆ. ಮನೆಯಾಕೆಗೆ ಚಹ ಮಾಡಲು ಹೇಳಿ ಅವನಿಗೆ ನೀಡಿದೆ.

ಚಹಾ ಕುಡಿಯುತ್ತಿರುವಾಗ ನಾನು ಅವನಲ್ಲಿ ಕೇಳಿದೆ, ನಿನ್ನಿಂದ ಈ ಡ್ರಾವರ್ ತೆರೆಯುವುದಕ್ಕೆ ಆಗುವುದಿಲ್ಲವೇನು?

"ಯಾಕೆ ಆಗುವುದಿಲ್ಲ?"

"ಮಾಡ್ತೀಯಾ?"

"ಅದಕ್ಕೆ ಶ್ರಮ ಇದೆ. ಒಂದು ದಿನವಾದರೂ ಬೇಕು"

"ಯಾವಾಗ ಬರ್ತಿಯಾ?"

"ಸೋಮವಾರದ ದಿನ"

"ಖಂಡಿತವಾಗಿಯೂ?"

"ನೋಡೋಣ, ಸಾಧ್ಯವಾದರೆ"

ಶಾಣು ಹೋದ. ನನ್ನ ಚಹ ಪುಕ್ಕಟೆ ಹೋಯಿತು. ಮಾಡುವುದೇನು?

ಅಷ್ಟರಲ್ಲಿ ನಡುವಯಸ್ಸಿನ ಗಂಡಸೊಬ್ಬ ಮನೆಯೊಳಗೆ ಬಂದ.

"ಭಿಕುದಾದ ನೀವೇ ಏನು?" ಅವನು ಕೇಳಿದ.

"ಹುಂ. ನಿನ್ನನ್ನು ಯಾರಾದರೂ ಕಳುಹಿಸಿದರೇ?"

"ಹೌದು"

"ಯಾರು ಕಳುಹಿಸಿದ್ದು?"

"ಶೆರ್ಕುಲೆ"

"ಓ, ಹಾಗಿದ್ದರೆ ನೀವು ಅವಳ ತಮ್ಮನಿರಬೇಕಲ್ಲವೇ. ನೀವು ಈಗಿನ ಹುಡುಗರು. ನಾವು ನಿಮ್ಮನ್ನು ಎಲ್ಲಿ ನೋಡಿರುತ್ತೇವೆ ಹೇಳು. ನೀನು ಇಂಜಿನಿಯರಂತೆ. ಕೇಳಿ ಸಂತೋಷವಾಯಿತು. ಒಳಗೆ ಬಾ. ನಿನಗೆ ಡ್ರಾವರ್ ತೋರಿಸಬೇಕಾಗಿದೆ. ನೀನೇ ಮಾಡಬಹುದೆಂದು ಕಾಣುತ್ತದೆ. ದೇವರೇ ನಿನ್ನನ್ನು ಕಳುಹಿಸಿದ್ದಾನೆ."

"ನಾನು ಶೆರ್ಕುಲೆಯ ತಮ್ಮನಲ್ಲ. ನಾನು ಅವರ ನೆರಮನೆಯವನು. ಶೆರ್ಕುಲೆಯ ಸಂದೇಶವಿದೆ ನಿಮಗೆ"

"ಏನದು?" ನಾನು ಸಿಟ್ಟಿನಿಂದ ಕೇಳಿದೆ.

"ಅವರ ತಮ್ಮ ಮುಂಬೈಗೆ ಹೋಗಿದ್ದಾರಂತೆ. ಅದನ್ನು ಅವರು ನೆನಪಿಸಿದ್ದಾರೆ"

"ಏನು ಮುರಿದ ಮುಂಬೈ ಸರಿಮಾಡಲಿಕ್ಕೇನು? ನಾನು ಕೇಳಿದೆ."

"ಹಾಗೆಂದರೆ!" ಅವನು ಆಶ್ಚರ್ಯಚಕಿತನಾಗಿ ಕೇಳಿದ.

"ಅವನು ಇಂಜಿನಿಯರ್ ಅಲ್ವೇ!" ನನ್ನ ಈ ಉತ್ತರ ಕೇಳಿದ ಆ ಮನುಷ್ಯ ತಕ್ಷಣ ಕಾಲುಕೀಳುವ ಪ್ರಯತ್ನ ನಡೆಸಿದ. ನಾನು ಹೇಳಿದೆ,

“ಶೆರ್ಕುಲೆಗೂ ನನ್ನ ಒಂದು ಸಂದೇಶ ಕೊಡು”

“ಏನದು?” ಅವನು ಸ್ವಲ್ಪ ಹಿಂಜರಿಕೆಯಿಂದಲೇ ಕೇಳಿದ.

“ಆ ತಮ್ಮನಿಗೆ ಮುಂಬೈಯಿಂದ ಹಾಗೆಯೇ ಮುಂದೆ ಯುರೋಪಿಗೂ ಹೋಗಲು ಹೇಳಿದ್ದೇನೆ ಎಂದು.”

ಶೆರ್ಕುಲೆಯೆ ನೆರೆಮನೆಯವ ಹೋದ. ನಾನು ಸಿಗರೇಟ್ ಹಚ್ಚಿದೆ. ಅತ್ತ ಇತ್ತ ಕಾಲಾಡಿಸಿದೆ. ಬೇಸರ ಬಂತು.

“ಅದನ್ನು ತೆರೆಯಲಾಗದಿದ್ದರೆ ಇರಲಿ ಬಿಡಿ. ಪರವಾಗಿಲ್ಲ” ನನ್ನಾಕೆ ಹೊರಬಂದು ಕರುಣೆಯಿಂದ ಹೇಳಿದಳು.

“ಇನ್ನೇನಾದರರೂ ಹೇಳಲಿಕ್ಕೆ ಇದೆಯಾ?” ನಾನು ಅವಳ ಮೇಲೆ ರೇಗಿದೆ.

“ಅದು ಒಬ್ಬೊಬ್ಬರ ಕರ್ಮ”

“ಏನು?”

“ಅದೇ ಡ್ರಾವರ್ ಬಿಗಿದುಕೊಂಡದ್ದು”

“ಹಾಗೆಂದರೆ?”

“ಅಂದರೆ, ಇದಕ್ಕೋಸ್ಕರ ಮನಸ್ಸಿಗೆ ಏಕೆ ಇಷ್ಟೊಂದು ಬೇಜಾರು ಮಾಡಿಕೊಳ್ಳಬೇಕು?”

“ನೀನು ಸ್ವಲ್ಪ ಒಳಗೆ ಹೋಗು ನೋಡುವಾ. ನಿನ್ನ ಕಿರಿಕಿರಿಯೂ ಬೇಡ ನನಗೆ. ನಾನು ನನ್ನದೇ ಆಲೋಚನೆಯಲ್ಲಿ ಮುಳುಗಿದ್ದೇನೆ”

“ಏನದು?”

“ಅದೇ ಡ್ರಾವರನ್ನು ತೆರೆಯುವುದು ಹೇಗೆ?“

“ನಾನು ಹೇಳಲೇ?” ಅದೇ ವೇಳೆ ಶಾಲೆಯಿಂದ ಮನೆಗೆ ಹಿಂತಿರುಗಿದ ಶಾಲಿ ನನ್ನಲ್ಲಿ ಕೇಳಿದಳು. ಆಕೆಗೆ ಏಳು ವರ್ಷ. ಇಂಗ್ಲಿಷ್ ಮಾಧ್ಯಮದಲ್ಲಿ ಎರಡನೆಯ ತರಗತಿ ಓದುತ್ತಿದ್ದಾಳೆ.

“ಹೇಳು ನೋಡೋಣ” ನಾನೆಂದೆ.

“ಇದಕ್ಕೆ ಇಂಗ್ಲಿಷಿನಲ್ಲಿ ಏನನ್ನುತ್ತಾರೆ ಗೊತ್ತೇ? ಡ್ರಾವರ್..

ಡಿ..ಆರ್..ಎ..ಡಬ್ಲ್ಯೂ..”

ಅನುವಾದಕರು: **ವಿಲ್ಸ್ಯಾ, ಬಂಟ್ವಾಳ**

❖ ❖ ❖❖ ❖

'ಇಲ್ಲ'ವೆಂದು ಹೇಳಲಾಗಲೇ ಇಲ್ಲ

✍ **ಚಂದ್ರಕಾಂತ ಕೇಣಿ**

ಇಲ್ಲ.. ಇಲ್ಲ.. ಇಲ್ಲ..! ಏನೂ ಇಲ್ಲ. ನನಗೆ ಜೀವನದಲ್ಲಿ 'ಇಲ್ಲ' ವೆಂದು ಹೇಳಲಾಗುವುದೇ ಇಲ್ಲ. ಪ್ರತಿಬಾರಿಯೂ ಹೀಗೇ ಆಗುತ್ತದೆ. ಅದರ ಪರಿಣಾಮವನ್ನು ಅನುಭವಿಸುತ್ತೇನೆ. ಇದೆಲ್ಲ ಘಟಿಸಿದ ನಂತರ ನಾನು ನನ್ನ ಕೋಣೆಗೆ ಬರುತ್ತೇನೆ. ಶಾಲೆಯ ಮಕ್ಕಳು ಮಗ್ಗಿ ಬಾಯಿಪಾಠ ಮಾಡಿದಂತೆ ನನ್ನ ತುಟಿಗಳ ಮೇಲೆ ಉತ್ತರ ಚಲಿಸುತ್ತಿದೆಯಾದರೂ, ಬೇಕಾದಾಗ 'ಇಲ್ಲ' ಎನ್ನುವ ಉತ್ತರ ಮಾತ್ರ ತುಟಿಯ ಮೇಲೆ ಬರುವುದಿಲ್ಲ. ಎಲ್ಲವೂ ಗೊಂದಲಮಯವಾಗಿ ಬಿಡುತ್ತದೆ. ಈ ಕಥೆಯನ್ನು ಬರೆಯಲು ಕುಳಿತ ಕಾರಣ ಇವತ್ತು ನಡೆದ ಘಟನೆಯಲ್ಲಿ 'ಇಲ್ಲ' ವೆಂದು ಹೇಳಲಾರದಾದೆನಲ್ಲಾ ಎಂದುಕೊಂಡು.

ಬೆಳಿಗ್ಗೆ ಸೂರ್ಯ ಮೇಲೆ ಬಂದರೂ ಹಾಸಿಗೆಯಲ್ಲಿ ಉರುಳಾಡಲು ಆನಂದವೆನಿಸುತ್ತದೆ. ಅದರಲ್ಲಿಯೂ ಭಾನುವಾರ ಎಂದರೆ ಯಾವ ಕಿರಿಕಿರಿಯೂ ಇರುವುದಿಲ್ಲ. ಆದರೆ ಫಕ್ಕನೆ ನೆನಪಾಯಿತು, ಇವತ್ತು ಬೆಳಿಗ್ಗೆ ಒಂಭತ್ತು ಗಂಟೆಗೆ ಭೇಟಿಯಾಗುತ್ತೇನೆ ಎಂದು ಮಾಧವಿಗೆ ಮಾತು ಕೊಟ್ಟಿದ್ದೆ. ಒಂಭತ್ತು ಗಂಟೆಗೆ ಭೇಟಿಯಾಗುವುದಕ್ಕಿಂತ ಸಾಯಂಕಾಲ ಭೇಟಿ ಮಾಡುವುದು ಒಳ್ಳೆಯದಿತ್ತು ಎಂದು ನನಗನ್ನಿಸಿತು. ತಿರುಗಾಡಲು ಸಂಜೆಯ ಹೊತ್ತೇ ಒಳ್ಳೆಯದು. ಆದರೆ ಅವಳು ಒಂಭತ್ತು ಗಂಟೆಗೆ ಭೇಟಿಯಾಗುವುದು ಎಂದಿದ್ದಳು. ನಾನು ಅಭ್ಯಾಸಬಲದಿಂದ "ಆಯಿತು" ಎಂದಿದ್ದೆ. ಕೇವಲ 'ಇಲ್ಲ' ಎಂದು ಹೇಳಲಾಗದ ಕಾರಣದಿಂದ.

ನಿನ್ನೆ ಆಫೀಸಿನಿಂದ ಹಿಂತಿರುಗುವಾಗ ಮಧವಿ ಸಿಕ್ಕಿದ್ದಳು. ತುಂಬಾ ವರ್ಷದ ನಂತರ ಭೇಟಿಯಾದ ಅವಳು ಅವಸರದಲ್ಲಿದ್ದಳು. ನಾನು ಯಾವುದೋ ಧ್ಯಾನದಲ್ಲಿದ್ದೆ. ನಾವು ಕೇವಲ ಎರಡು ಮಾತುಗಳಲ್ಲಿ ಕುಶಲೋಪರಿ ನಡೆಸಿದೆವು. ಮರುದಿನ ಬೆಳಿಗ್ಗೆ ಭೇಟಿಯಾಗುವುದಾಗಿ ನಿಶ್ಚಯಿಸಿ ಬೇರೆಯಾದೆವು.

ರೇಡಿಯೋದಲ್ಲಿ ಎಂಟು ಗಂಟೆಯ ಇಂಗ್ಲಿಷ್ ವಾರ್ತೆಗಳು ಪ್ರಸಾರವಾಗುತ್ತಿದ್ದವು. ನಾನು ಎದ್ದು ಬ್ರಶನ್ನು ಕೈಯಲ್ಲಿ ಹಿಡಿದು ವಾರ್ತೆ ಕೇಳುತ್ತಾ ಹಲ್ಲು ಉಜ್ಜತೊಡಗಿದೆ. ಅಷ್ಟರಲ್ಲಿ ಅಮ್ಮ ಬಂದು, "ಸಂಜೆ ಮಕ್ಕಳನ್ನು ತಿರುಗಾಡಲು ಕರೆದೊಯ್ಯುವಿ ತಾನೇ?" ಎಂದು ಹೇಳಿದಳು.

ನಾನು ಅವಳತ್ತ ನೋಡುತ್ತಾ ನಿಂತುಕೊಂಡೆ. ಇಲ್ಲ ವೆಂಬ ಉತ್ತರ ಪ್ರಯತ್ನ ಪಟ್ಟರೂ ತುಟಿಗಳಲ್ಲಿ ಬರಲೇ ಇಲ್ಲ. ನಾನು ಎದ್ದು ನಲ್ಲಿನೀರಿನಲ್ಲಿ ಮುಖವನ್ನು ತೊಳೆಯತೊಡಗಿದೆ. ಗಡ್ಡ ಕೆರೆದು ಚಹ ಕುಡಿಯುತ್ತಿರುವಾಗ ಹೆಂಡತಿ ಬಂದಳು.

"ಇವತ್ತು ಊಟಕ್ಕೆ ನನ್ನ ತಂಗಿ ಬರ್ತಾಳೆ. ಒಳ್ಳೆಯ ಮೀನು ತನ್ನಿ."

'ನೀನೇ ತೆಗೆದುಕೊಂಡು ಬಾ.. ಇಲ್ಲವಾದರೆ ತರಿಸು' ಎಂಬ ಉತ್ತರ ತುಟಿಯವರೆಗೂ ಬಂದಿತ್ತು. ಆದರೆ ಅದು ಹೊರಗೆ ಬರಲೇ ಇಲ್ಲ. ನಾನು ಮೂಕನಂತೆ ಚಹ ಕುಡಿದೆ. ಯಾರೋ ಹೊರಗೆ ಬಾಗಿಲು ತಟ್ಟುತ್ತಿರುವ ಸದ್ದಾಯಿತು. ಹೋಗಿ ನೋಡಿದರೆ ಕೈಯಲ್ಲಿ ಫೈಲೊಂದನ್ನು ಹಿಡಿದು ಆಫೀಸಿನ ಜವಾನ ಬಂದಿದ್ದಾನೆ.

"ಮೆನೇಜರ್ ಅರ್ಜಂಟಾಗಿ ಕರೆದಿದ್ದಾರೆ" ಎಂದು ಹೇಳಿದ.

ನಾನು ಅವನ ಮುಖವನ್ನೇ ನೋಡುತ್ತಾ ನಿಂತುಕೊಂಡೆ. ಮೆನೇಜರ್ ಕೆಲಸ ಗೊತ್ತಾಯಿತು. ಅಡಿಟರ್ ಬರುವವರಿದ್ದಾರೆ. ಅದರ ಮೊದಲೇ ಎಲ್ಲಾ ಲೆಕ್ಕಪತ್ರಗಳು ಸರಿಯಾಗಿರಬೇಕಿತ್ತು. ಆದರೆ ನಾನು ಹೇಗೆ ಹೋಗಲಿ? ಮಾಧವಿಗೆ ಬರುತ್ತೇನೆ ಎಂದು ಹೇಳಿದ್ದೇನಲ್ಲ? ನಾಳೆಯಾದರೆ ನಡುರಾತ್ರಿಯವರೆಗೆ ಕೆಲಸ ಮಾಡಬಲ್ಲೆ. ನಾನು ಬರುವುದಿಲ್ಲ ಎಂಬ ಉತ್ತರ ತುಟಿಯವರೆಗೆ ಬಂತು.

"ಬರುತ್ತೀರೆಂದು ಹೇಳುತ್ತೇನೆ" ಜವಾನ ಹೇಳಿದ. ನಾನು ತಲೆ ಅಲ್ಲಾಡಿಸಿದೆ. ಅವನು ಹೊರಟುಹೋದ.

ಈಗ ಮೆನೇಜರ್ ಬಳಿ ಹೋದರೆ ಮಾಧವಿಯನ್ನು ಹೇಗೆ ಭೇಟಿಯಾಗಲಿ? ನಾನು ಮನಸ್ಸಿನಲ್ಲಿಯೇ ಬಡಬಡಿಸಿದೆ.

ಬೂಟು ಹಾಕಿಕೊಳ್ಳುವಾಗ 'ಮೆನೇಜರಲ್ಲಿ ಹೋಗುವ ಮೊದಲು ಮಾಧವಿಯನ್ನು ಭೇಟಿಯಾಗಿ ಸಾಯಂಕಾಲ ಸಮಯವನ್ನು ನಿಶ್ಚಯಿಸುವುದೇ ಒಳ್ಳೆಯದು' ಎಂದು ಮನಸ್ಸಿಗೆ ಹೊಳೆಯಿತು. ಇವತ್ತು ಸಂಜೆ.. ಎಲ್ಲಿ? ಕೊಲ್ವಾ ಇಲ್ಲದಿದ್ದರೆ ಬಾಣಾವಲೆಯಲ್ಲಿ ಸಮಯಕ್ಕೆ ಸರಿಯಾಗಿ ಹೋಗಿ ಕುಳಿತುಕೊಳ್ಳುವುದು.

"ಮೀನು ಮರೆಯಬೇಡ" ಯಜಮಾನಿ ನೆನಪಿಸಿದಳು.

"ಆದರೆ..."

"ಮೆನೇಜರಲ್ಲಿ ಹೋಗಿ ಬರುವಾಗ ತೆಗೆದುಕೊಂಡು ಬಾ. ಒಳ್ಳೆಯ ತರಕಾರಿ ಇದ್ದರೆ ಅದನ್ನೂ ತಾ. ಎರಡು ನಿಂಬೆಹಣ್ಣು ಮತ್ತು ಅರ್ಧ ಕಿಲೋ ಟೊಮೆಟೊ. ಹಸಿ ಮೆಣಸಿನ ಕಾಯಿ ಮನೆಯಲ್ಲಿ ಇದೆ. ಹಸಿ ಶುಂಠಿ ಒಂದು ತುಂಡು ಮತ್ತು ಕೊತ್ತಂಬರಿ ಸೊಪ್ಪಿನ ಒಂದು ಕಟ್ಟು ತಾ."

ನಾನು ಹೊರಗೆ ಬಂದ ನಂತರವೂ ಅವಳ ಮಾತು ಮುಂದುವರಿದಿತ್ತು. ನಿಜವೇನೆಂದರೆ, ಮೀನು ಮತ್ತು ತರಕಾರಿ ತರಲು ಎಷ್ಟು ಹೊತ್ತು ಬೇಕು? ಹಿಂದೆ ಬರುವಾಗ ದಾರಿಯಲ್ಲಿಯೇ ಅದನ್ನು ತೆಗೆದುಕೊಳ್ಳಬಹುದು. ಮೆನೇಜರನದೇ ಅಡ್ಡಿ. ಎಷ್ಟು ಹೊತ್ತು ಕುಳಿತುಕೊಳ್ಳಿಸುತ್ತಾನೋ, ಆ ದೇವರಿಗೇ ಗೊತ್ತು. ಮತ್ತೆ ಮಾಧವಿ..ಅವಳು ಏನು ಹೇಳಬಹುದು? 'ನನ್ನನ್ನು ಕಡೆಗಣಿಸುತ್ತಿ' ಎಂದು ತಿಳಿದುಕೊಂಡರೆ? ಇಲ್ಲ.. ಮಾಧವಿಗೆ ಬುದ್ಧಿ ಇದೆ. ಸಂಜೆ ಏಕಾಂತದಲ್ಲಿ ಇರುವಾಗ ಅವಳೊಡನೆ ಎಲ್ಲವನ್ನು ಹೇಳಿಬಿಡುತ್ತೇನೆ.

ನಾಲ್ಕು ಹೆಜ್ಜೆ ಮುಂದಿಡುವಷ್ಟರಲ್ಲಿ ಡಾಕ್ಟರ್ ಸದಾಬಾಬ ಎದುರಾದರು. ನಾನು ಹಣೆಯಲ್ಲಿ ನೆರಿಗೆ ಮೂಡಿಸುತ್ತಾ ಮುಂದುವರಿದೆ. ಈಗ ಇವರು ಕೈಹಿಡಿದುಕೊಂಡು ರಾಜಕೀಯ ಸುದ್ದಿ ಶುರು ಮಾಡಿದರೆಂದರೆ ನಾನು ಸುಮ್ಮನೆ ಕೇಳುತ್ತಾ ನಿಲ್ಲಬೇಕಾಗುತ್ತದೆ.

"ಇವತ್ತು ಅವಸರದಲ್ಲಿ ಇದ್ದ ಹಾಗಿದೆ?" ಡಾಕ್ಟರ್ ಕೇಳಿದರು. ನಿವೃತ್ತಿ ಹೊಂದಿದ ಕಾರಣ ಅವರು ಖಾಲಿಯೇ ಇರುತ್ತಾರೆ.

"ಹೌದು ನನಗೆ ಒಂಭತ್ತರೊಳಗೆ ಮುಟ್ಟಬೇಕು. ಹೊತ್ತಾಯಿತು" ಎಂದು ಹೇಳಿ ಮುಂದೆ ಹೆಜ್ಜೆ ಇಟ್ಟೆ.

"ಅಬ್ಬಾ, ಅದೇನು ಅಂತಹ ಕೆಲಸ?" ಡಾಕ್ಟರ್ ಮತ್ತೊಮ್ಮೆ ಕೇಳಿದರು. ನಾನು ಸುಮ್ಮನೆ ನಕ್ಕೆ. ಆಗ ಅವರು ಹೇಳಿದರು, "ನೀನು ಹೋಗಿಬಿಡು, ಆದರೆ ಒಂದು ಕೆಲಸ ಮಾಡು...ಹೋಗುತ್ತಿರಬೇಕಾದರೆ ದಾರಿಯಲ್ಲಿ ಪೋಸ್ಟಾಫೀಸಿಗೆ ಹೋಗಿ ಈ ಕಾಗದಕ್ಕೆ ಸ್ಟಾಂಪ್ ಹಚ್ಚಿ ಡಬ್ಬಿಗೆ ಹಾಕಿಬಿಡು"

ಸಮಯವನ್ನು ಹಾಳು ಮಾಡುವಂತಿರಲಿಲ್ಲ. ಡಾಕ್ಟರ್ ನೀಡಿದ ಕಾಗದ ಮತ್ತು ಹದಿನೈದು ಪೈಸೆಯನ್ನು ತೆಗೆದುಕೊಂಡು ನಾನು ಮುಂದುವರಿದೆ. ಇದು ಇನ್ನೊಂದು ಕಿರಿಕಿರಿ. ಸ್ಟಾಂಪು ಕೊಳ್ಳಲು ಸಮಯ ಬೇರೆ ಹಾಳು. ಆದರೆ ಡಾಕ್ಟರ್‌ಗೆ 'ಇಲ್ಲ' ವೆನ್ನಲು ಸಾಧ್ಯವೇ?

ಪತ್ರವನ್ನು ಪೋಸ್ಟಿಗೆ ಹಾಕಿದಾಗ ಗಂಟೆ ಒಂಭತ್ತಾಯಿತು. ಕಚೇರಿ ತಲುಪಲು ಇನ್ನೂ ಐದು ನಿಮಿಷ ಬೇಕು. ರಸ್ತೆಯಲ್ಲಿ ಜನರು ನಡೆದಾಡುತ್ತಿದ್ದಾರೆ. ಕಾರುಗಳು.. ಸೈಕಲ್ಲುಗಳು...ಮೋಟಾರ್ ಸೈಕಲ್ಲುಗಳು..

ಮಾಧವಿ ಮತ್ತು ನನ್ನ ಪರಿಚಯ ಬಹಳ ಹಿಂದಿನದು. ನಾವು ಚಿಕ್ಕಂದಿನಿಂದ ಒಟ್ಟಿಗೆ ಬೆಳೆದು ಆಡಿಕೊಂಡಿದ್ದವರು. ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದವರು. ಆದರೆ ತಂದೆಗೆ 'ಇಲ್ಲ' ವೆನ್ನಲಾಗದೆ ನಾನು ಬೇರೆಯವಳನ್ನು ಮದುವೆಯಾದೆ. ಆದರೆ ಮಾಧವಿ ಮಾತ್ರ ಕನ್ಯೆಯಾಗಿ ಉಳಿದಳು. ಇನ್ನೇನು ಗುರಿ ಮುಟ್ಟುವನಿದ್ದೆ. ಅಷ್ಟರಲ್ಲಿ ಕಾರೊಂದು ನನ್ನ ಹತ್ತಿರವೇ ಬಂದು ನಿಂತಿತು. ನೋಡಿದರೆ ಮೆನೇಜರ್! 'ಐದು ನಿಮಿಷದಲ್ಲಿ ಬರುತ್ತೇನೆ' ಎಂದು ಹೇಳಬೇಕೆನಿಸಿದರೂ ಮಾತು ತುಟಿ ದಾಟಿ ಬರಲೇ ಇಲ್ಲ. ಅವರು ಬಾಗಿಲು ತೆರೆದೊಡನೆ ನಾನು ಸುಮ್ಮನೆ ಒಳಗೆ ಹೋಗಿ ಕುಳಿತುಕೊಂಡೆ. ಕಾರು ಮುಂದೆ ಚಲಿಸಿತು. ಸೀದಾ ಮೆನೆಜರ್ ಮನೆಯ ಮುಂದೆ ಬಂದು ನಿಂತಿತು. ದಾರಿಯಲ್ಲಿ ಮೇನೇಜರ್, 'ಇವತ್ತು ನಮ್ಮ ಮನೆಗೆ ನೆಂಟರು ಬರುವವರಿದ್ದಾರೆ, ಹಾಗಾಗಿ ಮೀನು ತೆಗೆದುಕೊಂಡು ಬಂದೆ. ಈಗ ಬೇಗನೇ ಕೆಲಸವನ್ನು ಮುಗಿಸುವಾ. ಅವರು ಬರುವುದರೊಳಗೆ ನಾನು ಬಿಡುವಾಗಿರಬೇಕು' ಎಂದಿದ್ದರು. ನನಗೆ ನನ್ನ ಹೆಂಡತಿ ಮೀನು ತರಲು ಹೇಳಿದ್ದು ನೆನಪಿಗೆ ಬಂತು. ಇವತ್ತು ನನ್ನ ನಾದಿನಿ ಊಟಕ್ಕೆ ಬರುವವಳಿದ್ದಾಳೆ. ಆದರೆ ಮಾಧವಿ..

ಮೇನೇಜರ್ ಫೈಲು ಮತ್ತು ಸೂಚನೆಗಳನ್ನು ನೀಡಿದರು. ನಾನು ತಲೆಯಾಡಿಸುತ್ತಾ, ಎಸ್ ಸರ್, ಎಸ್ ಸರ್ ಎಂದು ಹೇಳಿದೆ. ಆದರೆ ನನ್ನ ಕಣ್ಣಮುಂದೆ ಮಾಧವಿ ಮಾತ್ರ ಕಾಣಿಸುತ್ತಿದ್ದಳು. ಅಷ್ಟರಲ್ಲಿ ಕಾರೊಂದು ಬಂದು ನಿಂತಿತು. ಮೆನೇಜರ್ ಕಿಟಕಿಯಿಂದ ಹೊರಗೆ ದೃಷ್ಟಿ ಹಾಯಿಸಿದರು. ಅವರ ನೆಂಟರು ಬಂದಿದ್ದರು. ಅವರು ನನ್ನತ್ತ ತಿರುಗಿ, "ಈ ಫೈಲನ್ನು ಮನೆಗೆ ಕೊಂಡುಹೋಗು. ಈಗ ಅವರು ಬಂದಿದ್ದಾರೆ. ನನಗೆ ಸಮಯವಿಲ್ಲ. ಕೆಲಸ ಮುಗಿಸಿ ನಾಳೆ ಆಫೀಸಿಗೆ ಫೈಲ್ ತೆಗೆದುಕೊಂಡು ಬಾ" ಎಂದು ಹೇಳಿ ಹೋಗಿಯೇ ಬಿಟ್ಟರು.

ಹೀಗೆ ಸಮಸ್ಯೆ ಹುಟ್ಟಿತು. ಉತ್ತರ ಮಾತ್ರ ಹೊಳೆಯಲಿಲ್ಲ. ಗಡಿಯಾರದಲ್ಲಿ ಗಂಟೆ ಒಂಭತ್ತೂವರೆಯಾಗುತ್ತಾ ಬಂತು. ಫೈಲ್ ಹಿಡಿದು ರಸ್ತೆಗಿಳಿದೆ. ದೊಡ್ಡದೊಡ್ಡ ಹೆಜ್ಜೆಗಳನ್ನು ಇಡುತ್ತಾ ನಡೆಯತೊಡಗಿದೆ.

ನಾನು ನಿಶ್ಚಿತ ಸ್ಥಳಕ್ಕೆ ಬಂದು ಮುಟ್ಟಿದಾಗ ಮಾಧವಿ ಇರಲೇ ಇಲ್ಲ. ಗಂಟೆ ಒಂಭತ್ತು ಮುಕ್ಕಾಲಾಗಿತ್ತು. ಏನೋ ಆಸೆಯಿಂದ ಅರ್ಧ ಗಂಟೆ ಅಲ್ಲಿಯೇ ನಿಂತೆ. ಆದರೆ ಮಾಧವಿ ಬರಲೇ ಇಲ್ಲ. ಪಾಪ, ದಾರಿ ನೋಡಿ ಹಿಂದೆ ಹೋಗಿರಬೇಕು. ಅವಳು ಏನು ತಿಳಿದುಕೊಂಡಳೋ.

ಈಗ ಏನು ಮಾಡುವುದೆಂದೇ ತಿಳಿಯಲಿಲ್ಲ. ನಾನು ಮನೆಯತ್ತ ತಿರುಗಿಕೊಂಡೆ. ಬಾಗಿಲಲ್ಲಿಯೇ ಹೆಂಡತಿ,"ಮೀನು ತರಲಿಲ್ಲ ಅಲ್ಲವೇ? ನನಗೆ ಗೊತ್ತೇ ಇತ್ತು" ಎಂದಳು.

'ಮೊದಲೇ ಗೊತ್ತಿದ್ದರೆ ಯಾಕೆ ನನ್ನಲ್ಲಿ ಹೇಳಿದೆ' ಎಂಬ ವಿಚಾರ ಮನಸ್ಸಿಗೆ ಬಂತು. ಆದರೆ ನಾನು ಮಾತನಾಡಲಿಲ್ಲ. ವಿಚಾರಿಸಲೂ ಇಲ್ಲ.

ಅವಳು ಒಳಗೆ ಹೋಗಿ, ಕೈಯಲ್ಲಿ ಚೀಲ ಹಿಡಿದು ಹೊರಬಂದಳು. ಕಾಲಿಗೆ ಚಪ್ಪಲಿ ಹಾಕಿ, ಸೀರೆ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾ ಹೊರನಡೆದಳು. ನನಗೆ ಉಸಿರು ಸಿಕ್ಕಿಕೊಂಡಂತಾಯಿತು. ಅವಳ ಪ್ರೀತಿಯ ತೌರಿನ ಮಂದಿ ಇದೇ ಮೊದಲ ಬಾರಿಗೆ ನಮ್ಮ ಮನೆಗೆ ಬರುವವರಿದ್ದರು. ಆದರೆ ನಾನು ಮಾತ್ರ ಮೀನು ತರಲಿಲ್ಲ. ಅವಳನ್ನು ಕೂಗಿ ಹಿಂದೆ ಬರುವಂತೆ ಹೇಳಬೇಕೆಂದುಕೊಂಡೆ. ಅದಕ್ಕಾಗಿಯೇ ಹೊರಗೆ ಬಂದೆ. ಆದರೆ ಮಾತು ಮಾತ್ರ ಹೊರಡಲೇ ಇಲ್ಲ.

ಅಮ್ಮ ಹೊರಗೆ ಬಂದವಳೇ. "ಏನಾಯಿತು?" ಎಂದು ಕೇಳಿದಳು.

ನಾನು ಮಾತನಾಡಲಿಲ್ಲ.

"ಮೀನು ಯಾಕೆ ತರಲಿಲ್ಲ?" ಅಮ್ಮ ಮತ್ತೆ ವಿಚಾರಿಸಿದಳು. ಆದರೂ ನಾನು ಉತ್ತರಿಸಿಸಲಿಲ್ಲ.

"ನಿನಗೆ ಏನಾಗಿದೆ?... ಯಾಕೆ ನೀನು ಮಾತನಾಡುವುದಿಲ್ಲ?" ಆದರೂ ನನಗೆ ಉತ್ತರ ಹೊಳೆಯಲಿಲ್ಲ.

ಅಶೇಷ ಓಡಿ ಬಂದ..ಮೈಮೇಲೆ ಬಿದ್ದುಕೊಂಡ ಮತ್ತು ಕೇಳತೊಡಗಿದ,

"ಸಂಜೆ ಹೊರಗೆ ಕರೆದುಕೊಂಡು ಹೋಗುತ್ತಿಯಲ್ಲ?"

ನಾನು ಕಿರಿಚಿದ ಧ್ವನಿಯಲ್ಲಿ ಉತ್ತರ ನೀಡಿದೆ, "ಇಲ್ಲ.. ಇಲ್ಲ..ಇಲ್ಲ.."

ಅವನು ಹೆದರಿ ಅಳಲಾರಂಭಿಸಿದ. ನಾನು ಎದ್ದು ಕೋಣೆಗೆ ಬಂದು ಬಾಗಿಲು ಮುಚ್ಚಿ ಮತ್ತೆ ಜೋರಾಗಿ ಕಿರಿಚಿದೆ–

ಇಲ್ಲ..ಇಲ್ಲ... ಇಲ್ಲ...!.

ಅನುವಾದಕರು: **ವಸುಧಾ ಪ್ರಭು**

❖ ❖ ❖❖ ❖

ಚಾಟಿಂಗ್

✍ ಅಪ್ಪಾ(ಅಜಯ) ಬುವಾ

ಡ್ರಾಫ್ಟ್

ಸುಮಾ, ಇಂದು ನಮ್ಮ ಚಾಟಿಂಗ್ ದಿನ. ವಾರದಲ್ಲಿ ಒಂದು ಬಾರಿಯಾದರೂ ನಿನ್ನೊಡನೆ ಚಾಟ್ ಮಾಡದಿದ್ದರೆ ನನ್ನ ಮನಸ್ಸಿಗೆ ಶಾಂತಿ ಸಿಗಲಾರದು. ಶುಕ್ರವಾರದ ಸುದ್ದಿ ನಿನಗೊಬ್ಬಳಿಗೆ ಮಾತ್ರ ಮೇಲ್ ಮಾಡಿದ್ದೇನೆ. ಜೀವನದಲ್ಲಿ ಹೀಗೆ ಘಟಿಸುತ್ತದೆಂದು ನಾನು ಎಂದೂ ಯೋಚಿಸಿರಲಿಲ್ಲ. ಅದೂ ಕೂಡಾ ಮದುವೆಯ ನಂತರ. ಮದುವೆಯ ಮೊದಲು ಹೀಗೆ ಆಗಿದ್ದಲ್ಲಿ ನಾನು ನಿನ್ನೊಡನೆ ಅಮೇರಿಕಾದಲ್ಲಿ ಬಂದು ನೆಲೆಸುತ್ತಿದ್ದೆ. ಎಲ್ಲಾ ಬಂಧನ ಬಿಟ್ಟು.. ಮೇಲ್ ಓದಿದ ನಂತರ ನಿನಗೆ ಒಂದು ಘಳಿಗೆ ಕೆಟ್ಟದಾಗಿ ಕಂಡಿರಬಹುದಲ್ಲವೇ? ಐದು ನಿಮಿಷದಲ್ಲಿ ಏನೂ ಆಗುವುದಿಲ್ಲ. ನಾನು ನಿನ್ನ ಹಿರಿಯ ಸಹೋದರಿ. ನಿನ್ನ ಸಹೋದರಿಗೆ ಇಂತಹ ಸಂಕಷ್ಟ ಬರುವುದೆಂದು ನೀನು ವಿಚಾರ ಮಾಡಿದ್ದೀಯಾ?

(ಸೆಂಡ್)

ಡ್ರಾಫ್ಟ್

ಅಕ್ಕಾ, ಮನಸ್ಸಿಗೆ ಹಚ್ಚಿಕೊಳ್ಳಬೇಡ. ಜೀವನದಲ್ಲಿ ಸ್ವಲ್ಪ ಕಷ್ಟ ಅನುಭವಿಸಬೇಕಾಗುತ್ತದೆ. ಅದು ಎಲ್ಲಾ ವಿಧಿಲಿಖಿತವಾಗಿರುತ್ತದೆ. ಹಿಂದಿನ ಜನುಮದ ಏನೋ ಪಾಪದ ಫಲ ಇರಬಹುದು. ಆ ದಿನ ಸಾಕಷ್ಟು ಅತ್ತು ಬಿಟ್ಟೆ. ಎದ್ದು ಭಾರತಕ್ಕೆ ಬರುವುದೆಂದು ಯೋಚಿಸಿದೆ. ನಮ್ಮಿಬ್ಬರ ದುಃಖವನ್ನು ನಾವು ಮಾತನಾಡಿ ಮರೆಯೋಣ ಎಂದೆನಿಸಿದೆ. ಆದರೆ ಸಂಸಾರದಲ್ಲಿ ಎಳೆಯಲ್ಪಟ್ಟೆ. ನನಗೆ ಒಂದೂ ಗೊತ್ತಾಗುವುದಿಲ್ಲ. ಹೀಗೆ ಬಲಾತ್ಕಾರ ಯಾಕೆ? ಇಲ್ಲಿ ಅಮೇರಿಕಾದಲ್ಲಿ ಕಾಮತೃಷೆಗೆ ಉಸಿರುಗಟ್ಟುವಿಕೆ ಇಲ್ಲ. ಇಂದು ಈ ಗರ್ಲ್‌ಫ್ರೆಂಡ್ ಬೆಡ್‌ರೂಮಿನಲ್ಲಾದರೆ ನಾಳೆ ಬೇರೇ ಹುಡುಗಿಯ ಬೆಡ್‌ರೂಮಿನಲ್ಲಿ. ಇಲ್ಲಿ ಎಲ್ಲಾ ಹುಡುಗಿಯರು ಒಂದು ವೇಳೆ ಲಿಪ್‌ಸ್ಟಿಕ್ ಹಾಕಲು ಮರೆತು ಹೋಗಬಹುದು, ಆದರೆ ಕಾಂಡೋಮ್ ಹಾಕಲು ಮರೆಯಲಾರರು. ಈ ಕಾರಣವೂ ಇರಬಹುದು. ಇಲ್ಲಿ ಹುಡುಗಿಯರ ಮೇಲೆ ಬಲಾತ್ಕಾರವಾಗುವುದಿಲ್ಲ. ಆದರೆ ನೀನು ಹೇಳುತ್ತೀ, ಮದುವೆಯಾದ ಗಂಡಸು ನಿನ್ನ ಮೇಲೆ ಬಲಾತ್ಕಾರ ಮಾಡಿದ್ದಾನೆಂದು. ಮನೆಯಲ್ಲಿ ಹೆಂಡತಿ ಇರುವಾಗ ಅವನು ನಿನ್ನ ಮೇಲೆ ತನ್ನ ಕಾಮತೃಷೆ ತೀರಿಸಿಕೊಂಡದ್ದು, ನಿಜವಾಗಿಯೂ ಆಲೋಚನೆಗೆ ದೂರವಾದದ್ದು. ಅಕ್ಕಾ, ನೀನು ಹೆದರಬೇಡ.. ಒಳ್ಳೆಯ ಅಡ್ವೊಕೇಟರನ್ನು ಹಿಡಿ. ಅವನು ಒಳ್ಳೆಯ ಹೆಸರು ಪಡೆದವನಾಗಿರಬೇಕು. ನಿನಗೆ ನಾನು ಹಣ ಕೊಡುತ್ತೇನೆ.

(ಸೆಂಡ್)

ಡ್ರಾಫ್ಟ್

ಸುಮಾ, ಪ್ರಶ್ನೆ ಹಣದ್ದಲ್ಲ. ಹಣ ನನ್ನಲ್ಲಿಯೂ ಇದೆ. ಇರುವುದು ಬೆಂಬಲದಲ್ಲಿ. ಇಂದಿಗೆ ಮೂರು ದಿನಗಳಾದವು ನನ್ನ ಗಂಡ ನನ್ನ ಬೆಡ್‌ರೂಮಿಗೆ ಬರುವುದಿಲ್ಲ. ಪೊಲೀಸ್ ಸ್ಟೇಷನ್‌ಗೆ ಕೂಡಾ ನನ್ನೊಂದಿಗೆ ಒಂದೇ ದಿನ ಬಂದಿದ್ದನು. ಅವನಿಗೆ ನನ್ನೊಡನೆ ಪೊಲೀಸ್ ಸ್ಟೇಷನಿಗೆ ಬರಲು ನಾಚಿಕೆಯಾಗುತ್ತದೆಯೆಂದು ಕಾಣುತ್ತದೆ. ಪೊಲೀಸ್ ಒಂದಲ್ಲ ಒಂದು ನೆವ ತೆಗೆದುಕೊಂಡು ಸ್ಟೇಷನಿಗೆ ಭೇಟಿ ನೀಡಲು ಕರೆಯುತ್ತಾರೆ. ಬೇಡವಾದ ಪ್ರಶ್ನೆ ಹಾಕಿ ವಿಚಾರಣೆ ಮಾಡುತ್ತಾರೆ. ನಾನೊಬ್ಬಳೇ ಹೋಗುವುದು ಅವರಿಗೆ ವಿಶೇಷವಾಗಿ ಕಾಣಿಸುತ್ತದೆ. ಅತ್ತೆಯವರು ಎಲ್ಲಾ ನಾದಿನಿಯರನ್ನು, ಅಳಿಯಂದಿರನ್ನು ಕರೆಸಿದ್ದಾರೆ. ನನಗೆ ಸಾಂತ್ವನ ಮಾಡಲು ಬಂದಿರಬಹುದೆಂದು ನಾನು ಎಣಿಸಿದ್ದೆ. ಆದರೆ ಹಾಗಲ್ಲ. ನಾನು ಕೊಟ್ಟ ನೀರನ್ನು ಕೂಡಾ ಒಬ್ಬರೂ ಬಾಯಲ್ಲಿ ಹಾಕಲಿಲ್ಲ. ಹಾಗೆ ನನಗೆ ಯಾವ ಮಹಾ ರೋಗ ಬಂದಿದೆ? ಅಲ್ಲದೆ ನನ್ನ ಕೈಯ ನೀರು ಕುಡಿದಲ್ಲಿ ಅವರಿಗೆ ಆ ರೋಗ ಬರುವುದೆಂದೋ ಏನೋ? ನನ್ನ ಮೇಲೆ ಬಲಾತ್ಕಾರವಾಗಿದ್ದರೆ ಇದರಲ್ಲಿ ನನ್ನ ತಪ್ಪೇನು? ಗಂಡನ ಮನೆಯವರೆಲ್ಲರೂ ನನ್ನನ್ನು ತಿರಸ್ಕರಿಸಲಾರಂಭಿಸಿದ್ದಾರೆ. ನಾನು ಅವನಿಗೆ ನನ್ನ ಬಳಿ ಬಂದು ಬಲಾತ್ಕಾರ ಮಾಡು ಮತ್ತು ತೃಪ್ತಿಪಡಿಸು ಎಂದು ಹೇಳಿದಂತೆ. ನನಗೆ ನನ್ನ ಗಂಡನ ಬೆಂಬಲ ಸಿಕ್ಕಿದ್ದರೆ ಸಾಕಿತ್ತು. ನಾನು ಧೈರ್ಯದಿಂದ ಜಗಳವಾಡುತ್ತಿದ್ದೆ. ಆದರೆ ತಿಳಿದಿದೆಯಾ ಮನಸ್ಸು ಜೋಡಿಸಲು, ಭುಜಕ್ಕೆ ಆಧಾರವಾಗಬೇಕಿತ್ತು. ಆದರೆ ನಾನು ಅಧೈರ್ಯ ಹೊಂದುವಂತೆ ಮಾಡಿದ್ದಾನೆ.

(ಸೆಂಡ್)

ಡ್ರಾಫ್ಟ್

ಅಕ್ಕಾ, ನೀನೇ ಪ್ರೀತಿಸಿ ಮದುವೆಯಾದದ್ದಲ್ಲಾ, ಹಾಗಾದರೆ ಯಾರಲ್ಲಿ ಹೇಳುತ್ತಿ? ನಿಜ ಹೇಳುವುದಾದರೆ ನನಗೆ ಆ ಜನರು ನಿನ್ನ ಮದುವೆಯಲ್ಲಿಯೇ ಇಷ್ಟವಾಗಿರಲಿಲ್ಲ. ಯಾವುದೇ ರೀತಿಯಿಂದ ಅವರು ನಮಗೆ ಸಂಬಂಧಿಗಳೆಂದು ಕಾಣುವುದಿಲ್ಲ. ಅವರಿಗೆ ನಿನ್ನ ಹಣ ಮಾತ್ರ ಬೇಕಾಗಿದೆ. ನೀನು ನಿನ್ನ ಗಂಡನನ್ನು ಒತ್ತಾಯದಿಂದ ಪೊಲೀಸ್ ಸ್ಟೇಷನಿಗೆ ಕರೆದುಕೊಂಡು ಹೋಗು. ತಾಯಿ ತಂದೆಯವರಿಗೆ ಈ ವಿಷಯ ಹೇಳಬೇಡ. ವೃದ್ಧಾಶ್ರಮದಲ್ಲಿ ಅವರು ಸುಖವಾಗಿ ಇದ್ದಾರೆ. ಈ ವಿಷಯ ತಿಳಿದರೆ ಅಮ್ಮ ಬೇಗನೆ ಮರಣ ಬಯಸುವಳು. ನಿನ್ನ ಮೇಲೆ ಅವಳಿಗೆ ಅಪಾರವಾದ ಮಮತೆ. ನಿನ್ನ ಗಂಡನ ವಿಶ್ವಾಸ ಪಡೆಯೋ ನಿನ್ನ ಎಲ್ಲಾ ಭಾವನೆಯನ್ನು ವ್ಯಕ್ತಪಡಿಸು. ನಾವು ಬೇರೆಯಾಗಿ ವಾಸಿಸೋಣವೆಂದು ತಿಳಿಸು. ಇನ್ನು ಆ ಜನರು ನಿನ್ನನ್ನು ಎಂದೂ ಹತ್ತಿರ ಮಾಡಲಾರರು. ಸಾಧ್ಯವಾದಲ್ಲಿ ಬೇರೆ ಯಾವುದಾದರೂ ಪಟ್ಟಣಕ್ಕೆ ಹೋಗಿ ನಿಲ್ಲಿ. ಆಫೀಸಿನಲ್ಲಿ ಹೇಗಿದೆ

ವಾತಾವರಣ? ನಾನು ನನ್ನ ಯಜಮಾನರಲ್ಲಿ ವಿಷಯ ತಿಳಿಸಿದ್ದೇನೆ. ನೀನು ಹೆಚ್ಚು ತಲೆ ಕೆಡಿಸಿಕೊಳ್ಳಬೇಡ. ಇನ್ನು ಅಕ್ಕಾ, ಗಡಿಬಿಡಿಯಲ್ಲಿ ನಿನ್ನಲ್ಲಿ ಕೇಳಲಾಗಲಿಲ್ಲ. ಬಲಾತ್ಕಾರವಾದ ಸಂದರ್ಭದಲ್ಲಿ ನಿನಗೇನಾದರೂ ಗಾಯವಾಗಿದೆಯಾ? ಅವನ ಉಗುರಿನಿಂದ ಗಾಯವಾಗಿದ್ದರೆ ಕೂಡಲೇ ಚಿಕಿತ್ಸೆ ತಗೋ.

(ಸೆಂಡ್)

ಡ್ರಾಫ್ಟ್

ಗಾಯ ವಾಸಿಯಾಗುವುದು. ಆದರೆ ಮನಸ್ಸಿನ ಗಾಯ ತೆರೆಯಲ್ಪಟ್ಟಿದೆ. ಅದು ಯಾವಾಗಲೂ ಮಾಯವಾಗಲಿಕ್ಕಿಲ್ಲ. ಪುನಃ ಪುನಃ ರೋಗ ಬಂದರೆ ಕಲೆ ಉಳಿಯುವುದು. ಆದರೆ ಸುಮಾ, ಅವನನ್ನು ವಿರೋಧಿಸುವ ಶಕ್ತಿ ನನ್ನಲ್ಲಿ ಇದ್ದಿಲ್ಲ. ಅವನು ಪೇಯದಲ್ಲಿ ಯಾವ ಅಮಲನ್ನು ಹಾಕಿ ಕೊಟ್ಟಿದ್ದನೋ ಏನೋ ಅದನ್ನು ಕುಡಿದ ತಕ್ಷಣ ನನ್ನ ದೇಹ ಸ್ವಾಧೀನವಿಲ್ಲದಂತಾಯಿತು. ಈಗ ನನಗೆ ಭಾಸವಾಗುತ್ತದೆ ನಾನು ತುಂಬ ವಿರೋಧ ಮಾಡಿದಂತೆ ಕಾಣುತ್ತದೆ. ಆದರೆ ಗಂಡಸರಿಗೆ ನಮಗಿಂತ ಹೆಚ್ಚು ಶಕ್ತಿ ಇದೆಯಲ್ಲ? ಎಚ್ಚರವಾಗುವಾಗ ಎಲ್ಲವೂ ಮುಗಿದಿತ್ತು. ಅವನು ಅಲ್ಲಿ ಇರಲಿಲ್ಲ. ಎದುರಗಡೆ ಏನಾದರೂ ಸಿಕ್ಕಿದ್ದಲ್ಲಿ ಎರಡು ಬಿಗಿಯಬಹುದಿತ್ತು. ಮನೆಗೆ ಹೋಗಲಿಲ್ಲ. ಗಂಡನನ್ನು ಆಫೀಸಿಗೆ ಕರೆಸಿದೆನು. ಅವನಿಗೆ ಎಲ್ಲವನ್ನೂ ಹೇಳಿದೆ. ಪೊಲೀಸರಲ್ಲಿ ದೂರು ಕೊಡಲು ತಯಾರಿರಲಿಲ್ಲ. ಮನೆತನದ ಮರ್ಯಾದೆ ಹೋಗುವುದೆಂದು. ನಾನು ಒತ್ತಾಯದಿಂದ ಕರೆದುಕೊಂಡು ಹೋದೆನು. ಆದರೆ ಒಂದೇ ಬಾರಿ ಬಂದನು. ಮತ್ತೊಮ್ಮೆ ಬರಲಿಲ್ಲ. ಅಮ್ಮನಿಗೆ ಈ ವಿಷಯ ತಿಳಿಸಲಿಲ್ಲ. ಆದರೆ ಮರುದಿನ ಅಮ್ಮನ ಬಳಿ ಹೋಗಿ ಅಮ್ಮನ ಸೆರಗಿನಲ್ಲಿ ಸಾಕಷ್ಟು ಅತ್ತುಬಿಟ್ಟೆ. ಅವರ ನೆನಪು ಬಂದು ನಾನು ಅತ್ತಿರಬಹುದೆಂದು ಅವರು ಎಣಿಸಿದರು. ನಾವು ಬೇಗನೆ ನಮ್ಮದೇ ಸ್ವಂತ ಮನೆಯನ್ನು ತೆಗೆದುಕೊಂಡರೆ ನಮ್ಮೊಂದಿಗೆ ಬಂದು ನಿಲ್ಲುತ್ತಾರೆಂದರು. ಅವರಿಗೆ ತಿಳಿಯದಂತೆ ಜಾಗ್ರತೆ ಮಾಡಿದ್ದೇನೆ. ನನ್ನ ಆಫೀಸಿನ ಸಹೋದ್ಯೋಗಿಗಳು ನನಗೆ ಸಾಕಷ್ಟು ಬೆಂಬಲ ನೀಡಿದರು. ಮಹಿಳೆಯರು ಅವನಿಗೆ ಶಿಕ್ಷೆಯಾಗಬೇಕೆಂದರು. ಹೆಡ್ ಆಫೀಸಿನಿಂದ ಕೂಡಲೇ ಅವನನ್ನು ನೌಕರಿಯಿಂದ ತೆಗೆದುಹಾಕಿದರು. ನನ್ನ ಗಂಡನಿಗೆ ನೀನು ಹೇಳುವ ಪ್ರಕಾರ ವಿಶ್ವಾಸಕ್ಕೆ ತೆಗೆದುಕೊಂಡು ಏನೂ ಲಾಭವಿಲ್ಲ. ಅವನೀಗ ನನ್ನೊಟ್ಟಿಗೆ ಬರುವುದಿಲ್ಲ. ನನಗೆ ಈಗ ಹೆದರಿಕೆಯಾಗುತ್ತಿದೆ. ಅವನು ನನಗೆ ವಿಚ್ಛೇಧನ ನೀಡಬಹುದು. ಕೊಟ್ಟರೆ ಕೊಡಲಿ. ಈ ಜೂಜಾಟ ನನ್ನನ್ನು ಎಲ್ಲಿಗೆ ತೆಗೆದುಕೊಂಡು ಹೋಗುವುದೋ? ನೀನು ಇದರಿಂದ ಗೊಂದಲದಲ್ಲಿ ಬೀಳಬೇಡ. ಆಫೀಸಿನ ಜನರು ನನ್ನ ಬೆನ್ನ ಹಿಂದೆ ಇದ್ದಾರೆ. ನನಗೆ ಅವರ ಬೆಂಬಲವಿದೆ.

(ಸೆಂಡ್)

ಡ್ರಾಫ್ಟ್

ಅಕ್ಕಾ, ನೀನು ನಾನು ಹೇಳುವುದನ್ನು ಕೇಳುತ್ತಿಯಾದರೆ ಒಂದು ಕೆಲಸ ಮಾಡು. ನಿನ್ನ ಆ ಷಂಡ ಗಂಡನಿಗೆ ವಿಚ್ಛೇಧನ ಕೊಡು. ಅದು ಆಕಸ್ಮಿಕವೆಂದು ತೋರುವುದಿಲ್ಲ. ನಿನಗೆ ಅವನು ಯಾವಾಗ ಒದಗುತ್ತಾನೆ? ಇಂತಹ ಗಂಡನೊಂದಿಗೆ ಇರುವುದಕ್ಕಿಂತ ಒಬ್ಬಳೇ ಇರುವುದು ಲೇಸು. ಹೀಗೆ ಬರಿ, ತನ್ನ ಹೆಂಡತಿಯ ಮೇಲೆ ಬಲಾತ್ಕಾರವಾದದ್ದು ತಿಳಿದಿದ್ದರೂ ಮನೆಯಲ್ಲಿ ಕುಳಿತಿದ್ದಾನೆ. ಆದುದರಿಂದ ನನಗೆ ವಿಚ್ಛೇಧನ ಬೇಕು ಎಂದು ಜಡ್ಜ್ ಸಾಹೇಬರಲ್ಲಿ ತಿಳಿಸು. ಅವನ ಸಂಬಳ ಎಷ್ಟು ನಿನ್ನ ಸಂಬಳಕ್ಕೆ ಆಸೆ ಪಡುತ್ತಾನೆ. ಈ ವಸ್ತುಸ್ಥಿತಿ ಗೊತ್ತಾದಲ್ಲಿ ಎಚ್ಚರವಾಗುವುದು. ನಾನು ಖಂಡಿತ ಬರುವೆನು. ಅಲ್ಲಿ ಬಂದ ತಕ್ಷಣ ನಿನ್ನ ಗಂಡನ ಜುಟ್ಟು ಹಿಡಿದು ಬಡಿದು ಹಾಕದಿದ್ದರೆ ನೋಡು. ನಿನ್ನ ಕಿರಿಯ ಸಹೋದರಿ ಏನೆಂದು ಅವನಿಗೆ ತೋರಿಸುತ್ತೇನೆ. ನನ್ನ ಗಂಡನಾದರೆ ಆ ಬಲಾತ್ಕಾರ ಮಾಡಿದವನನ್ನು ಇಷ್ಟರಲ್ಲಿ ಶೂಟ್ ಮಾಡುತ್ತಿದ್ದರು. ಅಕ್ಕಾ, ನೀನೊಂದು ಫ್ಲಾಟ್ ತೆಗೆದುಕೋ. ತಂದೆ ತಾಯಿಯನ್ನು ಕರೆದುಕೊಂಡು ಒಂದೇ ಕಡೆ ನಿಲ್ಲು. ಸಾಧ್ಯವಿದ್ದಲ್ಲಿ ಒಬ್ಬ ಒಳ್ಳೆಯ ಹುಡುಗನನ್ನು ನೋಡಿ ಮದುವೆಯಾಗು. ನಿನ್ನ ರೂಪಕ್ಕೆ ಯಾರೂ ಮರುಳಾಗುವರು. ನಿನ್ನ ಹಿಂದಿನ ವಿಷಯ ತಿಳಿಸು. ಅವನಿಗೆ ಒಪ್ಪಿಗೆಯಾಗಿ ಮದುವೆಗೆ ಸಿದ್ಧನಾದರೆ ಮದುವೆಯಾಗು. ತಂದೆ ತಾಯಿಯರಿಗೆ ಕೊನೆಯ ಘಳಿಗೆಯಲ್ಲಿ ನೀರು ಹಾಕಬಹುದು. ನಾಳೆ ಪುನಃ ಚಾಟ್ ಮಾಡೋಣ. ನೀನು ಮಾನಸಿಕವಾಗಿ ದೃಢವಾದಲ್ಲಿ ದಿನಾಲು ಚಾಟಿಂಗ್. ಶುಭರಾತ್ರಿ.

(ಸೆಂಡ್)

ಡ್ರಾಫ್ಟ್

ಗುಡ್‌ನೈಟ್ ಸುಮಾ(ಸೆಂಡ್)

ಮರುದಿನ ರಾತ್ರಿ ಇಬ್ಬರ ಕಂಪ್ಯೂಟರ್ ಆನ್ ಆಗಿ ಅವರ ಚಾಟಿಂಗ್ ಕಾರ್ಯಕ್ರಮ ಆರಂಭವಾಯಿತು.

ಡ್ರಾಫ್ಟ್

ಅಕ್ಕಾ, ಇಂದು ಏನಾಯಿತು? ಇಂದು ಅವನಿಗೆ ಪೋಲೀಸ್ ರಿಮಾಂಡ್‌ನಿಂದ ನ್ಯಾಯಾಲಯಕ್ಕೆ ಹೋಗುವುದಿತ್ತಲ್ಲ? ಅವನಿಗೆ ಜೈಲುಶಿಕ್ಷೆ ವಿಧಿಸಲಾಯಿತಾ? ಅವನಿಗೆ ಕಠಿಣ ಶಿಕ್ಷೆಯಾಗಬೇಕೆಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅವನು ಹೊರಗೆ ಬಂದಾಗ ಅವನನ್ನು ಬೆತ್ತಲೆ ಮಾಡಿ ಪಟ್ಟಣದಲ್ಲಿ ತಿರುಗಾಡಿಸುತ್ತೇನೆ. ಎಷ್ಟೇ ಖರ್ಚಾಗಲಿ. ವಿಚ್ಛೇಧನದ ಕುರಿತು ನಿನ್ನ ಗಂಡನಿಗೆ ಹೇಳಿದ್ದೀಯಾ?

(ಸೆಂಡ್)

ಡ್ರಾಫ್ಟ್

ಹೇಳಲು ಅವನು ಬೆಡ್‌ರೂಮಿಗೆ ಬರಬೇಕಲ್ಲವೇ? ಚಾಟಿಂಗ ಮುಗಿದ ಮೇಲೆ ರಾತ್ರಿ ಹನ್ನೊಂದು ಗಂಟೆಗೆ ನಾನು ಹೊರಗೆ ಹಾಲ್‌ಗೆ ಬಂದೆ. ಸೋಫಾದ ಮೇಲೆ ಹೊದಿಕೆ ಹೊದ್ದುಕೊಂಡು ಅವನು ಕಣ್ಣುಬಿಟ್ಟು ಮಲಗಿದ್ದ. ನಾನು ಅವನ ಬಳಿ ಕುಳಿತು ಅವನ ಕೈಯನ್ನು ನನ್ನ ಕೈಯಲ್ಲಿ ತೆಗೆದುಕೊಂಡೆನು. ಅವನು ನನ್ನನ್ನು ಅಪಮಾನ ಮಾಡಿ ಅಲ್ಲಿಂದ ಓಡಿಸಿದನು. ನನ್ನ ಮೈಮುಟ್ಟಿದರೆ ನಿನಗೆ ನಿನ್ನ ತಾಯಾಣೆ ಎಂದು ಹೇಳಿದ. ನಾನು ಮತ್ತೆ ಅಲ್ಲಿ ನಿಲ್ಲಲಿಲ್ಲ. ಬೆಡ್‌ರೂಮಿಗೆ ಬಂದು ಏನೂ ವಿಚಾರ ಮಾಡದೆ ಮಲಗಿದೆ. ಆದರೆ ಇಂದು ಬೆಳಿಗ್ಗೆ ನನ್ನ ಜೀವಿತದಲ್ಲಿ ಒಂದು ಬಿರುಗಾಳಿ ಬೀಸಿದೆ. ಏನು ಮಾಡುವುದೆಂದೇ ತೋಚುತ್ತಿಲ್ಲ. ಇಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಅವನ ಹೆಂಡತಿ ತನ್ನ ಇಬ್ಬರು ಚಿಕ್ಕ ಮಕ್ಕಳನ್ನು ಕರೆದುಕೊಂಡು ನನ್ನ ಆಫೀಸಿಗೆ ಬಂದಳು. ಒಂದು ಮಗುವಿಗೆ ಒಂದು ವರ್ಷ. ಇನ್ನೊಂದು ಮೂರು ವರ್ಷದ್ದು. ಆ ಚಿಕ್ಕ ಮಕ್ಕಳನ್ನು ತನ್ನ ತೊಡೆಯ ಮೇಲಿರಿಸಿ ಹೇಳತೊಡಗಿದಳು, ನನ್ನ ಗಂಡನ ತಪ್ಪಿನಿಂದಾಗಿ ನನ್ನ ಇಡೀ ಸಂಸಾರ ನಾಶವಾಯಿತು. ಎಲ್ಲಿಯೂ ಮುಖ ತೋರಿಸಿ ತಿರುಗಾಡುವಂತಿಲ್ಲ. ನನ್ನ ಸಂಸಾರ ಸರಿಹೋಗುವುದು ನಿನ್ನ ಕೈಯಲ್ಲಿದೆ. ನನ್ನ ಮಕ್ಕಳಿಗೋಸ್ಕರ ಕೇಸ್ ಹಿಂದಕ್ಕೆ ತೆಗೆದುಕೋ. ನೀನು ನಿನ್ನ ಖುಷಿಯಿಂದಲೇ ಅವನಲ್ಲಿ ಹೋಗಿದ್ದೆ ಎಂದು ಪೊಲೀಸರಿಗೆ ಹೇಳು. ಅವರು ಕೇಸನ್ನು ಹಿಂದಕ್ಕೆ ಪಡೆಯುವರು. ದಯವಿಟ್ಟು ನನ್ನ ಮಕ್ಕಳಿಗೋಸ್ಕರ.

ನಿಜ ಹೇಳಲಾ ಸುಮಾ, ಏನು ನಡೆಯುತ್ತಿದೆ ಎಂಬುದು ನನಗೆ ಗೊತ್ತಾಗಲೇ ಇಲ್ಲ. ಅಷ್ಟು ಸುಲಭವಲ್ಲವೆಂದು ಅವಳಿಗೆ ಹೇಳಿದೆನು. ಇಂತಹ ಮನುಷ್ಯನಿಗೆ ಶಿಕ್ಷೆ ಆಗಲೇಬೇಕು. ನಾನು ಆಗುವುದಿಲ್ಲ ಎಂದದ್ದೇ ತಡ ಆ ಇಬ್ಬರು ಮಕ್ಕಳನ್ನು ನನ್ನ ಮಡಿಲಿಗೆ ಹಾಕಿದಳು. ಕಡಿಮೆ ಎಂದರೆ ನನ್ನ ಈ ಪುಟ್ಟ ಮಕ್ಕಳಿಗೆ ತಾಯಿಯಾದರೂ ಆಗು ಹೀಗೆ ಹೇಳಿ ಯಾರು ಏನು ಹೇಳುವ ಮೊದಲೇ ಆಫೀಸಿನ ಎಂಟನೆಯ ಮಹಡಿಯಿಂದ ಕೆಳಗೆ ಹಾರಿದಳು. ಏನಾಯಿತೆಂದು ಯಾರಿಗೂ ಹೊಳೆಯಲಿಲ್ಲ. ಕೆಳಗೆ ಬಿದ್ದ ಅವಳ ರಕ್ತಸಿಕ್ತ ದೇಹ ನೋಡಿದೆ ಮತ್ತು ಅವಳ ಎರಡೂ ಮಕ್ಕಳನ್ನು ನಾನು ಎದೆಗವಚಿಕೊಂಡೆ. ಅವರು ಕಣ್ಣು ಪಿಳಿಪಿಳಿ ಮಾಡಿ ಕೆಳಗೆ ಬಿದ್ದ ತಮ್ಮ ತಾಯಿಯ ಮೃತದೇಹವನ್ನು ನೋಡುವ ಪ್ರಯತ್ನ ಮಾಡುತ್ತಿದ್ದರು.

(ಸೆಂಡ್)

ಡ್ರಾಫ್ಟ್

ಅಕ್ಕಾ, ಇದೇನು ನಡೆಯಿತು? ತಪ್ಪು ಯಾರದು ಮತ್ತು ಶಿಕ್ಷೆ ಯಾರಿಗೆ? ಅವಳ ಗಂಡನಿಗೆ ಈ ಘಟನೆ ತಿಳಿಯಿತಾ? ಅವನ ಪ್ರತಿಕ್ರಿಯೆ ಏನು? ಮಕ್ಕಳು ಈಗ ಎಲ್ಲಿದ್ದಾರೆ?

ಮಕ್ಕಳು ತಾಯಿಯ ನೆನಪಿನಿಂದ ಅಳುತ್ತಿದ್ದಾರಾ? ಆ ಒಂದು ವರ್ಷದ ಮಗುವಿಗೆ ಹಾಲು ಯಾರು ಕೊಟ್ಟರು? ಈಗ ನಿನ್ನ ನಿರ್ಧಾರವೇನು?

(ಸೆಂಡ್)

ಡ್ರಾಫ್ಟ್

ಸುಮಾ, ನಾನು ಒಂದು ನಿರ್ಣಯ ತೆಗೆದುಕೊಳ್ಳಲು ಯೋಚಿಸಿದ್ದೇನೆ. ಇದು ಯಾರಿಗೂ ಒಪ್ಪಿಗೆಯಾಗಲಿಕ್ಕಿಲ್ಲ. ಆದರೆ ನೀನು ನನ್ನ ತಂಗಿ. ನಿನಗೆ ಅಗತ್ಯವಾಗಿ ಹೇಳಬೇಕು. ತಾಯಿ ತಂದೆಯರಿಗೆ ನೀನು ಆಮೇಲೆ ಸಮಾಧಾನ ಹೇಳು. ನಾನು ಆ ಮಕ್ಕಳ ತಾಯಿಯಾಗಬೇಕೆಂದು ನಿರ್ಧರಿಸಿದ್ದೇನೆ. ಬೆಳಿಗ್ಗೆಯೇ ನಾನು ಕೇಸ್ ಹಿಂದಕ್ಕೆ ತೆಗೆದುಕೊಂಡಿದ್ದೇನೆ. ನಾನು ಆಫಿದಾವಿತ್ ಬರೆದುಕೊಟ್ಟಿದ್ದೇನೆ. ನಾನು ನನ್ನ ಸ್ವಂತ ಖುಷಿಯಿಂದ ಆ ಮನುಷ್ಯನ ಜೊತೆ ಹೋಗಿದ್ದೆನು. ಅವನದ್ದು ಏನೂ ತಪ್ಪಿಲ್ಲ. ಅವನಿಗೆ ನನ್ನ ದೇಹ ಇಷ್ಟವಾಯಿತು. ನನ್ನ ರೂಪ ನೋಡಿ ಮೋಹಗೊಂಡನೆಂದರೆ ಸಂಶಯವಿಲ್ಲ.

ನಾನು ಅವನೊಂದಿಗೆ ಮದುವೆಯಾಗುವುದೆಂದು ನಿಶ್ಚಯಿಸಿದ್ದೇನೆ. ನನ್ನ ಗಂಡನಿಗೆ ವಿಚ್ಛೇಧನ ಕೊಡಲು ನಾನು ನ್ಯಾಯಾಲಯದಲ್ಲಿ ದಾಖಲೆ ಪತ್ರ ಒಪ್ಪಿಸಿದ್ದೇನೆ. ಯಾರಿಗೆ ನನ್ನ ದೇಹ ಇಷ್ಟವಾಯಿತೋ ಅವನಿಗೆ ನನ್ನ ದೇಹವನ್ನು ಶಾಶ್ವತವಾಗಿ ಒಪ್ಪಿಸಲು ನಿರ್ಧರಿಸಿದ್ದೇನೆ. ನನಗನಿಸುತ್ತಿದೆ, ನಿನಗೆ ಒಂದು ಗಳಿಗೆ ಇದು ಕೆಟ್ಟದೆಂಬ ಭಾವನೆ ಬರಬಹುದು. ಸಾಧ್ಯವಾದಲ್ಲಿ ನಿನ್ನ ಅಕ್ಕನನ್ನು ಕ್ಷಮಿಸು. ಇದೆಲ್ಲಾ ಆ ಪುಟ್ಟ ಮಕ್ಕಳಿಗೋಸ್ಕರ.

(ಸೆಂಡ್)

ಡ್ರಾಫ್ಟ್

ಅಕ್ಕಾ, ಒಂದು ವಿಷಯ ಹೇಳಲಾ? ನನಗೆ ಸ್ವಲ್ಪ ಕೆಟ್ಟದಾಗಿ ಕಾಣಿಸಿತು. ಆದರೆ ನಿನ್ನ ಭಾವಾಜಿ ನನ್ನ ಜೊತೆ ಕುಳಿತು ಕಂಪ್ಯೂಟರ್ ಸ್ಕ್ರೀನಲ್ಲಿ ಓದುತ್ತಿದ್ದವರು ಒಂದು ಕಾಗದಲ್ಲಿ ಈ ಸಂದೇಶವನ್ನು ನೀಡಿದ್ದಾರೆ;

ಯುವರ್ ಸಿಸ್ಟರ್ ಇಸ್ ಸಿಂಪಲೀ ಗ್ರೇಟ್ (ನಿನ್ನ ಅಕ್ಕ ಶ್ರೇಷ್ಠ ವ್ಯಕ್ತಿ)

(ಸೆಂಡ್)

ಅನುವಾದಕರು: **ಎಸ್. ಜಯಶ್ರೀ ಶೆಣೈ**

ನಾಯಿಗಳು

✍ ಎಚ್ಚೈಮ್

ಕೇವಲ ಎರಡು ದಿನಗಳ ಹಿಂದೆ ಅಮಾವಾಸ್ಯೆಯ ಕಾಳ ರಾತ್ರಿ, ಬೀದಿನಾಯಿಗಳ ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡ ಕೋಮು ಸಂಘಟನೆಯ ಕಾರ್ಯಕರ್ತನೊಬ್ಬ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮರಣ ಹೊಂದಿದ ಸುದ್ದಿಯೊಂದಿಗೆ ಬೊಸ್ಕ್ಯಾಂಬ್ಯಾ ಪೇಟೆಯಲ್ಲಿ ಕತ್ತಲಾವರಿಸಿತು.

ಪ್ರತಿದಿನ ಶರಾಬು ಅಂಗಡಿಯ ಹೊರಗೆ ಆಮ್ಲೆಟ್ ಗಾಡಿಯಲ್ಲಿ ಕಾರಿನ ಬ್ಯಾಟ್ರಿಯ ರಕ್ತಹೀರಿ ಉರಿಯುತ್ತಿರುವ ಸಿಎಫೆಲ್ ಬಲ್ಬು ಆರುವುದನ್ನೇ ಕಾಯುತ್ತಾ ಕಸದ ತೊಟ್ಟಿಯ ಸುತ್ತ ತಿರುಗಾಡುವ ಬೀದಿನಾಯಿಗಳು ಹೊತ್ತಿಗೆ ಮೊದಲೇ ಜಾಗ್ರತಗೊಂಡು ಕರ್ತವ್ಯದಲ್ಲಿ ತೊಡಗಿಕೊಂಡವು. 'ಬೊಸ್ಕ್ಯಾಂಬ್ಯಾ ಪೇಟೆಯಲ್ಲಿ ಹಗಲು ಜನರ ವಹಿವಾಟು ಎಷ್ಟು ಪ್ರಮಾಣದಲ್ಲಿ ಇರುವುದೋ ಅಷ್ಟೇ ಪ್ರಮಾಣದಲ್ಲಿ ರಾತ್ರಿ ಬೀದಿ ನಾಯಿಗಳದ್ದು ಇರುತ್ತದೆ. ಹಾಗಾಗಿಯೇ ಸುಸಂಸ್ಕೃತರು ರಾತ್ರಿ ಹೊತ್ತು ಬೀದಿ ನಾಯಿಗಳಿಗೆ ಹೆದರಿ, ಮರ್ಯಾದಸ್ಥರು ಹಗಲು ಹೊತ್ತು ಮೂಲಭೂತವಾದಿಗಳು ಹೆದರಿ ಈ ಪೇಟೆಗೆ ಬರುವುದಿಲ್ಲ' ಎಂದು ಕೆಲವು ದಿನಗಳ ಹಿಂದೆ ರಾಷ್ಟ್ರೀಯ ದಿನಪತ್ರಿಕೆಯೊಂದರ ಸಂದರ್ಶನದಲ್ಲಿ ಹೇಳಿದ ನಗರದ ಖ್ಯಾತ ಚಿಂತಕರ ಮಾತಿಗೂ, ಈ ಘಟನೆಗೂ ಪ್ರಾಯಶಃ ಸಂಬಂಧ ಇದ್ದರೂ ಇದ್ದೀತು.

ಅಂದರೆ ಒಂದು ಮಾತಂತೂ ಸತ್ಯ. ಬೊಸ್ಕ್ಯಾಂಬ್ಯಾ ಪೇಟೆಯ ಬೀದಿನಾಯಿಗಳು ರಾತ್ರಿ ಹೊತ್ತು ಶಂಕಾಸ್ಪದವಾಗಿ ತಿರುಗಾಡುವ ಯಾರಾದರೂ ಮನುಷ್ಯರು ಒಬ್ಬರೇ ಸಿಕ್ಕಿದರೆ ಅವರ ಮೇಲೆ ಹಲ್ಲೆ ನಡೆಸಿ ಘಾಸಿಗೊಳಿಸುವುದಂತೂ ಖಂಡಿತ. ರಾತ್ರಿ ಈ ಪೇಟೆಯನ್ನು ಕಾಯಲು ಬಂದ ಒಬ್ಬರಲ್ಲ, ಇಬ್ಬಿಬ್ಬರು ಗೂರ್ಖಾರನ್ನು ಈ ಬೀದಿ ನಾಯಿಗಳು ಒಟ್ಟಾಗಿ ಓಡಿಸಿದ ಬಳಿಕ ಯಾವುದೇ ಗೂರ್ಖ ಈ ಪೇಟೆಗೆ ಬರಲು ಸಿದ್ಧರಿಲ್ಲ.

ರಾತ್ರಿ ಜನರನ್ನು ಕಚ್ಚಿ ಘಾಸಿಗೊಳಿಸಿದ ಈ ಬೀದಿ ನಾಯಿಗಳನ್ನು ಸಾಮೂಹಿಕವಾಗಿ ಕೊಲ್ಲಬೇಕೆಂದು ಪಂಚಾಯತು ಕಚೇರಿಯಲ್ಲಿ ನಿರ್ಣಯಿಸಲಾಯಿತಾದರೂ, ಅದನ್ನು ಕಾರ್ಯಾಗತಗೊಳಿಸಲು ಪ್ರಾಣಿಪ್ರಿಯ ಸಂಘಟನೆಯೊಂದರಿಂದ ಬಲವಾದ ಆಕ್ಷೇಪ ಬಂತು. "ಬೀದಿ ನಾಯಿಗಳನ್ನು ಜೀವಂತ ಕೊಲ್ಲುವ ಬದಲು ಅವುಗಳ ಸಂತತಿ ಬೆಳೆಯದಂತೆ ಸಂತಾನಹರಣ ಚಿಕಿತ್ಸೆ ಮಾಡೋಣ" ಎಂದು ಅವರು ಹೇಳಿದರು. ಈ ಸೂಚನೆಯನ್ನು ಸ್ವೀಕರಿಸುವ ಎಂದಾಗ ಕಸಾಯಿಯೊಬ್ಬ ಹೇಳಿದ, "ಈ ಬೀದಿನಾಯಿಗಳಿಗೆ ನೀವ್ಯಾರೂ ಆಹಾರ ಕೊಡುವುದಿಲ್ಲ. ನಾವು ಮಾಂಸ ಕತ್ತರಿಸಿ ಎಸೆದ ಎಲುಬು ತಿಂದು ಇವುಗಳು

ಬದುಕುತ್ತವೆ. ರಾತ್ರಿ ಹೊತ್ತು ಪೇಟೆ ಕಾಯುತ್ತಾ ನಮ್ಮ ಋಣವನ್ನು ತೀರಿಸುತ್ತವೆ. ಇವರಿಂದ ಗೂರ್ಖರಿಗೆ ನೀಡುವ ಹಣ ಉಳಿಯುತ್ತದೆ" ಎಂದು ಫರ್ಮಾನು ಹೊರಡಿಸಿದ.

ಕಸಾಯಿಯವನ ಮಾತಿಗೆ ಬಹುತೇಕ ಎಲ್ಲರೂ ತಲೆದೂಗಿದರಾದರೂ, ಕೋಮು ಸಂಘಟನೆಯೊಂದರ ಮುಖಂಡನೊಬ್ಬ ಬಲವಾದ ಆಕ್ಷೇಪ ಎತ್ತಿದ. "ನಾಯಿಗಳು ರಾತ್ರಿ ಪೇಟೆ ಕಾಯುತ್ತವೆ, ಒಳ್ಳೆಯದು. ಗೂರ್ಖನಿಗೆ ಕೊಡುವ ಹಣ ಉಳಿಯುತ್ತದೆ, ಅದೂ ಒಳ್ಳೆಯದೇ. ಆದರೆ ಕೆಲವು ಸಲ ಅವು ನಮ್ಮನ್ನೇ ಕಚ್ಚಲು ಬರುತ್ತವೆ, ಅದಕ್ಕೇನು ಉಪಾಯ?"

ಸ್ವಲ್ಪ ಹೊತ್ತು ಯಾರೂ ಧ್ವನಿ ಎತ್ತಲಿಲ್ಲ. ಸಾಕಷ್ಟು ಸಮಯ ಕಳೆದ ನಂತರ ಕಸಾಯಿಯವನು ಉತ್ತರಿಸಿದ, "ಈ ನಾಯಿಗಳು ಬೀದಿಬದಿಯ ಕಾಟು ನಾಯಿಗಳಿರಬಹುದು. ಹಾಗೆಂದು ಅವು ಸುಮ್ಮನೆ ಎಲ್ಲರನ್ನೂ ಕಚ್ಚುವುದಿಲ್ಲ. ಯಾರ ನಡೆ ಸಂಶಯಾಸ್ಪದವಾಗಿ ಇರುವುದೋ ಅವರನ್ನು ಮಾತ್ರ ಕಚ್ಚಿ ಘಾಸಿಗೊಳಿಸುತ್ತವೆ"

ಅನುವಾದಕರು: **ಬಿ. ಮಧುಕರ ಮಲ್ಯ**

❖ ❖ ❖❖ ❖

ಪ್ರಿಯ ಸಾಂತಾಕ್ಲೊಸ್

✍ ಎಡ್ವಿನ್ ಜೆ.ಎಫ್. ಡಿಸೋಜಾ

ಆ ಸಂಜೆ ಅವನಿಗೆ ಪಾರ್ಲರ್‌ನಲ್ಲಿ ಕೆಲಸವಿತ್ತು.

ಸಮಯ ಸಂಜೆಯ ಐದೂವರೆ ಗಂಟೆ ಮಾತ್ರ. ಕಣಿವೆಯಲ್ಲಿ ಆಗಲೇ ಮಂಜು ಕವಿದಿದೆ. ಡಿಸೆಂಬರ್ ತಿಂಗಳು. ಕ್ರಿಸ್‌ಮಸ್‌ಗೆ ಮೂರೇ ದಿನ ಬಾಕಿ ಉಳಿದಿದೆ.

ಅದು ಹಿರಿಯ ನಾಗರಿಕರ ಮನೆ. ವೃದ್ಧಾಶ್ರಮ.

ಎಪ್ಪತ್ನಾಲ್ಕು ವರ್ಷ ಪ್ರಾಯದ ಮಿಸ್ಟರ್ ಪಿಂಟೋ ಅವರನ್ನು ನೋಡಲು ಅವರ ಮೊಮ್ಮಕ್ಕಳು ಬಂದಿದ್ದಾರೆ. ಚಿಲಿಪಿಲಿಯಾಡುವ ಚಿಕ್ಕಚಿಕ್ಕ ಕೋಳಿಮರಿಗಳ ಹಾಗೆ ಕಾಣುತ್ತಾರೆ. ಅವನು ಅವರನ್ನು ಪಾರ್ಲರಿನಲ್ಲಿ ಕುಳಿತುಕೊಳ್ಳುವಂತೆ ತಿಳಿಸಿದ.

"ಕ್ರಿಸ್‌ಮಸ್ ದಿನ ನಮಗೆ ಬಿಡುವೇ ಸಿಗುವುದಿಲ್ಲ ಅಂಕಲ್," ಅವರು ಹೇಳಿದರು. "ಆದ್ದರಿಂದ ಅಜ್ಜನಿಗೆ ನೋಡಲು ನಾವು ಇವತ್ತೇ ಬಂದೆವು."

ಅವರ ಕೈಯಲ್ಲಿ ಉಡುಗೊರೆಯ ಡಬ್ಬಿಗಳಿದ್ದವು. "ಈ ಸಲ ಕೇಕಿನ ಸುಗ್ಗಿಯೇ ಆಗುತ್ತದೆ" ಆತ ತನ್ನಷ್ಟಕ್ಕೆ ಮಾತನಾಡಿಕೊಂಡ. ಪಿಂಟೊಗೆ ಹೊರಗೆ ಬರಲಾಗುತ್ತಿರಲಿಲ್ಲ. ಆದ್ದರಿಂದ ಪಾರ್ಲರಿನವ ಅವರನ್ನು ಪಿಂಟೋವಿನ ಕೋಣೆಗೆ ಕರೆದೊಯ್ದ. ತಮ್ಮ ಮೂಗು, ಬಾಯಿ ತಿರುಗಿಸುತ್ತಾ ಅವರು ಒಳಗೆ ಹೋದರು.

ಪಾರ್ಲರಿನ ಸೋಫಾದ ಮೇಲಿರುವ ತನ್ನ ಉಪಕರಣಗಳ ಪೆಟ್ಟಿಗೆಯನ್ನು ಕೈಗೆತ್ತಿಕೊಳ್ಳುವಷ್ಟರಲ್ಲಿ ಗಾಳಿ ಬೀಸತೊಡಗಿತು. ಆತ ತನ್ನ ಉಣ್ಣೆಕೋಟಿನ ಗುಂಡಿಯನ್ನು ಹಾಕಿದ. ತಲೆಗೆ ರುಮಾಲು ಸುತ್ತಿದ. ಸೋಫಾದ ಇನ್ನೊಂದು ಮೂಲೆಯಲ್ಲಿ ಒಂಭತ್ತು ಅಡಿ ಎತ್ತರದ ಕ್ರಿಸ್‌ಮಸ್ ಮರ ಎದ್ದು ನಿಂತಿತ್ತು. ಅದರ ಅಲಂಕಾರ ಆಗಲೇ ಪ್ರಾರಂಭಗೊಂಡಿದೆ. ಝಗಮಗಿಸುವ ಬೇಗಡೆಗಳು, ಬೆಳಕಿನ ದೀಪಗಳು, ಸಣ್ಣ ಗೊಂಬೆಗಳು, ಚಿಕ್ಕಚಿಕ್ಕ ಸಾಂತಾಕ್ಲೊಸ್‌ಗಳು.

ಆಗ್ನೆಸ್ ಇನ್ನೂ ಬಂದಿರಲಿಲ್ಲ.

ಅವನಿಗೆ ಪಾರ್ಲರ್ ಡ್ಯೂಟಿ ಇದ್ದಾಗ ಅವಳು ಐದು ಮುಕ್ಕಾಲು ಗಂಟೆಯೊಳಗೆ ಬಂದು ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದಳು.

"ಹುಂ! ಆಗ್ನೇಸಾಳಿಗೆ ಹೊಸ ರೂಮ್‌ಮೇಟ್ ಬಂದಿರುವರಲ್ಲ?" ಅವನು ತನ್ನಷ್ಟಕ್ಕೆ ಹೇಳಿಕೊಂಡ. ಕಳೆದ ಮೂರು ವರ್ಷಗಳಿಂದ ತನ್ನಷ್ಟಕ್ಕೆ ಮಾತನಾಡಿಕೊಳ್ಳುವುದು ಅವನಿಗೆ ಅಭ್ಯಾಸವಾಗಿ ಬಿಟ್ಟಿದೆ. "ಆ ಲಂಡನ್ ಲೂಸಿಯ ಕತೆಗಳು ಕೊನೆಗೊಳ್ಳ ಬೇಕಲ್ಲ?" ಅವನು ನಕ್ಕ.

"ಯಾರನ್ನು ನೋಡಿ ನಗ್ತಿದ್ದಿಯಾ, ರುಡಿ?"

ಆಗ್ನೆಸಾಳ ಧ್ವನಿ ಕೇಳಿ ಆತ ಮುಕ್ತವಾಗಿ ನಕ್ಕುಬಿಟ್ಟ.

"ನಿನಗೆ ನಾನು ಸಾವಿರ ಸಲ ಹೇಳಿದ್ದೇನೆ, ಮಫ್ಲರ್‌ನಿಂದ ಕಿವಿ ಮುಚ್ಚಿಕೋ ಎಂದು. ಆದರೆ ನಿನಗೆ ಮಫ್ಲರ್ ಒಂದು ಫ್ಯಾಷನ್ ಆಗಿಬಿಟ್ಟಿದೆ" ಆಗ್ನೆಸ್ ಅವನ ಮಫ್ಲರ್ ತೆಗೆದು ಕಿವಿಯಿಂದ ಕೆಳಗಿಳಿಸಿ ಸುಂದರವಾಗಿ ಸುತ್ತಿದಳು.

"ಲಂಡನ್ ಲೂಸಿಯು ಕಥೆಗಳು ಇನ್ನೂ ಇದೆಯೋ ಅಥವಾ ಮುಗಿದು ಹೋದವ್ರೋ?" ರೂಡಿ ವಿಚಾರಿಸಿದ.

"ಯಾರು? ನನ್ನ ಹೊಸ ರೂಮ್‌ಮೇಟ್? ನಿನಗೆ ಅವಳ ಪರಿಚಯ ಕೂಡಾ ಇದೆಯಾ?" ಆಗ್ನೆಸ್ ದೂರಿದಳು.

"ಪರಿಚಯವಿಲ್ಲದೆ ಏನು?" ಆಗ್ನೆಸಾಳ ಭುಜವನ್ನು ಮೃದುವಾಗಿ ತಟ್ಟುತ್ತಾ ಅವನು ಹೇಳಿದ, "ನಮ್ಮ ವಾಡೆಯಿಂದ ಹಡಗಿನಲ್ಲಿ ಲಂಡನಿಗೆ ಹೋದ ಮೊಟ್ಟಮೊದಲ ಹುಡುಗಿ ಅವಳು. ದೊಡ್ಡವರ ಮನೆಮಗಳು. ಈಗಲೂ ಆ ಸೌಂದರ್ಯ ಕಡಿಮೆಯಾಗಿಲ್ಲ. ಎರಡು ದಿನಗಳ ಹಿಂದೆ ಅವಳನ್ನು ಅವಳ ಮಕ್ಕಳು ಸಾಕಷ್ಟು ಸಡಗರದಿಂದ ಅಲ್ಲಿಂದ ಕಳುಹಿಸಿಕೊಟ್ಟಿದ್ದಾರೆ. ಎಷ್ಟು ದುಃಖ, ಎಷ್ಟು ಉಪದೇಶ, ಎಷ್ಟು ಮುತ್ತುಗಳು.."

ಆಗ್ನೆಸ್ ಬಂದು ಅವನ ಹತ್ತಿರ ಕುಳಿತಳು.

"ನಮ್ಮ ಮರ್ವಿನನ ಪತ್ರ ಬಂದಿದೆ" ಅವಳು ಹೇಳಿದಳು. "ಅದನ್ನು ಓದಿ ಬರುವಷ್ಟರಲ್ಲಿ ತಡವಾಯಿತು." ತನ್ನ ಚೀಲದಿಂದ ಪತ್ರ ತೆಗೆದು ರುಡಿ ಕೈಯಲ್ಲಿಟ್ಟಳು. ಅವನು ಅದನ್ನು ತೆಗೆದುಕೊಂಡ, ಆದರೆ ತೆರೆದು ನೋಡಲಿಲ್ಲ.

"ಅವನು ಈ ಬಾರಿಯೂ ಬರುವುದಿಲ್ಲವೇನು?" ಅವನು ಅವಳ ಕೈ ಮೇಲೆ ತನ್ನ ಕೈಯಿಟ್ಟ.

"ಅವನ ಮಗಳಿಗೆ, ನಮ್ಮ ಮೊಮ್ಮಗಳು ಲೀಜಾಗೆ ಮದುವೆ ಗೊತ್ತಾಗಿದೆಯಂತೆ!" ಆಗ್ನೆಸ್ ಹೇಳಿದಳು. "ಕ್ರಿಸ್‌ಮಸ್ ವಾರದಲ್ಲಿಯೇ ಮದುವೆಯಂತೆ. ಮದುಮಗ ಕೆನಡಾದಲ್ಲಿ ಇರುವವನಂತೆ. ಕ್ರಿಸ್‌ಮಸ್ ಮುಗಿದ ಮೇಲೆ ಮರ್ವಿನ್ ಮತ್ತು ಅವರ ಕುಟುಂಬ ನ್ಯೂಯಾರ್ಕ್‌ನಿಂದ ಕೆನಡಾಗೆ ಹೋಗುತ್ತಾರಂತೆ. ಆಮಂತ್ರಣ ಪತ್ರಿಕೆಯನ್ನು ಕಳುಹಿಸಲು ಕೂಡಾ ಸಮಯವಿಲ್ಲವಂತೆ."

ರುಡಿ ಆಗ್ನೆಸಾಳ ಕೈ ತಟ್ಟಿ ಹೇಳಿದ, "ಒಬ್ಬಳೇ ಮಗಳು, ಬಡಪಾಯಿ ಏನು ಮಾಡುತ್ತಾನೆ? ಭಾರತಕ್ಕೆ ಹೇಗೆ ಬರ್ತಾನೆ? ಈ ವರ್ಷ ಹೀಗೆ ಎಂದಾಯಿತು," ಆಗ್ನೇಸಾಳ ಬಿಸಿ ಕಣ್ಣೀರು ರುಡಿಯ ಕೈಮೇಲೆ ಬಿದ್ದವು.

"ಆದರೆ ಇಷ್ಟು ವರ್ಷ? ಮರ್ವಿನ್ ಕೂಡಾ ನಮಗೆ ಒಬ್ಬನೇ ಮಗ!"

ರುಡಿ ಏನೂ ಹೇಳಲಿಲ್ಲ.

ಮೂರುವರ್ಷಗಳ ಹಿಂದೆ ಇದೇ ಪಾರ್ಲರ್‌ನಲ್ಲಿ ನೋಡಿದ ದೃಶ್ಯ ಅವನ ಕಣ್ಣೆದುರು ಮೂಡಿಬಂತು. ಆಗ ಎಲ್ಲರೂ ಇದ್ದರು. ಮರ್ಲಿನ್, ಅವನ ಹೆಂಡತಿ ಬ್ಯೂಲಾ, ಮಗಳು ಲೀಜಾ, ಮದರ್ ಸುಪೀರಿಯರ್ ಮತ್ತು ಇಬ್ಬರು ಮಾದ್ರಿಗಳು.

"ಮಮ್ಮೀ, ಡ್ಯಾಡಿ," ಅವರನ್ನು ಬಳಸಿ ಹಿಡಿದು ಮರ್ವಿನ್ ಹೇಳಿದ, "ನಿಮ್ಮ ತಲೆಯಲ್ಲಿ ಏನು ತಿರುಗುತ್ತಿದೆ ಎಂಬುದು ನನಗೆ ತಿಳಿದಿದೆ. ನಾನು ನಿಮ್ಮ ಒಬ್ಬನೇ ಮಗ ಮತ್ತು ನಾನು ನಿಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದೇನೆ ಎಂದು ಜನರು ಏನು ತಿಳಿದುಕೊಂಡಾರು ಎಂದು ನೀವು ಚಿಂತೆಗೆ ಒಳಗಾಗಿದ್ದೀರಿ. ಆದರೆ ನಾನು ಜಗಕ್ಕೆ ಹೆದರುವುದಿಲ್ಲ. ನನಗೆ ನಿಮ್ಮ ಭದ್ರತೆ ಮತ್ತು ಯೋಗಕ್ಷೇಮ ಮುಖ್ಯ. ಅಮ್ಮಾ, ನೋಡು, ನಾವು ಅಮೇರಿಕೆಯ ಖಾಯಂ ವಾಸಿಗಳಾಗಿದ್ದೇವೆ. ನನ್ನ ಲೀಜಾಳಿಗೆ ಭಾರತ ಒಗ್ಗುವುದೇ ಇಲ್ಲ. ಅವಳಿಗೂ ಒಂದು ಭವಿಷ್ಯವಿದೆ. ಇದುವರೆಗೆ ನಾವು ಇಲ್ಲಿಗೆ ಬರುತ್ತಿದ್ದೆವು, ಹೋಗುತ್ತಿದ್ದೆವು. ಆದರೆ ಇನ್ನು ಮುಂದೆ ಆಗುವುದಿಲ್ಲ. ಬ್ಯೂಲಾ ಇನ್ನೂ ಹೆಚ್ಚು ಕಲಿಯುವುದೆಂದು ನಿರ್ಧರಿಸಿದ್ದಾಳೆ. ಆದರೂ ಎರಡು ಮೂರು ವರ್ಷಗಳಲ್ಲಿ ಒಮ್ಮೆಯಾದರೂ ನಾನು ಬರುತ್ತೇನೆ. ಲೀಜಾಳಿಗೆ ಈಗ ಹದಿನೆಂಟು ತುಂಬಿದೆ. ಹೆಚ್ಚೆಂದರೆ ಅವಳು ಎಷ್ಟು ವರ್ಷ ನಮ್ಮ ಜೊತೆ ಇರಬಹುದು?

ಇಲ್ಲಿ ನಿಮಗೆ ಯಾವ ಕೊರತೆಯೂ ಇರಲಾರದು. ಹಣದ ತೊಂದರೆಯಂತೂ ಇಲ್ಲ. ಈ ಮಾದ್ರಿ ನಿಮಗೆ ಪ್ರೀತಿ ನೀಡಬಹುದು. ಬೇರೆಬೇರೆ ಕಟ್ಟಡಗಳಲ್ಲಿ ಇದ್ದರೆ ತಾನೇ ಏನಾಯ್ತು? ನೀವು ಒಂದೇ ವಠಾರದಲ್ಲಿ ಇದ್ದವರು ತಾನೇ?" ಆವನು ಮಾದ್ರಿಯರನ್ನು ನೋಡಿ ನಕ್ಕ. "ನೀವು ಯಾವಾಗ ಬೇಕಾದರೂ ಭೇಟಿಯಾಗಲು ಮದರ್ ಸುಪೀರಿಯರ್ ಒಪ್ಪಿದ್ದಾರೆ. ಆ ನಮ್ಮ ಬಂಗ್ಲೆಯನ್ನು ನಾನು ಮಾರುವುದಿಲ್ಲ. ಅದು ಯಾವಾಗಲೂ ನಿಮ್ಮ ವಶದಲ್ಲಿಯೇ ಇರುತ್ತದೆ. ನೋಡಿ, ಅದರ ಕೀಲಿಕೈ ಇಲ್ಲಿಯೇ ಇದೆ."

ಅವನು ನೀಡಿದ ಕೀಲಿಕೈ ಗೊಂಚಲನ್ನು ರುಡಿ ತೆಗೆದುಕೊಂಡ.

"ನಾನು ಕಾವಲುಗಾರನ ವ್ಯವಸ್ಥೆ ಮಾಡಿದ್ದೇನೆ"

ಅವರು ಏನೂ ಹೇಳಲಿಲ್ಲ.

"ನೀವು ಯಾಕೆ ಮಾತನಾಡುವುದಿಲ್ಲ?" ಈಗ ಮರ್ವಿನನ ಕಂಠದಲ್ಲಿ ಅಸಮಾಧಾನ ತುಂಬಿತು. "ನನ್ನ ತರ್ಕ ನಿಮಗೆ ತಿಳಿಯುವುದಿಲ್ಲ, ಹೌದು ತಾನೇ? ಇನ್ನು ನೀವು ಮೂರು ನಾಲ್ಕು ವರ್ಷ ಆಚೀಚೆ ಆಡ್ಡಾಡಿಕೊಂಡು ಇರಬಹುದು. ಅಮ್ಮನಿಗೆ ಈಗಾಗಲೇ ಸಂಧಿನೋವು ಶುರುವಾಗಿದೆ. ಇನ್ನು ನೀನು ಡ್ಯಾಡಿ, ರಕ್ತದೊತ್ತಡ, ಸಕ್ಕರೆ ಕಾಯಿಲೆ.. ನಾಳೆ ನೀವು ಕುಸಿದರೆ ಏನಾಗಬಹುದು? ವೈದ್ಯರನ್ನು ಕರೆತರುವವರು ಯಾರು? ನಿಮ್ಮ

ಚಾಕರಿ ಮಾಡುವವರು ಯಾರು?"

"ನಮಗೆ ಅರ್ಥವಾಗುತ್ತದೆ ಮಗಾ, ಮರ್ವಿನ್!" ಅವನ ಮಾತನ್ನು ನಡುವೆಯೇ ನಿಲ್ಲಿಸಿದ ರೂಡಿ. "ನಾವು ನಿನಗೆ ಜನ್ಮ ನೀಡಿದೆವು ಹೌದು. ಆದರೆ ನಿನ್ನ ಬದುಕನ್ನು ಹಣಕ್ಕೆ ಖರೀದಿಸುವುದಿಲ್ಲ."

"ನೀವು ನಿಜವಾದ ಕಾಳಜಿಯಿಂದ ಹೇಗೆ ಹೇಳುತ್ತಿದ್ದೀರಾ, ಅಪ್ಪಾ?"

"ಇದುವರೆಗೆ ನಿನ್ನ ತಂದೆ ನಿನಗೆ ಮೋಸ ಮಾಡಿದ್ದುಂಟೆ, ಮರ್ವಿನ್?" ಶಾಂತ ಧ್ವನಿಯಿಂದ ಆಗ್ನೆಸ್ ಹೇಳಿದಳು.

ದೀರ್ಘ ಉಸಿರೆಳೆದುಕೊಂಡು ಮರ್ವಿನ್ ಸೆಟೆದು ಕುಳಿತ. ಒಂದು ಅಪ್ಪುಗೆ, ಎರಡು ಮುತ್ತುಗಳು, ಮತ್ತು ಸ್ವಲ್ಪ ದುಃಖ...ಪಾರ್ಲರ್ ಖಾಲಿಯಾಯಿತು. ಅವರಿಗೆ ಮಾದ್ರಿಯವರು ಅವರ ಬೇರೆಬೇರೆ ಕಟ್ಟಡ ಮತ್ತು ಕೋಣೆಗಳನ್ನು ತೋರಿಸಿದರು.

ವೃದ್ಧಾಶ್ರಮದಲ್ಲಿ ಅವರಿಗೆ ಯಾವುದೇ ದೈಹಿಕ ಶ್ರಮ ಇರಲಿಲ್ಲ. ಒಳ್ಳೇ ತಿಂಡಿ, ಊಟ, ಶುದ್ಧ ಪರಿಸರ, ಮನರಂಜನೆ, ಪ್ರವಾಸಗಳು, ಕಾಯಿದೆ–ಕಾನೂನಿನ ಪರಿಪಾಲನೆ, ವಾರದಲ್ಲಿ ಒಮ್ಮೆಯಾದರೂ ಪುಣ್ಯವಂತ ಗೃಹಸ್ಥರ ಮನೆಯಿಂದ ಬರುವ ಉತ್ತಮ ಆಹಾರ ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ.

"ಆಗ್ನೆಸ್, ನೀನು ಕ್ರಿಸ್‌ಮಸ್ ಸಮಯದಲ್ಲಿ ಬಹಳ ಭಾವುಕಳಾಗಿ ವರ್ತಿಸುತ್ತಿ," ಅವನು ಅವಳ ಭುಜದ ಮೇಲೆ ಕೈಯಿಟ್ಟ. "ಪ್ರಯೋಜನವೇನು?"

"ಕ್ರಿಸ್‌ಮಸ್ ಸಮಯದಲ್ಲಿ ದೇವರು ನಮ್ಮ ಬಹಳ ಹತ್ತಿರ ಇರುವನೆಂದು ನಾನು ಕೇಳಿದ್ದೇನೆ"

"ಆಗಿರಬಹುದು" ಅವನು ಹೇಳಿದ.

"ನೋಡು, ಮೂರು ದಿನ ಮೊದಲೇ ಮಗು ಏಸುವನ್ನು ಕ್ರಿಸ್‌ಮಸ್ ಮರದ ಕೆಳಗೆ ಮಲಗಿಸಿದ್ದಾರೆ" ಹೇಳಿ ಅವಳು ನಕ್ಕಳು.

"ಈ ಬಾರಿಯೂ ಸಾಂತಾಕ್ಲೊಸ್ ನಾನೇ ಆಗಬೇಕೆಂದು ಮದರ್ ಹೇಳಿದ್ದಾರೆ."

"ನೀನು ತುಂಬಾ ಜಾಣ," ಆಗ್ನೇಸ್ ಛೇಡಿಸಿದಳು. "ಸಾಂತಾಕ್ಲೊಸ್‌ನ ವೇಷದಲ್ಲಿ ಮೆರ್ರಿ ಕ್ರಿಸ್‌ಮಸ್, ಮೆರ್ರಿ ಕ್ರಿಸ್‌ಮಸ್, ಎನ್ನುತ್ತಾ ಎಲ್ಲರ ಮುತ್ತುಗಳನ್ನು ತೆಗೆದುಕೊಳ್ಳುತ್ತಿ. ಮುಂದಿನ ವರ್ಷ ಆ ಬೆಳ್ಳಗಿನ ಮಾದ್ರಿಯನ್ನು ಕೂಡಾ ಬಿಡುವುದಿಲ್ಲ."

"ಸುಮ್ಮನಿರು," ರುಡಿ ಹೇಳಿದ, "ನಿನ್ನನ್ನು ಈಗಲೇ ಆಲಂಗಿಸಿ, ಮುತ್ತು ಕೊಡಬೇಕೆಂದು ನನಗೆ ಅನಿಸುತ್ತದೆ"

ಆಗ್ನೆಸಾಳ ಕೆನ್ನೆ ಕೆಂಪಾಯಿತು.

ಮಾದ್ರಿಯವರು ಕಾರ್ಯಕ್ರಮವನ್ನು ಸುಂದರವಾಗಿ ಆಯೋಜಿಸಿದ್ದರು. ಸಂಜೆ ಏಳೂವರೆಗೆ ಪ್ರಾರ್ಥನೆ. ನಂತರ ಕ್ರಿಸ್‌ಮಸ್ ಗೀತೆಗಳು, ಕ್ರಿಸ್‌ಮಸ್ ಮರ ಮತ್ತು ಊಟ. ನೃತ್ಯ ಮಾಡಲು ಶಕ್ತರಿರುವವರು ನೃತ್ಯ ಮಾಡುವುದು, ರಾತ್ರಿಯಿಡೀ ಬೆಂಕಿಯ ಸುತ್ತಲೂ ಕುಳಿತುಕೊಳ್ಳಲು ಆಸಕ್ತಿ ಇರುವವರಿಗೆ ಹೆಚ್ಚಿನ ಪರವಾನಗಿ. ಪ್ರಾರ್ಥನೆಗೆ ಹೋಗುವಾಗಲೇ ರುಡಿ ಸಾಂತಾಕ್ಲೊಸನ ಉಡುಗೆಯಲ್ಲಿ ಬಂದಿದ್ದನು. ಆಗ್ನೆಸಾಳ ಮುಖದಲ್ಲಿ ಅಭಿಮಾನಪೂರ್ವಕ ಮಿಶ್ರಭಾವನೆಗಳು ಇದ್ದವು. ಪ್ರಾರ್ಥನೆ ಮುಗಿದ ಮೇಲೆ ರುಡಿ ಮೂರುಪಟ್ಟು ಸ್ಫೂರ್ತಿಯಿಂದ ಎದ್ದು ನಿಂತ. ಕೈಗೊಳಗಿನ ಘಂಟೆ ಬಾರಿಸುತ್ತಾ ಬಹುಮಾನಗಳನ್ನು ಹಂಚಿದ. ಎಲ್ಲರನ್ನೂ ಆಲಂಗಿಸಿ ಮುತ್ತು ಕೊಟ್ಟ. ಬೆಳ್ಳಗಿದ್ದ ಮಾದ್ರಿಯನ್ನು ಸಹ ಬಿಡಲಿಲ್ಲ. ಆಮೇಲೆ ಉಳಿದವರ ಗಮನವೆಲ್ಲಾ ಸಮೂಹ ಗೀತೆಯ ಕಡೆಗೆ, ಕ್ರಿಸ್‌ಮಸ್ ಗಿಡ ಮತ್ತು ಮಾದ್ರಿಯವರು ತಯರಿಸಿದ ವೈನ್ ಮೇಲೆ ಹರಿದಾಗ, ಅವನು ಒಂದು ಮೂಲೆಯಲ್ಲಿ ನಿಂತುಕೊಂಡಿರುವ ಆಗ್ನೆಸಾಳ ಬಳಿ ಸಾರಿದ.

ಮಾತಿನಿಂದಲೇ ಅವಳನ್ನು ತಿವಿದ. ಮೌನದಲ್ಲಿ ಕೇಳಬೇಕೆನ್ನುವ ಎಲ್ಲವನ್ನೂ ಕೇಳಿದ.

"ಈ ಕ್ರಿಸ್‌ಮಸ್‌ಗೆ ನನಗೆ ಒಂದು ಉಡುಗೊರೆ ಬೇಕು" ಅವನು ಅವಳ ಕಿವಿಯಲ್ಲಿ ಪಿಸುಗುಟ್ಟಿದ.

"ಕೇಳು, ಪ್ರಿಯ ಸಾಂತಾಕ್ಲೊಸ್, ಕೇಳು."

"ಖಂಡಿತವಾಗಿಯೂ ಕೊಡುವೆಯಾ?"

"ಖಂಡಿತ!"

"ಹಾಗಿದ್ದರೆ, "ಅವನು ಆಚೀಚೆ ದೃಷ್ಟಿ ಹರಿಸುತ್ತಾ ಹೇಳಿದ, ಹಾಗಿದ್ದರೆ ಈಗಲೇ ನಾವು ಇಲ್ಲಿಂದ ಓಡಿ ಹೋಗೋಣ"

"ಹುಚ್ಚೇನಾದರೂ ಹಿಡಿದಿದೆಯಾ?" ಅವನನ್ನು ಸ್ವಲ್ಪ ಹತ್ತಿರ ಎಳೆದುಕೊಂಡು ಆಗ್ನೆಸ್ ವಿಚಾರಿಸಿದಳು. ಸಾಂತಾಕ್ಲೊಸ್‌ನ ಉಡುಪು ಅವಳ ಗಲ್ಲವನ್ನು ತರಚುತ್ತಿತ್ತು. "ಈ ಮಾದ್ರಿಯ ವೈನ್ ಏನಾದರೂ ನಿನ್ನ ತಲೆಗೆ ಹತ್ತಿದೆಯಾ?" ನಂತರ ಅವಳು ಕೇಳಿದಳು, "ಓಡುವುದಾದರೂ ಎಲ್ಲಿಗೆ?"

ಅವನು ಕೆಳಧ್ವನಿಯಲ್ಲಿ ಉತ್ತರಿಸಿದ, "ಮೊದಲು ಇಲ್ಲಿಂದ ಕಳಚಿಕೊಂಡು ಕಣಿವೆಯ ಊರಿನಲ್ಲಿ ತಿರುಗಾಟ ನಡೆಸುವುದು. ಸಿಕ್ಕಿದವರಿಗೆಲ್ಲಾ ಅಭಿವಂದನೆ ಸಲ್ಲಿಸಿ, ಒಂದು ಬಾಟ್ಲಿ ವೈನ್ ಮತ್ತು ಹುರಿದ ಟರ್ಕಿ ಹಿಡಿದು..." ಅವನು ತನ್ನ ಮಾತು ನಿಲ್ಲಿಸಿದ.

"ಪ್ರಿಯ ಸಾಂತಾಕ್ಲೊಸ್, ಮುಂದೆ ಮಾತಾಡು"

ಅವನು ಮತ್ತೆ ಅವಳನ್ನು ಆಲಂಗಿಸಿಕೊಂಡನು.

"ಇಂದಿನ ಈ ಪವಿತ್ರ ರಾತ್ರಿಯನ್ನು ನಮ್ಮ ಬಂಗಲೆಯಲ್ಲಿಯೇ ಕಳೆಯೋಣ ಆಗ್ನೆಸ್!" ಅವನು ಉದ್ವೇಗದಿಂದ ಹೇಳಿದ. "ನಾನು ಮದರ್ ಸುಪೀರಿಯರಳ ಒಪ್ಪಿಗೆ ಪಡೆದಿದ್ದೇನೆ."

ಆಗ್ನೆಸಾಳ ಮುಖಕಮಲದಲ್ಲಿ ಆಶ್ಚರ್ಯ ಮೂಡಿತು. ಜೊತೆಗೆ ಒಂದು ವಿಧದ ವಿಷಾದ.

"ಆ ಬಂಗ್ಲೆಯಲ್ಲಿ ಏನು ಉಳಿದಿದೆ ಅಂತ?" ಅವಳು ಕೇಳಿದಳು.

"ನನ್ನ ಪಾರಿವಾಳಗಳು ಇದ್ದರೂ ಇರಬಹುದು," ಅವನು ಹೇಳಿದ. "ಕಿಟಕಿಯ ಸಂದಿನಲ್ಲಿ ಅವು ಗೂಡು ಕಟ್ಟುತ್ತವೆ."

"ನೀನು ಭ್ರಮೆಯಲ್ಲಿ ಇರುವಿ, ರುಡಿ," ಅವಳು ಹೇಳಿದಳು. "ಚಳಿಗಾಲದಲ್ಲಿ ಪಾರಿವಾಳಗಳು ಈ ಕಣಿವೆಯಲ್ಲಿ ಉಳಿಯುವುದಿಲ್ಲ. ಪ್ರಾರಂಭದಲ್ಲಿಯೇ ಅವು ಹಾರಿ ಹೋಗುತ್ತವೆ"

ಅವನು ತಲೆಯೆತ್ತಿ ಆಕಾಶ ನೋಡಿದ. ದಶಂಬರ ತಿಂಗಳಿನ ಸ್ವಚ್ಛ ಆಗಸದಲ್ಲಿ ನಕ್ಷತ್ರಗಳು ಕೈಗೆಟಕುವಷ್ಟು ಹತ್ತಿರ ಬಂದಂತೆ ಕಾಣುತ್ತಿದ್ದವು.

"ನಮ್ಮ ಬಂಗಲೆಯೊಳಗಿನ ಬಿಸಿ ಯಾವಾಗಲೂ ತಣ್ಣಗಾಗುವುದಿಲ್ಲ, ಆಗ್ನೆಸ್!" ಅವನು ಹೇಳಿದ. "ಇದರ ಹೊರತಾಗಿ ನೀನು ನನಗೆ ಮಾತು ಕೊಟ್ಟಿರುವೆ" ಅವನು ಆಕೆಯ ಕೈಹಿಡಿದುಕೊಂಡ.

"ರುಡಿ! ನೀನೊಬ್ಬ ಅಸಾಧ್ಯ ಮನುಷ್ಯ. ಪೇಟೆಯಲ್ಲಿ ಸುತ್ತಾಟ, ವೈನ್, ಹುರಿದ ಟರ್ಕಿ, ಈ ವಯಸ್ಸಿನಲ್ಲಿ ಇವೆಲ್ಲ ನಮಗೆ ಸಾಧ್ಯವೇ?"

"ಮಾಡಿ ನೋಡಿದರೆ ಮಾತ್ರ ತಿಳಿದುಬರುತ್ತದೆ!"

"ಪ್ರಿಯ ಸಾಂತಾಕ್ಲೊಸ್ ಈ ವೇಷವನ್ನಾದರೂ ಬದಲಾಯಿಸಲಾರೆಯಾ?" ಬೇರೆ ಎಲ್ಲದಕ್ಕೂ ತನ್ನ ಸಮ್ಮತಿ ಇದೆ ಎಂದು ಸೂಚಿಸಿ ಅವಳು ಹೇಳಿದಳು.

"ಸ್ವಲ್ಪವೂ ಬದಲಾಗಿಲ್ಲ!" ರುಡಿ ಹೇಳಿದ. "ಇಷ್ಟು ಸುಂದರ ಹೆಣ್ಣನ್ನು ಕ್ರಿಸ್‌ಮಸ್ ರಾತ್ರಿಯಂದು ಯಾವ ಸಾಂತಾಕ್ಲೊಸ್ ಪೇಟೆಯಲ್ಲಿ ತಿರುಗಾಡಿಸುತ್ತಾನೆ ಎಂದು ನಾನು ನೋಡುತ್ತೇನೆ."

ಅನಂತರ...

ಅವರು ಬಂಗ್ಲೆ ಮುಂದೆ ನಿಲ್ಲಿಸಿದ ಟ್ಯಾಕ್ಸಿಯಿಂದ ಕೆಳಗಿಳಿದಾಗ ಮುಂಜಾನೆ ನಾಲ್ಕು ಗಂಟೆ. ಅವರ ಶಕ್ತಿಯೆಲ್ಲಾ ಉಡುಗಿ ಹೋದಂತಿತ್ತು.

"ಕ್ರಿಸ್‌ಮಸ್ ಶುಭಾಶಯಗಳು ಸರ್, ಬಾಸ್, ಕ್ಯಾಪ್ಟನ್, ಸಾಂತಾಕ್ಲೊಸ್!" ರುಡಿ ನೀಡಿದ ದೊಡ್ಡ ಉಡುಗೊರೆಯನ್ನು ನೋಡಿ ಟ್ಯಾಕ್ಸಿ ಚಾಲಕ ಉದ್ಗರಿಸಿದ, "ಇನ್ನು ನಿಮಗೂ ಕೂಡಾ ಮೇಡಂ"

ಬಂಗಲೆಯ ಅಂಗಳದಲ್ಲಿ ಮಂದವಾದ ದೀಪವೊಂದು ಉರಿಯುತ್ತಿತ್ತು. ಕಾವಲುಗಾರ ಹಾಕಿಕೊಂಡಿರಬೇಕು. "ನಮ್ಮಲ್ಲಿ ಇನ್ನೂ ಇಷ್ಟು ಶಕ್ತಿ ಇದೆ ಎಂದು ನಂಬುವುದೇ ಕಷ್ಟವಾಗಿದೆ, ರುಡಿ" ಆಗ್ನೆಸ್ ಹೇಳಿದಳು.

ರುಡಿಯ ಮೌನದಲ್ಲಿಯೇ ಅವಳ ಪ್ರಶ್ನೆಗೆ ಉತ್ತರವಿತ್ತು. ಬಂಗಲೆಯ ಮುಂಬಾಗಿಲು ತೆರೆದು ಅವರು ಒಳಗೆ ಹೋಗುವಾಗ ಕಾವಲುಗಾರ ಬಂದು ಅವರನ್ನು ಆಶ್ಚರ್ಯದಿಂದ ನೋಡಿದ. ಆಮೇಲೆ ಕ್ರಿಸ್‌ಮಸ್ ಸಂದೇಶ ನೀಡಿ ತನ್ನ ಕೋಣೆಗೆ ಮರಳಿದ.

ರುಡಿ ದೀಪ ಹಚ್ಚಿದ. ಬಂಗ್ಲೆಯಲ್ಲಿ ತಣ್ಣಗಿನ ಮತ್ತು ವಾಸನೆಯುಕ್ತ ಗಾಳಿ ಅವರಿಗೆ ಎದುರಾಯಿತು. ಸ್ವಚ್ಛವಾಗಿದ್ದರೂ ಜನರ ವಾಸ ಇಲ್ಲದಿದ್ದುದರಿಂದ ಬಂಗಲೆ ಅಳುತ್ತಿತ್ತು.

"ಈಗ ಪಾರಿವಾಳಗಳನ್ನು ಹುಡುಕಿ ಹೋಗಬೇಡ" ಆಗ್ನೆಸ್ ಹೇಳಿದಳು. "ಈ ಉಡುಪನ್ನು ಕಳಚಿಬಿಡು. ನಿನ್ನ ನಿಲುವಂಗಿ ಇಲ್ಲೇ ಎಲ್ಲಾದರೂ ಇರಬಹುದು. ಅದನ್ನು ತೊಟ್ಟು ಬೆಂಕಿ ಹಚ್ಚು. ನಾನು ಚಳಿ ಮತ್ತು ಹಸಿವೆಯಿಂದ ಸಾಯುತ್ತಿದ್ದೇನೆ."

ರುಡಿ ಅದರಂತೆ ನಡೆದುಕೊಂಡ. ಬೆಂಕಿಯ ಜ್ವಾಲೆಯುಳ್ಳ ಕಟ್ಟಿಗೆ ಫಟ್‌ಫಟ್ ಎಂದು ಕಿಡಿ ಹಾರಿಸುತ್ತ ಉರಿಯುತ್ತಿರುವಾಗ ಅವರಿಗೆ ಕೇಳಿಸಿತು, ಆ ಮರೆಯಲಾಗದ ಸಂಗೀತದ ಧ್ವನಿ...

ನಡು ರಾತ್ರಿ

ಕನಿಷ್ಟ ರಾತ್ರಿ..

"ಇದೇ ಬೆಂಕಿಯ ಜ್ವಾಲೆಯಂತೆ ನಮ್ಮ ಮರ್ವಿನ ತನ್ನ ಮೊದಲ ಪ್ರಮಾಣ ಸ್ವೀಕರಿಸಿದ್ದು ಅಲ್ಲವೇ?" ಆಗ್ನೆಸ್ ಕೇಳಿದಳು. ರುಡಿ ಅವಳನ್ನೇ ನೋಡತೊಡಗಿದ.

ಅವರ ಕ್ರಿಸ್‌ಮಸ್ ಪ್ರಾರಂಭವಾಯಿತು...

ಯಾವಾಗ ಅದು ಪ್ರಾರಂಭವಾಯಿತು, ಯಾವಾಗ ಆ ಬಾಟ್ಲಿಯೊಳಗಿನ ಕೆಂಪು ವೈನ್ ಖಾಲಿಯಾಯಿತು, ಯಾವಾಗ ಹುರಿದ ಟರ್ಕಿಯ ಮಾಂಸ ಮುಗಿದುಹೋಯಿತು, ಅವರಿಗೆ ತಿಳಿಯಲೇ ಇಲ್ಲ. ಹಿಂದಿನ ನೆನಪಿನ ಅಮಲಿಗೆ ಅಷ್ಟು ಬಲವಿತ್ತು.

ರುಡಿಗೆ ಎಚ್ಚರವಾದಾಗ ಕಟ್ಟಿಗೆ ಬೆಂಕಿ ನಂದಿತ್ತು. ಆದರೆ ಬಿಸಿಗಾಳಿ ಇತ್ತು. ಆಗ್ನೆಸ್ ಜಮಖಾನೆಯ ಮೇಲೆ ಮಲಗಿದ್ದಳು. ಹೊರಗೆ ಬಾಲಸೂರ್ಯ ಉದಯಿಸಿ ಬರುತ್ತಿದ್ದನು. ಮಂಜು ಏಳಲು ಪ್ರಾರಂಭವಾಯಿತು. ಸುಮಾರು ಹೊತ್ತು ರುಡಿ ಮಲಗಿದ್ದಲ್ಲಿಯೇ ಇದ್ದನು.

ಯಾವುದೋ ಪರಿಚಿತ ಧ್ವನಿ.

ಪಕ್ಷಿಗಳ ಚಿರಪರಿಚಿತ ಕುಟ್ರೊಗುಟ್ರೊ.

ಅವನು ತಟ್ಟನೆ ಎದ್ದು ಹಿಂದಿನ ಬಾಗಿಲನ್ನು ತೆರೆದು ಮುಂಜಾನೆಯ ಚಳಿಯಲ್ಲಿ ಹೊರಗೋಡಿದ. ಆ ಸ್ಥಳವನ್ನು ತಲುಪಿದ ಕೂಡಲೇ ಸರಳು ಹಿಡಿದು ಹತ್ತಿಹೋದ. ಮೇಲಿನ ಪೊಟರೆಯೊಳಗೆ ಅವನು ಇಣಕಿ ನೋಡಿದ.

ಪಾರಿವಾಳಗಳ ಗೂಡು·ಅದೇ ರೀತಿ ಇದೆ. ಆದರೆ ಖಾಲಿ ಇರಲಿಲ್ಲ.

ಅವು ಅದರಲ್ಲಿ ಇದ್ದವು!

ಅವು, ಅದೇ ಪಾರಿವಾಳಗಳೇ ಅಥವಾ ಬೇರೆ? ಅದು ಅವನಿಗೆ ತಿಳಿದಿಲ್ಲ. ಆದರೆ ಅವು ಅಲ್ಲಿಯೇ ಇದ್ದವು.

ಅವನ ಕಣ್ಣಿನಲ್ಲಿ ದುಃಖ ತುಂಬಿತು.

ಅವನು ಬಂಗಲೆಯ ಒಳಗೆ ಬಂದ. ಆಗಷ್ಟೇ ಮಗ್ಗುಲು ಬದಲಾಯಿಸುತ್ತಿದ್ದ ಆಗ್ನೇಸಾಳನ್ನು ಎಬ್ಬಿಸಿದ.

"ಆಶ್ಚರ್ಯ ಘಟಿಸಿದೆ, ಆಶ್ಚರ್ಯ!" ಅವನು ಅವಳನ್ನು ತಬ್ಬಿ ಹಿಡಿದು ಹೇಳಿದ. "ಆಶ್ಚರ್ಯವೇ ಘಟಿಸಿದೆ!"

"ಆ ಪಾರಿವಾಳಗಳು ಹಾರಿ ಹೋಗಲಿಲ್ಲ ರುಡಿ"

"ನಿನಗೆ ಹೇಗೆ ತಿಳಿಯಿತು?"

"ನಿನಗಿಂತ ಮೊದಲೇ ಅವು ನನ್ನನ್ನು ಎಬ್ಬಿಸಿವೆ." ಅವಳು ಹೇಳಿದಳು. "ಆ ಸಂತೋಷದಲ್ಲಿಯೇ ನಾನು ಮತ್ತೆ ಮಲಗಿಕೊಂಡೆ"

"ಹಾಗಿದ್ದರೆ, ಆಗ್ನೆಸ್?"

"ಹೌದು, ಪ್ರಿಯ ಸಾಂತಾಕ್ಲೊಸ್," ಅವಳು ಹೇಳಿದಳು. "ನಮಗೆ ತಿಳಿದಿಲ್ಲ ಎಷ್ಟು ದಿನ, ಎಷ್ಟು ತಿಂಗಳು, ಎಷ್ಟು ಬೇಸಿಗೆ, ಎಷ್ಟು ಚಳಿಗಾಲ...ಮತ್ತು ಇನ್ನು ಎಷ್ಟು ವರ್ಷ ನಾವು ನಮ್ಮ ಕಾಲುಗಳ ಮೇಲೆ ನಿಂತುಕೊಳ್ಳುತ್ತೇವೆ ಎನ್ನುವುದು.."

"ಆದರೆ ಏನೇ ಆದರೂ.."

"ನಾವು ನಮ್ಮ ಈ ಪೊಟರೆಯಲ್ಲಿಯೇ ವಾಸಿಸುತ್ತೇವೆ!" ಅವನು ಅವಳ ಗಲ್ಲದ ಮುತ್ತು ತೆಗೆದುಕೊಂಡು ಹೇಳಿದ,

"ಮೆರ್ರಿ ಕ್ರಿಸ್‌ಮಸ್!"

ಅನುವಾದಕರು: **ಅಚಲಾ ಅಜೀತ ಬಿಳಗಿ**

❖ ❖ ❖❖ ❖



The above testimonium in Konkani Language, is published in "Hortus Indicus Malabaricus", a comprehensive treatise that deals with the medicinal properties of the flora in the Indian state Kerala. The book in Latin was conceived by Hendrik Van Rheede who served as a Governor of Dutch Malabar between 1670 and 1677. The testimonium certifies the authenticity of medicinal information recorded in 12 Volumes. It has been inscribed in Konkani Language, duly signed by Ranga Bhat, Vinayaka Pandit and Appu Bhat, three Konkani Physicians who were the prominent contributors to the stupendous work. Apart from Latin, Malayalam and Arabic, the plant names have also been recorded in Konkani Language in these volumes.

ಡಾ. ಗೀತಾ ಶೆಣೈ

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ ಜನನ. ಮೈಸೂರು ವಿಶ್ವವಿದ್ಯಾಲಯದ ಬಿ.ಎಸ್‌ಸಿ., ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ., ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಹೆಚ್.ಡಿ. ಪದವೀಧರರು. ಇಂದಿರಾಗಾಂಧಿ ಮುಕ್ತವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಕೋರ್ಸ್ ಮುಗಿಸಿದ್ದಾರೆ. ಕೇಂದ್ರ ಸರ್ಕಾರದ ದೂರಸಂಪರ್ಕ ಇಲಾಖೆಯ ಮಾಜಿ ಉದ್ಯೋಗಿ. ಸಧ್ಯ ಬೆಂಗಳೂರಿನಲ್ಲಿ ವಾಸ.

ಸಂಶೋಧನೆ, ಭಾಷಾಂತರ ಮತ್ತು ಮಹಿಳಾ ಅಧ್ಯಯನ ಇವರ ಆಸಕ್ತಿ ಕ್ಷೇತ್ರಗಳು. ಇದುವರೆಗೆ ಒಟ್ಟು ೩೦ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಂಬಂಧ ಕನ್ನಡ ಕಥನ ಸಾಹಿತ್ಯ ಮತ್ತು ಸ್ತ್ರೀ ನಿರ್ವಚನ. ಮೊದಲ ಪ್ರಕಟಿತ ಕೃತಿ ಜುಂಪಾ ಲಾಹಿರಿಯ ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಕಥಾಸಂಕಲನದ ಕನ್ನಡ ಅನುವಾದ ಬೇನೆಗಳ ದುಭಾಷಿ. ಇತರ ಕೃತಿಗಳು: ಸ್ತ್ರೀ ವಿಮುಕ್ತಿ ಚಿಂತನೆ, ಕತೆಯಾದಳು ಹುಡುಗಿ (ಸಂಶೋಧನೆ), ಅಂಚಿತ (ವಿಮರ್ಶೆ), ಅನನ್ಯ,ಸಮೃದ್ಧಿ, ಸಂಸ್ಕೃತಿ–ಸಂಭ್ರಮ, ಸ್ನೇಹ ಚಿಂತನ, ದೇವರು ಧರ್ಮದ ಚಿಂತೆ, ಕೊಂಕಣಿ ಪರಿಚಯ ಕೋಶ (ಸಂಪಾದನೆ), ಸರಸ್ವತಿ ಗೌಡರ್, ಪಂಡಿತ ರಮಾಬಾಯಿ ಸರಸ್ವತಿ, ಪದ್ಮಾಶೆಣೈ, ಪ್ರೇಮಾ ಕಾರಂತ, ಗಂಗೂಬಾಯಿ ಹಾನಗಲ, ಗೋಪಾಲಕೃಷ್ಣ ಪೈ (ಬದುಕು–ಸಾಧನೆ), ಸಮಾಜಶಾಸ್ತ್ರದ ಪಿತಾಮಹರು, ಪರಿಸರ ಅರ್ಥಶಾಸ್ತ್ರ, ಅಧುನಿಕ ಭಾರತದ ಚರಿತ್ರೆ, ಜಗತ್ತನ್ನು ಬದಲಾಯಿಸುವುದು ಹೇಗೆ, ಕಮಲಾದೇವಿ ಚಟ್ಟೋಪಾಧ್ಯಾಯ (ಭಾಷಾಂತರ) ಇತ್ಯಾದಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಗಾಗಿ ಅನುವಾದಿಸಿರುವ ಆರ್. ಕೆ. ನಾರಾಯಣ ಕೃತಿ ಪ್ರಕಟಣೆಯಲ್ಲಿದೆ.

ರಾಜ್ಯ ಮಟ್ಟದ ವಿವಿಧ ಕಾರ್ಯಾಗಾರ, ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ವಿಶ್ವವಿದ್ಯಾಲಯಗಳ ವಿಷಯ ವಿಶ್ವಕೋಶಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ.